ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಣಜಿ: ರಾಜ್ಯ ಬಿ ಗುಂಪಲ್ಲಿ ಅಗ್ರ

ಹುಬ್ಬಳ್ಳಿಯಲ್ಲಿ ನಡೆದ ರಣಜಿ ಪಂದ್ಯದಲ್ಲಿ ಕರ್ನಾಟಕ ದುರ್ಬಲ ಚಂಡೀಗಢ ವಿರುದ್ಧ ಇನಿಂಗ್ಸ್ ಮತ್ತು 185 ರನ್‌ಗಳಿಂದ ಜಯ ಗಳಿಸಿದೆ. ಸತತ 2 ಇನಿಂಗ್ಸ್ ಜಯಗಳ ಮೂಲಕ ಕರ್ನಾಟಕ ಬಿ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿದೆ. ಶ್ರೇಯಸ್ ಗೋಪಾಲ್ ಎರಡೂ ಇನಿಂಗ್ಸ್ ಸೇರಿ 10, ಶಿಖರ್ ಶೆಟ್ಟಿ 2ನೇ ಇನಿಂಗ್ಸ್‌ನಲ್ಲಿ 5 ವಿಕೆಟ್ ಪಡೆದಿದ್ದಾರೆ.

ಸೊಂಪಾದ ಪುಟಗಳು

ರಷ್ಯನ್ ಇಂಕ್, ವೋಟ್‌ಚೋರಿ, ಓವೈಸಿ ರಾಜಕೀಯ ಪ್ರಾಬಲ್ಯ
ಜನಪಥ
ರಾಘವ ಶರ್ಮ ನಿಡ್ಲೆ 6

ವಂಚಕರ ಚಾಲಾಕಿತನಕ್ಕೆ ಮದ್ದು ಅರೆಯುವವರು ಯಾರು?
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನಿಮ್ಮನ್ನು ಸಂತೋಷಪಡಿಸುವ ಯಾರೊಂದಿಗಾದರೂ ಮಾತಾಡಬೇಕು. ಆದರೆ ನಿಮ್ಮೊಂದಿಗೆ ಮಾತಾಡಲು ಸಂತೋಷಪಡುವವರೊಂದಿಗೆ ಮಾತಾಡುವ ಅವಕಾಶವನ್ನು ಎಂದಿಗೂ ತಪ್ಪಿಸಿಕೊಳ್ಳಬಾರದು.

ವಕ್ರತುಂಡೋಕ್ತಿ

ಮದುವೆಯ ಉಂಗುರಕ್ಕೆ ಅತ್ಯಧಿಕ ಬೆಲೆ ಇರಲು ಕಾರಣವಿದೆ. ಕಾರಣ ಅದು ನಿಮ್ಮ ಸ್ವಾತಂತ್ರ್ಯದ ಕೊನೆಯ ಬೆಲೆಯನ್ನು ಸೂಚಿಸುತ್ತದೆ.

ನಾಲೆಗೆ ಬಿದ್ದಿದ್ದ ಕಾಡಾನೆ ರಕ್ಷಣೆ

ಮಳವಳ್ಳಿ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಶಿವನಸಮುದ್ರದ ಬಳಿ ಇರುವ ನಾಲೆಗೆ ಕಳೆದ ಶನಿವಾರ ರಾತ್ರಿ ಬಿದ್ದಿದ್ದ ಆನೆಯನ್ನು ಮಂಗಳವಾರ ರಕ್ಷಿಸಲಾಗಿದೆ. ಅರಣ್ಯ ಸಿಬ್ಬಂದಿ ಕ್ರೇನ್ ಮೂಲಕ ಮಧ್ಯಾಹ್ನದ ಆನೆಯನ್ನು ಮೇಲೆತ್ತಲು ಯಶಸ್ವಿಯಾಗಿದ್ದಾರೆ.

ರಾಹುಲ್ ವಿದೇಶಕ್ಕೆ ತೆರಳುವ ಮೊದಲು ಭೇಟಿಗೆ ಡಿಕೆ ಯತ್ನ
ನಾಯಕತ್ವ ಬದಲಾವಣೆ ಕುರಿತು ಸ್ಪಷ್ಟನೆ ಪಡೆಯಲು ಭೇಟಿ

ಸಂಪುಟ: ನಾಯಕರು ಮೌನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ಕಳೆದ ಎರಡು ತಿಂಗಳಿನಿಂದ ನಡೆಯುತ್ತಿದ್ದ ಸಂಪುಟ ಪುನಾರಚನೆಗೆ ಕಸರತ್ತಿಗೆ ಹೈಕಮಾಂಡ್ ತಡೆಯಾಜ್ಞೆ ನೀಡಿರುವುದರಿಂದ, ಸಚಿವಾಕಾಂಕ್ಷಿಗಳು 'ಮೌನ'ಕ್ಕೆ ಶರಣಾಗಿದ್ದಾರೆ. ಆದರೆ ನಾಯಕತ್ವ ಬದಲಾವಣೆಯ ನಿರೀಕ್ಷೆಯಲ್ಲಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದೀಗ 'ಸ್ಪಷ್ಟನೆ' ಪಡೆಯಲು ಹೈಕಮಾಂಡ್ ಕದತಟ್ಟುವ ಪ್ರಯತ್ನ ಮುಂದುವರಿಸಿದ್ದಾರೆ.

ದೆಹಲಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಪಸಾಗುತ್ತಿದ್ದಂತೆ ಸಿಎಂ ಆಪ್ತ ಸಚಿವರೆಲ್ಲರೂ ಮೌನಕ್ಕೆ ಶರಣಾಗಿದ್ದಾರೆ. ಸಂಪುಟ ಪುನಾರಚನೆ, ವಿಸ್ತರಣೆಗೆ ಅವಕಾಶ ಸಿಕ್ಕಿಲ್ಲ ಎನ್ನುವ ಸ್ಪಷ್ಟನೆ ಸಿಕ್ಕಿರುವುದರಿಂದ ಆಕಾಂಕ್ಷಿಗಳು ತಣ್ಣಗಾಗಿದ್ದಾರೆ. ರಾಜ್ಯ ಕಾಂಗ್ರೆಸ್‌ನ ಎಲ್ಲ ಪ್ರಕ್ರಿಯೆಗಳಿಗೆ ಹೈಕಮಾಂಡ್‌ನಿಂದ ತಾತ್ಕಾಲಿಕ ತಡೆ ಸಿಕ್ಕಿದ್ದರೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಪ್ರಯತ್ನವನ್ನು ಮುಂದುವರಿಸಿದ್ದಾರೆ.

ಡಿ.ಕೆ.ಶಿವಕುಮಾರ್ ಪರವಾಗಿ ಸಹೋದರ

ಡಿ.ಕೆ.ಸುರೇಶ್ ದೆಹಲಿಯಲ್ಲಿ ರಣತಂತ್ರ ಮುಂದುವರಿಸಿದ್ದು, ಹೈಕಮಾಂಡ್‌ನೊಂದಿಗೆ ಉತ್ತಮ ಒಡನಾಟವಿರುವ ನಾಯಕರನ್ನು ಭೇಟಿಯಾಗುತ್ತಿದ್ದಾರೆ. ಈ ನಡುವೆ ನ.21ರ ಬಳಿಕ ವಿದೇಶಕ್ಕೆ ರಾಹುಲ್ ಗಾಂಧಿ ಅವರು ತೆರಳುವುದು ಖಚಿತವಾಗಿರುವುದರಿಂದ ಅವರು ವಿದೇಶಕ್ಕೆ ತೆರಳುವ ಮೊದಲೇ ಒಮ್ಮೆ ಭೇಟಿಯಾಗುವ ಲೆಕ್ಕಾಚಾರದಲ್ಲಿ ಡಿ.ಕೆ. ಶಿವಕುಮಾರ್ ಅವರಿದ್ದಾರೆ. ಆದ್ದರಿಂದ ರಣದೀಪ್ ಸಿಂಗ್ ಸುರ್ಜೇವಾಲ, ಜೆ.ಸಿ.ಚಂದ್ರಶೇಖರ್ ಹಾಗೂ ಡಿ.ಕೆ.ಸುರೇಶ್ ಕಡೆಯಿಂದ ರಾಗಾ ಸಮಯಕ್ಕಾಗಿ ಪ್ರಯತ್ನ ಮುಂದುವರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. → 4

ಅಧ್ಯಕ್ಷ ಸ್ಥಾನವೂ ಅಬಾಧಿತ

ನಾಯಕತ್ವ ಬದಲಾವಣೆ ವಿಷಯ ಮುನ್ನೆಲೆಗೆ ಬರುತ್ತಿದ್ದಂತೆ ಸಿದ್ದರಾಮಯ್ಯ ಆಪ್ತರು ಮುಖ್ಯಮಂತ್ರಿ ಬದಲಾವಣೆಗೂ ಮೊದಲು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಬೇಕು ಎನ್ನುವ ಪಟ್ಟನ್ನು ಹಿಡಿದಿದ್ದರು. ಸಿದ್ದು ಆಪ್ತರ ಈ ನಡೆಗೆ ಡಿ.ಕೆ.ಶಿವಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದು, ನಾಯಕತ್ವ ಬದಲಾವಣೆ ಚರ್ಚೆ ಇಲ್ಲವಾದರೆ ಸಂಪುಟ ಪುನಾರಚನೆ ಅಥವಾ ವಿಸ್ತರಣೆಯಾಗಲಿ ಚರ್ಚೆಗೆ ಬರುವುದು ಬೇಡ. ಇದೇ ರೀತಿ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಚರ್ಚೆಯೂ ಅಪ್ರಸ್ತುತ ಎನ್ನುವ ವಾದವನ್ನು ಹೈಕಮಾಂಡ್ ಮುಂದೆ ಈಗಾಗಲೇ ಮಂಡಿಸಿದ್ದಾರೆ. ಇದನ್ನು ಆಪ್ತರ ಮೂಲಕ ಸುರ್ಜೇವಾಲ ಹಾಗೂ ಖರ್ಗೆಗೆ ತಲುಪಿಸುತ್ತಿದ್ದಾರೆ ಎನ್ನಲಾಗಿದೆ.

ಸಿಎಂ ಕಳೆದ ಬಾರಿ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿದ್ದರು. ಈ ಬಾರಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಿಕೊಂಡು ಬಂದಿದ್ದಾರೆ. ಅವರ ಮಧ್ಯೆ ಏನು ಚರ್ಚೆಯಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಲ್ಲವೇ? ಸಂಪುಟ ಪುನಾರಚನೆ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿಲ್ಲ.

-ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಕೆಲಗಂಟೆ ಸ್ತಬ್ಧ, ಕೋಟ್ಯಂತರ ಬಳಕೆದಾರರು ಕಂಗಾಲು
ಕ್ಲೌಡ್‌ಫ್ಲೇರ್ ತಾಣದಲ್ಲಿ ಕಾಣಿಸಿಕೊಂಡ ದೋಷ ಕಾರಣ

ಜಗತ್ತಿನಾದ್ಯಂತ ಟ್ವಿಟರ್, ಚ್ಯಾಟ್ ಜಿಪಿಟಿ ಸ್ಥಗಿತ

ದೆಹಲಿ: ಮಂಗಳವಾರ ಸಂಜೆ 4.30ರ ಹೊತ್ತಿಗೆ ಟ್ವಿಟರ್ (ಎಕ್ಸ್), ಚ್ಯಾಟ್ ಜಿಪಿಟಿ, ಕ್ಯಾನ್ವಾ ಸೇರಿದಂತೆ ಪ್ರಮುಖ ಜನಪ್ರಿಯ ತಾಣಗಳ ಬಳಕೆದಾರರು ಕಂಗಾಲಾಗಿದ್ದರು. ಇದ್ದಕ್ಕಿದ್ದಂತೆ ಈ ವೆಬ್‌ಗಳ ಕಾರ್ಯಾಚರಣೆಯೇ ನಿಂತುಹೋಗಿ ಜಾಗತಿಕ ವೆಬ್‌ಗಳಲ್ಲಿ 'ಇಂಟರ್ನಲ್ ಸರ್ವರ್ ಎರರ್' ಎಂದು ತೋರಿಸುತ್ತಿತ್ತು. ಇದಕ್ಕೆಲ್ಲ ಕಾರಣ ಈ ತಾಣಗಳು ವೇಗವಾಗಿ, ಸುಗಮವಾಗಿ ಕಾರ್ಯಾಚರಿಸಲು ಹಿಂದಿನಿಂದ ನೆರವು ನೀಡುತ್ತಿದ್ದ ಕ್ಲೌಡ್ ಫ್ಲೇರ್ ಎಂಬ ಪೋರ್ಟಲ್. ಇದರಲ್ಲೇ ಸಮಸ್ಯೆ ಕಾಣಿಸಿಕೊಂಡು 500ಕ್ಕೂ ಅಧಿಕ ತಪ್ಪುಗಳು ಕಾಣಿಸಿಕೊಂಡಿದ್ದವು. ರಾತ್ರಿ 8.30ರ ಹೊತ್ತಿಗೆ ಟ್ವಿಟರ್ ಸೇರಿ ಬಹುತೇಕ ತಾಣಗಳ ಕಾರ್ಯಾಚರಣೆ ಎಂದಿನಂತೆ ಆಯಿತು.

ಏಕಾಯ್ತು ಸಮಸ್ಯೆ?: ಕ್ಲೌಡ್‌ಫ್ಲೇರ್ ಹೆಸರನ್ನು ಟ್ವಿಟರ್ ಅನ್ನು ಬಳಸುವ ಜನಸಾಮಾನ್ಯರು ಕೇಳಿರಲಿಕ್ಕಿಲ್ಲ. ಆದರೆ ಇದು ಚ್ಯಾಟ್‌ಜಿಪಿಟಿಯಂತಹ ಎಐ ತಾಣಗಳಿಗೂ ಹಿನ್ನೆಲೆಯಲ್ಲಿ ನಿಂತು ನೆರವು ನೀಡುತ್ತದೆ. ಆದರೆ ಇದರ ಸರ್ವರ್‌ನಲ್ಲೇ ಸಮಸ್ಯೆ ಕಾಣಿಸಿಕೊಂಡಿತು. ಪರಿಣಾಮ ಅದರಿಂದ ಸೇವೆ ಪಡೆಯುತ್ತಿದ್ದ ಟ್ವಿಟರ್, ಕ್ಯಾನ್ವಾ, ಚ್ಯಾಟ್ ಜಿಪಿಟಿ, ಪರ್ಪ್ಲೆಕ್ಸಿಟಿ, ಸ್ಪಾಟಿಫೈ, ಜೆಮಿನಿಯಂತಹ ಆ್ಯಪ್‌ಗಳು ಸ್ಥಗಿತಗೊಂಡವು. → 4



ಆಗಿದ್ದೇನು?

- ಮಂಗಳವಾರ ಸಂಜೆ 4.30ರ ಹೊತ್ತಿಗೆ ಟ್ವಿಟರ್‌ನಲ್ಲಿ 'ಸರ್ವರ್ ಎರರ್' ಪತ್ತೆ
- ಕ್ಯಾನ್ವಾ, ಚ್ಯಾಟ್ ಜಿಪಿಟಿ, ಪರ್ಪ್ಲೆಕ್ಸಿಟಿ, ಸ್ಪಾಟಿಫೈ ಆ್ಯಪ್ ಕಾರ್ಯ ಸ್ಥಗಿತ
- ಮೇಲಿನ ತಾಣಗಳಿಗೆ ನೆರವಾಗುತ್ತಿದ್ದ ಕ್ಲೌಡ್‌ಫ್ಲೇರಲ್ಲೇ ಸಮಸ್ಯೆ
- ಕೆಲ ಗಂಟೆ ನಂತರ ಸೇವೆ ಶುರು, ಕ್ಲೌಡ್‌ಫ್ಲೇರ್ ಸಮಸ್ಯೆಗೆ ಕಾರಣ ಅಸ್ಪಷ್ಟ

ಟ್ರಂಪ್ ಸುಂಕ: ಜಪಾನ್‌ಗೆ ಸಂಕಷ್ಟ

ಟೋಕಿಯೋ: ಭಾರತ ಸೇರಿದಂತೆ ಜಗತ್ತಿನ ಹಲವು ದೇಶಗಳ ಉತ್ಪನ್ನಗಳಿಗೆ ಭಾರೀ ಸುಂಕ ವಿಧಿಸಿದ್ದ ಕ್ರಮದಿಂದ ಜಪಾನ್ ಆರ್ಥಿಕತೆ ಸಣ್ಣ ಕುಸಿತ ಅನುಭವಿಸಿದೆ. ಟ್ರಂಪ್‌ರ ಭಾರೀ ಸುಂಕದಿಂದ ಜುಲೈ-ಸೆಪ್ಟೆಂಬರ್ 3ನೇ ತ್ರೈಮಾಸಿಕ ಅವಧಿಯಲ್ಲಿ ಜಪಾನಿನ ಆಮದು, ರಫ್ತಿನಲ್ಲಿ ಇಳಿಕೆಯಾಗಿದೆ. ಇದೇ ಅವಧಿಯಲ್ಲಿ ಕಳೆದ ವರ್ಷದ ವಾರ್ಷಿಕ ದರಕ್ಕೆ ಹೋಲಿಸಿದರೆ ಶೇ.1.8ರಷ್ಟು ಇಳಿಕೆಯಾಗಿದೆ. ಜಿಡಿಪಿಯಲ್ಲೂ ಶೇ.0.4 ಕುಸಿತವಾಗಿದೆ.

ಶಬರಿಮಲೆ ಯಾತ್ರೆ: ಕಟ್ಟೆಚ್ಚರಕ್ಕೆ ಸೂಚನೆ

ಬೆಂಗಳೂರು: ಕೇರಳದಲ್ಲಿ ಮೆನಿಂಗೊ ಎನ್ಸೆಫಾಲಿಟಿಸ್

ಮೆದುಳು ಜ್ವರ ಪ್ರಕರಣಗಳು ಕಂಡು ಬಂದಿರುವುದರಿಂದ, ಶಬರಿಮಲೆ ಯಾತ್ರೆಗೆ ತೆರಳಿರುವ ರಾಜ್ಯದ ಯಾತ್ರಿಕರಿಗೆ ರಾಜ್ಯ ಸರಕಾರ ಕಟ್ಟೆಚ್ಚರಿಕೆ ವಹಿಸಲು ಸೂಚನೆ ನೀಡಿದೆ. ನಿಂತ ನೀರಿನಲ್ಲಿ ಸ್ನಾನ ಮಾಡುವಾಗ ನೀರು ಮೂಗಿನೊಳಕ್ಕೆ ಪ್ರವೇಶಿಸದಂತೆ ನೋಡಿಕೊಳ್ಳಲು ಸೂಚಿಸಿದೆ.

ಉಮ್ರಾ ಯಾತ್ರಿಕರ ಶವ ವಾಪಸಿಲ್ಲ

ಹೈದರಾಬಾದ್: ಮೆಕ್ಕಾ, ಮದೀನಾ ಯಾತ್ರೆಗೆ ತೆರಳಿ ಮೃತಪಟ್ಟಿದ್ದ 45 ಭಾರತೀಯ ಯಾತ್ರಿಕರ ಶವಗಳನ್ನು ಭಾರತಕ್ಕೆ ತರಲಾಗುವುದಿಲ್ಲ ಎಂದು ಮೂಲಗಳು ಹೇಳಿವೆ. ಈ ಯಾತ್ರೆ ವೇಳೆ ಮೃತರಾದರೆ ನೇರವಾಗಿ ಸ್ವರ್ಗಪ್ರವೇಶ ಸಿಗುತ್ತದೆ ಎಂದು ಇಸ್ಲಾಮ್‌ನಲ್ಲಿ ನಂಬಿಕೆಯಿರುವುದರಿಂದ ಶವಗಳನ್ನು ಸೌದಿಯಲ್ಲೇ ಹೂಳಲು ಸಿದ್ಧತೆ ಸಾಗಿದೆ ಎಂದು ತೆಲಂಗಾಣ ಸರಕಾರ ಹೇಳಿದೆ. ಯಾತ್ರೆಗೂ ಮುನ್ನ ಸಂಬಂಧಪಟ್ಟವರು ಅದಕ್ಕೆ ಸಹಿ ಹಾಕಿರುತ್ತಾರೆ ಎಂದು ತಿಳಿದುಬಂದಿದೆ.

ದೆಹಲಿ ಸ್ಫೋಟ: ಅಲ್ ಫಲಾಹ್ ಸ್ಥಾಪಕ ಸೆರೆ

ಫರೀದಾಬಾದ್: ದೆಹಲಿ ಸ್ಫೋಟದ ಕೇಂದ್ರ ಬಿಂದು,

ಹರ್ಯಾಣದ ಫರೀದಾಬಾದ್‌ನ ಅಲ್ ಫತಾಹ್ ವಿವಿ ಸ್ಥಾಪಕ ಜಾವೇದ್ ಸಿದ್ಧಿಖಿಯನ್ನು ಇಡಿ ಮಂಗಳವಾರ ಬಂಧಿಸಿದೆ. ಅಕ್ರಮ ಹಣ ಸಾಗಣೆ, ಉಗ್ರರಿಗೆ ಹಣಕಾಸು ನೆರವು ನೀಡಿದ ಆರೋಪದಡಿ ಬಂಧಿಸಿದ್ದಾರೆ. ಅಲ್ ಫತಾಹ್ ವಿವಿ ವಿರುದ್ಧ ಪೊಲೀಸರು 2 ಎಫ್‌ಐಆರ್ ದಾಖಲಿಸಿದ್ದರು.

ಅಂಕೋಲಾದಲ್ಲಿ ಗ್ಯಾಸ್ ಲಾರಿ ಪಲ್ಟಿ: ರಸ್ತೆ ಬಂದ್

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ರಾಷ್ಟ್ರೀಯ ಹೆದ್ದಾರಿ-52ರಲ್ಲಿ ಗ್ಯಾಸ್ ಟ್ಯಾಂಕರ್ ಪಲ್ಟಿಯಾಗಿದೆ. ಚಾಲಕನ ನಿಯಂತ್ರಣ ತಪ್ಪಿ ಟ್ಯಾಂಕರ್ ಪಲ್ಟಿಯಾಗಿದ್ದರಿಂದ ಅನಿಲ ಸೋರಿಕೆಯಾಗಿದ್ದು, ನಿಷೇಧಾಜ್ಞೆ ಹೇರಲಾಗಿದೆ. ಗಾಯಗೊಂಡ ಚಾಲಕ ಅರುಣ್ (57)ರನ್ನು ಉಡುಪಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಮಾರ್ಗದಲ್ಲಿ ಸಂಚಾರ ಬಂದ್ ಮಾಡಿದ್ದು, ಅಂಕೋಲಾದಿಂದ ಮಾದನಗೇರಿ ಹೆದ್ದಾರಿಗೆ ಮಾರ್ಗವನ್ನು ಬದಲಿಸಲಾಗಿದೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
KARNATAKA STATE POLLUTION CONTROL BOARD

50 ವರ್ಷಗಳ ಸಮರ್ಪಣೆ, 31 ಜಿಲ್ಲೆಗಳು, 1 ಧ್ಯೇಯ: ಮಾಲಿನ್ಯ ಮುಕ್ತ ಕರ್ನಾಟಕ

1974ರಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ದೂರದೃಷ್ಟಿಯ ಫಲವಾಗಿ ಸ್ಥಾಪನೆಯಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (KSPCB), ಐದು ದಶಕಗಳಿಂದ ನೆಲ ಮತ್ತು ಜಲ ಸಂರಕ್ಷಣೆ ಹಾಗೂ ಪರಿಸರ ಸಮತೋಲನಕ್ಕಾಗಿ ಶ್ರಮಿಸಿದೆ. ಈಗ, ಸಂಸ್ಥೆಯು ತನ್ನ ಸುವರ್ಣ ಮಹೋತ್ಸವವನ್ನು ರಾಜ್ಯದ 31 ಜಿಲ್ಲೆಗಳಲ್ಲಿ ಆಚರಿಸುತ್ತಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರೊಂದಿಗೆ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಅವರು.

ಬನ್ನಿ, ಮಾಲಿನ್ಯ ಸಮಸ್ಯೆಗೆ ಪರಿಹಾರ ಒದಗಿಸುವ ಹಾಗೂ ಜನಜಾಗೃತಿ ಮೂಡಿಸುವ ಈ ಮಹಾ ಅಭಿಯಾನದಲ್ಲಿ ನಮ್ಮೊಂದಿಗೆ ಕೈ ಜೋಡಿಸಿ.

ದಿನಾಂಕ: 19-11-2025 ಬುಧವಾರ
ಬೆಳಗ್ಗೆ 11.00 ಗಂಟೆಗೆ

ಸ್ಥಳ: 'ಕೃಷ್ಣ ವಿಹಾರ', ಗೇಟ್ ನಂ.01, ಅರಮನೆ ಮೈದಾನ, ಮೇಕ್ರಿ ಸರ್ಕಲ್, ಬೆಂಗಳೂರು-560080

ಖ್ಯಾತ ಗಾಯಕ
ಶ್ರೀ ವಿಜಯ್ ಪ್ರಕಾಶ್ ಹಾಗೂ
ತಂಡದವರಿಂದ ರಸಮಂಜರಿ
ಕಾರ್ಯಕ್ರಮ

080-25582559 kspcbofficial kspcb_official kspcbkarnataka @karnatakakspcb

ಸಮಾಚಾರ ಸಣ್ಣದಲ್ಲ

ಪೋಕ್ಸೋ ಪ್ರಕರಣ: ಬಿಎಸ್‌ವೈಗೆ ಸಮನ್ಸ್

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ ಅವರ ವಿರುದ್ಧದ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಯಡಿಯೂರಪ್ಪ ಸೇರಿ ನಾಲ್ವರು ಆರೋಪಿಗಳಿಗೆ ಕೋರ್ಟ್ ಸಮನ್ಸ್ ಜಾರಿ ಮಾಡಿದೆ. ಕಳೆದ ಕೆಲವು ದಿನಗಳ ಹಿಂದೆಯಷ್ಟೇ ಈ ಪ್ರಕರಣ ಸಂಬಂಧ ಹೈಕೋರ್ಟ್ ಟ್ರಯಲ್‌ಗೆ ಅನುಮತಿ ನೀಡಿತ್ತು. ಇದೀಗ 1ನೇ ಫಾಸ್ಟ್ ಟ್ರ್ಯಾಕ್ ಕೋರ್ಟ್ ಬಿ.ಎಸ್.ಯಡಿಯೂರಪ್ಪ ಸೇರಿದಂತೆ 4 ಆರೋಪಿಗಳಿಗೆ ಸಮನ್ಸ್ ಜಾರಿ ಮಾಡಿದೆ. ಡಿ.2ಕ್ಕೆ ಕೋರ್ಟ್‌ಗೆ ಹಾಜರಾಗುವಂತೆ ತಿಳಿಸಿದೆ. ಇದಕ್ಕೂ ಮುನ್ನ ಕೆಳಹಂತದ ನ್ಯಾಯಾಲಯ ಆರೋಪ ನಿಗದಿಗೆ ಸಂಬಂಧಿಸಿದಂತೆ ಯಡಿಯೂರಪ್ಪನವರಿಗೆ ಸಮನ್ಸ್ ಜಾರಿ ಮಾಡಿತ್ತು. ಸಮನ್ಸ್ ಜಾರಿ ಮಾಡಿದ್ದನ್ನು ಪ್ರಶ್ನಿಸಿ ಬಿಎಸ್‌ವೈ ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್ ಯಡಿಯೂರಪ್ಪನವರ ಅರ್ಜಿ ವಜಾಗೊಳಿಸಿ ಟ್ರಯಲ್‌ಗೆ ಅನುಮತಿ ನೀಡಿತ್ತು.

ಆಶಾ ಕಾರ್ಯಕರ್ತೆಯರ ನೇಮಕಕ್ಕೆ ಮನವಿ

ಬೆಂಗಳೂರು: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ನಗರ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರನ್ನು ನೇಮಕ ಮಾಡಿಕೊಳ್ಳಲು ಕೂಡಲೇ ಅಗತ್ಯ ಕ್ರಮ ವಹಿಸುವಂತೆ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪತ್ರದ ಮೂಲಕ ಮನವಿ ಮಾಡಿಕೊಂಡಿದೆ.ಆಶಾ ಕಾರ್ಯಕರ್ತೆಯರು ಸಮುದಾಯದಲ್ಲಿನ ಆರೋಗ್ಯ ಮತ್ತು ನೈರ್ಮಲ್ಯ ಜಾಗೃತಿ, ತಾಯಿ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಮಹಿಳೆಯರಿಗೆ ಸಲಹೆ ಹಾಗೂ ಇನ್ನಿತರ ಸೇವೆಗಳನ್ನು ಸುಲಭವಾಗಿ ಪಡೆಯಲು ಸಹಾಯಕ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಾರೆ. ಪ್ರಸ್ತುತ ಗ್ರಾಮೀಣ ಭಾಗದಲ್ಲಿ ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ ಆದರೆ ನಗರ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರ ಅಲಭ್ಯತೆಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಗ್ರಾಮೀಣ ಪ್ರದೇಶಗಳಲ್ಲಿ 1,000 ಜನಸಂಖ್ಯೆಗೆ ಒಬ್ಬ ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸಿದರೆ, ನಗರ ಪ್ರದೇಶಗಳಲ್ಲಿ 2,500 ಜನರಿಗೆ ಒಬ್ಬ ಆಶಾ ಕಾರ್ಯಕರ್ತೆಯರು ಇದ್ದಾರೆ .ಹಾಗಾಗಿ ಗ್ರಾಮೀಣ ಭಾಗದಲ್ಲಿನ ಆಶಾ ಕಾರ್ಯಕರ್ತೆಯರ ಮಾದರಿಯಲ್ಲಿಯೇ ನಗರ ಪ್ರದೇಶಗಳಲ್ಲಿಯೂ ಆಶಾ ಕಾರ್ಯಕರ್ತೆಯನ್ನು ನೇಮಕ ಮಾಡಿಕೊಳ್ಳಲು ಕ್ರಮ ವಹಿಸುವಂತೆ ಆಯೋಗವು ಮನವಿಯಲ್ಲಿ ಪ್ರಕಟಿಸಿದೆ ಎಂದು ಪ್ರಕಟಣೆಗೆ ತಿಳಿಸಿದೆ.

ನ.28ರಂದು ಸಾರಿಗೆ ನೌಕರರಿಂದ ಪ್ರತಿಭಟನೆ

ಬೆಂಗಳೂರು: 38 ತಿಂಗಳ ವೇತನ ಬಾಕಿ ಪಾವತಿ, 1 ಜನವರಿ 2024ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಕೂಡಲೇ ಜಾರಿಗೆ ತರುವಂತೆ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಜಂಟಿ ಕ್ರಿಯಾ ಸಮಿತಿಯು ನ.28ರಂದು ಪ್ರತಿಭಟನೆ ನಡೆಸಲಿದೆ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್‌ನ ಎಚ್.ವಿ.ಅನಂತ ಸುಬ್ಬರಾವ್ ಹೇಳಿದ್ದಾರೆ. ಬೇಡಿಕೆಗಳನ್ನು ಈಡೇರಿಸಲು ಸರಕಾರವನ್ನು ಹಾಗೂ ನಿಗಮಗಳ ಆಡಳಿತ ವರ್ಗಗಳನ್ನು ಒತ್ತಾಯಿಸಲು ಜಂಟಿ ಕ್ರಿಯಾ ಸಮಿತಿಯು ರಾಜ್ಯ ಮಟ್ಟದ ನಾಲ್ಕೂ ಸಾರಿಗೆ ನಿಗಮಗಳ ನೌಕರರ ಪ್ರತಿಭಟನಾ ಸಮಾವೇಶವನ್ನು ನ.28ರ ಮಧ್ಯಾಹ್ನ 2.30 ಗಂಟೆಗೆ ಶೇಷಾದ್ರಿಪುರದ ಶಿರೂರು ಪಾರ್ಕ್ ರಸ್ತೆಯಲ್ಲಿರುವ ಆರ್ ಗುಂಡೂರಾವ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ ಮುಂದಿನ ಹೋರಾಟದ ರೂಪರೇಶೆಗಳನ್ನು ತೀರ್ಮಾನಿಸಲಾಗುತ್ತದೆ. ಆದ್ದರಿಂದ ನಾಲ್ಕೂ ನಿಗಮಗಳ ಎಲ್ಲಾ ಸಾರಿಗೆ ನೌಕರರು ಸದರಿ ಪ್ರತಿಭಟನಾ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದ್ದಾರೆ.

ಕೌಟುಂಬಿಕ ಕಲಹ: ಮಹಿಳೆ ನೇಣಿಗೆ

ಬೆಂಗಳೂರು: ಕೌಟುಂಬಿಕ ಕಲಹದಿಂದ ವಿವಾಹಿತ ಮಹಿಳೆಯೊಬ್ಬಳು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ಬೆಳಕಿಗೆ ಬಂದಿದೆ. ಎಡ್ವಿನಿ (28) ಆತ್ಮಹತ್ಯೆಗೆ ಶರಣಾದ ಮಹಿಳೆ. ರಾಜಗೋಪಾಲನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಕಳೆದ ಆರು ವರ್ಷಗಳ ಹಿಂದೆ ಎಡ್ವಿನಿ ಮತ್ತು ಮಣಿ ಎಂಬುವವರಿಬ್ಬರು ಮದುವೆಯಾಗಿದ್ದರು. ಮಣಿ ಕಾರು ಡ್ರೈವರ್ ಆಗಿ ವೃತ್ತಿ ಮಾಡುತ್ತಿದ್ದ. ದಂಪತಿಗಳ ನಡುವೆ ಆಗಾಗ ಸಣ್ಣಪುಟ್ಟ ವಿಚಾರಗಳಿಗೂ ಜಗಳ ನಡೆಯುತ್ತಿತ್ತು. ಮಂಗಳವಾರ ಬೆಳಗ್ಗೆ ಮಣಿ ದೇವಸ್ಥಾನಕ್ಕೆ ಹೋಗಿ ಬರುತ್ತೇನೆಂದು ಹೋಗಿದ್ದ. ಮಧ್ಯಾಹ್ನ ಮಣಿ ಮನೆಗೆ ವಾಪಸ್ ಬಂದಾಗ, ಪತ್ನಿ ಎಡ್ವಿನಿ ಅವರು ನೇಣು ಬಿಗಿದುಕೊಂಡಿದ್ದಳು. ಇದೀಗ ಗಂಡನೇ ಹೆಂಡತಿಯನ್ನು ಕೊಲೆ ಮಾಡಿದ್ದಾನೆಂದು ಕುಟುಂಬಸ್ಥರು ಆರೋಪ ಮಾಡಿದ್ದಾರೆ. ಪತ್ನಿಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು. ಮೃತಳ ಪೋಷಕರು ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಪತಿ ಮಣಿ ವಿರುದ್ಧ ದೂರು ದಾಖಲಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

PUBLIC NOTICE

This is to inform the general public that I, Anoop Srivastava, residing at # 139, Ayeshi Nilaya,SMV Layout, Behind Amrita Vidyalayam, Bengaluru, Karanataka-560056 hereby disown my daughter Deeshika, aged 22 years, from my life and family.

I state that I have severed all my relations with her due to personal reasons.

Henceforth, I shall not be responsible or liable for any of her acts, deeds, dealings, financial transactions, loans, liabilities, or any activities conducted by her in the future.

Any person dealing with her shall be doing so at their own risk and responsibility.

Sd/-
Anoop Srivastava

760 ಗ್ರಾಂ ಎಂಡಿಎಂಎ, ಕ್ರಿಸ್ಟಲ್, ದ್ವಿಚಕ್ರ ವಾಹನ ಮತ್ತು ಮೊಬೈಲ್ ಫೋನ್ ವಶ | 14 ವಿದೇಶಿ ಪ್ರಜೆ ಸೇರಿ 19 ಆರೋಪಿಗಳ ಬಂಧನ

7.7 ಕೋಟಿ ಮೌಲ್ಯದ ಮಾದಕ ಪದಾರ್ಥ ಜಪ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಾದಕ ಪದಾರ್ಥಗಳ ಮಾರಾಟ ಮಾಡುತ್ತಿದ್ದ 14 ವಿದೇಶಿ ಪ್ರಜೆಗಳ ಸಹಿತ ಒಟ್ಟು 19 ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದ್ದು, 7.7 ಕೋಟಿ ರು. ಮೌಲ್ಯದ ಮಾದಕ ಪದಾರ್ಥ ಜಪ್ತಿ ಮಾಡಲಾಗಿದೆ. ಸುದ್ದಗುಂಟೆಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನೈಜೀರಿಯಾ ಮೂಲದ ಮಹಿಳಾ ಆರೋಪಿಯನ್ನು ಬಂಧಿಸಲಾಗಿದೆ. 1.52 ಕೋಟಿ ಮೌಲ್ಯದ 760 ಗ್ರಾಂ ಎಂಡಿಎಂಎ, ಕ್ರಿಸ್ಟಲ್, ದ್ವಿಚಕ್ರ ವಾಹನ ಮತ್ತು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.

ಮಹದೇವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಐವರು ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಲಾಗಿದ್ದು, 60 ಲಕ್ಷ ಮೌಲ್ಯದ 600 ಗ್ರಾಂ ಹೈಡ್ರೋ ಗಾಂಜಾ ಮತ್ತು ಐದು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ. ಹಾಗೂ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ಕೀನ್ಯಾ ಮೂಲದ ಮಹಿಳಾ ಆರೋಪಿಯನ್ನು ಬಂಧಿಸಲಾಗಿದ್ದು, 4.08 ಕೋಟಿ ರು. ಮೌಲ್ಯದ 2.044 ಕೆ.ಜಿ. ಎಂಡಿಎಂಎ ಕ್ರಿಸ್ಟಲ್, ಮೊಬೈಲ್ ಫೋನ್ ಮತ್ತು ಎಲೆಕ್ಟ್ರಾನಿಕ್ ತೂಕ ಮಾಪಕ ವಶಪಡಿಸಿಕೊಳ್ಳಲಾಗಿದೆ. ಕಳೆದ ವರ್ಷ ಪ್ರವಾಸಿ ವೀಸಾದಡಿ ಭಾರತಕ್ಕೆ ಬಂದಿದ್ದ ಆರೋಪಿ ಕಮ್ಮನಹಳ್ಳಿಯಲ್ಲಿ ಹೇರ್ ಡ್ರೆಸರ್ ಆಗಿ ಕೆಲಸ ಮಾಡುತ್ತಿದ್ದಳು. ನೈಜೀರಿಯಾ ಮತ್ತು ತಾಂಜಾನಿಯಾ ಮೂಲದ ಇಬ್ಬರು ಆರೋಪಿಗಳ ಬಳಿ ಮಾದಕ ವಸ್ತುಗಳನ್ನು ಖರೀದಿಸಿ ತಂದು ಪರಿಚಿತ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಳು.

ಕೆ.ಜಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ವಿದೇಶಿ ಅಂಚೆ ಕಚೇರಿಗೆ ಬಂದಿದ್ದ 1.5 ಕೋಟಿ ಮೌಲ್ಯದ 1.5 ಕೆ.ಜಿ. ಹೈಡ್ರೋ ಗಾಂಜಾವನ್ನು ಸಿಸಿಬಿ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಥಾಯ್ಲೆಂಡ್, ಫ್ರಾನ್ಸ್‌ನಿಂದ ಬಿಸ್ಕೆಟ್ ಮತ್ತು ಚಾಕೊಲೇಟ್ ಪ್ಯಾಕೆಟ್ ಒಳಗೆ ಮಾದಕ ಪದಾರ್ಥಗಳನ್ನು ಅಡಗಿಸಿ ಕಳುಹಿಸಲಾಗಿತ್ತು ಎಂಬುದನ್ನು ಪೊಲೀಸರು ಪತ್ತೆಹಚ್ಚಿದ್ದಾರೆ. ಕೆ. ಜಿ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಮಾದಕ ದಂಧೆಕೋರರ ವಿರುದ್ಧದ ಸಮರವನ್ನು ಮತ್ತಷ್ಟು ಚುರುಗೊಳಿಸಿರುವ ಬೆಂಗಳೂರು ನಗರ ಪೊಲೀಸರು ಪ್ರಸಕ್ತ ವರ್ಷ 81.21 ಕೋಟಿ ರೂಪಾಯಿ ಮೌಲ್ಯದ ವಿವಿಧ ಮಾದಕ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.



ಮಾದಕ ಪದಾರ್ಥ ಜಪ್ತಿ ಮಾಡಿಕೊಂಡಿರುವ ಸಿಸಿಬಿ ಪೊಲೀಸರು.

> **2025ರ ಅಕ್ಟೋಬರ್ 8 ರವರೆಗಿನ ಅಂಕಿ ಅಂಶಗಳ ಪ್ರಕಾರ, ಬೆಂಗಳೂರಿನಲ್ಲಿ ಮಾದಕ ವಸ್ತುಗಳ ಮಾರಾಟದಲ್ಲಿ ತೊಡಗಿದ್ದವರ ವಿರುದ್ಧ 711 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದು, 1,013 ಭಾರತೀಯ ಹಾಗೂ 35 ವಿದೇಶಿ ಮೂಲದ ಆರೋಪಿಗಳ ಸಹಿತ 1,048 ಜನರನ್ನು ಬಂಧಿಸಲಾಗಿತ್ತು. ಬಂಧಿತರಿಂದ ಒಟ್ಟು 1483.30 ಕೆ.ಜಿ ತೂಕದ ಮಾದಕ ಪದಾರ್ಥ ವಶಪಡಿಸಿಕೊಳ್ಳಲಾಗಿದೆ.**
>
> –ಸೀಮಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಪೊಲೀಸ್ ಆಯುಕ್ತ

ಕೋಟ್ಯಂತರ ರು. ಮೌಲ್ಯದ 'ಹೈಡ್ರೋಪೋನಿಕ್ ಗಾಂಜಾ' ವಶ

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ಮತ್ತೊಂದು ಬೃಹತ್ ಮಾದಕ ವಸ್ತು ಜಾಲವನ್ನು ಭೇದಿಸಿದ್ದಾರೆ. ನ. 17 ರಂದು ನಡೆಸಿದ ಕಾರ್ಯಾಚರಣೆಯಲ್ಲಿ, ಅಕ್ರಮವಾಗಿ ಸಾಗಿಸುತ್ತಿದ್ದ ಸುಮಾರು 1.34 ಕೋಟಿ ರು. ಮೌಲ್ಯದ 'ಹೈಡ್ರೋಪೋನಿಕ್ ಗಾಂಜಾ' ವಶಪಡಿಸಿಕೊಂಡಿದ್ದಾರೆ. ಬ್ಯಾಂಕಾಕ್‌ನಿಂದ ವಿಮಾನದಲ್ಲಿ ಬಂದಿಳಿದ ಪ್ರಯಾಣಿಕನೊಬ್ಬನ ನಡವಳಿಕೆಯಿಂದ ಅನುಮಾನಗೊಂಡ ಕಸ್ಟಮ್ಸ್ ಅಧಿಕಾರಿಗಳು, ಆತನ ಲಗೇಜ್ ತಪಾಸಣೆಗೆ ಒಳಪಡಿಸಿದರು. ಈ ಸಂದರ್ಭದಲ್ಲಿ 3.83 ಕೆ.ಜಿ ತೂಕದ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತ್ಯಂತ ದುಬಾರಿ ಬೆಲೆಬಾಳುವ 'ಹೈಡ್ರೋಪೋನಿಕ್ ಗಾಂಜಾ' ಪತ್ತೆಯಾಗಿದೆ. ಇದನ್ನು ಜಾಣ್ಮೆಯಿಂದ ಬ್ಯಾಗ್‌ನಲ್ಲಿ ಬಚ್ಚಿಟ್ಟು ಸಾಗಿಸಲಾಗುತ್ತಿತ್ತು. ತಕ್ಷಣವೇ ಆರೋಪಿಯನ್ನು ವಶಕ್ಕೆ ಪಡೆದ ಅಧಿಕಾರಿಗಳು, ಎನ್‌ಡಿಪಿಎಸ್ ಕಾಯಿದೆ, 1985ರ ಅಡಿಯಲ್ಲಿ ಪ್ರಕರಣ ದಾಖಲಿಸಿ, ಆತನನ್ನು ಬಂಧಿಸಿದ್ದಾರೆ. ಬೃಹತ್ ಜಾಲದ ಹಿಂದೆ ಇರುವ ಇತರ ವ್ಯಕ್ತಿಗಳು ಮತ್ತು ಇದರ ಮೂಲವನ್ನು ಪತ್ತೆಹಚ್ಚಲು ತನಿಖೆ ಮುಂದುವರಿದಿದೆ ಎಂದು ಕಸ್ಟಮ್ಸ್ ಇಲಾಖೆಯ ಮೂಲಗಳು ತಿಳಿಸಿವೆ.

38 ಬೈಕ್‌ಗಳು ವಶ: ಐವರು ಕಳ್ಳರು ಸೆರೆ

ಬೆಂಗಳೂರು: ಪ್ರತ್ಯೇಕ ಪ್ರಕರಣಗಳಲ್ಲಿ ಐವರು ಕಳ್ಳರನ್ನು ಬಂಧಿಸಿರುವ ಬೆಂಗಳೂರು ಪೊಲೀಸರು, 52.50 ಲಕ್ಷ ರು. ಮೌಲ್ಯದ 38 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಮಹದೇವಪುರ ಹಾಗೂ ಬಂಡೇಪಾಳ್ಯ ವ್ಯಾಪ್ತಿಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. 24 ದ್ವಿಚಕ್ರ ವಾಹನಗಳ ಕಳವು ಪ್ರಕರಣವನ್ನು ಪೊಲೀಸರು ಭೇದಿಸಿದ್ದಾರೆ. ಇನ್ನುಳಿದ ವಾಹನಗಳ ಮೂಲ ವಾರಸುದಾರರ ಪತ್ತೆ ಕಾರ್ಯ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.**ಹಗಲು ಬಿರಿಯಾನಿ ಮಾರಾಟ, ರಾತ್ರಿ ಕಳ್ಳತನ:** ಇಬ್ಬರು ದ್ವಿಚಕ್ರ ವಾಹನ ಕಳ್ಳರನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮನುಕುಮಾರ್ ಮತ್ತು ಸಚಿನ್ ಬಂಧಿತರು. ಇವರು ಹಗಲಿನಲ್ಲಿ ತಳ್ಳುವ ಗಾಡಿಗಳಲ್ಲಿ ಬಿರಿಯಾನಿ ಮಾರಾಟ ಮಾಡುತ್ತಿದ್ದ ಆರೋಪಿಗಳು ರಾತ್ರಿಯಾದರೆ ದ್ವಿಚಕ್ರ ವಾಹನಗಳ ಹ್ಯಾಂಡ್ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದರು. ಇಬ್ಬರು ಸಹೋದರಿಯರನ್ನೇ ವಿವಾಹವಾಗಿದ್ದ ಮನುಕುಮಾರ್ ಮತ್ತು ಸಚಿನ್ ಕೃತ್ಯದ ಕುರಿತು ಪತ್ನಿಯರಿಗೂ ಅರಿವಿತ್ತು. ಐಷಾರಾಮಿ ಜೀವನಕ್ಕಾಗಿ ಪತಿಯರ ಕೃತ್ಯಕ್ಕೆ ಪತ್ನಿಯರೂ ಬೆಂಬಲ ನೀಡುತ್ತಿದ್ದರು. ಈ ಆರೋಪಿಗಳಿಂದ 37.50 ಲಕ್ಷ ರು. ಮೌಲ್ಯದ 20 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ವಿರುದ್ಧ ನಗರದ ರಾಮಮೂರ್ತಿನಗರ, ಮಹದೇವಪುರ, ಎಚ್ ಎಎಲ್, ವೈಟ್‌ಫೀಲ್ಡ್ ಸೇರಿದಂತೆ ಹಲವು ಪೊಲೀಸ್ ಠಾಣೆಗಳಲ್ಲಿ ಕಳ್ಳತನ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

11 ಪ್ರಕರಣಗಳು ಬಯಲಿಗೆ: ಆರೋಪಿಗಳನ್ನು ನವೆಂಬರ್ 5 ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿ, 10 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆಯಲಾಯಿತು. ಸುದೀರ್ಘ ವಿಚಾರಣೆ ವೇಳೆ, ಆರೋಪಿಗಳು ಕದ್ದ ವಾಹನಗಳನ್ನು ಶಿಕಾರಿಪುರ, ಕಾಡುಗೋಡಿ, ಹರಿಹರದಲ್ಲಿರುವ ತಮ್ಮ ಸ್ನೇಹಿತರಿಗೆ ಮಾರಾಟ ಮಾಡಿರುವುದು ಮತ್ತು ಉಳಿದ ವಾಹನಗಳನ್ನು ಮಾರಾಟ ಮಾಡಲು ಕಾಮಧೇನು ಲೇಔಟ್‌ನ ಖಾಲಿ ಜಾಗದಲ್ಲಿ ನಿಲ್ಲಿಸಿರುವುದಾಗಿ ಮಾಹಿತಿ ನೀಡಿದ್ದಾರೆ.

ಬಿ.ಟೆಕ್ ಪದವೀಧರ ಹೈಟೆಕ್ ಕಳ್ಳ!

ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ಬಂಡೇಪಾಳ್ಯ ಪೊಲೀಸರು ಮೂವರು ದ್ವಿಚಕ್ರ ವಾಹನ ಕಳ್ಳರನ್ನು ಬಂಧಿಸಿದ್ದಾರೆ. ರಿಷಬ್ ಚಕ್ರವರ್ತಿ ಮತ್ತು ಅಜೀವುಲ್ಲಾ ಹಾಗೂ ನಜೀವುಲ್ಲಾ ಬಂಧಿತರು. ಇವರಿಂದ 20 ಲಕ್ಷ ರು. ಮೌಲ್ಯದ ಒಟ್ಟು 18 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ಪೈಕಿ ರಿಷಭ್ ಚಕ್ರವರ್ತಿ ಪಶ್ಚಿಮ ಬಂಗಾಳ ಮೂಲದವ. ಬಿ.ಟೆಕ್ ಪದವೀಧರ. ಈ ಹಿಂದೆ ಕಳ್ಳತನ ಪ್ರಕರಣವೊಂದರಲ್ಲಿ ಜೈಲು ಪಾಲಾಗಿದ್ದ ಈತ ಜಾಮೀನು ಪಡೆದು ಹೊರಬಂದಿದ್ದ. ಬಳಿಕ ಪೊಲೀಸರೇ ಈತನಿಗೆ ಬುದ್ದಿವಾದ ಹೇಳಿ ಒಂದು ಕೆಲಸವನ್ನೂ ಕೊಡಿಸಿದ್ದರು. ಆದರೆ ಕೇವಲ ಒಂದೇ ತಿಂಗಳ ಅಂತರದಲ್ಲಿ ಆತ ಕೆಲಸದ ಬದಲು ಮತ್ತೆ ದ್ವಿಚಕ್ರ ವಾಹನ ಕಳ್ಳತನಕ್ಕಿಳಿದಿದ್ದ. ವಿಚಿತ್ರವೆಂದರೆ ಕದ್ದ ದ್ವಿಚಕ್ರವಾಹನವನ್ನ ಓಡಿಸುತ್ತಿದ್ದ ರಿಷಭ್ ಚಕ್ರವರ್ತಿ, ಅದರ ಇಂಧನ ಖಾಲಿಯಾದಾಗ ಎಲ್ಲೆಂದರಲ್ಲಿ ನಿಲ್ಲಿಸಿ ಪರಾರಿಯಾಗುತ್ತಿದ್ದ. ಎರಡೂ ಪ್ರಕರಣಗಳಿಂದ 15 ಲಕ್ಷ ರು. ಮೌಲ್ಯದ ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಡೇಪಾಳ್ಯ, ಎಲೆಕ್ಟ್ರಾನಿಕ್ ಸಿಟಿ, ಪರಪ್ಪನ ಅಗ್ರಹಾರ, ಗಿರಿನಗರ, ವಿವೇಕ್ ನಗರ, ಬಾಗಲಗುಂಟೆ, ರಾಜಗೋಪಾಲನಗರ, ಇಂದಿರಾನಗರ, ಕೆ.ಎಸ್.ಲೇಔಟ್, ಬಾಗಲಗುಂಟೆ ಹಾಗೂ ಹೆಣ್ಣೂರು ಠಾಣೆಗಳಲ್ಲಿ ದಾಖಲಾಗಿದ್ದ ಕಳ್ಳತನ ಪ್ರಕರಣಗಳು ಬಯಲಾಗಿವೆ.

ಹಣ ಕೇಳಿದ್ದಕ್ಕೆ 'ದೃಶ್ಯ' ಸಿನಿಮಾ ಶೈಲಿಯಲ್ಲಿ ಕೊಲೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೊಟ್ಟ ಹಣ ವಾಪಸ್ ಕೇಳಿದ್ದಕ್ಕೆ 'ದೃಶ್ಯ' ಸಿನಿಮಾ ಶೈಲಿಯಲ್ಲಿ ದುರುಳರು ಎಂಜಿನಿಯರ್‌ನನ್ನು ಹತ್ಯೆಗೈದಿರುವ ಪ್ರಕರಣವನ್ನು ಅತ್ತಿಬೆಲೆ ಪೊಲೀಸರು ಭೇದಿಸಿದ್ದಾರೆ. ಎಂಜಿನಿಯರ್ ನಾಪತ್ತೆ ಪ್ರಕರಣ ಬೆನ್ನತ್ತಿದ ಪೊಲೀಸರು, ಕೊಲೆಮಾಡಿ ಬಳಿಕ ಮೃತದೇಹವನ್ನು ಆರೋಪಿ ಮನೆಯಲ್ಲಿ ಹೂತು ಹಾಕಿದ್ದ ಎಂಬುದನ್ನು ಬಹಿರಂಗಪಡಿಸಿದ್ದಾರೆ. ಆ ಮೂಲಕ ನಾಪತ್ತೆ ಪ್ರಕರಣ ಕೊಲೆ ಪ್ರಕರಣವಾಗಿ ಮಾರ್ಪಟ್ಟಿದೆ.

ಆಂಧ್ರ ಪ್ರದೇಶದ ಕುಪ್ಪಂ ಮೂಲದ ಶ್ರೀನಾಥ್(30) ಬರ್ಬರ ಕೊಲೆಯಾದ ವ್ಯಕ್ತಿ. ಆರೋಪಿ ಪ್ರಭಾಕರ್ ಮತ್ತು ಆತನ ಸ್ನೇಹಿತನನ್ನು ಪೊಲೀಸರು ಬಂಧಿಸಿದ್ದಾರೆ. ಅತ್ತಿಬೆಲೆಯ ನೆರಳೂರಿನಲ್ಲಿ ಪತ್ನಿ, ಮಗುವಿನೊಂದಿಗೆ ವಾಸವಿದ್ದ ಎಂಜಿನಿಯರ್ ಶ್ರೀನಾಥ್‌ಗೆ ಕೈತುಂಬ ಸಂಬಳ ಬರುತ್ತಿತ್ತು. ಹಣ ಡಬಲ್ ಮಾಡಿಕೊಡುವುದಾಗಿ ಹೇಳಿದ್ದ ಹಂತಕ ಪ್ರಭಾಕರ್, ಸೋದರ ಸಂಬಂಧಿ ಶ್ರೀನಾಥ್ ಬಳಿ 40 ಲಕ್ಷ ರು. ಹಣ ಪಡೆದಿದ್ದ. ಇತ್ತೀಚೆಗೆ ಆ ಹಣ ವಾಪಸ್ ಕೊಡುವಂತೆ ಪ್ರಭಾಕರ್‌ಗೆ ಶ್ರೀನಾಥ್ ಕೇಳಿದ್ದ ಕಾರಣ, ಅವರ ಹತ್ಯೆಗೆ ಮಾಸ್ಟರ್ ಪ್ಲ್ಯಾನ್ ರೂಪಿಸಲಾಗಿತ್ತು. ಹಣ ಕೊಡುವೆ ಬಾ ಎಂದು ಆಂಧ್ರದ ಕುಪ್ಪಂಗೆ ಶ್ರೀನಾಥ್‌ನನ್ನು ಆರೋಪಿ ಕರೆಸಿಕೊಂಡಿದ್ದ. ಕುಪ್ಪಂನಲ್ಲಿ ಶ್ರೀನಾಥ್ ಮನೆಯೊಳಗೆ ಬರುತ್ತಿದ್ದಂತೆ ಅವರ ತಲೆಗೆ ಸುತ್ತಿಗೆಯಿಂದ ಹೊಡೆದು ಪ್ರಭಾಕರ್ ಮತ್ತು ಆತನ ಸ್ನೇಹಿತ ಜಗದೀಶ್ ಸೇರಿ ಹತ್ಯೆಗೈದಿದ್ದರು. ಕೊಲೆ ಬಳಿಕ ಅದೇ ಮನೆಯಲ್ಲೇ ಗುಂಡಿ ತೆಗೆದು ಹೂತಾಕಿದ್ದರು.

ಕುಪ್ಪಂಗೆ ಹೋಗುವ ವಿಷಯ ಶ್ರೀನಾಥ್ ಪತ್ನಿಗೆ ತಿಳಿಸಿ ಹೋಗಿದ್ದು, ಈ ಬಗ್ಗೆ ಅವರು ಪ್ರಭಾಕರ್‌ನನ್ನು ಪ್ರಶ್ನಿಸಿದರೂ ಏನೂ ಗೊತ್ತಿಲ್ಲದಂತೆ ಆತ ನಾಟಕವಾಡಿದ್ದ. 2 ದಿನವಾದರೂ ಪತಿ ಮನೆಗೆ ಬಾರದೆ ಇದ್ದಾಗ ಅತ್ತಿಬೆಲೆ ಠಾಣೆಗೆ ಶ್ರೀನಾಥ್ ಪತ್ನಿ ದೂರು ನೀಡಿದ್ದಾರೆ. ಪ್ರಕರಣ ಸಂಬಂಧ ಪ್ರಭಾಕರ್ ಮತ್ತು ಜಗದೀಶ್‌ನನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸಿದಾಗ ಕೊಲೆ ರಹಸ್ಯ ಹೊರಗೆ ಬಂದಿದೆ. ಶ್ರೀನಾಥ್‌ನನ್ನು ಕೊಂದು ಕುಪ್ಪಂನ ಮನೆಯಲ್ಲಿ ಹೂತು ಹಾಕಿರುವುದಾಗಿ ಹಂತಕರು ಬಾಯ್ಬಿಟ್ಟಿದ್ದಾರೆ. ಕುಪ್ಪಂ ತಹಶೀಲ್ದಾರ್ ನೇತೃತ್ವದಲ್ಲಿ ಶ್ರೀನಾಥ್ ಮೃತದೇಹವನ್ನು ಪೊಲೀಸರು ಹೊರತೆಗೆದಿದ್ದಾರೆ.

ಆರೋಪಿಗಳ ಕ್ರೈಂ ಹಿಸ್ಟರಿ ಭಯಾನಕ : ಶ್ರೀನಾಥ್ ಅವರನ್ನು ಕೊಲೆ ಮಾಡಿರುವ ಆರೋಪಿಗಳ ಕ್ರೈಂ ಹಿಸ್ಟರಿ ಭಯಾನಕವಾಗಿದ್ದು, ಈ ಹಿಂದೆ ತನ್ನ ಪತ್ನಿಯನ್ನೇ ಪ್ರಭಾಕರ್ ಕೊಲೆ ಮಾಡಿದ್ದ. ಹಣದ ವಿಚಾರವಾಗಿ ನಡೆದ ಕೊಲೆ ಪ್ರಕರಣ ಸಂಬಂಧ ಜೈಲಿಗೆ ಹೋಗಿದ್ದ. ಎ 2 ಜಗದೀಶ್ ಕೂಡ ತನ್ನ ಪ್ರೇಯಸಿಯನ್ನ ಮರ್ಡರ್ ಮಾಡಿದ್ದ. ಒಮ್ಮೆ ಜೈಲಿಗೆ ಹೋಗಿ ಬಂದರೂ ಬುದ್ಧಿ ಕಲಿಯದ ಇವರು ಮತ್ತೆ ಅಂತಹುದೇ ಕೆಲಸ ಮಾಡಿದ್ದಾರೆ. ಜೈಲಿನಿಂದ ಹೊರಬಂದ ಬಳಿಕ ಶ್ರೀನಾಥ್ ಬಳಿ ಪ್ರಭಾಕರ್ ಹಣ ಪಡೆದಿದ್ದ. ದೊಡ್ಡಪ್ಪನ ಮಗನೆಂದು ನಂಬಿ ಪ್ರಭಾಕರ್‌ಗೆ ಶ್ರೀನಾಥ್ ಹಣ ಕೊಟ್ಟಿದ್ದರು. ಹಣ ವಾಪಸ್ ಕೇಳಿದಾಗ ದುಡ್ಡಿನ ವಿಚಾರವಾಗಿ ಫೋನ್‌ನಲ್ಲಿ ಮಾತನಾಡಬೇಡ, ಐಟಿ ತೊಂದರೆಯಾಗುತ್ತದೆ. ಬದಲಾಗಿ ವಾಟ್ಸ್ಯಾಪ್ ಕರೆ ಮೂಲಕ ಮಾತಾಡಿಕೊಳ್ಳೋಣ ಎಂದು ಪ್ರಭಾಕರ್ ಹೇಳಿದ್ದ. ಅ. 27ರಂದು ಹಣ ವಾಪಸ್ ಕೊಡುವುದಾಗಿ ತಿಳಿಸಿದ್ದ. ಕುಪ್ಪಂಗೆ ಬರುವಾಗ ಮೊಬೈಲ್ ಮನೆಯಲ್ಲಿಯೇ ಬಿಟ್ಟು ಬಾ. ಇಲ್ಲದಿದ್ದರೆ ಸಮಸ್ಯೆ ಆಗುತ್ತದೆ ಎಂದು ಶ್ರೀನಾಥ್ ಅವರಿಗೆ ಪ್ರಭಾಕರ್ ತಿಳಿಸಿದ್ದ.

ಹೀಗಾಗಿ ಮೊಬೈಲ್ ಮನೆಯಲ್ಲೇ ಬಿಟ್ಟು ಶ್ರೀನಾಥ್ ತೆರಳಿದ್ದರು. ಪೊಲೀಸರ ವಿಚಾರಣೆ ಸಂದರ್ಭವೂ ಶ್ರೀನಾಥ್ ತನಗೆ ಸಿಗಲೇ ಇಲ್ಲ. ಬೇಕಿದ್ದರೆ ಮೊಬೈಲ್ ಚೆಕ್ ಮಾಡಿ ಎಂದು ಪ್ರಭಾಕರ್ ಹೇಳಿದ್ದ. ಪ್ರಭಾಕರ್‌ನ ಒಂದು ತಿಂಗಳ ಕಾಲ್ ಮಾಹಿತಿ ಪಡೆದರೂ ಘಟನೆ ಬಗ್ಗೆ ಯಾವುದೇ ಸುಳಿವು ಸಿಗದ ಕಾರಣ ಪೊಲೀಸರು 2 ತಿಂಗಳ ಮಾಹಿತಿ ಪರಿಶೀಲಿಸಿದ್ದಾರೆ. ಈ ವೇಳೆ ಜಗದೀಶ್ ಜತೆಗಿನ ಲಿಂಕ್ ಪತ್ತೆಯಾಗಿದೆ.



ನಿಗದಿತ ದಿನಾಂಕದಂದೇ ಕೆಎಸ್‌ಸಿಎ ಚುನಾವಣೆ

ನ್ಯಾ.ಡಿ.ಕೆ.ಸಿಂಗ್, ನ್ಯಾ. ತಾರಾ ವಿತಸ್ತಾ ಗಂಜು ವಿಭಾಗೀಯ ಸೂಚನೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಅಕಾಡೆಮಿ ಚುನಾವಣೆಗೆ ಸಂಬಂಧಿಸಿದಂತೆ ಉಂಟಾಗಿದ್ದ ಗೊಂದಲಕ್ಕೆ ಹೈಕೋರ್ಟ್ ಮಂಗಳವಾರ ತೆರೆ ಎಳೆದಿದ್ದು, ನಿಗದಿತ ದಿನಾಂಕದಂತೆ ಚುನಾವಣೆ ನಡೆಸುವಂತೆ ನಿರ್ದೇಶನ ನೀಡಿತು.

ಕೆಎಸ್‌ಸಿಎ ಆಜೀವ ಸದಸ್ಯರಾಗಿರುವ ಬಿ.ಎನ್ ಮಧುಕರ್ ಎಂಬವರು 2020ರಲ್ಲಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಮಧ್ಯಂತರ ಅರ್ಜಿ ಸಲ್ಲಿಸಿ ಚುನಾವಣೆ ನಡೆಸಲು ನಿರ್ದೇಶನ ನೀಡುವಂತೆ ಮನವಿ ಮಾಡಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಹಾಗೂ ನ್ಯಾಯಮೂರ್ತಿ ತಾರಾ ವಿತಸ್ತಾ ಗಂಜು ಅವರಿದ್ದ ವಿಭಾಗೀಯ ಈ ಸೂಚನೆ ನೀಡಿದೆ. 2019ರಲ್ಲಿ ಮೂರು ವರ್ಷಗಳ ಅವಧಿಗೆ ಚುನಾವಣೆ ನಡೆದಿದೆ. ಈ ಅವಧಿ ಬಹಳ ಹಿಂದೆಯೇ ಮುಕ್ತಾಯವಾಗಿದೆ. ಇದೀಗ 2025ರಲ್ಲಿದ್ದೇವೆ. ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ನವೆಂಬರ್ 30ರಂದು ಚುನಾವಣೆ ನಡೆಸಲು ನಿರ್ಧರಿಸಿದೆ. ಹೀಗಾಗಿ ಪ್ರಸ್ತುತ ಇರುವ ನಿಯಮಗಳು ಮತ್ತು ಕಾನೂನುಗಳಿಗೆ ಅನುಗುಣವಾಗಿ ಚುನಾವಣೆಗಳನ್ನು ನಡೆಸುವಂತೆ ನಿರ್ದೇಶನ ನೀಡಲಾಗುತ್ತಿದೆ. ಅರ್ಹತೆಯಿರುವ ಯಾವುದೇ ವ್ಯಕ್ತಿಯು ಚುನಾವಣೆಗೆ ಸ್ಪರ್ಧಿಸುವುದಕ್ಕೆ ಅವಕಾಶವಿರಲಿದೆ ಎಂದು ನ.10ರಂದು ಆದೇಶ ನೀಡಿತ್ತು. ಈ ನಡುವೆ ಚುನಾವಣೆಗೆ ಸ್ಪರ್ಧೆ ಮಾಡುವವರ ಅರ್ಹತೆಗಳ ಕುರಿತಂತೆ ಎ.ವಿ.ಶಶಿಧರ್ ಮತ್ತೊಂದು ಅರ್ಜಿಯನ್ನು ನಗರದ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿರುವ ಸಿಟಿ ಸಿವಿಲ್ ನ್ಯಾಯಾಲಯ, ಚುನಾವಣೆಗೆ ಸಂಬಂಧಿಸಿದಂತೆ ನಡೆದ ಸಭೆಗಳು ಮತ್ತು ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅರ್ಹತೆಗೆ ಸಂಬಂಧಿಸಿದಂತೆ ಇರುವ ಕೆಲವು ವಿಚಾರಗಳಲ್ಲಿನ ಗೊಂದಲಗಳನ್ನು ಬಗೆಹರಿಸಬೇಕು ಹಾಗೂ ಈ ಸಂಬಂಧ ನಡೆದ ಸಭೆಗಳಿಗೆ ಸಂಬಂಧಿಸಿದಂತೆ ಏಕಪಕ್ಷೀಯ ನಿರ್ಬಂಧಕಾಜ್ಞೆ ನೀಡಿ ನ.5ರಂದು ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

> **ನ.30ಕ್ಕೆ ಕೆಎಸ್‌ಸಿಎ ಚುನಾವಣೆ ನಿಗದಿಯಾಗಿತ್ತು. ಆದರೆ, ಸಿವಿಲ್ ನ್ಯಾಯಾಲಯ ಚುನಾವಣೆಗೆ ಸಂಬಂಧಿಸಿದಂತೆ ನಿರ್ಧಾರಗಳಿಗೆ ನಿರ್ಬಂಧಕಾಜ್ಞೆ ವಿಧಿಸಿತ್ತು. ಇದರಿಂದಾಗಿ ನ್ಯಾಯಾಂಗ ನಿಂದನೆ ಆಗದಂತೆ ತಡೆಯಬೇಕಾಗಿದ್ದು, ಚುನಾವಣೆ ಮುಂದೂಡಲಾಗಿತ್ತು. ಆದರೆ, ಸಿವಿಲ್ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ ಎಂಬ ಅಂಶ ಗೊತ್ತಾಗಿದೆ. ಈ ಕುರಿತ ಆದೇಶ ಪ್ರತಿ ನಮಗೆ ಇನ್ನೂ ಲಭ್ಯವಾಗಿಲ್ಲ. ಆದೇಶದ ಪ್ರತಿಯನ್ನು ನೋಡಿದ ಬಳಿಕ ಚುನಾವಣೆ ನಡೆಸುವ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು.**
>
> **- ಡಾ.ಬಸವರಾಜು, ಕೆಎಸ್‌ಸಿಎ ಚುನಾವಣಾ ಅಧಿಕಾರಿ**

ಕೆ-ಸೆಟ್ ಫಲಿತಾಂಶ ಘೋಷಣೆ ಮರುಪರಿಶೀಲಿಸಿ

ಬೆಂಗಳೂರು: ಕೆ-ಸೆಟ್ ಫಲಿತಾಂಶಗಳ ಘೋಷಣೆ ಕಾರ್ಯವಿಧಾನ ಮತ್ತು ಮಾನದಂಡಗಳನ್ನು ಮರು ಪರಿಶೀಲಿಸುವಂತೆ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಫಲಿತಾಂಶಗಳನ್ನು ಘೋಷಿಸುವಾಗ ಅಭ್ಯರ್ಥಿಗಳನ್ನು ವಿಷಯವಾರು ಮತ್ತು ವರ್ಗವಾರು ಅರ್ಹರು ಎಂದು ಪ್ರಮಾಣೀಕರಿಸುವಾಗ ಎಸ್‌ಸಿ, ಎಸ್‌ಟಿ ಮತ್ತು ಇತರ ಹಿಂದುಳಿದ ವರ್ಗಗಳ(ಮೀಸಲು ಮತ್ತು ನೇಮಕ ಇತ್ಯಾದಿ) ಕಾಯ್ದೆಯಲ್ಲಿನ ಮೀಸಲಾತಿ ನಿಯಮಗಳನ್ನು ಅನುಸರಿಸಿರುವ ಸಂಬಂಧ ಖಾತ್ರಿ ಪಡಿಸಿಕೊಳ್ಳಬೇಕು ಎಂದು ಸೂಚನೆ ನೀಡಿದೆ. ಬೆಂಗಳೂರಿನ ಎ. ಗೋಪಾಲ ಎಂಬುವರು ಸಲ್ಲಿಸಿದ ಅರ್ಜಿಯನ್ನು ಭಾಗಶಃ ಮಾನ್ಯ ಮಾಡಿರುವ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ಪೀಠ, 2021ರಲ್ಲಿ ಹಾಜರಾಗಿದ್ದ ಅರ್ಜಿದಾರರನ್ನು ಯಶಸ್ವಿ ಎಂದು ಘೋಷಿಸುವಂತೆ ಮತ್ತು ಅವರಿಗೆ ಎಸ್‌ಇಟಿ ಪ್ರಮಾಣ ಪತ್ರವನ್ನು ನೀಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ಕೆಎಸ್‌ಇಟಿ ಫಲಿತಾಂಶಗಳ ಘೋಷಣೆಗೆ ಕಾರ್ಯವಿಧಾನ ಮತ್ತು ಮಾನದಂಡಗಳಲ್ಲಿ ಸೂಚಿಸಲಾದ ಮೊದಲ ಎರಡು ಹಂತಗಳು ಸ್ಲಾಟ್‌ಗಳ ಗುರುತಿಸುವಿಕೆ ಮತ್ತು ಮೀಸಲಾತಿಯನ್ನು ಒದಗಿಸುವ ಅಗತ್ಯವನ್ನು ಅನುಸರಿಸುತ್ತವೆ ಎಂಬ ಅಂಶವನ್ನು ಪರಿಗಣಿಸಿರುವ ನ್ಯಾಯಪೀಠ, ಮೂರನೇ ಹಂತದಲ್ಲಿ 1990ರ ಮೀಸಲು ಕಾಯ್ದೆಯಲ್ಲಿ ಸೂಚಿಸಿದಂತೆ ಮೀಸಲಾತಿ ವಿಷಯದಲ್ಲಿ ಕಾನೂನಿನ ಅವಶ್ಯಕತೆಗಳಿಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು ಎಂದು ತಿಳಿಸಿದೆ.

ರೋಸ್ಟರ್ ಅನುಕರಣೆ ಸರಳ ಪರಿಹಾರ

ಮೂರನೇ ಹಂತದಲ್ಲಿ ರಾಜ್ಯ ಸರಕಾರವು ನಿಗದಿಪಡಿಸಿದ ರೋಸ್ಟರ್ ಅಂಶ ಅನುಸರಿಸುವ ಮೂಲಕ ಬದಲಾಯಿಸಬೇಕು. ಅಭ್ಯರ್ಥಿಗಳನ್ನು ಪ್ರಮಾಣೀಕರಿಸುವ ವಿಷಯದಲ್ಲಿ, ವಿಷಯವಾರು ಮೀಸಲಾತಿಯನ್ನು ಒದಗಿಸಲು ರೋಸ್ಟರ್‌ಅನ್ನು ಅನುಸರಿಸುವುದು ಸರಳ ಪರಿಹಾರವಾಗಿದೆ. ಯುಜಿಸಿ ನೀತಿಯಲ್ಲಿ ಎಸ್‌ಟಿ ವರ್ಗದ ಅಭ್ಯರ್ಥಿಗಳು ವಿಷ್ಯುಯಲ್ ಆರ್ಟ್ಸ್, ಸಂಗೀತ, ಪ್ರದರ್ಶನ ಕಲೆಗಳು, ಭಾಷಾಶಾಸ್ತ್ರ, ತತ್ವಶಾಸ್ತ್ರ, ಗೃಹ ವಿಜ್ಞಾನ, ಪರಿಸರ ವಿಜ್ಞಾನ, ಸಾರ್ವಜನಿಕ ಆಡಳಿತ, ಉರ್ದು, ಜಾನಪದ ಸಾಹಿತ್ಯ, ಸಂಸ್ಕೃತ, ಕಾನೂನು, ಅಪರಾಧಶಾಸ್ತ್ರ ಸೇರಿದಂತೆ ಹಲವು ವಿಷಯಗಳಲ್ಲಿ ಯಾವುದೇ ಪ್ರಾತಿನಿಧ್ಯ ನೀಡಲಾಗಿಲ್ಲ ಎಂದು ಹೇಳಿರುವ ನ್ಯಾಯಪೀಠ, ಮೀಸಲು ಅಗತ್ಯತೆಯಲ್ಲಿ ಒಟ್ಟಾರೆ ಫಲಿತಾಂಶ ಪರಿಗಣಿಸಲಾಗಿದೆ ಎಂಬ ಯುಜಿಸಿ ಮತ್ತು ಕೆಎಸ್‌ಇಟಿ ವಾದವನ್ನು ತಳ್ಳಿಹಾಕಿದೆ.

ಮೇಕೆದಾಟು: ಕೇಂದ್ರಕ್ಕೆ ಹೊಸ ಡಿಪಿಆರ್ ಸಲ್ಲಿಕೆ

ಸುಪ್ರೀಂ ಕೋರ್ಟ್ ಆದೇಶದ ಬೆನ್ನಲ್ಲೇ ಚಟುವಟಿಕೆ ಚುರುಕು

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಮೇಕೆದಾಟು ಯೋಜನೆಗೆ ಹೊಸದಾಗಿ ಡಿಪಿಆರ್‌ಅನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಮೇಕೆದಾಟು ಯೋಜನೆ ಅನುಷ್ಠಾನ ಕುರಿತು ಅಧಿಕಾರಿಗಳ ಸಭೆ ಹಾಗೂ ಕಾವೇರಿ ನೀರಾವರಿ ನಿಗಮ ನಿರ್ದೇಶಕರ ಮಂಡಳಿ ಸಭೆ ಬಳಿಕ ಮಾತನಾಡಿದ ಅವರು,

ಕಾವೇರಿ ನೀರಾವರಿ ನಿಗಮ ಮಂಡಳಿ ಸಭೆ ಮಾಡಲಾಗಿದೆ. ಇದಕ್ಕೆ ಮೊದಲು, ಮೇಕೆದಾಟು ಯೋಜನೆ ಕುರಿತ ಸುಪ್ರೀಂ ಕೋರ್ಟ್ ತೀರ್ಪು ನಂತರ ಈ ಯೋಜನೆಯನ್ನು ಹೇಗೆ ಮುಂದಕ್ಕೆ ತೆಗೆದುಕೊಂಡು ಹೋಗಬೇಕು ಎಂದು ಚರ್ಚೆ ಮಾಡಿದ್ದೇವೆ. ಡಿಪಿಆರ್ ಮರುಸಲ್ಲಿಕೆ ಮಾಡಬೇಕಿದೆ.

ಇದರಲ್ಲಿ ಯೋಜನೆ ಸಂಪೂರ್ಣ ವಿವರ, ಎಷ್ಟು ಅರಣ್ಯ ಪ್ರದೇಶ ಮುಳುಗಡೆಯಾಗಲಿದೆ ಎಂದು ಮಾಹಿತಿ ನೀಡಬೇಕು.

ಮೇಕೆದಾಟು ಯೋಜನೆ ಕಚೇರಿಯನ್ನು ಹಾರೋಬೆಲೆಯಲ್ಲಿ ಆರಂಭಿಸಿದ್ದೇವೆ. ಮಂಡ್ಯಕ್ಕೆ ಹತ್ತಿರವಾಗುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರದಲ್ಲಿ ಸಿಇ, ಸಿಸಿಎಫ್ ಅವರನ್ನೊಳಗೊಂಡ ಪ್ರತ್ಯೇಕ ಕಚೇರಿ ಆರಂಭಿಸಲು ತೀರ್ಮಾನಿಸಿದ್ದೇವೆ. ಇದಕ್ಕೆ ಅಗತ್ಯ ಸಿಬ್ಬಂದಿ ಒದಗಿಸಲು ತಯಾರು ಮಾಡಲಾಗುವುದು ಎಂದು ತಿಳಿಸಿದರು.

ಮತ್ತೆ ಹೊಸದಾಗಿ ಡಿಪಿಆರ್ ಮಾಡಬೇಕೇ, ಇದನ್ನು ಜಲ ಆಯೋಗದ ಮುಂದೆ ಮಂಡಿಸುವಿರಾ ಅಥವಾ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಮಂಡಿಸುತ್ತೀರಾ ಎಂದು ಕೇಳಿದಾಗ, ಈ ಹಿಂದೆ ಸಲ್ಲಿಸಿದ್ದ ಡಿಪಿಆರ್ ತಿರಸ್ಕರಿಸಿದ್ದರು. ಹೀಗಾಗಿ ಅದರಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಿ ಹೊಸದಾಗಿ ಡಿಪಿಆರ್ ಸಲ್ಲಿಸುತ್ತೇವೆ. ಕಾನೂನು ಪ್ರಕಾರ ಯಾರ ಮುಂದೆ ಮಂಡಿಸಬೇಕೋ ಅವರ ಮುಂದೆ ಮಂಡಿಸುತ್ತೇವೆ ಎಂದರು.

ತುಮಕೂರಿಗೆ ಮೆಟ್ರೋ ಸಾಧ್ಯತೆ ಬಗ್ಗೆ ಅಧ್ಯಯನ

ತುಮಕೂರು ಮೆಟ್ರೋ ಮಾರ್ಗಕ್ಕೆ ವಿರೋಧ ವ್ಯಕ್ತವಾಗುತ್ತಿದೆ ಎಂದು ಕೇಳಿದಾಗ, ಅಲ್ಲಿನ ಜನಪ್ರತಿನಿಧಿಗಳು ನನ್ನ ಬಳಿ ಬಂದು ಮನವಿ ಮಾಡಿದಾಗ ನಾನು ಅದರ ಸಾಧ್ಯತೆಗಳ ಬಗ್ಗೆ ತಿಳಿಯಲು ಮುಂದಾಗಿದ್ದೇವೆ. ಇದರಲ್ಲಿ ಟೀಕೆ ಮಾಡುವಂತಹದ್ದು ಏನಿದೆ? ನಮ್ಮ ಗೃಹ ಸಚಿವರು ಸೇರಿದಂತೆ ಕೆಲವರು ಖಾಸಗಿ ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಮಾಡಬೇಕು ಎಂದು ಹೇಳುತ್ತಿದ್ದಾರೆ. ಇದಕ್ಕೆ ಯಾರಾದರೂ ಬಂಡವಾಳ ಹಾಕಲು ಮುಂದೆ ಬರುತ್ತಾರಾ? ಬಂದರೆ ಯಾವೆಲ್ಲಾ ಮಾರ್ಗ ಇವೆ ಎಂದು ಅಧ್ಯಯನ ಮಾಡಬೇಕಿದೆ. ಯಾರಾದರೂ ಚಂದ್ರಲೋಕಕ್ಕೆ ಹೋಗಬೇಕು ಎಂದರೆ ಅದು ಸಾಧ್ಯವೇ, ಇಲ್ಲವೇ ಎಂದು ಪರಿಶೀಲಿಸಬೇಕಲ್ಲವೇ ಎಂದು ತಿಳಿಸಿದರು.

ಪಿಎಸ್‌ಯುಗೆ ರಾಜಕಾರಣಿ ಅಧ್ಯಕ್ಷ ಸಲ್ಲ: ಹೈ

ಬೆಂಗಳೂರು: ಸರಕಾರದ ಕಂಪನಿ ಅಥವಾ ಸಾರ್ವಜನಿಕ ವಲಯದ ಉದ್ಯಮಕ್ಕೆ ರಾಜಕಾರಣ ಹಿನ್ನೆಲೆಯುಳ್ಳವರನ್ನು ಅಧ್ಯಕ್ಷರನ್ನಾಗಿ ನೇಮಿಸುವ ನಿರ್ಧಾರವು ಸದಾ ಕಂಪನಿಯ ಕಾರ್ಮಿಕರ ದುಃಖವನ್ನು ಹೆಚ್ಚಿಸುವುದಲ್ಲದೇ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗಲಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಅಲ್ಲದೇ, 2008 ರಿಂದ 2012ರವರೆಗೆ ಮೈಶುಗರ್ ಕಂಪನಿಯ ಅಧ್ಯಕ್ಷರಾಗಿದ್ದ ನಾಗರಾಜಪ್ಪ ಅವಧಿಯಲ್ಲಿ 127 ಕೋಟಿ ನಷ್ಟದ ಬಗ್ಗೆ ಉಪ ಲೋಕಾಯುಕ್ತ ತನಿಖೆಗೆ ವಹಿಸಿದ್ದ ಆದೇಶ ರದ್ದುಗೊಳಿಸುವುದಕ್ಕೆ ನಿರಾಕರಿಸಿದೆ. ಮೈಸೂರು ಸಕ್ಕರೆ ಕಾರ್ಖಾನೆ ಲಿಮಿಟೆಡ್ (ಮೈಶುಗರ್ ಕಂಪನಿ) ಅಧ್ಯಕ್ಷರಾಗಿದ್ದಾಗ ನಡೆದ ಆರ್ಥಿಕ ಅಕ್ರಮಗಳನ್ನು ಪರಿಶೀಲಿಸಲು ರಾಜ್ಯ ಸರಕಾರವು ತನ್ನ ವಿರುದ್ಧದ ತನಿಖೆಯನ್ನು ಉಪ ಲೋಕಾಯುಕ್ತಕ್ಕೆ ವಹಿಸಿದ್ದನ್ನು ಪ್ರಶ್ನಿಸಿ 80 ವರ್ಷದ ಮಂಡ್ಯದ ನಾಗರಾಜಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಮತ್ತು ನ್ಯಾಯಮೂರ್ತಿ ಟಿ. ವೆಂಕಟೇಶ್ ನಾಯಕ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದ್ದು, ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದೆ. ಅಲ್ಲದೇ, ಸರಕಾರಿ ಕಂಪನಿ ಅಥವಾ ಸಾರ್ವಜನಿಕ ವಲಯದ ಉದ್ಯಮದ ಅಧ್ಯಕ್ಷ ಹುದ್ದೆಗೆ ಉತ್ತಮ ಜ್ಞಾನವುಳ್ಳ ಮತ್ತು ವೃತ್ತಿಪರ ಶ್ರೇಷ್ಠತೆಯನ್ನು ಹೊಂದಿರುವ ಅರ್ಹ ವ್ಯಕ್ತಿಗಳನ್ನು ಮಾತ್ರ ನೇಮಕ ಮಾಡಬೇಕು. ಯಾವುದೇ ವೃತ್ತಿಪರ ಅರ್ಹತೆ ಮತ್ತು ವಿಷಯ ಜ್ಞಾನವಿಲ್ಲದ ಅರ್ಜಿದಾರರನ್ನು ರಾಜಕೀಯ ಕಾರಣಗಳಿಗಾಗಿ ಏಷ್ಯಾದ ಅತಿದೊಡ್ಡ ಸಕ್ಕರೆ ಕಾರ್ಖಾನೆಗಳಲ್ಲಿ ಒಂದಾದ ಮೈಶುಗರ್‌ಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇದೊಂದು ಕೆಟ್ಟ ನಿರ್ಧಾರವಾಗಿದೆ. ಇವರ ಅಧಿಕಾರಾವಧಿಯಲ್ಲಿ ಕಾರ್ಖಾನೆ ಸುಮಾರು 127 ಕೋಟಿ ರು.ಗಳ ನಷ್ಟಕ್ಕೆ ಕಾರಣವಾಗಿದೆ ಎಂದು ಪೀಠ ತಿಳಿಸಿದೆ.ಪ್ರಕರಣದ ಹಿನ್ನೆಲೆ: ನಾಗರಾಜಪ್ಪ ಅವರು ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಧರ ಮತ್ತು ಕೃಷಿಕರಾಗಿ ಕೆಲಸ ಮಾಡುತ್ತಿದ್ದೇನೆಂದು ಹೇಳಿಕೊಂಡಿದ್ದಾರೆ. ಅವರು ಎಲ್ಲಿಯೂ ಅಂತಹ ದೊಡ್ಡ ಸಕ್ಕರೆ ಕಂಪನಿ ನಡೆಸಲು ಯಾವುದೇ ಅಗತ್ಯ ಅನುಭವ ಅಥವಾ ಅರ್ಹತೆ ಅಥವಾ ಯಾವುದೇ ಕಂಪನಿ ನಡೆಸಿದ ನಿರ್ವಹಣಾ ಅನುಭವ ಹೊಂದಿಲ್ಲ. ಆದರೂ ರಾಜ್ಯ ಸರಕಾರ ಅವರನ್ನು 2008ರ ಅ.1 ರಂದು ರಾಜ್ಯ ಸಚಿವರ ಸ್ಥಾನಮಾನದೊಂದಿಗೆ ಮೈಶುಗರ್ ಅಧ್ಯಕ್ಷರನ್ನಾಗಿ ನೇಮಕ ಮಾಡಿತ್ತು. ಆನಂತರ ಅವರನ್ನು 2012ರ ಡಿಸೆಂಬರ್‌ನಲ್ಲಿ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿತ್ತು.

ಉದ್ಯೋಗದತ್ತ ಇಂದಿನಿಂದಲೇ ಯೋಚಿಸಿ

ಬೆಂಗಳೂರು: ಇಂದಿನ ಯುವಪೀಳಿಗೆ ಉದ್ಯೋಗ ಅರಸುವ ಮನಸ್ಥಿತಿಯಿಂದ ಹೊರಬಂದು ಸ್ವಂತ ಉದ್ಯಮ ಸ್ಥಾಪಿಸಿ ಉದ್ಯೋಗದಾತರಾಗುವತ್ತ ಹೆಚ್ಚು ಗಮನ ಹರಿಸಬೇಕಾದ ಅವಶ್ಯಕತೆಯಿದೆ ಎಂದು ಮೀಡಿಯಾ ಕನೆಕ್ಟ್ ಸಂಸ್ಥೆಯ ಸಂಸ್ಥಾಪಕಿ ಹಾಗೂ ಸಿಇಒ ದಿವ್ಯಾ ರಂಗೇನಹಳ್ಳಿ ಅಭಿಪ್ರಾಯಪಟ್ಟರು. ನಗರದ ರಾಜಾಜಿನಗರದಲ್ಲಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಕೆಎಲ್‌ಇ ಸೊಸೈಟಿಯ ಎಸ್.ನಿಜಲಿಂಗಪ್ಪ ಕಾಲೇಜ್ ಆಯೋಜಿಸಿದ್ದ ಅಂತರ್ ಕಾಲೇಜ್ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಮನರಂಜನಾ ಸ್ಪರ್ಧಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಸಾಧನೆಯ ಹಿಂದೆ ಒಂದು ದೊಡ್ಡ ಹೋರಾಟವಿರುತ್ತದೆ. ಶಿಸ್ತು, ಬದ್ಧತೆ ಮತ್ತು ಛಲವಿದ್ದರೆ ಜೀವನದಲ್ಲಿ ಅಂದುಕೊಂಡಿದ್ದನ್ನ ಸಾಧಿಸಬಹುದು. ಅದಕ್ಕಾಗಿ ಹೇರಳ ಅವಕಾಶಗಳು ಇಂದು ನಿಮ್ಮ ಮುಂದಿವೆ. ತಂತ್ರಜ್ಞಾನ ಮತ್ತು ವಿನೂತನ ಆವಿಷ್ಕಾರಗಳನ್ನ ಅರ್ಥ ಮಾಡಿಕೊಂಡರೆ ಉದ್ಯಮ ರಂಗದಲ್ಲಿ ಅನೇಕ ಅವಕಾಶಗಳು ತೆರೆದುಕೊಳ್ಳಲಿವೆ. ಆ ನಿಟ್ಟಿನಲ್ಲಿ ಇಂದಿನ ಯುವ ಪೀಳಿಗೆ ಯೋಚಿಸಬೇಕು. ಮಹಿಳೆಗೂ ಕೂಡಾ ಇಂದು ಸಮಾನ ಅವಕಾಶಗಳು ಸಿಗುತ್ತಿವೆ. ಅಸಾಧ್ಯವಾದುದೆಲ್ಲವನ್ನು ಸಾಧಿಸುವತ್ತ ಮುನ್ನಡೆಯುತ್ತಿದ್ದಾರೆ. ಸವಾಲುಗಳನ್ನ ಎದುರಿಸಿ ಮುನ್ನುಗ್ಗಿ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣಾ ಕಾಮಗಾರಿ ಹಿನ್ನೆಲೆ ಸಾರಕ್ಕಿ ಉಪಕೇಂದ್ರದ ವಿವಿಧ ಪ್ರದೇಶಗಳಲ್ಲಿ ಬುಧವಾರ ಬೆಳಗ್ಗೆ 10.00 ರಿಂದ ಸಂಜೆ 5.00 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ನಗರದ ಶಾಕಂಬರಿ ನಗರ, ಫೈವ್ ಲೈನ್ ರೋಡ್, ರಾಘವೇಂದ್ರ ಸ್ವಾಮಿ ಮಠ, ಜೆ.ಪಿ ನಗರ ಮೊದಲನೇ ಹಂತ, ಸರ್ಲಾಪುರಿಯಾ ಅಪಾರ್ಟ್ ಮೆಂಟ್, ನಾಗಾರ್ಜುನ ಅಪಾರ್ಟ್ ಮೆಂಟ್ ಪುಟ್ಟೇನಹಳ್ಳಿ, ಜಯನಗರ 8, 5, 7 ನೇ ಬ್ಲಾಕ್, ಐಟಿಐ ಲೇಔಟ್, ಎಸ್. ಬಿ.ಐ ಕಾಲೋನಿ, ಆರ್.ವಿ.ಡೆಂಟಲ್ ಕಾಲೇಜ್ ಸುತ್ತಮುತ್ತಲ ಪ್ರದೇಶಗಳು, ವೆಂಕಟಾದ್ರಿ, ಲೇಔಟ್, ಜೆ.ಪಿ.ನಗರ 5ನೇ ಹಂತ, ಸಾಯಿ ನರ್ಸರಿ ರಸ್ತೆ, ಆದರ್ಶ ರೆಸಿಡೆನ್ಸಿ ಅಪಾರ್ಟ್‌ಮೆಂಟ್,ಬನ್ನೇರಘಟ್ಟ ರೋಡ್, ಡಾಲರ್ಸ್ ಲೇಔಟ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಇರುವುದಿಲ್ಲ. 66/11ಕೆ.ವಿ ಟೆಲಿಕಾಂ ಸ್ಟೇಷನ್‌ನ ಹೊಸಹಳ್ಳಿ ಮುಖ್ಯರಸ್ತೆ, ಫರ್ಸ್ ನಗರ ಪಾದರಾಯನಪುರ ಪವರ್ ಮತ್ತು ಪಶ್ಚಿಮ, ದೇವರಾಜ್ ಸರ್ ನಗರ, ಸುಜಾತಾ ಟೆಂಟ್, ಜೆಜೆಆರ್ ನಗರ, ಹರ್ಗೆ ಆಸ್ಪತ್ರೆ, ಓಬಳೇಶ್ ಕಾಲೋನಿ, ರಾಯಾಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಣ್ಣು ಹಂಪಲು ಉಚಿತ ವಿತರಣೆ

ಬೆಂಗಳೂರು: ಹಂಸ ಜ್ಯೋತಿ ಟ್ರಸ್ಟ್ ವತಿಯಿಂದ ನ.20 ರಂದು ಬೆ.9 ಗಂಟೆಗೆ ಹಂಸ ಸಾಂಸ್ಕೃತಿಕ ಸಾಮಾಜಿಕ ಸಿಂಚನ ಕಾರ್ಯಕ್ರಮದ ಅಂಗವಾಗಿ ನಗರದ ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆಯ ರೋಗಿಗಳಿಗೆ ಉಚಿತವಾಗಿ ಹಣ್ಣು ಹಂಪಲು ವಿತರಣೆ ಕಾರ್ಯಕ್ರಮ ಹಾಗೂ ಸಂಸ್ಕೃತಿಕ ಕಾರ್ಯಕ್ರಮ ವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆ ನಿರ್ದೇಶಕ ಡಾ.ಟಿ.ನವೀನ್, ಹಿರಿಯರಂಗ ಸಂಘಟಕ ಶ್ರೀನಿವಾಸ.ಜಿ. ಕಪ್ಪಣ್ಣ , ನಟ ಡಾ. ಶ್ರೀಧರ್, ನಟ ಪ್ರೇಮ್, ಮಾಜಿ ಶಾಸಕ ಎಸ್.ಬಾಲರಾಜ್, ಸಮಾಜ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ಎಲ್. ನರಸಿಂಹಮೂರ್ತಿ ಹಾಗೂ ಇನ್ನಿತತರು ಉಪಸ್ಥಿತರಿರಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9448093409 ಸಂಪರ್ಕಿಸಿ ಎಂದು ಹಂಸ ಜ್ಯೋತಿ ಟ್ರಸ್ಟ್ ಸಂಸ್ಥಾಪಕ ಎಂ ಮುರುಳೀಧರ ಪ್ರಕಟಣೆಗೆ ತಿಳಿಸಿದ್ದಾರೆ.

ಆರೋಗ್ಯ ರಕ್ಷಣೆಯಲ್ಲಿ ಭಾರೀ ಹೂಡಿಕೆ

ಬೆಂಗಳೂರು: ಏರುತ್ತಿರುವ ವೈದ್ಯಕೀಯ ಹಣ ದುಬ್ಬರವನ್ನು ನಿಭಾಯಿಸಲು ಮೂರನೇ ಎರಡ ರಷ್ಟು (ಶೇ.67 ರಷ್ಟು) ಉದ್ಯಮಗಳು ತಡೆಗಟ್ಟುವಿಕೆ ಆರೋಗ್ಯ ರಕ್ಷಣೆಯಲ್ಲಿ ಹೂಡಿಕೆ ಮಾಡುತ್ತಿವೆ ಎಂದು ಚೇಂಜಿಂಗ್ ಫೇಸ್ ಆಫ್ ಎಂಪ್ಲಾಯಿ ಹೆಲ್ತ್ ಜಾಗತಿಕ ವರದಿ ತಿಳಿಸಿದೆ.ದೇಶಾದ್ಯಂತದ ಪ್ರಮುಖ ಪ್ರದೇಶಗಳ ವಿಮಾದಾತರು, ಉದ್ಯೋಗದಾತರು ಮತ್ತು ಉದ್ಯೋಗಿಗಳಿಂದ ಪಡೆಯಲಾದ ಡೇಟಾ ವನ್ನು ವಿಶ್ಲೇಷಿಸುವ ಮೂಲಕ, ವೈದ್ಯಕೀಯ ಪ್ರವೃತ್ತಿಗಳದೃಷ್ಟಿಕೋನವನ್ನು ಪರಿಗಣಿಸಲಾಗಿದೆ. ಈ ವರದಿಯು ಆರೋಗ್ಯ ರಕ್ಷಣೆಯ ಮಾನವೀಯ ಅಂಶ ಒಳಗೊಂಡಿದೆ. ಇದಕ್ಕೆ ಕಾರಣಉದ್ಯೋಗ ದಾತರಿಗೆ ಪ್ರಮುಖ ಆದ್ಯತೆಯಾಗಿದೆ. ಇದು ಉದ್ಯ ಮಗಳು ಆರೋಗ್ಯ ಸೇವೆಯನ್ನು ಒದಗಿಸುವ ಅವಶ್ಯಕತೆ ಹೊಂದಿದೆ. ಹಣದುಬ್ಬರದ ಸಂದರ್ಭ ದಲ್ಲಿ ಇದರ ನಿರ್ವಹಣೆ ಸವಾಲಿನ ಕೆಲಸವಾಗಿದೆ. ಅದರ ಪರಿಣಾಮವಾಗಿ, ಉದ್ಯೋಗದಾತರು ಹೆಚ್ಚುತ್ತಿರುವ ವೆಚ್ಚಗಳನ್ನು ತಗ್ಗಿಸಲು ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಹೆಚ್ಚಿನವರು ತಡೆಗಟ್ಟುವಿಕೆ ಮತ್ತು ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಹೂಡಿಕೆ ಮಾಡುತ್ತಾರೆ. ಜಾಗತಿಕವಾಗಿ ಶೇ.67ರಷ್ಟು ಉದ್ಯೋಗದಾತರು ಈ ತಂತ್ರವನ್ನು ಬಳಸಿಕೊಂಡಿದ್ದಾರೆ ಮತ್ತು ಶೇ.55ರಷ್ಟು ಜನರು ಇದು ತಮಗೆ ಉಪಯುಕ್ತವಾದ ತಂತ್ರವೆಂದು ಶಿಫಾರಸು ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

ಜಲಮಂಡಳಿ ವಿವಿಧ ಹುದ್ದೆ ಭರ್ತಿಗೆ ಅರ್ಜಿ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ ಮಿಕ್ಕುಳಿದ ವೃಂದ ಮತ್ತು ಸ್ಥಳೀಯ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿ ಆಹ್ವಾನಿಸಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಜಲಮಂಡಳಿಯಲ್ಲಿ ಖಾಲಿ ಇರುವ ಮಿಕ್ಕುಳಿದ ವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸುವಿಕೆಯು ನ.17ರಿಂದ ಪ್ರಾರಂಭವಾಗಿದ್ದು, ನ.25ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಶುಲ್ಕ ಪಾವತಿಸಲು ನ.26ಕೊನೆಯ ದಿನಾಂಕವಾಗಿರುತ್ತದೆ.

{ ಸಿ.ಟಿ ರವಿ } ಪರಿಷತ್ ಸದಸ್ಯ

ಸಂಪುಟ ಪುನಾರಚನೆ ಮಾಡಲು ಸಿದ್ದರಾಮಯ್ಯ ಬಳಿ ಸ್ವಂತ ಅಧಿಕಾರ ಇದೆ. 4 ತಿಂಗಳ ಹಿಂದೆ ಹೈಕಮಾಂಡ್ ನವ್ರೇ ಪುನಾರಚನೆ ಮಾಡಿ ಅಂದಿದ್ರಲ್ಲ, ಯಾಕಿನ್ನು ಮಾಡ್ತಿಲ್ಲ ಸಿಎಂ? ಅದರರ್ಥ ಏನು, ಇನ್ನೂ ಏನೂ ಸೆಟಲ್ ಆಗಿಲ್ವಾ? ಪೇಮೆಂಟ್ ಸೀಟ್ ಯಾವುದು, ಮೆರಿಟ್ ಸೀಟ್ ಯಾವುದು ಅಂತ ಇನ್ನೂ ತೀರ್ಮಾನ ಆಗಿಲ್ಲ ಅಂತ ಕಾಣುತ್ತೆ.

ರಾಜ್ಯದ ಸುಸ್ಥಿರ ಅಭಿವೃದ್ಧಿಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪಾತ್ರ ಅತ್ಯಂತ ಮಹತ್ವದ್ದು: ನರೇಂದ್ರಸ್ವಾಮಿ

ಉತ್ತಮ ತ್ಯಾಜ್ಯ ನಿರ್ವಹಣೆ ಪರಿಸರ ಸಂರಕ್ಷಣೆಗೆ ದಾರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪರಿಸರ ಸಂರಕ್ಷಣೆ ಮತ್ತು ಕರ್ನಾಟಕದ ಸುಸ್ಥಿರ ಅಭಿವೃದ್ಧಿಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸುಸ್ಥಿರ ಪ್ರಗತಿಗೆ ಪಾಲುದಾರವಾಗಿರುವತ್ತ ಹೆಜ್ಜೆ ಇಟ್ಟಿದ್ದು, ಕೈಗಾರಿಕೆಗಳು, ನಗರ ಸಂಸ್ಥೆಗಳು ಮತ್ತು ನಾಗರಿಕರನ್ನು ಶುದ್ಧ ತಂತ್ರಜ್ಞಾನ, ಉತ್ತಮ ತ್ಯಾಜ್ಯ ನಿರ್ವಹಣೆ ಮತ್ತು ಜವಾಬ್ದಾರಿಯುತ ಪರಿಸರ ಸಂರಕ್ಷಣೆಯತ್ತ ಕೊಂಡೊಯ್ದಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅವರು ಹೇಳಿದರು.

ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನವೀನ ತಂತ್ರಜ್ಞಾನ, ಉತ್ತಮ ತ್ಯಾಜ್ಯ ನಿರ್ವಹಣೆ ಮತ್ತು ಜವಾಬ್ದಾರಿ ಇರುವ ಪರಿಸರ ಸಂರಕ್ಷಣೆಯ ಕಡೆಗೆ ಮುನ್ನಡೆಸಲು ಈ ಸಮ್ಮೇಳನ ನೆರವಾಗಲಿದೆ. ಆರಂಭದ ಸಂದರ್ಭದಲ್ಲಿ ಕೈಗಾರಿಕಾ ಮಾಲಿನ್ಯ ನಿಯಂತ್ರಣ ಸಮಸ್ಯೆಗಳನ್ನು ಎದುರಿಸಿದ ಮಂಡಳಿ ಇಂದು ಹವಾಮಾನ ಸ್ಥಿರತೆ ಮತ್ತು ಸಂಪನ್ಮೂಲ ಕಾರ್ಯಕ್ಷಮತೆ ಎಂಬ ಸವಾಲುಗಳನ್ನು ಎದುರಿಸುತ್ತಿದೆ ಎಂದರು.

ಹವಾಮಾನ ಪರಿವರ್ತನೆ, ಜೀವವೈವಿಧ್ಯ ಹಾನಿ, ಮತ್ತು ತ್ಯಾಜ್ಯ ನಿರ್ವಹಣೆಗೆ ಸಮರ್ಪಕವಾದ, ಕ್ರಾಂತಿಕಾರಿ ಪರಿಹಾರ ಮಾರ್ಗ ಕಂಡುಕೊಳ್ಳಬೇಕಿದೆ. ತ್ಯಾಜ್ಯವನ್ನು ಕಡಿಮೆ ಮಾಡಿ, ವಸ್ತುಗಳ ಮರುಬಳಕೆಯನ್ನು ಗರಿಷ್ಠಗೊಳಿಸಿ, ಸಂಪನ್ಮೂಲಗಳನ್ನು ದೀರ್ಘಾವಧಿ ಚಲಾವಣೆಯಲ್ಲಿ ಇರಿಸುವುದರಿಂದ ಸಂಪನ್ಮೂಲ ಸಂರಕ್ಷಣೆ ಮತ್ತು ಪರಿಸರ ಸುಧಾರಣೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಮಾಜಿ ಉಪ ಲೋಕಾಯುಕ್ತ ಸುಭಾಷ್ ಆಡಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ, ಮಂಡಳಿ ಸದಸ್ಯ ಶರಣಕುಮಾರ ಮೋದಿ, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಮತ್ತಿತರರು ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಹಿನ್ನಲೆಯಲ್ಲಿ ಆಯೋಜಿಸಿದ ಸಮ್ಮೇಳನವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ,ಅರಣ್ಯ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಿದರು. ಈ ವೇಳೆ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ, ಮಂಡಳಿ ಸದಸ್ಯ ಶರಣಕುಮಾರ ಮೋದಿ, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಮತ್ತಿತರರು ಪಾಲ್ಗೊಂಡಿದ್ದರು.

ಸಂಪನ್ಮೂಲ ಸಂರಕ್ಷಣೆಗೆ ಪುನರ್ ಬಳಕೆ, ಮರು ಬಳಕೆಗೆ ಒತ್ತು: ಈಶ್ವರ ಖಂಡ್ರೆ

ಕಾರ್ಯಕ್ರಮದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, ನೈಸರ್ಗಿಕ ಸಂಪನ್ಮೂಲಗಳ ಸುದೀರ್ಘ ಬಳಕೆ ಮತ್ತು ಸಂರಕ್ಷಣೆಗಾಗಿ ಮರು ಬಳಕೆ ಮತ್ತು ಪುನರ್ ಬಳಕೆಗೆ ಒತ್ತು ನೀಡಬೇಕಿದೆ . ಜೀವನವೂ ಇರಬೇಕು, ಜೀವನೋಪಾಯವೂ ಇರಬೇಕು, ಪ್ರಕೃತಿಯೂ ಉಳಿಯಬೇಕು, ಪ್ರಗತಿಯೂ ಆಗಬೇಕು ಎಂಬುದು ನಮ್ಮ ಸರ್ಕಾರದ ನಿಲುವಾಗಿದ್ದು, ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದರು. 1987 ರಲ್ಲಿ, ವಿಶ್ವಸಂಸ್ಥೆಯ ದಿ ಬ್ರಂಡ್ಟ್‌ಲ್ಯಾಂಡ್ ಆಯೋಗ ಭವಿಷ್ಯದ ಪೀಳಿಗೆಯ ಸ್ವಂತ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯದೊಂದಿಗೆ ರಾಜಿ ಮಾಡಿಕೊಳ್ಳದೆ ಇಂದಿನ ಪೀಳಿಗೆಯ ಅಗತ್ಯಗಳನ್ನು ಪೂರೈಸುವುದು. 'ಸುಸ್ಥಿರತೆ' ಎಂದು ವ್ಯಾಖ್ಯಾನಿಸಿದೆ. ನಾವು ಉತ್ತಮ ರೂಢಿಗಳನ್ನು ಅಳವಡಿಸಿಕೊಂಡು ಪ್ರಗತಿಯ ಪಥದಲ್ಲಿ ಸಾಗುವುದರ ಜತೆಗೆ ಪ್ರಕೃತಿ ಪರಿಸರ ಉಳಿಸಬೇಕಿದೆ ಎಂದರು.

ನವೀನ ತಂತ್ರಜ್ಞಾನ, ಉತ್ತಮ ತ್ಯಾಜ್ಯ ನಿರ್ವಹಣೆ ಮತ್ತು ಜವಾಬ್ದಾರಿ ಇರುವ ಪರಿಸರ ಸಂರಕ್ಷಣೆಯ ಕಡೆಗೆ ಮುನ್ನಡೆಸಲು ಸಮ್ಮೇಳನ ನೆರವು

ಇ ತ್ಯಾಜ್ಯ ಘಟಕಗಳಿಗೆ ಉತ್ತೇಜನ

ರಾಜ್ಯದಲ್ಲಿ 1,407 ಪ್ಲಾಸ್ಟಿಕ್ ತ್ಯಾಜ್ಯ ಘಟಕಗಳು ಮತ್ತು 1,063 ಇ-ತ್ಯಾಜ್ಯ ಘಟಕಗಳು, 11 ಬ್ಯಾಟರಿ ತ್ಯಾಜ್ಯ ಘಟಕಗಳು ನೋಂದಣಿಯಾಗಿದ್ದು, ಲಿಥಿಯಂ, ಕೋಬಾಲ್ಟ್, ನಿಕೆಲ್ ಮುಂತಾದ ಅಪರೂಪದ ಲೋಹಗಳ ಅವಲಂಬನೆಯನ್ನು ಕಡಿಮೆ ಮಾಡುವಲ್ಲಿ ನೆರವಾಗುತ್ತಿದೆ. ಸರ್ಕ್ಯುಲರ್ ಅರ್ಥವ್ಯವಸ್ಥೆ ಜಾರಿಯಾದರೆ ಜಾಗತಿಕವಾಗಿ ವರ್ಷಕ್ಕೆ 1 ಟ್ರಿಲಿಯನ್ ಡಾಲರ್ ಮೌಲ್ಯದ ಸಂಪನ್ಮೂಲ ಉಳಿತಾಯ ಸಾಧ್ಯ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಹೇಳಿದರು.

ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನ ಏರಿಕೆಯ ಪರಿಣಾಮಗಳನ್ನು ಜಗತ್ತು ಎದುರಿಸುತ್ತಿದೆ. ಈ ಕಾಲಘಟ್ಟದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ , ಪರಿಸರ ಸ್ನೇಹಿ ರೂಢಿಗಳ ಉತ್ತೇಜನ, ಆಧುನಿಕ ತಂತ್ರಜ್ಞಾನದ ಬಳಕೆ, ನಾವೀನ್ಯತೆಗೆ ಒತ್ತು ನೀಡಿ ಸುಸ್ಥಿರತೆ ಮಾದರಿಯನ್ನು ಪರಿಣಾಮಕಾರಿ ಅನುಷ್ಠಾನ ಮಾಡುವ ಮೂಲಕ ಸುಸ್ಥಿರ ಅಭಿವೃದ್ಧಿಯತ್ತ ಸಾಗಬೇಕು.

- ಈಶ್ವರ್ ಖಂಡ್ರೆ, ಪರಿಸರ ಸಚಿವ

ಬಿಎಂಎಸ್ ವಿದ್ಯಾರ್ಥಿಗಳಿಂದ ಪರಿಸರ ಕಾಳಜಿ

50 ಸಾವಿರ ಕಾಗದ ಕೈಚೀಲ ವಿತರಣೆ

ಕಡಲೆಕಾಯಿ ಪರಿಷೆಯಲ್ಲಿ ವ್ಯಾಪಾರಸ್ಥರಿಗೆ, ಸಾರ್ವಜನಿಕರಿಗೆ ಮರುಬಳಕೆ ಕೈ ಚೀಲ ವಿತರಿಸಿದ ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು.

ಬೆಂಗಳೂರು: ಬಸವನಗುಡಿಯಲ್ಲಿ ನಡೆಯುತ್ತಿರುವ ಕಡಲೆಕಾಯಿ ಪರಿಷೆ ಆಚರಣೆಗಾಗಿ 50 ಸಾವಿರ ಕಾಗದ ಕೈಚೀಲವನ್ನು ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ವಿತರಿಸಿದೆ.

ಬಸವನಗುಡಿಯಲ್ಲಿ ಪಾರಂಪರಿಕ ಶತಮಾನಗಳ ಇತಿಹಾಸವಿರುವ ಕಡಲೆಕಾಯಿ ಪರಿಷೆಯಲ್ಲಿ ವ್ಯಾಪಾರ ಮಾಡುವವರು ಪ್ಲಾಸ್ಟಿಕ್ ಕೈಚೀಲಗಳನ್ನು ಬಳಸದಂತೆ ಪ್ಲಾಸ್ಟಿಕ್ ಮುಕ್ತ ಕಡಲೆಕಾಯಿ ಪರಿಷೆ ಮಾಡಲು ಬಿ.ಎಂ.ಎಸ್.ಎಂಜನಿಯರಿಂಗ್ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕಾಲೇಜು ಅವರಣದಲ್ಲಿ ಪೇಪರ್‌ಗಳನ್ನು ಸಂಗ್ರಹಿಸಿ 50 ಸಾವಿರ ಕಾಗದದ ಕೈ ಚೀಲಗಳನ್ನು ತಯಾರಿಸಿ ಮಳಿಗೆ ಹಾಕುವ ರೈತರಿಗೆ ನೀಡಿದರು. ಈ ವೇಳೆ ಪ್ರಾಂಶುಪಾಲ ಭೀಮ್ ಶಾ ಆರ್ಯ ಪರಿಸರ ಉಳಿದರೆ ಮಾನವ, ಪ್ರಾಣಿ ಸಂಕುಲನ ಉಳಿಯುತ್ತದೆ ಪರಿಸರ ಹಾಳಾದರೆ ಇಡಿ ಪ್ರಪಂಚವೇ ನಾಶವಾಗುತ್ತದೆ. ಏಕಾಬಳಕೆ ಪ್ಲಾಸ್ಟೀಕ್ ಬಳಕೆಯಿಂದ ಪರಿಸರ ಹಾಳಾಗುತ್ತದೆ ಅದೇ ಬೇಗನೆ ಕರಗುವುದಿಲ್ಲ, ಇದ್ದರಿಂದ ಭೂಮಿ ಫಲವತ್ತತೆ ನಶಿಸಿಹೋಗುತ್ತದೆ. ಪ್ಲಾಸ್ಟಿಕ್ ಬಳಕೆ ನಿಷೇಧ ಮಾಡಬೇಕು ಪರಿಸರ ಉಳಿಸಬೇಕು ಎಂದು ಈ ನಿಟ್ಟಿನಲ್ಲಿ ನಮ್ಮ ಕಾಲೇಜಿನ ನೂರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮರುಬಳಕೆ ಕಾಗದಗಳನ್ನು ಸಂಗ್ರಹ ಮಾಡಿ 50 ಸಾವಿರ ಕಾಗದದ ಕೈ ಚೀಲಗಳನ್ನು ತಯಾರಿಸಿ, ಬಸವನಗುಡಿಯಲ್ಲಿ ಕಡಲೆಕಾಯಿ ಪರಿಷೆಯಲ್ಲಿ ಮಳಿಗೆ ಹಾಕುವವರಿಗೆ ಉಚಿತವಾಗಿ ವಿತರಿಸಿದ್ದಾರೆ ಎಂದರು. ಪರಿಸರ ಸ್ನೇಹಿ ಕಡಲೆಕಾಯಿ ಪರಿಷೆ ಅಚರಣೆ ನಮ್ಮ ಆದ್ಯತೆ. ನಮ್ಮ ಕಾಲೇಜಿನ ಎನ್.ಎಸ್.ಎಸ್. ಮತ್ತು ಬಿ.ಎಂ.ಎಸ್.ಇ.ಸಿ.ಯ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹಳದಿ ಮೆಟ್ರೋ: 6ನೇ ರೈಲು ಬೋಗಿ ಬೆಂಗಳೂರಿನತ್ತ ಪಯಣ

ಬೆಂಗಳೂರು: ನಮ್ಮ ಮೆಟ್ರೋ ಹಳದಿ ಮಾರ್ಗದಲ್ಲಿ ಐದನೇ ಚಾಲಕರಹಿತ ರೈಲು ಕಾರ್ಯಾಚರಣೆ ಆರಂಭಿಸಿದ್ದು, ಆರನೇ ರೈಲಿನ ಎಲ್ಲಾ ಬೋಗಿಗಳು ಟಿಟಾಗರ್ ನಿಂದ ನಗರದತ್ತ ಬರಲಿದೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ.

ಈ ರೈಲು ಬಂದು ಸೇವೆಗೆ ನಿಯೋಜನೆಗೊಂಡರೆ ಪ್ರಯಾಣಿಕರ ಕಾಯುವಿಕೆ ಸಮಯ ಗಣನೀಯವಾಗಿ ಇಳಿಕೆ ಆಗಲಿದ್ದು, ಮೆಟ್ರೋ ಹಳದಿ ಮಾರ್ಗದಲ್ಲಿ ಐದು ರೈಲುಗಳು ಸೇವೆಗೆ ಲಭ್ಯವಿದೆ. ಕೊಂಚ ವಿಳಂಬದ ಹೊರತಾಗಿಯು ಆರನೇ ಮೆಟ್ರೋ ರೈಲಿನ ಮೂರು ಬೋಗಿಗಳನ್ನು ನವೆಂಬರ್ 18ರಂದು ಕೋಲ್ಕತ್ತಾದ ಟಿಟಾಘರ್ ರೈಲ್ ನಿಂದ ಹೊರಡಲಿದೆ. ಆರನೇ ರೈಲಿನ ಕಾರ್ಯಾಚರಣೆಗೂ ಮೊದಲು ವಿವಿಧ ಪರೀಕ್ಷೆಗಳಿಗೆ ಒಳಪಡಿಸಲಾಗುತ್ತದೆ. ಮೊದಲು ಹೊತ್ತು ತಂದ ಲಾರಿಯಿಂದ ಕೆಳಕ್ಕೆ ಇಳಿಸಿದ ಬೋಗಿಗಳನ್ನು ರೈಲಿನ ರೂಪದಲ್ಲಿ ಒಂದರ ಹಿಂದೊಂದರಂತೆ ಜೋಡಿಸಲಾಗುತ್ತದೆ. ಬಳಿಕ ರಾತ್ರಿ ವೇಳೆ ಸಿಗ್ನಲಿಂಗ್, ಸುರಕ್ಷತೆ, ಭಾರ ಇತರ ಪರೀಕ್ಷೆಗಳನ್ನು ಸಿಎಂಆರ್‌ಎಸ್ ಹಾಗೂ ಬಿಎಂಆರ್‌ಸಿಎಲ್ ಅಧಿಕಾರಿಗಳು ನಡೆಸುತ್ತಾರೆ. ಆ ಬಳಿಕ ಸೇವೆಗೆ ನಿಯೋಜಿಸಲಾಗುತ್ತದೆ. ಡಿಸೆಂಬರ್ 2ನೇ ವಾರದ ಇದರ ಸೇವೆ ನಿರೀಕ್ಷಿಸಬಹುದಾಗಿದೆ.

ರೈಲಿನ ಆವರ್ತನ 10 ನಿಮಿಷಕ್ಕೆ ಇಳಿಕೆ

ಹೊಸ ಮೆಟ್ರೋ ಬೋಗಿಗಳು ನವೆಂಬರ್ ತಿಂಗಳಾಂತ್ಯಕ್ಕೆ ಬೆಂಗಳೂರಿನ ಹೆಬ್ಬಗೋಡಿ ಡಿಪೋಗೆ ಬಂದು ಸೇರಲಿದ್ದು, ಈ ರೈಲುಗಳು ಸೇವೆ ಆರಂಭಿಸಿದಲ್ಲಿ ಪ್ರಯಾಣಿಕರಿಗೆ ಹಾಲಿ ಇರುವ 15-17 ನಿಮಿಷಗಳ ಕಾಯುವಿಕೆ ಮತ್ತಷ್ಟು ಇಳಿಕೆಯಾಗುತ್ತದೆ. ಆರನೇ ರೈಲಿನ ಕಾರ್ಯಾಚರಣೆಯಿಂದ ರೈಲು ಆವರ್ತನ ಸಮಯ 12-13ನಿಮಿಷಕ್ಕೆ ಇಳಿಕೆ ಆಗಲಿದ್ದು, ಮುಂದಿನ ದಿನಗಳಲ್ಲಿ ಇನ್ನೆರಡು ರೈಲುಗಳು ಇದೇ ರೀತಿ ಮುಂದಿನ ಒಂದೆರಡು ತಿಂಗಳುಗಳ ಅಂತರದಲ್ಲಿ ಟಿಟಾಘರ್‌ನಿಂದ ಹೊರಟು ಬೆಂಗಳೂರು ಸೇರಿದರೆ 2026ರ ಆರಂಭದಲ್ಲಿ ಇತರ ಮೆಟ್ರೋ ಮಾರ್ಗಗಳಂತೆ ಹಳದಿ ಮಾರ್ಗದಲ್ಲೂ ಪ್ರತಿ 10 ನಿಮಿಷಕ್ಕೆ ಒಂದರಂತೆ ಮೆಟ್ರೋ ಸಂಚಾರ ಸಾಧ್ಯವಾಗುತ್ತದೆ.

ಬೆಂಗಳೂರು ನಗರದ ನಂದಿನಿ ಲೇಔಟ್‌ನಲ್ಲಿರುವ ಸಾನ್ಸ್ ಪಬ್ಲಿಕ್ ಶಾಲಾ ವತಿಯಿಂದ ಸಾನ್ಸ್ ಕಪ್ 2025 ರಾಜ್ಯ ಮಟ್ಟದ ಅಂತರ್‌ಶಾಲಾ ಹಾಗೂ ಅಂತರ್ ಕಾಲೇಜು ವಾಲಿಬಾಲ್ ಟೂರ್ನಿಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ 50 ಕ್ಕೂ ಹೆಚ್ಚು ಶಾಲೆ, ಕಾಲೇಜುಗಳು ಭಾಗವಹಿಸಿದ್ದರು. ಗೆದ್ದ ತಂಡಗಳಿಗೆ ಸಾನ್ಸ್ ಪಬ್ಲಿಕ್ ಸ್ಕೂಲ್‌ನ ಅಧ್ಯಕ್ಷ ಶ್ರೀಕಂಠಪ್ಪ ಮತ್ತು ನಿರ್ದೇಶಕ ಅಭಿಷೇಕ್ ಅವರು ಬಹುಮಾನ ವಿತರಿಸಿದರು.

ಮಹಾರಾಷ್ಟ್ರದ ನಾಸಿಕ್‌ನಲ್ಲಿ ಮಂಗಳವಾರ ಸಾಹಿತಿ ಎಸ್.ಎಲ್‌ಭೈರಪ್ಪನವರ ಸ್ಮರಣಾರ್ಥ ಶ್ರದ್ಧಾಂಜಲಿ ಸಭೆ ಹಾಗೂ ಅಸ್ಥಿಯ ವಿಸರ್ಜನೆ ಕಾರ್ಯಕ್ರಮ ನಡೆಯಿತು. ಮರಾಠಿ ಅನುವಾದಕಿ ಉಮಾ ಕುಲಕರ್ಣಿ, ಸಾರ್ವಜನಿಕ ವಾಚನಾಲಯದ ಅಧ್ಯಕ್ಷ ಪ್ರೊ.ದಿಲೀಪ್ ಫಡ್ಕೆ, ಸುರೇಶ್ ಗಾಯ್ಧಾನಿ ಅವರು ಭಾಗವಹಿಸಿದ್ದರು.

ಜಲಮಂಡಳಿ ವಿನೂತನ ಕ್ರಮಕ್ಕೆ ಚಾಲನೆ ನೀಡಲಿರುವ ಡಿಕೆಶಿ: ರಾಮ್ ಪ್ರಸಾತ್ ಮನೋಹರ್

ಬ್ಲೂ ಫೋರ್ಸ್ ವಿಶೇಷ ದಳ: ಅಕ್ರಮ ನಲ್ಲಿ ಸಂಪರ್ಕ ಪತ್ತೆಗೆ ದಿಟ್ಟ ಹೆಜ್ಜೆ

ಬೆಂಗಳೂರು: ನಗರದಾದ್ಯಂತ ನೀರಿನ ಸೋರಿಕೆ ತಡೆಯಲು ಮತ್ತು ಅನಧಿಕೃತ ನೀರು ಹಾಗೂ ಒಳಚರಂಡಿ ಸಂಪರ್ಕಗಳನ್ನು ಪತ್ತೆ ಹಚ್ಚಲು ಬೆಂಗಳೂರು ಜಲಮಂಡಳಿ ರೂಪಿಸಿರುವ ಮಹತ್ವದ ವಿನೂತನ ಕಾರ್ಯಕ್ರಮಕ್ಕೆ ಬುಧವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಲಿದ್ದಾರೆ ಎಂದು ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಈ ಕುರಿತು ಮಾಹಿತಿ ಹಂಚಿಕೊಂಡಿರುವ ಅವರು, ಈ ಯೋಜನೆಯು ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಬ್ಲೂ ಫೋರ್ಸ್ ವಿಶೇಷ ದಳದ ಪ್ರಾರಂಭಿಸಲಾಗುತ್ತಿದ್ದು, ಪ್ರತಿಯೊಂದು ಉಪವಿಭಾಗಕ್ಕೆ ಒಂದು ವಿಶೇಷ ಬ್ಲೂ ಫೋರ್ಸ್' ತಂಡವನ್ನು (ಒಟ್ಟು 16 ಮೂವರು ಸದಸ್ಯರು) ರಚಿಸಿದೆ. ಈ ವಿಶೇಷ ದಳವು ಈ ವಾರದಿಂದಲೇ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಲಿದೆ ಎಂದರು.

ಅಕ್ರಮ ನೀರು ಮತ್ತು ಒಳಚರಂಡಿ ಸಂಪರ್ಕಗಳನ್ನು ಪತ್ತೆಹಚ್ಚುವುದು, ಅನಧಿಕೃತವಾಗಿ ನೀರು ಸೋರುವಿಕೆ ಮತ್ತು ಬೈಪಾಸ್ ಸಂಪರ್ಕಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ನೀರಿನ ಸೋರಿಕೆಯಿಂದ ಮಂಡಳಿಗೆ ಆಗುತ್ತಿರುವ ಭಾರಿ ಆರ್ಥಿಕ ನಷ್ಟವನ್ನುತಡೆಗಟ್ಟುವುದು ಮತ್ತು ನೀರಿನ ನ್ಯಾಯಯುತ ವಿತರಣೆ ಖಚಿತಪಡಿಸುವುದು ಈ ವಿಶೇಷ ದಳದ ಉದ್ದೇಶವಾಗಿದೆ ಎಂದು ವಿವರಿಸಿದರು.

ಭೂ ಅಗೆದ ಸ್ಥಳ ಪತ್ತೆಗೆ ಎಐ: ರೋಬೋಟಿಕ್ ಮತ್ತು ಎಐ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಸೋರಿಕೆಯ ನಿಖರ ಸ್ಥಳವನ್ನು ಪತ್ತೆಹಚ್ಚಲು ಮತ್ತು ಅನಗತ್ಯ ರಸ್ತೆ ತೋಡುವಿಕೆಗೆ ಕಡಿವಾಣ ಹಾಕಲು ಮಂಡಳಿಯು ಪ್ರಮುಖ ರೋಬೋಟಿಕ್ ತಂತ್ರಜ್ಞಾನ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಈ ರೋಬೋಟ್ ತಂತ್ರಜ್ಞಾನ ಕಾರ್ಯನಿರ್ವಹಿಸಲಿದೆ ಎಂಬುದು ಈ ಯೋಜನೆಯ ಪ್ರಮುಖ ಅಂಶವಾಗಿದೆ. ರೋಬೋ ಪರೀಕ್ಷೆಯಿಂದ ನಿಖರವಾದ ದೋಷದ ಸ್ಥಳ ಪತ್ತೆಯಾಗುವುದರಿಂದ, ರಸ್ತೆ ತೋಡುವಿಕೆ ಮತ್ತು ಸಾರ್ವಜನಿಕರಿಗೆ ಆಗುವ ತೊಂದರೆಗಳು ಗಣನೀಯವಾಗಿ ಕಡಿಮೆಯಾಗುತ್ತವೆ. ದೂರು ಪರಿಹಾರ ಪ್ರಕ್ರಿಯೆಯು ವೇಗಗೊಳ್ಳುತ್ತದೆ. ಅಕ್ರಮ ಸಂಪರ್ಕಗಳಿಂದ ಮಂಡಳಿಗೆ ಭಾರಿ ನಷ್ಟ ಉಂಟಾಗುತ್ತದೆ. ತಂತ್ರಜ್ಞಾನ ಮತ್ತು ಕಾನೂನು ಜಾರಿಗೊಂಡು ಎಲ್ಲ ಉಲ್ಲಂಘನೆಗಳನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ ಎಂದು ರ ತಿಳಿಸಿದ್ದಾರೆ.

ಉಪಯೋಗಗಳೇನು

- ಪೈಪ್‌ಲೈನ್‌ಗಳ ಒಳಭಾಗದ ನಿಖರ ಪರಿಶೀಲನೆ
- ಎಐ ನಿಖರವಾದ ಲೀಕೇಜ್ ಸ್ಥಳ ಪತ್ತೆ
- ದೋಷ ಪತ್ತೆಹಚ್ಚುವಿಕೆ ಮತ್ತು ಸಂಪೂರ್ಣ ಪೈಪ್‌ಲೈನ್ ಜಾಲದ ಡಿಜಿಟಲ್ ಮ್ಯಾಪಿಂಗ್

ಖರ್ಗೆ ಆಟಕ್ಕುಂಟು ಲೆಕ್ಕಕ್ಕಿಲ್ಲ

ಬೆಂಗಳೂರು: ಪ್ರಿಯಾಂಕ್ ಖರ್ಗೆ ಸುಳ್ಳುಗಳನ್ನು ಹೇಳುವುದರಲ್ಲಿ ನಿಸ್ಸೀಮರಾಗಿದ್ದಾರೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಿಯಾಂಕ್ ಹೇಳಿರುವ ಮಾತುಗಳೆಲ್ಲವೂ ಅಪ್ಪಟ ಸುಳ್ಳು. ತಮ್ಮ ಕ್ಷೇತ್ರ ಚಿತ್ತಾಪುರದಲ್ಲಿ ಪಥ ಸಂಚಲನ ಆಗಲು ಬಿಡುವುದಿಲ್ಲ ಎಂದು ಹೇಳಿದ್ದರು. ಆದರೆ, ಇವತ್ತು ಪಥ ಸಂಚಲನ ನಡೆದಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು. ನನ್ನ ಕೈಯಲ್ಲಿ ಅಧಿಕಾರವಿದ್ದರೆ ಇವತ್ತೇ ಆರೆಸ್ಸೆಸ್ ನಿಷೇಧಿಸು ವುದಾಗಿ ಪ್ರಿಯಾಂಕ್ ಹೇಳಿದ್ದರು. ಅದು ಅವರಿಗೆ ಈ ಜನ್ಮದಲ್ಲಿ ಆಗಲಾರದ ವಿಷಯ. ನೀವು ಅನುಮತಿ ಕೊಟ್ಟಿದ್ದಾಗಿ ಹೇಳಿದ್ದೀರಿ. ಅದು ನಿಮ್ಮ ಅನುಮತಿಯಲ್ಲ, ಅದು ನ್ಯಾಯಾಲಯದಿಂದ ಸಿಕ್ಕಿದೆ. ಸರಣಿ ಸುಳ್ಳು ಹೇಳುವ ಸುಳ್ಳುಗಾರ ಇದ್ದರೆ ಅದು ಪ್ರಿಯಾಂಕ್ ಖರ್ಗೆ. ಇರಲಾರದೆ ಇರುವೆ ಬಿಟ್ಟುಕೊಂಡು ಈಗ ಕಚ್ಚಿಸಿಕೊಂಡು ಓಡಾ ಡುತ್ತಿದ್ದಾರೆ. ಅವರಿಗೆ ಇರುವೆ ಕಚ್ಚಿದೆ ಎಂದರು.

ಕಸ ಗುಡಿಸುವ ಯಂತ್ರ ಖರೀದಿಯಲ್ಲಿ ಅಕ್ರಮ

ಬೆಂಗಳೂರು: ರಾಜ್ಯ ಸರಕಾರದ ಕ್ಯಾಬಿನೆಟ್ ನಲ್ಲಿ 46 ಕಸ ಗುಡಿಸುವ ಯಂತ್ರಗಳನ್ನು 7 ವರ್ಷದವರೆಗೂ ಬಾಡಿಗೆ ಆಧಾರದ ಮೇಲೆ ಪಡೆಯಲು ಒಪ್ಪಿಗೆ ನೀಡಿದೆ. ಬಾಡಿಗೆ ನೆಪದಲ್ಲಿ ಕಮೀಷನ್ ಗೋಲ್ ಮಾಲ್ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ನಿಖಿಲ್, ಬಾಡಿಗೆಗೆ ಬದಲು ಖರೀದಿಗೆ ಕಡಿಮೆ ವೆಚ್ಚ. ಇದು ತಪ್ಪು ಲೆಕ್ಕಾಚಾರವಲ್ಲ. ಗಣಿತ ಮಧ್ಯಾಹ್ನದ ಬೆಳಕಲ್ಲೇ ಕೊಂದು, ಹೂತು, ದಹನ ಮಾಡಿದಂತದ್ದು. ಬೆಂಗಳೂರಿ ನಲ್ಲಿ ಬಿಬಿಎಂಪಿ ಯಾರ್ಡ್‌ಗಳಲ್ಲಿ 26 ಕಸ ಗುಡಿಸುವ ಯಂತ್ರಗಳು ಬಳಕೆಯಾಗದೆ ಬಿದ್ದಿವೆ. ಆದರೆ ಡಿಸಿಎಂ ನೇತೃತ್ವದ ಕಾಂಗ್ರೆಸ್ ಸರಕಾರ 613 ಕೋಟಿ ರು. ಖರ್ಚು ಮಾಡಿ, ಪ್ರತಿ ಯಂತ್ರಕ್ಕೆ 1.9 ಕೋಟಿಯಂತೆ 46 ಹೆಚ್ಚುವರಿ ಬಾಡಿಗೆ ನೀಡಲು ಬಯಸಿದೆ. ಅದೇ ಯಂತ್ರಗಳನ್ನು ಖರೀದಿಸಲು ಕೇವಲ 1.3-3 ಕೋಟಿ ವೆಚ್ಚವಾಗುತ್ತದೆ ಎಂದು ಆರೋಪಿಸಿದ್ದಾರೆ. ಈ ಯಂತ್ರಗಳನ್ನು ಖರೀದಿಸಲು ತಜ್ಞರ ಸಮಿತಿಯು ಶಿಫಾರಸು ಮಾಡಿತ್ತು. ಆದರೆ ಬಿಸಿಜಿ ಕಾರ್ಯಕ್ಷಮತೆಗಾಗಿ ಪಾವತಿ ಮಾದರಿ ಪ್ರತಿಪಾದಿಸಿತು. ಆದರೂ ಡಿಸಿಎಂ ಮತ್ತು ಅವರ ತಂಡ ಅತ್ಯಂತ ದುಬಾರಿ ಆಯ್ಕೆ ಆರಿಸಿ, ಅದನ್ನು ಆಡಳಿತ ಎಂದು ಲೇಬಲ್ ಮಾಡಿ ಹೊಸ ಆರ್ಥಿಕ ಸಿದ್ಧಾಂತ ರಚಿಸಿದೆ. ವೆಚ್ಚ, ಕಾರ್ಯಕ್ಷಮತೆ ಮತ್ತು ಹೊಣೆಗಾರಿಕೆಯ ನಿಜವಾದ ಅರ್ಥ ತಿಳಿದಿರುವ ಕಿರಣ್ ಮಜುಂದಾರ್ ಶಾ ಹಾಗೂ ಟಿ.ವಿ. ಮೋಹನದಾಸ್ ಪೈ ಅವರಂತಹ ಕಾರ್ಪೊರೇಟ್ ನಾಯಕರು ಈ ಸರಕಾರಕ್ಕೆ ಒಂದು ಕ್ರಾ್ಯಶ್ ಕೋರ್ಸ್ ಮೂಲಭೂತ ಗಣಿತದಲ್ಲೇ ಉತ್ತರ ಕೊಡಬೇಕಾದ ಸಮಯ ಬಂದಿದೆ. ಇಲ್ಲದಿದ್ದರೆ ಇನ್ನೊಂದು 600 ಕೋಟಿ ಇದೇ ರೀತಿ ಕಾಣೆಯಾಗಬಹುದು ಎಂದು ಆರೋಪಿಸಿದ್ದಾರೆ.

ಬಾಡಿಗೆಯ ಬದಲು ಖರೀದಿಗೆ ಕಡಿಮೆ ವೆಚ್ಚ: ನಿಖಿಲ್ ಕುಮಾರಸ್ವಾಮಿ

ಸುಪ್ರೀಂ ಕೋರ್ಟ್ ಆದೇಶದ ಬೆನ್ನಲ್ಲೇ ಬೀದಿನಾಯಿಗಳ ಮಾಹಿತಿ ಕಲೆ ಹಾಕಲು ಸೂಚನೆ

ಬೀದಿನಾಯಿಗಳ ಸ್ಥಳಾಂತರಕ್ಕೆ ಜಿಬಿಎ ಸಜ್ಜು

ಬೆಂಗಳೂರು: ಸುಪ್ರೀಂ ಕೋರ್ಟ್ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಆಟದ ಮೈದಾನ ಮತ್ತು ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿ ಗಳನ್ನು ಸ್ಥಳಾಂತರಿಸುವ ಕುರಿತು ನಿರ್ದೇಶನ ನೀಡಿರುವ ಹಿನ್ನೆಲೆ ಜಿಬಿಎ ಯು ಬೀದಿ ನಾಯಿಗಳು ಕಂಡುಬರುವ ಸ್ಥಳಗಳ ಪಟ್ಟಿ ಮಾಡಲು ಆಯುಕ್ತರಿಗೆ ಸೂಚನೆ ನೀಡಿದೆ.

ಬೀದಿ ನಾಯಿಗಳು ಕಂಡುಬರುವ ಸ್ಥಳಗಳು, ನಾಯಿಗಳ ಸಂಖ್ಯೆ, ಕೈಗೊಂಡಿರುವ ಕ್ರಮ ಮತ್ತು ನೇಮಕ ಮಾಡಲಾದ ನೋಡಲ್ ಅಧಿಕಾರಿಗಳ ಪಟ್ಟಿ ಮಾಡುವಂತೆ ಸಂಬಂ ಧಪಟ್ಟ ಸಂಸ್ಥೆಗಳು ಮತ್ತು ಅಧಿಕಾರಿಗಳಿಗೆ ಪತ್ರ ಬರೆದಿದ್ದು, ಮಾಹಿತಿಗಳು ಬಂದ ಕೂಡಲೇ ನಾಯಿಗಳನ್ನು ಸ್ಥಳಾಂತರಿಸಲು, ಅವುಗಳಿಗೆ ಆಶ್ರಯಗಳ ನಿರ್ಮಾಣ ಕಾರ್ಯಗಳ ತ್ವರಿತಗೊಳಿಸಲಾಗುವುದು, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನಿಯಮಗಳನ್ನು ಪಾಲಿಸಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಜಿಬಿಎ ಅಧಿಕಾರಿಗಳು ಸುಪ್ರೀಂ ಕೋರ್ಟ್‌ನ ನಿರ್ದೇಶನವನ್ನು ಜಾರಿಗೆ ತರಲು ಸಿದ್ಧತೆ ನಡೆಸಿದ್ದು, ಪ್ರಾಣಿ ಪ್ರಿಯರು ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳ ಸ್ಥಳಾಂತರಿಸುವ ಕುರಿತು ಸುಪ್ರೀಂ ಕೋರ್ಟ್ ಆದೇಶದ ವಿರುದ್ಧ ಮಂಗಳವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ನ್ಯಾಯಾಲಯದ ತೀರ್ಪು ಬೀದಿ ನಾಯಿಗಳ ಕಡಿತದ ಹೆಚ್ಚಳಕ್ಕೆ ಕಾರಣವಾಗುತ್ತದೆ, ಏಕೆಂದರೆ ಸಮುದಾಯ ನಾಯಿಗಳನ್ನು ಹಿಡಿದು ಆಶ್ರಯ ಮನೆಗಳಿಗೆ ಸ್ಥಳಾಂತರಿಸಿದರೆ. ಹೊಸ ಪ್ರದೇಶಕ್ಕೆ ಬರುವ ಈ ನಾಯಿಗಳು ಆತಂಕ ಮತ್ತು ಭೀತಿಯಿಂದಾಗಿ ಆಹಾರಕ್ಕಾಗಿ ದಾಳಿ ನಡೆಸುವ ಸಾಧ್ಯತೆಗಳಿವೆ. ಹೊಸ ಸ್ಥಳದಲ್ಲಿ ನಾಯಿಗಳು ಅಲ್ಲಿನ ಮನುಷ್ಯರಿಗೆ ಒಗ್ಗಿಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ, ಆಕ್ರಮಣಶೀಲತೆಯ ಕಾರಣದಿಂದಾಗಿ ದಾಳಿ ಮಾಡಬಹುದು. ಸಮಸ್ಯೆಗಿರುವ ಒಂದೇ ಪರಿಹಾರ ವೆಂದರೆ ಪ್ರಾಣಿಗಳ ಜನನ ನಿಯಂತ್ರಣ (ಎಬಿಸಿ) ನಿಯಮಗಳನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವುದು ಎಂದು ಪ್ರಾಣಿ ಹಕ್ಕುಗಳ ಕಾರ್ಯಕರ್ತರು ಹೇಳಿದ್ದಾರೆ.

ಸಾರ್ವಜನಿಕ ಸ್ಥಳಗಳಿಂದ ಬೀದಿನಾಯಿಗಳನ್ನು ಸ್ಥಳಾಂತರಿಸುವಂತೆ ನೀಡಿರುವ ಸುಪ್ರೀಂಕೋರ್ಟ್ ಆದೇಶ ವಿರೋಧಿಸಿ ಫ್ರೀಡಂಪಾರ್ಕ್‌ನಲ್ಲಿ ಪ್ರಾಣಿಪ್ರಿಯರ ಒಕ್ಕೂಟದ ಸದಸ್ಯರು ಸ್ವಯಂಪ್ರೇರಿತರಾಗಿ ಪ್ರತಿಭಟನೆ ನಡೆಸಿದರು.

ಅಪಾಯಕಾರಿ ನಾಯಿಗಳ ಸ್ಥಳಾಂತರಕ್ಕೆ ಆಗ್ರಹ

ಆಶ್ರಯ ತಾಣಗಳನ್ನು ಯಾರು ನಡೆಸುತ್ತಾರೆ ಎಂಬುದರ ಕುರಿತು ಸ್ಪಷ್ಟತೆ ಇಲ್ಲ. ಕೇವಲ ದಾಖಲೆ ಉದ್ದೇಶಗಳಿಗಾಗಿ, ಸೌಲಭ್ಯಗಳನ್ನು ಸ್ಥಾಪಿಸಬಹುದು. ನಾಯಿಗಳನ್ನು ಹಿಂಸಿಸಿ ಕೊಂದರೂ ಕೂಡ ಅದನ್ನು ಮುಚ್ಚಿಹಾಕುವ ಸಾಧ್ಯತೆಗಳಿವೆ. ಸರಕಾರ ಆಸ್ಪತ್ರೆಗಳು, ಶಾಲೆಗಳು, ಕಾಲೇಜುಗಳು, ದೊಡ್ಡ ಕ್ಯಾಂಪಸ್‌ಗಳು, ರೈಲ್ವೆ ನಿಲ್ದಾಣಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಈಗಾಗಲೇ ನೆಲೆಸಿರುವ ನಾಯಿಗಳನ್ನು ಸ್ಥಳಾಂತರಿಸುವ ಬದಲು, ಅಪಾಯಕಾರಿ ನಾಯಿಗಳನ್ನು ಗುರುತಿಸುವತ್ತ ಗಮನಹರಿಸಬೇಕು. ಸಾಕುಪ್ರಾಣಿಗಳೊಂದಿಗೆ ಸಹಬಾಳ್ವೆ ಮತ್ತು ಅವುಗಳನ್ನು ನೋಡಿಕೊಳ್ಳಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಾಕುಪ್ರಾಣಿ ಪ್ರಿಯರು ಹೇಳಿದ್ದಾರೆ.

Office of the Executive Engineer
Panchayat Raj Engineering Division
HAVERI-581 110

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ
ಹಾವೇರಿ-581 110

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ. 30/ಪಂ.ರಾ.ಇಂ/ವಿ.ಹಾ/ಪಿಬಿ-1ಟೆಂಡರ/2025-26/4678
ದಿನಾಂಕ: 17-11-2025

ಇ-ಟೆಂಡರ್ ಪ್ರಕಟಣೆ

ದಿನಾಂಕ: 17-11-2025 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಕಾಮಗಾರಿ ಇಂಡೆಂಟ್ ಸಂಖ್ಯೆ: 20462(2A) 20468, 20469, 20470(2A), 20475(SC), 20476(SC), 20479, 20482, 20483, 20484 (CAT-1), 20485, 20486, 20472(SC), 20473, 20474, 20478, 20481(ST), 16041/Call-2 1 & 2ನೇ ಕರೆ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 24-11-2025 (ಸಂಜೆ 4-00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಪ್ರಕಟಣೆ ಸಂಖ್ಯೆ: dipr/dipo/509/2025-26
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತರಾಜ ಇಂಜಿನೀಯರಿಂಗ್ ವಿಭಾಗ, ಹಾವೇರಿ

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2025-26/2648
ದಿನಾಂಕ : 18-11-2025

ಕೆಪಿಪಿ ಪೋರ್ಟಲ್ ಅಲ್ಪಾವಧಿ ಟೆಂಡರ ಪ್ರಕಟಣೆ
Standard Bid Document KW-3

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-3 ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 5 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2023-24 ನೇ ಸಾಲಿನ 5054 ಮಾನ್ಯ ಮುಖ್ಯಮಂತಿಗಳ ವಿಷೇಶ ಯೋಜನೆ, 2024-25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ 5054 ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.
Indent Nos: 1) WORK_INDENT : 16653/CALL-2, 16696/CALL-2, 16730/CALL-2, 8934/CALL-2, 20351,

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **50.24** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **83.44** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ :- ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **19-11-2025** ರಿಂದ **27-11-2025** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **28-11-2025** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ದತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್ಎಂಸಿಎ/388/2025-26

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಬೆಂಗಳೂರು.
ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/2025-26/2106 ದಿನಾಂಕ: 18.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು **KW-1 STD** ಷರತ್ತುಗೊಳ್ಳಪಟ್ಟಂತೆ ಅಲ್ಪಾವಧಿ ಟೆಂಡರ್‌ನ ಮೊದಲನೆ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿವೆ.

Sl. No.	Work Indents	Work Value (Rs. in Lakhs)
1	PWD/2025-26/EL/WORK_INDENT29345	8.30
2	PWD/2025-26/EL/WORK_INDENT29272 CAT-II(A)	8.33
3	PWD/2025-26/EL/WORK_INDENT29266 (ST)	6.73

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು **ದಿನಾಂಕ: 18.11.2025 ರಿಂದ 25.11.2025, 16:00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ **ದಿನಾಂಕ: 25.11.2025 ರಂದೆ 16:00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು **Karnataka Public Procurement Portal** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).
ವಾಸಾಸಂಇ/ಉನಿ-ಸಿ.ಪಿ/3866/ಕೆಎಸ್ಎಂಸಿಎ/2025-26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ, ನಂ.1 ಹೇಮಾವತಿ ಎಡದಂಡೆ ನಾಲಾ ವಿಭಾಗ, ಚನ್ನರಾಯಪಟ್ಟಣ, ದೂರವಾಣಿ: 08176-252204
E-Mail : eehlbcrp@gmail.com ph: 08176-252204

ಅಲ್ಪಾವಧಿ ಟೆಂಡರ್ ಪ್ರಕಟಣೆ - 08/2025-26 ದಿನಾಂಕ :17.11.2025/ಐಟಂವಾರು ಟೆಂಡರ್ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ) Two cover System

ವ್ಯವಸ್ಥಾಪಕ ನಿರ್ದೇಶಕರು, ಕಾನೀನಿನಿ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳಿಗೆ ಕೆಪಿಡಬ್ಲ್ಯುಡಿ/ಸಿಪಿಡಬ್ಲ್ಯೂಡಿ ಹಾಗೂ ಇತರೆ ಸಾರ್ವಜನಿಕ ವಲಯದ ಸಂಸ್ಥೆಗಳ ಅರ್ಹಗುತ್ತಿಗೆದಾರರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಕಾಮಗಾರಿಗಳ ಸಂಖ್ಯೆ 6 ಕಾಮಗಾರಿಗಳು ಕಾಮಗಾರಿಗಳ ವಿವರ: ಹೇಮಾವತಿ ಎಡದಂಡೆ ನಾಲೆ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಬಾಗೂರು ನವಿಲೆ ಸುರಂಗದ ಆಗಮನ ಏತನೀರಾವರಿ ಯೋಜನೆ, ನುಗ್ಗೇಹಳ್ಳಿ ಕುಡಿಯುವ ನೀರಿನ ಯೋಜನೆ, ಹಿರೀಸಾವೆ-ಶ್ರವಣಬೆಳಗೊಳ ಕುಡಿಯುವ ನೀರಿನ ಯೋಜನೆ ಹಾಗೂ ವಿತರಣಾ ನಾಲೆ 35 ಮತ್ತು 36 ರ ನಾಲೆಗಳ ಅಭಿವೃದ್ಧಿ ಕಾಮಗಾರಿಗಳು ಟೆಂಡರ್‌ಗಿಟ್ಟ ಕಾಮಗಾರಿಗಳ ಮೊತ್ತ ರೂ. 75.45 ರಿಂದ ರೂ. 421.81 ಲಕ್ಷಗಳು. ಇ.ಎಂ.ಡಿ. ಮೊತ್ತ ರೂ.151000/- ರಿಂದ ರೂ. 633000/- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ:18.11.2025 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:29.11.2025 ರ 16.00 ಘಂಟೆಯವರೆಗೆ, Prebid meeting ದಿನಾಂಕ:24.11.2025 ರ 11.30 ಘಂಟೆಗೆ. ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01.12.2025 ರಂದು 11.30 ಗಂಟೆಗಳು, ಅರ್ಹತೆ ಪಡೆದ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿರುವ ಟೆಂಡರ್‌ಗಿಟ್ಟ ಅಂದಾಜುಮೊತ್ತ ಹಾಗೂ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತ ಮತ್ತು ಇ.ಎಂ.ಡಿ. ಮೊತ್ತವು ಅಂತಿಮವಾಗಿರುತ್ತದೆ ಮತ್ತು ಪ್ರಚಲಿತದಲ್ಲಿರುವ ತೆರಿಗೆಗಳು ಅನ್ವಯವಾಗುತ್ತದೆ.
ಸೂಚನೆ: ಹೆಚ್ಚಿನ ವಿವರ/ಮಾಹಿತಿಗಳನ್ನು (https://kppp.karnataka.gov.in) ವೆಬ್‌ಸೈಟ್‌ನಲ್ಲಿ ಹಾಗೂ ಕಛೇರಿಯಲ್ಲಿ ಪಡೆಯ ಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.1, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/779/ಕೆಎಸ್ಎಂಸಿಎ/2025-26

3 ದಿನಗಳ ಹಿಂದೆ ನಾಲೆಗೆ ಬಿದ್ದು ನರಕಯಾತನೆ ಅನುಭವಿಸಿದ್ದ ಕಾಡಾನೆ | ಅರಿವಳಿಕೆ ಮದ್ದು ನೀಡಿ ರಕ್ಷಣೆ

ಶಿವನಸಮುದ್ರ ನಾಲೆಗೆ ಬಿದ್ದು ನರಳಾಡಿದ ಆನೆಯ ರಕ್ಷಣೆ

ಮಳವಳ್ಳಿ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಶಿವನಸಮುದ್ರದ ಬಳಿ ಇರುವ ಖಾಸಗಿ ವಿದ್ಯುತ್ ಉತ್ಪಾದನಾ ನಾಲೆಗೆ ಕಳೆದ ಶನಿವಾರ ರಾತ್ರಿ ಬಿದ್ದಿದ್ದ ಆನೆಯನ್ನು ಮಂಗಳವಾರ ರಕ್ಷಿಸಲಾಗಿದೆ. ಅರಣ್ಯ ಸಿಬ್ಬಂದಿ ಕ್ರೇನ್ ಮೂಲಕ ಮಧ್ಯಾಹ್ನದ ಆನೆಯನ್ನು ಮೇಲೆತ್ತಲು ಯಶಸ್ವಿಯಾಗಿದ್ದಾರೆ.

ಕಳೆದ ಶನಿವಾರ ರಾತ್ರಿ ನೀರನ್ನು ಕುಡಿಯಲೆಂದು ಕಾಡಾನೆಯೊಂದು ಶಿವನಸಮುದ್ರದ ಜಲಪಾತದ ಬಳಿಗೆ ಬಂದಿದೆ. ಆ ವೇಳೆ ಕತ್ತಲಾಗಿದ್ದರಿಂದ ಆನೆ ಆಯತಪ್ಪಿ ಖಾಸಗಿ ವಿದ್ಯುತ್ ಉತ್ಪಾದನಾ ನಾಲೆಗೆ ಬಿದ್ದಿದೆ. ಇದನ್ನು ಕಂಡ ವಿದ್ಯುತ್ ಉತ್ಪಾದನಾ ಕೇಂದ್ರದ ಸಿಬ್ಬಂದಿ ಅರಣ್ಯ ಇಲಾಖೆಗೆ ಆನೆ ಬಿದ್ದಿರುವ ವಿಚಾರ ಮುಟ್ಟಿಸಿ ಸುಮ್ಮನಾಗಿದ್ದಾರೆ.

ಜೊತೆಗೆ ವಿಚಾರ ಮುಟ್ಟಿಸಿದರೂ ಸಹ ಅರಣ್ಯ ಇಲಾಖೆ ಸಿಬ್ಬಂದಿ ಆನೆ ಮೇಲೆತ್ತುವ ಕೆಲಸವನ್ನು ಮಾಡದೇ ಭಾನುವಾರ ಕಾಲಹರಣ ಮಾಡಿದ್ದಾರೆ. ನಾಲೆಯಲ್ಲಿ ಸಿಲುಕಿ ಆಹಾರವಿಲ್ಲದೇ ಆನೆಯ ನರಳಾಟ ಹೆಚ್ಚಾಗಿ ಕಿರುಚಾಡತೊಡಗಿದೆ. ಇದನ್ನು ಗಮನಿಸಿದ ಸ್ಥಳೀಯರು ನಿನ್ನೆ ವಿದ್ಯುತ್ ಉತ್ಪಾದನಾ ಘಟಕ ಮತ್ತು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದಾಗ, ಆನೆ ಬಿದ್ದ ಎರಡು ದಿನಗಳ ಬಳಿಕ ಅದನ್ನು ಮೇಲೆತ್ತುವ ಕಾರ್ಯಾಚರಣೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಆರಂಭಿಸಿದ್ದಾರೆ.

ಸೋಮವಾರ ಆನೆಯನ್ನು ಮೇಲೆತ್ತುವ ಕಾರ್ಯವನ್ನು ಅರಣ್ಯ ಇಲಾಖೆ ಆರಂಭಿಸಿದರೂ ಕೆಆರ್‌ಎಸ್‌ನಿಂದ ಹೆಚ್ಚಿನ ಪ್ರಮಾಣದ ನೀರನ್ನು ಹರಿಬಿಟ್ಟಿದ್ದರಿಂದ ಶಿವನಸಮುದ್ರ ಮೈದುಂಬಿ ಹರಿದು ನಾಲೆಯಲ್ಲೂ ಹೆಚ್ಚಿನ ನೀರು ಹೋಗುತ್ತಿತ್ತು. ಇದರಿಂದ ನಿನ್ನೆ ಆನೆಯನ್ನು ರಕ್ಷಿಸಲು ಆಗಲಿಲ್ಲ. ಮಂಗಳವಾರ ಕೆಆರ್‌ಎಸ್‌ನಲ್ಲಿ ನೀರಿನ ಪ್ರಮಾಣ ತಗ್ಗಿಸಿ ಅರಣ್ಯ ಇಲಾಖೆ ಆನೆಯನ್ನು ಮೇಲೆತ್ತಲು ಕಾರ್ಯಾಚರಣೆ ಆರಂಭಿಸಿದರು.

ಸಾಮಾನ್ಯ ಕ್ರೇನ್‌ನಲ್ಲಿ ಆನೆ ಮೇಲೆತ್ತಲು ಸಾಧ್ಯವಾಗದಿದ್ದಾಗ ಬೆಂಗಳೂರಿನಿಂದ ವಿಶೇಷ ಹೈಡ್ರಾಲಿಕ್ ಕ್ರೇನ್ ತರಿಸಿ ಆನೆಯನ್ನು ಮೇಲೆತ್ತುವ ಕಾರ್ಯ ಆರಂಭಿಸಿದರು. ಕ್ರೇನ್‌ನ ಬೆಲ್ಟ್‌ಗಳನ್ನು ಅಳವಡಿಸುವಾಗ ನೀರಿನಲ್ಲಿ ಕಳೆದ ನಾಲ್ಕು ದಿನಗಳಿಂದ ನೆಂದಿದ್ದ ಆನೆಯ ಸೊಂಡಲಿನ ಬಳಿ ಫಂಗಸ್ ಬಂದಿರುವುದು ಗೊತ್ತಾಗಿದೆ. ತದನಂತರ ವೈದ್ಯರ ಸಲಹೆಯಂತೆ ಜಾಗರೂಕತೆಯಿಂದ ಆನೆಯನ್ನು ರಕ್ಷಿಸಲು ಅರಣ್ಯ ಇಲಾಖೆ ಮುಂದಾದರು.


ಶಿವನಸಮುದ್ರದ ಬಳಿ ನಾಲೆಗೆ ಬಿದ್ದಿದ್ದ ಕಾಡಾನೆಯನ್ನು ಸತತ 4 ಗಂಟೆ ಕಾರ್ಯಾಚರಣೆ ನಡೆಸಿ ಹೈಡ್ರಾಲಿಕ್ ಜಾಕ್ ಸಹಾಯದಿಂದ ಅರಣ್ಯ ಸಿಬ್ಬಂದಿ ರಕ್ಷಣೆ ಮಾಡಿದರು.

ರೈತನ ಬಲಿ ಪಡೆದಿದ್ದ ಹುಲಿ ಸೆರೆ

ಮೈಸೂರು: ಕಳೆದ ತಿಂಗಳು ಮುಳ್ಳೂರು ಗ್ರಾಮ ಪಂಚಾಯತ್‌ನಲ್ಲಿ ರೈತನೊಬ್ಬನನ್ನು ಕೊಂದು ಹಲವಾರು ಇತರ ದಾಳಿಗಳಿಗೆ ಕಾರಣವಾಗಿದ್ದ ಹುಲಿಯನ್ನು ತೀವ್ರ ಶೋಧ ಮತ್ತು ಕಾರ್ಯಾಚರಣೆ ಬಳಿಕ ಅರಣ್ಯಾಧಿಕಾರಿಗಳು ಮಂಗಳವಾರ ಮುಂಜಾನೆ ಸುರಕ್ಷಿತವಾಗಿ ಸೆರೆಹಿಡಿ ಯುವಲ್ಲಿ ಯಶಸ್ವಿಯಾಗಿದ್ದಾರೆ. ರೈತನನ್ನು ಬಲಿ ಪಡೆದಿದ್ದ ಹುಲಿಯು ನಂತರ ಎರಡು ದನಗಳನ್ನೂ ಬೇಟೆಯಾಡಿತ್ತು. ಇದರ ಬೆನ್ನಲ್ಲೇ ಕಳೆದ ಕೆಲವು ದಿನಗಳಿಂದ ಗ್ರಾಮ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.ಘಟನೆ ಬಳಿಕ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿದ್ದ ಅರಣ್ಯ ಇಲಾಖೆಯು ಒಟ್ಟು 11 ಹುಲಿ ಹಾಗೂ ಅದರ ಮರಿಗಳನ್ನು ಸೆರೆಹಿಡಿದಿತ್ತು. ಆದರೆ, ರೈತನ್ನು ಬಲಿ ಪಡೆದಿದ್ದ ಹುಲಿ ಮಾತ್ರ ಸೆರೆ ಸಿಕ್ಕಿರಲಿಲ್ಲ. ಬಳಿಕ ಹುಲಿ ಸೆರೆ ಸಂಘಟಿತ ಕಾರ್ಯಾಚರಣೆಯನ್ನು ಪ್ರಾರಂಭಿಸಿತ್ತು.ಕಾರ್ಯಾಚರಣೆಯ ನೇತೃತ್ವವನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಪ್ರಭಾಕರ್ ಎಸ್, ವನ್ಯಜೀವಿ ಪಶುವೈದ್ಯ ಡಾ. ವಾಸಿಮ್, ರಾಜೇಶ್ ಎಸ್ ಡಿ, ಆರ್‌ಎಫ್‌ಒ, ರಾಜೀವ್ ಮತ್ತು ಅರಣ್ಯ ಇಲಾಖೆಯ ಡ್ರೋನ್ ಕಣ್ಗಾವಲು ತಂಡ ವಹಿಸಿತ್ತು. ಅಧಿಕಾರಿಗಳಾದ ದೀಪಕ್, ಡಿಆರ್‌ಎಫ್‌ಒ ಮತ್ತು ಹಲವಾರು ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ತರಬೇತಿ ಪಡೆದ ಆನೆಗಳಾದ ಭೀಮ, ಮಹೇಂದ್ರ, ಸುಗ್ರೀವ ಮತ್ತು ಪ್ರಶಾಂತವನ್ನೂ ಕಾರ್ಯಾಚರಣೆ ನಿಯೋಜಿಸಲಾಗಿತ್ತು. ಇದಲ್ಲದೆ, ಕಾರ್ಯಾಚರಣೆಯಲ್ಲಿ ಬಳಸಲಾದ ಡ್ರೋಣ್, ಹುಲಿ ಪತ್ತೆ ಮಾಡಲು ನೆರವಾಗಿದೆ.

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ
ಸಂಖ್ಯೆ:ಹು.ಧಾ.ನ.ಪ್ರಾ/ಇ.ಹ.ಪ್ರ/01/2025-26/3924 ದಿನಾಂಕ:17/11/2025

ಇ-ಹರಾಜು ಪ್ರಕಟಣೆ

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾದಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿಯ ಮೂಲೆ ನಿವೇಶನಗಳು ಹಾಗೂ ಬಿಡಿ ನಿವೇಶನಗಳ ಇ-ಹರಾಜು ಪ್ರಕಟಣೆ

1) ಇ-ಹರಾಜು ತೆರೆಯುವ ಹಾಗೂ ಇ-ಹರಾಜಿನಲ್ಲಿ ನೋಂದಾಯಿಸಿಕೊಳ್ಳಲು ಆರಂಭಿಸುವ ದಿನಾಂಕ : **19-11-2025** ಭಾರತೀಯ ಕಾಲಮಾನ ಮಧ್ಯಾಹ್ನ 4.00 ಗಂಟೆಯ ನಂತರ.
2) ಇ-ಹರಾಜಿನಲ್ಲಿ ಪಾಲ್ಗೊಳ್ಳಲು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ : **08-12 -2025** ಭಾರತೀಯ ಕಾಲಮಾನ ಮಧ್ಯಾಹ್ನ 4:00 ಗಂಟೆಯವರೆಗೆ
3) ಇ-ಹರಾಜಿನಲ್ಲಿ ನೇರ ಬಿಡ್ಡಿಂಗ್ ಪ್ರಾರಂಭವಾಗುವ ದಿನಾಂಕ : **09-12-2025** ಭಾರತೀಯ ಕಾಲಮಾನ ಮುಂಜಾನೆ 11.00 ಗಂಟೆಯಿಂದ ಆರಂಭ.
4) ಇ-ಹರಾಜನಲ್ಲಿ ಬಿಡ್ಡಿಂಗ್ ಮುಕ್ತಾಯಗೊಳಿಸುವ ದಿನಾಂಕ: **11-12-2025** ಭಾರತೀಯ ಕಾಲಮಾನ ಮಧ್ಯಾಹ್ನ 4.00 ಗಂಟೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://www.kppp.karnataka.gov.in ನ್ನು ಸಂಪರ್ಕಿಸಿ.

ಸಹಿ/- (ಶ್ರೀ ಶಾಕಿರ್ ಐ. ಸನದಿ) ಅಧ್ಯಕ್ಷರು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.
ಸಹಿ/- (ಡಾ॥ ಸಂತೋಷಕುಮಾರ ಬಿರಾದಾರ) ಕೆ.ಎ.ಎಸ್. ಆಯುಕ್ತರು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.
ವಾಸಾಸಂಇ/ಧಾ/ಎಂಸಿಎ/888/2025-26

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
e-mail-ids:directorbmcrcbellary@gmail.com,
website : https://vims.karnataka.gov.in
ಸಂ:ಬಿಎಂಸಿಆರ್‌ಸಿ/ಸಾಮಾನ್ಯ-3/36ಎಫ್ ಸಿ-52/ಟೆಂಡರ್/382/2025-26
ದಿನಾಂಕ:13.11.2025

ಇ-ಟೆಂಡರ್ ಅಧಿಸೂಚನೆ

ಬಳ್ಳಾರಿಯ ಬಿಎಂಸಿಆರ್‌ಸಿ ಸಂಸ್ಥೆಯಲ್ಲಿ ವಿವಿಧ ಈ ಕೆಳಗಿನ ಕಾಮಗಾರಿಗಳನ್ನು ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ-1999-2000ರಂತೆ ದ್ವಿ-ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದಪೋರ್ಟಲ್ **https://kppp.karnataka.gov.in** ಮೂಲಕ ಇ-ಟೆಂಡರನ್ನುಆಹ್ವಾನಿಸಲಾಗಿರುತ್ತದೆ. ಆಸಕ್ತಬಿಡ್ ದಾರರುಮೇಲಿನ ಪೋರ್ಟಲ್ ನಲ್ಲಿ DME/2025-26/OW/WORK-INDENT41 ಅಂದಾಜು ಮೊತ್ತ ರೂ20.00 ಲಕ್ಷಗಳು, DME/2025-26/OW/WORK-INDENT42 ಅಂದಾಜು ಮೊತ್ತ ರೂ18.51 ಲಕ್ಷಗಳು, DME/2025-26/OW/WORK-INDENT43 ಅಂದಾಜು ಮೊತ್ತ ರೂ19.80 ಲಕ್ಷಗಳು, DME/2025-26/OW/WORK-INDENT344 ಅಂದಾಜು ಮೊತ್ತ ರೂ30.00 ಲಕ್ಷಗಳು, DME/2025-26/OW/WORK-INDENT45 ಅಂದಾಜು ಮೊತ್ತ ರೂ20.00 ಲಕ್ಷಗಳು, DME/2025-26/OW/WORK-INDENT46 ಅಂದಾಜು ಮೊತ್ತ ರೂ.69.69 ಲಕ್ಷಗಳು , DME/2025-26/OW/WORK-INDENT47 ಅಂದಾಜು ಮೊತ್ತ ರೂ18.80 ಲಕ್ಷಗಳು, ದಿನಾಂಕ 12.11.2025 ರಿಂದ 25.11.2025ರ ಒಳಗೆ ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ. ಹೆಚ್ಚಿನ ವಿವರಗಳನ್ನು ವೆಬ್ ಸೈಟ್ www.bmcrc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/- ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/666/ಕೆಎಸ್ಎಂಸಿಎ/2025-26

ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ,
ಕೃ.ಭಾ.ಜ.ನಿ.ನಿ., ಆ.ಬ.ದಂ.ಕಾ. ವಿಭಾಗ, ಹುನಗುಂದ - 587 118.
ದೂರವಾಣಿ : 08351-261110. ಇಮೇಲ್ : eearbcdivn@gmail.com
ಸಂಖ್ಯೆ : ಕೃ.ಭಾ.ಜ.ನಿ.ನಿ./ಎ.ಆರ್.ಬಿ.ಸಿ.-ವಿ./ಟಿ.ಎನ್.ಡಿ./2025-26/752
ದಿನಾಂಕ : 17-11-2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ನಿ., ಬೆಂಗಳೂರು / ಆಲಮಟ್ಟಿ ಇವರ ಪರವಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ., ಆ.ಬ.ದಂ.ಕಾ. ವಿಭಾಗ, ಹುನಗುಂದ, ಈ ವಿಭಾಗದಡಿಯ ರಾಮಥಾಳ ಮರೋಳ ಏತ ನೀರಾವರಿ ಒಂದನೇ ಹಂತ ಹಾಗೂ ಎರಡನೇ ಹಂತದ ಪಂಪ್ ಹೌಸ್ ರಿಪೇರಿ ಕಾಮಗಾರಿಗಳ ಇಂಡೆಂಟ್ ಸಂಖ್ಯೆ : 1554-ಕರೆ-4, 1550-ಕರೆ-5 ಸಂಬಂಧಿಸಿದ ಒಟ್ಟು 02 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಏಕ-ಲಕೋಟೆ ಮಾದರಿಯಲ್ಲಿ ಕನಿಷ್ಟ ಮೊತ್ತ : ರೂ. 11.84 ರಿಂದ ಗರಿಷ್ಟ 22.26 ಲಕ್ಷಗಳ ಹಾಗೂ ಒಟ್ಟು 03 ಕಾಮಗಾರಿಗಳ ಇಂಡೆಂಟ್ ಸಂಖ್ಯೆ : 1553-ಕರೆ-4, ಸಂಖ್ಯೆ : 1666-ಕರೆ-3 ಹಾಗೂ 2025 - 26ನೇ ಸಾಲಿನ ಕಛೇರಿ ನಿರ್ವಹಣೆ ಕಾಮಗಾರಿ (Service Tender) ಇಂಡೆಂಟ್ ಸಂಖ್ಯೆ : SE0231 ಸಂಬಂಧಿಸಿದಂತೆ ದ್ವಿ-ಲಕೋಟೆ ಮಾದರಿಯಲ್ಲಿ ಕನಿಷ್ಟ ಮೊತ್ತ : ರೂ. 32.02 ರಿಂದ ಗರಿಷ್ಟ 93.03 ಲಕ್ಷಗಳ ಶೇಕಡಾವಾರು ಆಧಾರದ ಮೇಲೆ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ನೊಂದಾಯಿತ ಕೆ.ಪಿ.ಡಬ್ಲ್ಯೂ.ಡಿ ಹಾಗೂ ಅರ್ಹ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದ್ದು,

ದಿನಾಂಕ : 17-11-2025 ರಿಂದ 25-11-2025 ರ ಸಂಜೆ 5.30 ಗಂಟೆವರೆಗೆ ಟೆಂಡರ್ ಬಿಡ್‌ನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಬಿಡ್ ತೆರೆಯುವ ದಿನಾಂಕ : 27-11-2025 ರ ಬೆಳಿಗ್ಗೆ 11.30 ಘಂಟೆಗೆ ಹಾಗೂ ದ್ವಿ-ಲಕೋಟೆ ಕಾಮಗಾರಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ : 29-11-2025 ರ ಬೆಳಿಗ್ಗೆ 11.30 ಘಂಟೆಗೆ ತೆರೆಯಲಾಗುವುದು.

ವಿವರವಾದ ಟೆಂಡರ್ ಪ್ರಕಟಣೆ, ಇ.ಎಂ.ಡಿ. ಕಾಮಗಾರಿಗಳ ವಿವರಗಳನ್ನು **www.kppp.kar.nic.in** ವೆಬ್‌ಸೈಟ್ ಮೂಲಕ ಅಥವಾ ಈ ಕೆಳಗಿನ ವಿಭಾಗ ಕಚೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಕೃ.ಭಾ.ಜ.ನಿ.ನಿ., ಆ.ಬ.ದಂ.ಕಾ. ವಿಭಾಗ, ಹುನಗುಂದ.
ಡಿಐಪಿಆರ್/ಬಾಗಲಕೋಟ/399/ಮಣಿಪಾಲ್/2025-26

ಸಂಪುಟ: ನಾಯಕರು ಮೌನ

← ಮೊದಲಪುಟದಿಂದ

ಸ್ಪಷ್ಟನೆಗಾಗಿ ಮಾತ್ರ ಭೇಟಿ: ಬಿಹಾರ ಚುನಾವಣೆಯ ಬಳಿಕ ಹೈಕಮಾಂಡ್ ಯಾವುದೇ ರೀತಿಯ ರಿಸ್ಕ್ ತೆಗೆದುಕೊಳ್ಳಲು ಸಿದ್ಧವಿಲ್ಲ. ಆದ್ದರಿಂದ ರಾಜ್ಯ ಸರಕಾರದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆ ಬೇಡ. ಯಥಾಸ್ಥಿತಿ ಕಾಪಾಡಿಕೊಂಡು ಹೋಗುವಂತೆ ಸೂಚನೆ ನೀಡಿದ್ದಾರೆ. ಇದೇ ಸೂಚನೆಯನ್ನು ಡಿ.ಕೆ.ಶಿವಕುಮಾರ್ ಅವರಿಗೂ ರಾಹುಲ್ ಗಾಂಧಿ ಸುರ್ಜೇವಾಲ, ವೇಣು ಗೋಪಾಲ್ ಮೂಲಕ ರವಾನಿಸಿದ್ದಾರೆ.

ಹೈಕಮಾಂಡ್‌ನ ಈ ತೀರ್ಮಾನವನ್ನು ಅನಿವಾರ್ಯವಾಗಿ ಡಿ.ಕೆ ಒಪ್ಪಿಕೊಳ್ಳಬೇಕಾಗಿದೆ. ಆದರೂ ರಾಹುಲ್ ಗಾಂಧಿ ಭೇಟಿಗೆ ಪ್ರಯತ್ನಿಸುತ್ತಿರುವುದು 'ಸ್ಪಷ್ಟನೆ' ಪಡೆಯುವುದಕ್ಕೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ರಾಹುಲ್ ಗಾಂಧಿ ಅವರಿಂದ ಭೇಟಿಗೆ ಸಮಯ ನಿಗದಿಯಾದ ಬಳಿಕವೇ ದೆಹಲಿಗೆ ತೆರಳಲು ತೀರ್ಮಾನಿಸಿದ್ದಾರೆ. ಈ ನಡುವೆ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಕಾವೇರಿ ನೀರು ನಿರ್ವಹಣಾ ಮಂಡಳಿಯ ಸಭೆಯ ನೆಪದಲ್ಲಿ ದೆಹಲಿಗೆ ತೆರಳುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ಆದರೆ ದೆಹಲಿಗೆ ತೆರಳುವ ಬಗ್ಗೆ ಯಾವುದೇ ಆಲೋಚನೆಯಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ನ್ಯಾಯಾಲಯದ ಆವರಣದಲ್ಲಿಯೇ ಕೊಲೆ ಯತ್ನ

ಅಥಣಿ: ಜಮೀನು ವಿವಾದದ ವಿಚಾರಣೆ ದಾವೆ ವೇಳೆ ನ್ಯಾಯಾಲಯದ ಆವರಣದಲ್ಲಿ ಕೋರ್ಟ್ ಕಲಾಪಕ್ಕೆ ಬಂದಿದ್ದ ಮಹಿಳೆಯ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ ಘಟನೆ ಮಂಗಳವಾರ ಸಾಯಂಕಾಲ ಜರುಗಿದೆ. ಈ ಘಟನೆಯಿಂದ ಕೆಲ ಹೊತ್ತು ಆತಂಕದ ಛಾಯೆ ಕಂಡು ಬಂತು. ಈ ಘಟನೆಯಲ್ಲಿ ಮಹಿಳೆಯ ತಲೆ ಹಾಗೂ ಎಡಗೈ ಗಂಬೀರವಾಗಿ ಗಾಯಗೊಂಡು ಅಥಣಿ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನೆರೆಯ ಮಹಾರಾಷ್ಟ್ರದಣ ಪುಣೆ ಮೂಲದ ಮೀನಾಕ್ಷಿ ರಾಮಚಂದ್ರ ಶಿಂಧೆ (45) ಹಲ್ಲೆಗೊಳಗಾದ ಮಹಿಳೆ ಎಂದು ಗುರುತಿಸಲಾಗಿದೆ. ಕೊಲೆಗೆ ಯತ್ನಿಸಿದ ಆರೋಪಿ ಬಾಳಾಸಾಹೇಬ (ಬಂಡು) ಶಿವಾಜಿ ಚವ್ಹಾಣ(31) ಅಥಣಿ ತಾಲೂಕಿನ ಖೋತನಟ್ಟಿ ಗ್ರಾಮದ ವ್ಯಕ್ತಿಯನ್ನು ಅಥಣಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಅಥಣಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆ ಮುಂದುವರಿಸಿದ್ದಾರೆ.

ಘಟನಾ ವಿವರ: ಅಥಣಿ ನ್ಯಾಯಾಲಯದ ಸಿವಿಲ್ ನ್ಯಾಯಾಲದಲ್ಲಿ ಕಲಾಪ ನಡೆಯುತ್ತಿದ್ದ ವೇಳೆ ಹಾಜರಾಗಲು ಮೀನಾಕ್ಷಿ ರಾಮಚಂದ್ರ ಶಿಂಧೆ ಅವರ ನ್ಯಾಯಾಲಯದ ಆವರಣ ಪ್ರವೇಶಿಸುತ್ತಿದ್ದಂತೆ ಹಿಂಬದಿಂದ ಮಾರಕಾಸ್ತ್ರ ಹಿಡಿದು ಬರುತ್ತಿದ್ದ ಬಂದು ಚೌಹಾಣ ಆತನನ್ನು ಕಂಡು ಮೀನಾಕ್ಷಿ ಓಡಲು ಆರಂಭಿಸಿದ್ದಾಳೆ.

ಕಾರ್ಯಕರ್ತನಿಗೆ ಶಾಸಕ ರವಿಶಂಕರ್ ಕಪಾಳಮೋಕ್ಷ

ಮೈಸೂರು: ಅಭಿವೃದ್ಧಿ ಯೋಜನೆ ಕಾಮಗಾರಿಯೊಂದಕ್ಕೆ ಚಾಲನೆ ನೀಡುವ ವೇಳೆ ಕೆ.ಆರ್.ನಗರ ಶಾಸಕ ರವಿಶಂಕರ್ ಅವರು ಕಾರ್ತಕರ್ತ ನೊಬ್ಬನಿಗೆ ಕಪಾಳಮೋಕ್ಷ ಮಾಡಿದರು ಎಂದು ಹೇಳಲಾಗಿದೆ.ಈ ಕುರಿತಾದ ವಿಡಿಯೊ ವೊಂದು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದು, ಸಾರ್ವಜನಿಕರ ನಡುವೆ ಚರ್ಚೆಗೆ ಗ್ರಾಸವಾಗಿದೆ. ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕಿನ ದೊಡ್ಡೇಕೊಪ್ಪಲು ಗ್ರಾಮದಲ್ಲಿ ಘಟನೆ ನಡೆದಿದೆ ಎನ್ನಲಾಗಿದ್ದು, ಶಾಸಕ ರವಿಶಂಕರ್ ಅವರು, ತಮ್ಮ ಪಕ್ಷದ ಕಾರ್ಯಕರ್ತ ಮಹದೇವು ಎಂಬ ವ್ಯಕ್ತಿಗೆ ಹೊಡೆದರು ಎಂದು ಹೇಳಲಾಗಿದೆ.ಗ್ರಾಮಕ್ಕೆ ಡೈರಿ ಕಟ್ಟಡ ಕಟ್ಟಿಸಿಕೊಡಿ ಎಂದು ಮಹದೇವು ಏರಿದ ದನಿಯಲ್ಲಿ ಮಾತನಾಡಿದ ವೇಳೆ ಕುಪಿತಗೊಂಡ ಶಾಸಕ ರವಿಶಂಕರ್, ಈ ವೇಳೆ ಕಪಾಲಮೋಕ್ಷ ಮಾಡಿದರು ಎನ್ನಲಾಗಿದೆ. ಆದರೆ, ವೈರಲ್ ಆಗಿರುವ ವಿಡಿಯೋದಲ್ಲಿ ರವಿಶಂಕರ್ ಅವರು ಕೈ ಮುಂದೆ ಚಾಚಿದಂತೆ ಕಂಡುಬಂದರೂ ಕಪಾಳಮೋಕ್ಷ ಮಾಡಿರುವುದು ಸ್ಪಷ್ಟವಾಗಿ ಗೋಚರಿಸುತ್ತಿಲ್ಲ. ಆದರೆ, ಸದರಿ ವಿಡಿಯೊವನ್ನು ಕೆಲವರು ವೈರಲ್ ಮಾಡಿ ಹಲ್ಲೆ ಎಂದು ಬಿಂಬಿಸಿದ್ದಾರೆ ಎಂಬ ಮಾತುಗಳೂ ಕೂಡ ಕೇಳಿಬರತೊಡಗಿವೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ (ಇ-ಪ್ರೋಕ್ಯೂರಮೆಂಟ್ ಸೆಲ್) ಕಛೇರಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಕೇಂದ್ರ ಕಚೇರಿ ಆವರಣ, ಹುಬ್ಬಳ್ಳಿ-580020. ಇ-ಮೇಲ್: swmprocurementcell2022@gmail.com ಪೋ: 0836-2213888

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆಯ ಸೇವೆಯನ್ನು ಪಡೆಯಲು ಅರ್ಹ ನೋಂದಾಯಿತ ಏಜೆನ್ಸಿಗಳಿಂದ ಕೆ.ಟಿ.ಪಿ.ಪಿ ಕಾಯ್ದೆ 1999 ಹಾಗೂ ನಿಯಮಗಳು 2000 ರನ್ವಯ ಟೆಂಡರನ್ನು ಆಹ್ವಾನಿಸಿದೆ.

ಕ್ರ. ಸಂ	ಟೆಂಡರ್ ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳು)	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2025-26/ SE6677	198.00 Lakhs	2,97,000/-	05.12.2025 ಸಮಯ ಸಂಜೆ 4.30 ಘಂಟೆ	08.12.2025 ಸಮಯ ಬೆಳಿಗ್ಗೆ 10.30 ಘಂಟೆ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಹೆಚ್ಚಿನ ಮಾಹಿತಿಯನ್ನು ದಿನಾಂಕ: **19.11.2025** ರಿಂದ **www.kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಪಾಲಿಕೆಯ ಪಶು ವೈದ್ಯಾಧಿಕಾರಿಗಳನ್ನು ಕಚೇರಿಯ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಕಾರ್ಯನಿರ್ವಾಹಕ ಅಭಿಯಂತರರು (ಇ-ಪ್ರೋ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
ವಾಸಾಸಂಇ/ಧಾ/ದಿಶಾ/893/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020
ಸಂ.: ಬೆಂಅಪ್ರಾ/ನಯೋಸ/CLU-372/3127/2025-26 ದಿನಾಂಕ: 18.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ಕೈಗಾರಿಕೆ (ಹೈಟೆಕ್)** ವಲಯದಿಂದ **ವಾಣಿಜ್ಯ ಮತ್ತು ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀಮತಿ ಜಯಮ್ಮ, ಮಾರಯ್ಯ @ ಮಾರೇಗೌಡ, ಎಲ್.ಶಿವಲಿಂಗಯ್ಯ ಹರೀಶ್.ಎಸ್. ನಂ. 8073, ಆಲ್ಡರ್ ಬ್ಲಾಕ್, ಶೋಭಾ ಫಾರೆಸ್ಟ್ ವ್ಯೂ ಅಪಾರ್ಟ್‌ಮೆಂಟ್ ವಾಜರಹಳ್ಳಿ, 100 ಅಡಿ ರಸ್ತೆ ಬೆಂಗಳೂರು-560062	ದಕ್ಷಿಣ	ಬೇಗೂರು	ದೊಡ್ಡ ತೋಗೂರು	152/2 152/3 152/6(P)	0-9.25 0-5.25 0-25	ಕೈಗಾರಿಕೆ (ಹೈಟೆಕ್) ವಲಯ	ವಾಣಿಜ್ಯ
				ಒಟ್ಟು	0-39.50		
				152/1 152/2 152/3 152/6(P)	0-18 0-8.75 0-4.75 0-20	ಕೈಗಾರಿಕೆ (ಹೈಟೆಕ್) ವಲಯ	ವಸತಿ
				ಒಟ್ಟು	1-11.50		
				ಒಟ್ಟು ಸೇರಿ	2-11		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಗಳನ್ನು ಕೈಗಾರಿಕಾ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಪರಿಸರದಲ್ಲಿ **ವಾಣಿಜ್ಯ** ಹಾಗೂ **ವಸತಿ** ಉಪಯೋಗಕ್ಕೆ ಅತಿ ಹೆಚ್ಚು ಬೇಡಿಕೆ ಇದ್ದು. ಸದರಿ ಪ್ರದೇಶವನ್ನು ವಾಣಿಜ್ಯ ಹಾಗೂ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗವಕಾಶ ಸೃಷ್ಟಿಸಿದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು **'ಕೈಗಾರಿಕೆ (ಹೈಟೆಕ್) ವಲಯ'** ದಿಂದ **'ವಾಣಿಜ್ಯ & ವಸತಿ ವಲಯಕ್ಕೆ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಜಗತ್ತಿನಾದ್ಯಂತ ಟ್ವಿಟರ್, ಚ್ಯಾಟ್ ಜಿಪಿಟಿ ಸ್ಥಗಿತ

← ಮೊದಲಪುಟದಿಂದ

ಕೂಡಲೇ ಎಚ್ಚೆತ್ತುಕೊಂಡು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲಾಯಿತು. ಕ್ಲೌಡ್‌ಫ್ಲೇರ್‌ನಲ್ಲಿ ಈ ಸಮಸ್ಯೆ ಆಗಿದ್ದೇಕೆ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

ಕ್ಲೌಡ್‌ಫ್ಲೇರ್ ಅಂದರೆ?: ಕ್ಲೌಡ್‌ಫ್ಲೇರ್ ಒಂದು ವೆಬ್ ಸೈಟ್. ಇದು ಟ್ವಿಟರ್, ಚ್ಯಾಟ್ ಜಿಪಿಟಿಯಂತಹ ತಾಣಗಳು ವೇಗವಾಗಿ ಕಾರ್ಯಾಚರಿಸಲು, ಸುಗಮವಾಗಿ ಮಾಹಿತಿಗಳನ್ನು ಅಪ್ಲೋಡ್ ಮಾಡಲು ನೆರವು ನೀಡುತ್ತದೆ. ಈ ತಾಣಗಳ ಐಪಿ ವಿಳಾಸ (ಹೆಸರು)ಗಳನ್ನು ನಿರ್ವಹಿಸುತ್ತದೆ. ಈ ತಾಣಗಳ ಮೇಲೆ ತಾಂತ್ರಿಕ ದಾಳಿಗಳಾಗದಂತೆ ನೆರವು ನೀಡುತ್ತದೆ. ಇದರ ಸಂವಹನ ವ್ಯವಸ್ಥೆಗೆ ಹಾನಿಯಾಗಿದ್ದು ಇದನ್ನು ಅವಲಂಬಿಸಿದ್ದ ತಾಣಗಳಿಗೂ ತೊಂದರೆಯಾಯಿತು.

ಸೌದಿಯಲ್ಲಿ ದುರಂತ: ಬೀದರ್ ವೃದ್ಧೆ ಸಾವು

ಬೀದರ್: ಸೌದಿ ಅರೇಬಿಯಾದಲ್ಲಿ ಬಸ್ ಮತ್ತು ಡೀಸೆಲ್ ಟ್ಯಾಂಕರ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಬೀದರ್ ಮೂಲದ ವೃದ್ಧೆಯೊಬ್ಬರು ಸಾವನ್ನಪ್ಪಿದ್ದಾರೆ. ಮೃತ ವೃದ್ಧೆಯನ್ನು ಬೀದರ್ ಮೂಲದ ರಹಮತ್ ಬಿ (80) ಎಂದು ತಿಳಿಯಾಗಿದೆ. ಬೀದರ್ ನಗರದ ಮೈಲೂರಿನ ಸಿಎಂಸಿ ಕಾಲೋನಿಯ ನಿವಾಸಿಯಾಗಿರುವ ಇವರು ನ.9ರಂದು ಬೀದರ್‌ನಿಂದ ಮೆಕ್ಕಾ ಹಾಗೂ ಮದೀನಾಗೆ ತೆರಳಿದ್ದರು. ಬಸ್ ಅಪಘಾತದಲ್ಲಿ ವೃದ್ಧೆ ಸಜೀವ ದಹನವಾಗಿದ್ದು, ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ.

ಸಮಾಚಾರ ಸಣ್ಣದಲ್ಲ

ಕಿರುಕುಳಕ್ಕೆ ಜೆಸ್ಕಾಂ ಸಿಬ್ಬಂದಿ ಆತ್ಮಹತ್ಯೆ

ಕಲಬುರಗಿ: ಹಿರಿಯ ಅಧಿಕಾರಿಗಳ ಕಿರುಕುಳಕ್ಕೆ ಬೇಸತ್ತು ಜೆಸ್ಕಾಂ ಮೆಕ್ಯಾನಿಕಲ್ ಸಿಬ್ಬಂದಿ ಪರಮೇಶ್ವರ್ ತೊಬಚಿ (52) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾಲೂಕಿನ ಬಸವಪಟ್ಟಣದಲ್ಲಿ ನೇಣಿಗೆ ಶರಣಾಗಿದ್ದಾರೆ. ಜೆಸ್ಕಾಂನ ಜೆಇ ಸೇರಿ ಹಿರಿಯ ಅಧಿಕಾರಿಗಳು ಮೆಕ್ಯಾನಿಕಲ್ ಸಿಬಂದಿ ಪರಮೇಶ್ವರ್‌ಗೆ ಕಿರುಕುಳ ಕೊಟ್ಟಿದ್ದರು ಎಂದು ಮೃತನ ಕುಟುಂಬಸ್ಥರು ಆರೋಪಿಸಿದ್ದಾರೆ. ಫರಹತಾಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಗ್ಯಾಸ್ ಟ್ಯಾಂಕರ್ ಪಲ್ಟಿ: ಸಂಚಾರ ಬಂದ್

ಕಾರವಾರ: ಚಾಲಕನ ನಿಯಂತ್ರಣ ತಪ್ಪಿ ಗ್ಯಾಸ್ ಟ್ಯಾಂಕರ್ ಪಲ್ಟಿಯಾದ ಪರಿಣಾಮ ಅನಿಲ ಸೋರಿಕೆಯಾದ ಘಟನೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲೂಕಿನ ರಾಷ್ಟ್ರೀಯ ಹೆದ್ದಾರಿ-52ರ ಕಂಚಿನ ಬಾಗಿಲು ಬಳಿ ನಡೆದಿದೆ. ಅಪಘಾತದಲ್ಲಿ ಚಾಲಕನಿಗೆ ಗಂಭೀರ ಗಾಯವಾಗಿದೆ. ಗುಜರಾತ್‌ನಿಂದ ಉಡುಪಿ ಕಡೆಗೆ ಹೋಗುತಿದ್ದ ಗ್ಯಾಸ್ ಟ್ಯಾಂಕರ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ಟ್ಯಾಂಕರ್‌ನಲ್ಲಿದ್ದ ಗ್ಯಾಸ್ ಲೀಕ್ ಆಗಿದೆ. ಗಂಭೀರ ಗಾಯಗೊಂಡ ಗ್ಯಾಸ್ ಟ್ಯಾಂಕರ್ ಚಾಲಕ ಅರುಣ್ ಶೇಖ್ (57)ನನ್ನು ಉಡುಪಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಲ್ಲದೇ ಗ್ಯಾಸ್ ಟ್ಯಾಂಕರ್ ನಲ್ಲಿ ಎಥೆನಾಲ್ ಸೋರಿಕೆಯಾದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 52ರ ಸಂಚಾರ ಬಂದ್ ಮಾಡಿದ್ದು, ಅಂಕೋಲ ದಿಂದ ಮಾದನಗೇರಿ ಹೆದ್ದಾರಿ ಮೂಲಕ ಮಾರ್ಗ ಬದಲು ಮಾಡಲಾಗಿದೆ. ಗ್ಯಾಸ್ ಸೋರಿಕೆಯನ್ನು ತಡೆಯಲು ಅಗ್ನಿಶಾಮಕ ಸಿಬ್ಬಂದಿ ಕ್ರಮ ಕೈಗೊಂಡಿದ್ದಾರೆ. ಘಟನೆ ಸಂಬಂಧ ಅಂಕೋಲ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಮಗುವಿನ ಜತೆ ನದಿಗೆ ಹಾರಿ ತಾಯಿ ಆತ್ಮಹತ್ಯೆ

ಹಾಸನ: ಪತಿ ಹಾಗೂ ಅತ್ತೆಯಿಂದ ಕಿರುಕುಳಕ್ಕೆ ಮನನೊಂದು ಗೃಹಿಣಿಯೊಬ್ಬರು ಮಗುವಿನೊಂದಿಗೆ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ರಾಮನಾಥಪುರ ಬಳಿ ನಡೆದಿದೆ. ಮಹಾದೇವಿ (29) ಆತ್ಮಹತ್ಯೆಗೆ ಶರಣಾದ ಮಹಿಳೆ. ಮಹಾದೇವಿ ಮೂರು ವರ್ಷಗಳ ಹಿಂದೆ ಅರಕಲಗೂಡು ತಾಲೂಕಿನ ಸೀಬಿಹಳ್ಳಿ ಗ್ರಾಮದ ಕುಮಾರ್ ಜತೆ ಎರಡನೇ ವಿವಾಹವಾಗಿದ್ದರು. ಮೊದಲ ಪತಿಯಿಂದ ವಿಚ್ಛೇದನ ಪಡೆದಿದ್ದ ಸಾಲಿಗ್ರಾಮ ತಾಲೂಕಿನ ಕರ್ಪೂರವಳ್ಳಿ ಗ್ರಾಮದ ಮಹಾದೇವಿ ಎರಡನೇ ಮದುವೆ ಸಂದರ್ಭ ಕುಟುಂಬಸ್ಥರು ವರದಕ್ಷಿಣೆ ರೂಪದಲ್ಲಿ 100 ಗ್ರಾಂ ಚಿನ್ನ ನೀಡಿದ್ದರು. ಆದರೆ ಇತ್ತೀಚಿಗೆ ಪತ್ನಿ ಮೇಲೆ ಅನುಮಾನ ಪಡುತ್ತಿದ್ದ ಕುಮಾರ್, ಅವಾಚ್ಯ ಶಬ್ದಗಳಿಂದ ನಿಂದಿಸಿ ಕಿರುಕುಳ ನೀಡುತ್ತಿದ್ದ. ಇದರಿಂದ ಮನನೊಂದ ಮಹಾದೇವಿ ಮಗುವಿನ ಜತೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಉಸಿರುಗಟ್ಟಿ ಮೂವರು ಯುವಕರು ದುರ್ಮರಣ

ಬೆಳಗಾವಿ: ಮನೆಯಲ್ಲಿ ಹೊಗೆ ತುಂಬಿ ಉಸಿರುಗಟ್ಟಿ ಮೂವರು ಯುವಕರು ಮೃತಪಟ್ಟಿದ್ದು ಒಬ್ಬ ಗಂಭೀರವಾಗಿ ಗಾಯಗೊಂಡ ದಾರುಣ ಘಟನೆ ಮಂಗಳವಾರ ಇಲ್ಲಿಯ ಅಮನ್ ನಗರದಲ್ಲಿ ನಡೆದಿದೆ. ರಿಹಾನ ಮತ್ತೆ (22), ಸರಫರಾಜ ಹರಪ್ಪನಹಳ್ಳಿ (22), ಮೊಯಿನ್ ನಲಬಂದ (23) ಮೃತಪಟ್ಟ ಯುವಕರು. ಗಾಯಗೊಂಡ ಶಾನವಾಜ್ (19) ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಚಳಿ ಹೆಚ್ಚಾಗಿರುವುದರಿಂದ ಸೋಮವಾರ ರಾತ್ರಿ ಮನೆಯಲ್ಲಿ ಕಾಯಿಸುವ ಉಪಕರಣ ಉಪಯೋಗಿಸಲಾಗಿತ್ತು. ಇದರಿಂದ ಹೊಗೆ ಆವರಿಸಿತ್ತು ಎನ್ನಲಾಗಿದೆ. ಹೀಗಾಗಿ ಈ ಅವಘಡ ಸಂಭವಿಸಿದೆ ಎಂದು ಪ್ರಾಥಮಿಕ ವರದಿಯೊಂದು ತಿಳಿಸಿದೆ.





ವಿಶ್ವವಾಣಿ ಕ್ಲಬ್ ಹೌಸ್
19.11.2025
ಸಂಜೆ: 06.55 ರಿಂದ 08.05 ರವರೆಗೆ
ಬುಧವಾರದ ಅತಿಥಿ

ಅಂಜಲಿ ರಾಮಣ್ಣ
ವಿಷಯ
ಉದ್ಯೋಗಸ್ಥ ಮಹಿಳೆ ಮತ್ತು ಕಾನೂನು
vishwavani.news

ವಿರಾಮ
ಪ್ರತಿ ಭಾನುವಾರ

‘ಬೆಂಗಳೂರು ಟೆಕ್ ಸಮ್ಮಿಟ್’ 28ನೇ ಆವೃತ್ತಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅಭಿಮತ

ದೇಶದ ವಿಶ್ವಾಸಾರ್ಹ ಹೂಡಿಕೆಯ ತಾಣ ಕರ್ನಾಟಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸರಕಾರದ ಸ್ಪಷ್ಟ ನೀತಿಗಳು, ಸುಗಮ ಅನುಮತಿಗಳು, ಕೌಶಲ, ಮೂಲಸೌಕರ್ಯ ಹಾಗೂ ಪೂರಕ ವಾತಾವರಣವು ಕರ್ನಾಟಕವನ್ನು ಭಾರತದ ಅತ್ಯಂತ ವಿಶ್ವಾಸಾರ್ಹ ಹೂಡಿಕೆ ತಾಣವಾಗಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ವತಿಯಿಂದ ಆಯೋಜಿಸಲಾದ ‘ಬೆಂಗಳೂರು ಟೆಕ್ ಸಮ್ಮಿಟ್’ 28ನೇ ಆವೃತ್ತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಶೃಂಗಸಭೆಯಲ್ಲಿ ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ 2025-2030, ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-2030, ಮತ್ತು ಸ್ಟಾರ್ಟ್‌ಅಪ್ ನೀತಿ 2025-2030 ಗಳಂತಹ ಮೂರು ಪ್ರಮುಖ ನೀತಿಗಳನ್ನು ರಚಿಸುವ ಮೂಲಕ ಐತಿಹಾಸಿಕ ಹೆಜ್ಜೆ ಇಡಲಾಗಿದೆ. ದತ್ತಾಂಶ ಚಾಲಿತ ಹಾಗೂ ಆಧುನಿಕ ತಂತ್ರಜ್ಞಾನಕ್ಕೆ ಪೂರಕವಾದ ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿಯಿಂದ, ರಾಜ್ಯವನ್ನು ನಾವೀನ್ಯತೆ ಮತ್ತು ಡೀಪ್ ಟೆಕ್‌ಗಳಿಗೆ ಜಾಗತಿಕ ತಾಣವಾಗಿಸುವ ಗುರಿಯನ್ನು ಸರಕಾರ ಹೊಂದಿದೆ ಎಂದರು.

2034ರ ವೇಳೆಗೆ ಕರ್ನಾಟಕವನ್ನು ಭಾರತದ ಪ್ರಮುಖ ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರವಾಗಿ ಪರಿವರ್ತಿಸುವ ನಮ್ಮ ಗುರಿಗೆ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-30 ಸಹಕಾರಿಯಾಗಲಿದೆ. ಹೊಸ ಸ್ಟಾರ್ಟ್‌ಅಪ್ ನೀತಿಯಿಂದ ಮುಂದಿನ ಐದು ವರ್ಷಗಳಲ್ಲಿ ಬಂಡವಾಳ ನೆರವು, ಮಾರುಕಟ್ಟೆ ಅವಕಾಶ, ಮೂಲಸೌಲಭ್ಯ, ಕೌಶಲಾಭಿವೃದ್ಧಿಯಂತಹ ಕ್ರಮಗಳ ಮೂಲಕ 25,000 ಸ್ಟಾರ್ಟ್‌ಅಪ್‌ಗಳ ಸ್ಥಾಪನೆಗೆ ನೆರವಾಗುವ ಗುರಿಯನ್ನು ಸರಕಾರ ಹೊಂದಿದೆ ಎಂದು ತಿಳಿಸಿದರು.

ಕರ್ನಾಟಕವು ಜ್ಞಾನಕಾಶಿ ಎಂಬುದನ್ನು ಹೆಮ್ಮೆಯಿಂದ ಹೇಳುತ್ತೇನೆ. 85 ವಿಶ್ವವಿದ್ಯಾಲಯಗಳು, 243 ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಸುಮಾರು 1,800 ಐಟಿಐಗಳಿಗೆ ಕರ್ನಾಟಕ ನೆಲೆಯಾಗಿದೆ. ರಾಜ್ಯದ ನಿರುದ್ಯೋಗ ಪ್ರಮಾಣ ಶೇ.4.3 ರಷ್ಟು ಮಾತ್ರ ಇದ್ದು, ಇದು ರಾಜ್ಯದ ಸಮರ್ಥ ಉತ್ಪಾದಕತೆ ಮತ್ತು ಉದ್ಯೋಗಾವಕಾಶಗಳನ್ನು ಎತ್ತಿ ತೋರಿಸುತ್ತದೆ. ಉದ್ಯಮಶೀಲತಾ ಶಕ್ತಿಗೆ ಬೆಂಗಳೂರು ಅನ್ವರ್ಥವಾಗಿದೆ. ಕರ್ನಾಟಕವು 16,000ಕ್ಕೂ ಹೆಚ್ಚು ನವೋದ್ಯಮಗಳಿಗೆ ನೆಲೆಯಾಗಿದೆ ಮತ್ತು ಭಾರತದ ಒಟ್ಟು ನವೋದ್ಯಮ ನಿಧಿಗೆ ಸುಮಾರು ಶೇ.47 ರಷ್ಟನ್ನು ರಾಜ್ಯವು ಕೊಡುಗೆ ನೀಡಿದೆ ಎಂಬುದನ್ನು ಹೆಮ್ಮೆಯಿಂದ ಹೇಳುತ್ತೇನೆ ಎಂದು ತಿಳಿಸಿದರು.

ನೀತಿ -ನಾವೀನ್ಯತೆಯನ್ನು ರೂಪಿಸುವಲ್ಲಿ ಕರ್ನಾಟಕ ಯಾವಾಗಲೂ ಭಾರತವನ್ನು ಮುನ್ನಡೆಸಿದೆ. ನಾವು 1997 ರಲ್ಲಿಯೇ ಭಾರತದ ಮೊದಲ ತಂತ್ರಜ್ಞಾನ ನೀತಿಯನ್ನು ರೂಪಿಸಿದ್ದೇವೆ ಮತ್ತು ಹೊಸ ನೀತಿಗಳೊಂದಿಗೆ ಈ ನಾಯಕತ್ವವನ್ನು ಮುಂದುವರಿಸುತ್ತಿದ್ದೇವೆ. ಸರ್ಕಾರದ ದೂರದೃಷ್ಟಿಯ ಆಡಳಿತದ ಪರಿಣಾಮವಾಗಿ, ಜಾಗತಿಕ ತಂತ್ರಜ್ಞಾನದ ಕ್ಷೇತ್ರದಲ್ಲಿ ಕರ್ನಾಟಕ ಸಕ್ರಿಯವಾಗಿ ಪಾಲ್ಗೊಂಡಿದೆ.

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ವತಿಯಿಂದ ಆಯೋಜಿಸಲಾದ ‘ಬೆಂಗಳೂರು ಟೆಕ್ ಸಮ್ಮಿಟ್’ 28ನೇ ಆವೃತ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿ ಕಿರು ಹೊತ್ತಗೆಯನ್ನು ಬಿಡುಗಡೆ ಮಾಡಿದರು.

ತಂತ್ರಜ್ಞಾನ, ಪ್ರತಿಭೆ ಬೆಂಗಳೂರಿನ ಆಧಾರಸ್ತಂಭ

ದೇಶದ ಐಟಿ ರಫ್ತಿನಲ್ಲಿ ಶೇ.40 ರಿಂದ 45 ರಷ್ಟು ಪಾಲು ಬೆಂಗಳೂರಿನದ್ದಾಗಿದೆ. ನಮ್ಮಲ್ಲಿ ಹೆಚ್ಚು ಎಂಜಿನಿಯರಿಂಗ್, ಪ್ಯಾರಾ ಮೆಡಿಕಲ್, ಮೆಡಿಕಲ್ ಕಾಲೇಜುಗಳಿವೆ. ಇಲ್ಲಿರುವ ಮಾನವ ಸಂಪನ್ಮೂಲ ಬೇರೆ ಎಲ್ಲೂ ಇಲ್ಲ. ನಮ್ಮ ಸರಕಾರ ಅನ್ವೇಷಣೆ, ತಂತ್ರಜ್ಞಾನ, ಬಂಡವಾಳ ಹೂಡಿಕೆ, ಪ್ರತಿಭೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಾ ಬಂದಿದೆ. ರಾಜ್ಯದಲ್ಲಿ 1998ರಿಂದ ಈ ಐಟಿ ಸಮ್ಮೇಳನ ನಡೆದುಕೊಂಡು ಬರುತ್ತಿದ್ದು, ಈ ಸಮ್ಮೇಳನ ರಾಜ್ಯದ 28ನೇ ಐಟಿ ಕ್ಷೇತ್ರದ ಕಾರ್ಯ ಕ್ರಮವಾಗಿದೆ. ಬೆಂಗಳೂರು ಟೆಕ್ ಸಮಿಟ್ ಏಷ್ಯಾದ ಅತಿ ದೊಡ್ಡ ಟೆಕ್ ಸಮ್ಮೇಳನಗಳಲ್ಲಿ ಒಂದಾಗಿದೆ. ಇದರೊಂದಿಗೆ ಬೆಂಗಳೂರು ಜಾಗತಿಕ ಐಟಿ ರಾಜಧಾನಿಯಾಗುವತ್ತ ಸಾಗಲು ನೆರವಾಗಲಿದೆ. ಮೊದಲ ಬಾರಿಗೆ ಬೆಂಗಳೂರು ಅರಮನೆ ಮೈದಾನದಿಂದ ಇಂಟರ್ ನ್ಯಾಷನಲ್ ಎಕ್ಸಿಬಿಷನ್ ಸೆಂಟರ್‌ಗೆ ಸ್ಥಳಾಂತರವಾಗಿದೆ. ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಈ ಕೇಂದ್ರ ಆರಂಭಕ್ಕೆ ಅನುಮತಿ ನೀಡಿದ್ದೆ. ಈ ಸಮ್ಮೇಳನದಲ್ಲಿ 10 ಸಾವಿರ ನವೋದ್ಯಮಗಳು, 60 ಸಾವಿರ ಮಂದಿ ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

5 ವರ್ಷದಲ್ಲಿ 25 ಸಾವಿರ ಸ್ಟಾರ್ಟ್‌ಅಪ್

ರಾಜ್ಯ ಸರಕಾರದ ನವೋದ್ಯಮ ಸ್ನೇಹಿ ನೀತಿಗಳಿಂದ ಮುಂದಿನ ಐದು ವರ್ಷದಲ್ಲಿ ಕರ್ನಾಟಕದಲ್ಲಿ 25ಸಾವಿರಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಆರಂಭವಾಗುವ ಸಾಧ್ಯತೆಯಿದೆ ಎಂದು ಸಿಎಂ ಸಿದ್ದರಾಮಯ್ಯ ಘೋಷಿಸಿದರು.

ಬೆಂಗಳೂರು ಟೆಕ್ ಸಮ್ಮಿಟ್ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರಕಾರ ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ 2025-2030, ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-2030, ಮತ್ತು ಸ್ಟಾರ್ಟ್‌ಅಪ್ ನೀತಿ 2025-2030 ಗಳಂತಹ ಮೂರು ಪ್ರಮುಖ ನೀತಿಗಳನ್ನು ರಚಿಸುವ ಮೂಲಕ ಐತಿಹಾಸಿಕ ಹೆಜ್ಜೆ ಇಟ್ಟಿದೆ. ದತ್ತಾಂಶ ಚಾಲಿತ ಹಾಗೂ ಆಧುನಿಕ ತಂತ್ರಜ್ಞಾನಕ್ಕೆ ಪೂರಕವಾದ ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿಯಿಂದ, ರಾಜ್ಯವನ್ನು ನಾವೀನ್ಯತೆ ಮತ್ತು ಡೀಪ್ ಟೆಕ್‌ಗಳಿಗೆ ಜಾಗತಿಕ ತಾಣವಾಗಿಸುವ ಗುರಿ ಯನ್ನು ಸರಕಾರ ಹೊಂದಿದೆ ಎಂದರು. 2034ರ ವೇಳೆಗೆ ಕರ್ನಾಟಕವನ್ನು ಭಾರತದ ಪ್ರಮುಖ ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರವಾಗಿ ಪರಿವರ್ತಿಸುವ ನಮ್ಮ ಗುರಿಗೆ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-30 ಸಹಕಾರಿಯಾಗಲಿದೆ. ಹೊಸ ಸ್ಟಾರ್ಟ್‌ಅಪ್ ನೀತಿಯಿಂದ ಮುಂದಿನ ಐದು ವರ್ಷಗಳಲ್ಲಿ ಬಂಡವಾಳ ನೆರವು, ಮಾರು ಕಟ್ಟೆ ಅವಕಾಶ, ಮೂಲಸೌಲಭ್ಯ, ಕೌಶಲ್ಯಾಭಿವೃದ್ಧಿಯಂತಹ ಕ್ರಮಗಳ ಮೂಲಕ 25,000 ಸ್ಟಾರ್ಟ್‌ಅಪ್ ಸ್ಥಾಪನೆಗೆ ನೆರವಾಗುವ ಗುರಿಯನ್ನು ಸರಕಾರ ಹೊಂದಿದೆ ಎಂದು ಹೇಳಿದರು.

ಬಿಡದಿಯಲ್ಲಿ ನೂತನ ಐಟಿ ನಗರ ಸ್ಥಾಪನೆ: ಡಿಸಿಎಂ

ಬೆಂಗಳೂರು ದಕ್ಷಿಣದ ಬಿಡದಿಯಲ್ಲಿ ನೂತನ ಐಟಿ ನಗರ ನಿರ್ಮಾಣಕ್ಕೆ ಆಲೋಚಿಸಲಾಗಿದೆ. ಬೆಂಗಳೂರಿನಲ್ಲಿ ಬಿಲಿಯನ್ ಡಾಲರ್‌ಗಟ್ಟಲೆ ಬಂಡವಾಳ ಹೂಡಿಕೆಗೆ ನಾನಾ ದೇಶದ ನಾಯಕರುಗಳು ಮುಂದೆ ಬಂದಿದ್ದಾರೆ. ಕರ್ನಾಟಕದತ್ತ ಹೂಡಿಕೆದಾರರನ್ನು ಆಕರ್ಷಿಸುವ ಉದ್ದೇಶದಿಂದ ರಾಜ್ಯ ಸರಕಾರ ಅನಿವಾಸಿ ಭಾರತೀಯರಿಗೆ ಪ್ರತ್ಯೇಕ ನಿರ್ದೇಶನಾಲಯವನ್ನು ಆರಂಭಿಸುವುದಕ್ಕೆ ಚಿಂತನೆ ನಡೆಸಿದೆ ಎಂದು ಹೇಳಿದರು.

ವಿದೇಶಿ ಬಂಡವಾಳ ಹೂಡಿಕೆ, ಜಾಗತಿಕ ಸಹಭಾಗಿತ್ವ ಹಾಗೂ ಬಹುರಾಷ್ಟ್ರೀಯ ಹೂಡಿಕೆಗಳಲ್ಲಿ ಕರ್ನಾಟಕವು ದೇಶದ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ ಎಂದು ಹೇಳಿದರು.

ಕ್ವಾಂಟಮ್ ತಂತ್ರಜ್ಞಾನಕ್ಕೆ ಒತ್ತು ನೀಡಿದ ಮೊದಲ ರಾಜ್ಯ: ಡೀಪ್ ಸೈನ್ಸ್ ಮತ್ತು ಸುಧಾರಿತ ಎಂಜಿನಿಯರಿಂಗ್ ವ್ಯವಸ್ಥೆ ಒದಗಿಸಲು ರಾಜ್ಯ ಬದ್ಧವಾಗಿದ್ದು, ಎಐ, ಸೈಬರ್-ಭದ್ರತೆ, ದತ್ತಾಂಶ ವಿಜ್ಞಾನ, ಅನಿಮೇಷನ್ ಮತ್ತು ರೊಬೊಟಿಕ್ಸ್‌ನಲ್ಲಿ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕ್ವಾಂಟಮ್ ತಂತ್ರಜ್ಞಾನದ ಮಾರ್ಗಸೂಚಿಗಳನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ. ‘ಬಿಯಾಂಡ್ ಬೆಂಗಳೂರು’ ಉಪಕ್ರಮದ ಮೂಲಕ ತಂತ್ರಜ್ಞಾನ ಆರ್ಥಿಕತೆಯ ವಿಕೇಂದ್ರೀಕರಣಕ್ಕೆ ಮುಂದಾಗಿರುವ ನಮ್ಮ ಸರಕಾರ, ಮುಂದಿನ ಪೀಳಿಗೆಗಾಗಿ ಟೈರ್ 2 ನಗರಗಳನ್ನು ನಾವಿನ್ಯತೆಯ ಕ್ಲಸ್ಟರ್ ಗಳಾಗಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

200 ಎಕರೆಯಲ್ಲಿ ಸೆಮಿಕಂಡಕ್ಟರ್ ಪಾರ್ಕ್: ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾತನಾಡಿ, ಆಧುನಿಕ ಬಗೆಯ ಕೈಗಾರಿಕೋದ್ಯಮಗಳ ಮಹತ್ವವನ್ನು ಅರಿತಿರುವ ರಾಜ್ಯ ಸರಕಾರವು 200 ಎಕರೆ ಜಾಗದಲ್ಲಿ ಸೆಮಿ ಕಂಡಕ್ಟರ್ ಪಾರ್ಕ್ ಅಭಿವೃದ್ಧಿಪಡಿಸಲಿದೆ. ಇಲ್ಲಿ ಈ ತರಹದ ಕಂಪನಿಗಳಿಗೆ ಬೇಕಾಗುವ ಸಕಲ ಸೌಕರ್ಯಗಳನ್ನೂ ಕಲ್ಪಿಸಲಾಗುವುದು. ಇದು ದೇಶ ಮತ್ತು ರಾಜ್ಯ ಮಟ್ಟದಲ್ಲಿ ಸೆಮಿಕಂಡಕ್ಟರ್ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ರೀತಿಯ ನಾವೀನ್ಯತಾ ಕೇಂದ್ರವಾಗಿ ಕೆಲಸ ಮಾಡಲಿದೆ. ಮುಂಚೂಣಿ ತಂತ್ರಜ್ಞಾನ ಕಂಪನಿಗಳಿಂದ ಮತ್ತು ಪ್ರಮುಖ ಹೂಡಿಕೆದಾರರಿಂದ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಆದ್ಯತೆ ನೀಡಲಾಗಿದೆ. ಇಂತಹ ಹೂಡಿಕೆಯು ಕೈಗಾರಿಕೋದ್ಯಮದ ವಿವಿಧ ವಲಯಗಳಿಗೆ ಹರಿದು ಬರಬೇಕು ಎನ್ನುವುದು ಸರಕಾರದ ಗುರಿಯಾಗಿದೆ. ಇಂತಹ ವಲಯಗಳಲ್ಲಿ ಡ್ರೋನ್, ಸೆಮಿಕಂಡಕ್ಟರ್ ಸಾಧನಗಳು ಮತ್ತು ಸೌರ ವಿದ್ಯುತ್ ಎಲ್ಲವನ್ನೂ ಪರಿಗಣಿಸಲಾಗಿದೆ. ಇದರ ಜೊತೆಯಲ್ಲಿ ಇಂಡಸ್ಟ್ರಿ 5.0 ಮತ್ತು ಇನ್ನಿತರ ಅತ್ಯಾಧುನಿಕ ಕೈಗಾರಿಕಾ ವಿಧಾನಗಳನ್ನೂ ಗಂಭೀರವಾಗಿ ತೆಗೆದುಕೊಳ್ಳಲಾಗಿದೆ.

18ಸಾವಿರಕ್ಕೆ ಎಐ ಆಧಾರಿತ ಕಿಯೊ ಕಂಪ್ಯೂಟರ್

ಬೆಂಗಳೂರು: ಕರ್ನಾಟಕ ಸರಕಾರದ ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಬಿಟಿ ಇಲಾಖೆಯು ಕಿಯೊನಿಕ್ಸ್ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಕೃತಕ ಬುದ್ಧಿಮತ್ತೆಯ ಪರ್ಸನಲ್ ಕಂಪ್ಯೂಟರ್ ‘ಕಿಯೊ’ ಬಿಡುಗಡೆ ಮಾಡಿದೆ. ಬೆಂಗಳೂರು ಟೆಕ್ ಶೃಂಗಸಭೆಯಲ್ಲಿ ‘ಕಿಯೊ’ ಕಂಪ್ಯೂಟರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು. ಜ್ಞಾನ ಆಧಾರಿತ (ಕೆ), ಮಿತವ್ಯಯ (ಇ) ಮತ್ತು ಮುಕ್ತ-ಕಂಪ್ಯೂಟಿಂಗ್ (ಓಪನ್ ಸೋರ್ಸ್) -ಕಿಯೊ’ ವಿದ್ಯಾರ್ಥಿ ಸಮುದಾಯದ ಕಲಿಕೆಗೆ ನೆರವಾಗಲಿದೆ. ಲಿನಕ್ಸ್ ಆಧಾರಿತ ಅಪರೇಟಿಂಗ್ ಸಿಸ್ಟಮ್ ಹೊಂದಿರುವ ಓಪನ್-ಸೋರ್ಸ್ ಆರ್‌ಐಎಸ್‌ಸಿ-ವಿ ಪ್ರೊಸೆಸರ್‌ನಲ್ಲಿ ನಿರ್ಮಿಸಿರುವ ಕಿಯೊ’ ಕೈಗೆಟುಕುವ ಬೆಲೆಯಲ್ಲಿ ಸಂಪೂರ್ಣ ಕಂಪ್ಯೂಟಿಂಗ್ ಬಳಕೆಯ ಅನುಭವ ನೀಡಲಿದೆ. ಇದು 4ಜಿ ವೈ-ಫೈ, ಈಥರ್ನೆಟ್, ಯುಎಸ್‌ಬಿ ಎ ಮತ್ತು ಸಿ ಪೋರ್ಟ್‌ಗಳು, ಆಡಿಯೊ ಪ್ಯಾಕ್ ಸೌಲಭ್ಯ ಹೊಂದಿದೆ.

ಶಾಲೆಗಳು, ವಿಶ್ವವಿದ್ಯಾಲಯಗಳು, ಸಣ್ಣ ಉದ್ದಿಮೆಗಳು, ಸರಕಾರಿ ಕಚೇರಿಗಳು ಮತ್ತು ಮನೆಗಳಲ್ಲಿ ಕೆಇಒ ಬಳಕೆಯಾಗಲಿದೆ. ಡಿಜಿಟಲಾ ಕಲಿಕೆ. ಕೌಶಲ ಮತ್ತು ಉದ್ಯಮಶೀಲತೆಗೆ ಇದು ಹೊಸ ಮಾರ್ಗಗಳನ್ನು ಸೃಷ್ಟಿಸಲಿದೆ. ಎಲ್ಲಾ ಜಿಲ್ಲೆಗಳಲ್ಲಿ ವಿಕೇಂದ್ರೀಕೃಪ ತಂತ್ರಜ್ಞಾನದ ಬೆಳವಣಿಗೆ ಸಾಧಿಸುವ ಮತ್ತು ಪ್ರತಿಯೊಬ್ಬ ನಾಗರಿಕರಿಗೂ ಸಮಾನ ಡಿಜಿಟಲ್ ಅವಕಾಶವನ್ನು ಖಚಿತಪಡಿಸಿಕೊಳ್ಳುವ ರಾಜ್ಯ ಸರ್ಕಾರದ ಧ್ಯೆಯವನ್ನು ಸಾಕಾರಗೊಳಿಸಲು ನೆರವಾಗಲಿದೆ.

ಶೃಂಗಸಭೆಯಲ್ಲಿ ‘ಕಿಯೊ’ ಕಂಪ್ಯೂಟರ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಪ್ರಿಯಾಂಕ್ ಖರ್ಗೆ ಇದ್ದರು.

ಕೈಗಾರಿಕೆಗಳು ಬೆಳೆಯಬೇಕು ಮತ್ತು ಹೂಡಿಕೆದಾರರು ನಮ್ಮಲ್ಲಿಗೆ ಬರಬೇಕೆಂದರೆ, ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಪರಿಸರ ಚೆನ್ನಾಗಿರಬೇಕು. 800ಕ್ಕೂ ಹೆಚ್ಚು ಆರ್‌ಡಿ ಕೇಂದ್ರಗಳು, 100ಕ್ಕೂ ಅಧಿಕ ಚಿಪ್ ವಿನ್ಯಾಸ ಕಂಪನಿಗಳು ಮತ್ತು 18,300 ನವೋದ್ಯಮಗಳು ಇವೆ ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ₹1 ಸಾವಿರ ಹೆಚ್ಚಳ

ತುಮಕೂರು: ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಹಿಂದಿನ ಬಜೆಟ್‌ನಲ್ಲಿ ₹1 ಸಾವಿರ ಗೌರವ ಧನ ಹೆಚ್ಚಿಸಲಾಗಿದೆ. ಮುಂದಿನ ಬಜೆಟ್‌ನಲ್ಲಿ ಮತ್ತೆ ₹1 ಸಾವಿರ ಹೆಚ್ಚಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಭರವಸೆ ನೀಡಿದರು.

ನಗರದಲ್ಲಿ ಮಂಗಳವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಸುವರ್ಣ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಪೂರ್ವಭಾವಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗೌರವ ಧನ ಹೆಚ್ಚಳದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗೆ ಚರ್ಚಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಲ್ಲಿ ಶೇ.70ರಷ್ಟು ಮಂದಿ ಗೃಹಲಕ್ಷ್ಮಿ ನೆರವು ಪಡೆಯುತ್ತಿದ್ದಾರೆ. ಗೃಹಲಕ್ಷ್ಮಿ ಸಹಕಾರ ಬ್ಯಾಂಕ್‌ನಲ್ಲಿ ₹30 ಸಾವಿರದಿಂದ ₹5 ಲಕ್ಷದ ವರೆಗೆ ಸಾಲ ವಿತರಿಸಲು ಯೋಜನೆ ರೂಪಿಸಲಾಗಿದೆ ಎಂದರು.

> ಹಿಂದಿನ ಎರಡು ತಿಂಗಳ ಗೃಹಲಕ್ಷ್ಮಿ ಹಣ ಬಾಕಿ ಇದೆ. ಆದಷ್ಟು ಶೀಘ್ರ ಬಿಡುಗಡೆ ಮಾಡಲಾಗುವುದು. ಇದಕ್ಕಾಗಿ ತಿಂಗಳಿಗೆ ₹2,500 ಕೋಟಿ ಬೇಕಾಗುತ್ತದೆ. ಕಾಲ ಕಾಲಕ್ಕೆ ಫಲಾನುಭವಿಗಳಿಗೆ ಯೋಜನೆಯ ನೆರವು ಕಲ್ಪಿಸಲಾಗುತ್ತಿದೆ.
>
> - ಲಕ್ಷ್ಮಿ ಹೆಬ್ಬಾಳಕರ

ನ.28ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸುವರ್ಣ ಮಹೋತ್ಸವ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಅಕ್ಕಪಡೆ, ಸಹಕಾರ ಬ್ಯಾಂಕ್‌ಗೆ ಅಧಿಕೃತವಾಗಿ ಚಾಲನೆ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

5 ಸಾವಿರ ಅಂಗನವಾಡಿಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭ

ರಾಜ್ಯದ ಐದು ಸಾವಿರ ಅಂಗನವಾಡಿಗಳಲ್ಲಿ ಎಲ್‌ಕೆಜಿ-ಯುಕೆಜಿ ಪೂರ್ವ ಪ್ರಾಥಮಿಕ ಶಾಲೆ ಆರಂಭಿಸಲಾಗುತ್ತಿದೆ. ಖಾಸಗಿ ಶಾಲೆಗಳಲ್ಲಿ ಸಿಗುವಂತಹ ಗುಣಮಟ್ಟದ ಇಂಗ್ಲಿಷ್ ಶಿಕ್ಷಣ ಬಡಮಕ್ಕಳಿಗೂ ಸಿಗಬೇಕು ಎಂದು ಅಂಗನವಾಡಿಗಳಲ್ಲಿ ಎಲ್‌ಕೆಜಿ-ಯುಕೆಜಿ ತರಗತಿಗಳನ್ನು ಆರಂಭಿಸಲಾಗುತ್ತಿದೆ. ರಾಜ್ಯದ ಒಟ್ಟಾರೆ ಎಲ್ಲ ಅಂಗನವಾಡಿಗಳ ಪೈಕಿ 17 ಸಾವಿರ ಕಾರ್ಯಕರ್ತೆಯರು ಪದವೀಧರರಿದ್ದು , 4 ಸಾವಿರ ಸ್ನಾತಕೋತ್ತರ ಪದವೀಧರರಿದ್ದಾರೆ. ಇವರನ್ನು ಬಳಸಿಕೊಂಡು ಮೊದಲ ಹಂತದಲ್ಲಿ ಐದು ಸಾವಿರ ಅಂಗನವಾಡಿಗಳನ್ನು ಇದೇ 28ರಂದು ಆರಂಭಿಸಲಾಗುತ್ತಿದೆ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದರು.

ಹಾವೇರಿ ಜಿಲ್ಲಾಸ್ಪತ್ರೆ ದುರವಸ್ಥೆ | ಸಿಬ್ಬಂದಿ ನಿರ್ಲಕ್ಷ್ಯಕ್ಕೆ ಸಂಬಂಧಿಕರ ಆಕ್ರೋಶ

ಆಸ್ಪತ್ರೆ ಕಾರಿಡಾರ್‌ನಲ್ಲೇ ಹೆರಿಗೆ: ಶಿಶು ಸಾವು

ಹಾವೇರಿ: ಇಲ್ಲಿಯ ಜಿಲ್ಲಾಸ್ಪತ್ರೆಯ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಕಾರಿಡಾರ್‌ನಲ್ಲೇ ಮಹಿಳೆಯೊಬ್ಬರಿಗೆ ಹೆರಿಗೆ ಆಗಿದ್ದು, ನೆಲದ ಮೇಲೆ ಬಿದ್ದು ತಲೆಗೆ ತೀವ್ರ ಪೆಟ್ಟಾಗಿದ್ದರಿಂದ ಶಿಶು ಸ್ಥಳದಲ್ಲೇ ಮೃತಪಟ್ಟಿದೆ.

ಮಂಗಳವಾರ ಬೆಳಗ್ಗೆ ಈ ಘಟನೆ ನಡೆದಿದೆ. ಆಸ್ಪತ್ರೆಯ ವೈದ್ಯರು ಹಾಗೂ ಶುಶ್ರೂಷಕಿಯರ ನಿರ್ಲಕ್ಷ್ಯವೇ ಘಟನೆಗೆ ಕಾರಣವೆಂದು ಮಹಿಳೆಯರ ಸಂಬಂಧಿಕರು ಆರೋಪಿಸಿದ್ದಾರೆ.

ರಾಣೆಬೆನ್ನೂರು ತಾಲೂಕಿನ ಕಾಕೋಳ ಗ್ರಾಮದ ರೂಪಾ (30) ಅವರು ಹೆರಿಗೆ ನೋವಿನಿಂದ ಬಳಲುತ್ತಿದ್ದರು. ಹೀಗಾಗಿ, ಅವರನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ಕರೆತರಲಾಗಿತ್ತು. ಹೆರಿಗೆ ಕೊಠಡಿಯಲ್ಲಿ ಹೆಚ್ಚು ಮಹಿಳೆಯರಿದ್ದರು. ಹೀಗಾಗಿ, ಬೆಡ್‌ಗಳ ಕೊರತೆ ಇತ್ತು. ಮಹಿಳೆಗೆ ಬೆಡ್ ಸಿಕ್ಕಿರಲಿಲ್ಲ. ಕೊಠಡಿ ಹೊರಗೆಯೇ ನೆಲದ ಮೇಲೆ ಕುಳಿತಿದ್ದ ಮಹಿಳೆ ರೂಪಾ, ತೀವ್ರವಾದ ನೋವು ಅನುಭವಿಸುತ್ತಿದ್ದರು. ವೈದ್ಯರಾಗಲಿ ಶುಶ್ರೂಷಕಿಯರಾಗಲಿ ಬೆಡ್ ಕೊಡಿಸಲು ಮುಂದಾಗಿರಲಿಲ್ಲವೆಂದು ಸಂಬಂಧಿಕರು ದೂರಿದರು.

ಬೆಳಗ್ಗೆ 9 ಗಂಟೆ ಸುಮಾರಿಗೆ ಕಾರಿಡಾರ್‌ನಲ್ಲಿದ್ದ ಮಹಿಳೆ ಮೇಲಕ್ಕೆ ಎದ್ದು ಶೌಚಾಲಯದತ್ತ ಹೊರಟಿದ್ದರು. ಇದೇ ಸಂದರ್ಭದಲ್ಲಿ ಮಾರ್ಗಮಧ್ಯೆಯೇ ಹೆರಿಗೆ ಆಗಿದೆ. ಮಹಿಳೆ ನಡೆದುಕೊಂಡು ಹೋಗುವಾಗಲೇ ಹೆರಿಗೆ ಆಗಿದ್ದರಿಂದ, ಶಿಶು ನೆಲಕ್ಕೆ ಬಿದ್ದಿತ್ತು. ಅದರ ತಲೆಗೆ ತೀವ್ರ ಪೆಟ್ಟಾಗಿತ್ತು. ಹೀಗಾಗಿ, ಸ್ಥಳದಲ್ಲಿಯೇ ಶಿಶು ಮೃತಪಟ್ಟಿದೆ ಎಂದು ಸಂಬಂಧಿಕರು ತಿಳಿಸಿದರು. ಶಿಶು ಸಾವಿನ ಬಗ್ಗೆ ಪ್ರತಿಕ್ರಿಯಿಸಿರುವ ಜಿಲ್ಲಾಸ್ಪತ್ರೆ ಶಸ್ತ್ರಚಿಕಿತ್ಸಕ ಡಾ. ಪಿ.ಆರ್. ಹಾವನೂರು, 'ಯಾರದ್ದು ತಪ್ಪು ಎಂಬುದರ ಬಗ್ಗೆ ಪರಿಶೀಲನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದರು.

ಸಂಬಂಧಿಕರು ಆಕ್ರೋಶ

ತೀವ್ರ ಹೆರಿಗೆ ನೋವಿದ್ದರೂ ವೈದ್ಯರು ಹಾಗೂ ಶುಶ್ರೂಷಕಿಯರು ಸ್ಪಂದನೆ ಮಾಡಲಿಲ್ಲ. ಮಹಿಳೆ ಕಿರುಚಾಡಿದರೂ ಬರಲಿಲ್ಲ. ಬಹುತೇಕ ಶುಶ್ರೂಷಕಿಯರು ಮೊಬೈಲ್‌ನಲ್ಲಿ ಮಾತನಾಡುತ್ತ, ಅದರಲ್ಲೇ ತಲ್ಲೀನರಾಗಿದ್ದರು. ವೈದ್ಯರು ಸಹ ರೂಪಾ ಬಳಿ ಬಂದು ತಪಾಸಣೆ ಮಾಡಲಿಲ್ಲ. ಇವರೆಲ್ಲರ ನಿರ್ಲಕ್ಷ್ಯವೇ ಶಿಶು ಸಾವಿಗೆ ಕಾರಣವೆಂದು ಸಂಬಂಧಿಕರು ಆರೋಪಿಸಿದ್ದಾರೆ.

ಕಲಬುರಗಿಯ ಜಿಮ್ಸ್ ಆಸ್ಪತ್ರೆ ಮೇಲೆ ಲೋಕಾಯುಕ್ತ ದಾಳಿ

ಕಲಬುರಗಿ: ನಗರದ ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಮೇಲೆ ಮಂಗಳವಾರ ಲೋಕಾಯುಕ್ತ ಅಧಿಕಾರಿಗಳು ದಿಢೀರ್ ದಾಳಿ ನಡೆಸಿ, ಆಸ್ಪತ್ರೆಯ ಆಡಳಿತದಲ್ಲಿ ನಡೆಯುತ್ತಿದ್ದ ಹಲವು ಅಕ್ರಮಗಳನ್ನು ಬೆಳಕಿಗೆ ತಂದಿದ್ದಾರೆ. ಲೋಕಾಯುಕ್ತ ಎಸ್ಪಿ ಸಿದ್ದರಾಜು ನೇತೃತ್ವದ ತಂಡ ಆಸ್ಪತ್ರೆಯ ಮೆಡಿಕಲ್ ಶಾಪ್‌ಗೆ ಭೇಟಿ ನೀಡಿದಾಗ, ಫಾರ್ಮಸಿ ಶಿಕ್ಷಣ ಪೂರ್ಣಗೊಳಿಸದ ವ್ಯಕ್ತಿಗಳಿಂದ ರೋಗಿಗಳಿಗೆ ಔಷಧಿ ವಿತರಿಸುತ್ತಿರುವುದು ದೃಢಪಟ್ಟಿದೆ. ಇದು ಔಷಧ ವಿತರಣೆಯ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಇದಲ್ಲದೆ, ಆಸ್ಪತ್ರೆಯ ಸಿಬ್ಬಂದಿಗಳು ರೋಗಿಗಳಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಹಾಗೂ ಇತರ ಸೇವೆಗಳಿಗೆ ಸರಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಲೋಕಾಯುಕ್ತರು ವಿಚಾರಣೆ ನಡೆಸಿದರು. ಇನ್ನು ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗದೆ ಇರುವುದು. ಹಾಜರಿ ಪುಸ್ತಕದಲ್ಲಿ ಸಹಿ ಮಾಡದೆ ಇರುವುದು ಲೋಕಾಯುಕ್ತರ ಗಮನಕ್ಕೆ ಬಂದಿತು.

ಧರ್ಮಸ್ಥಳದಲ್ಲಿ ಲಕ್ಷ ದೀಪೋತ್ಸವ | ಸರ್ವಧರ್ಮ ಸಮ್ಮೇಳನದ ತೊಂಭತ್ತಮೂರನೇ ಅಧಿವೇಶನ ಉದ್ಘಾಟನೆ

ಧರ್ಮಸ್ಥಳ ಸರ್ವ ಧರ್ಮೀಯರಿಗೂ ಶ್ರದ್ಧಾ ಕೇಂದ್ರ: ಎಂ.ಬಿ.ಪಾಟೀಲ್

ಉಜಿರೆ: ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ಭಾರತದ ಸರ್ವಧರ್ಮಗಳೂ ಸತ್ಯ, ಅಹಿಂಸೆ, ಪರೋಪಕಾರ, ಸೇವೆ, ಅನುಕಂಪ ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿ ವಿಶ್ವವೇ ಒಂದು ಕುಟುಂಬ ಎಂದು ಪರಿಭಾವಿಸಿದ್ದು ಇತರ ಧರ್ಮ ಗೌರವಿಸುವುದು ನಮ್ಮ ಸನಾತನ ಧರ್ಮದ ಜೀವಾಳ ಎಂದು ಸಚಿವ ಡಾ. ಎಂ.ಬಿ.ಪಾಟೀಲ್ ಹೇಳಿದರು.

ಧರ್ಮಸ್ಥಳದಲ್ಲಿ ಮಂಗಳವಾರ ನಡೆದ ಲಕ್ಷದೀಪೋತ್ಸವ ಸಂದರ್ಭದಲ್ಲಿ ಆಯೋಜಿಸಿದ ಸರ್ವಧರ್ಮ ಸಮ್ಮೇಳನದ ತೊಂಭತ್ತಮೂರನೇ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದರು.

ಸರ್ವಧರ್ಮೀಯರಿಗೂ ಸೇವೆ ನೀಡುವ ಧರ್ಮಸ್ಥಳ ಅನುಪಮ ಶ್ರದ್ಧಾ-ಭಕ್ತಿಯ ಕೇಂದ್ರವಾಗಿದೆ. ಇಲ್ಲಿನ ಧರ್ಮಸಹಿಷ್ಣುತೆ, ಚತುರ್ವಿದ ದಾನ ಪರಂಪರೆ, ಮಾನವೀಯ ಸೇವೆ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಮಾನವ ಸೇವೆಯೇ ಶ್ರೇಷ್ಠ ಧರ್ಮವಾಗಿದ್ದು ಲಕ್ಷದೀಪೋತ್ಸವ ಪ್ರತಿ ಮನೆಯಲ್ಲಿಯೂ, ಪ್ರತಿಯೊಬ್ಬರ ಮನದಲ್ಲಿಯೂ ವಿಶ್ವಸಾಮರಸ್ಯದ ಬೆಸುಗೆಯನ್ನು ಬೆಸೆಯಲಿ. ಪರಸ್ಪರ ಪ್ರೀತಿ-ವಿಶ್ವಾಸದೊಂದಿಗೆ ಶಾಂತಿ, ಸಾಮರಸ್ಯದ ಸೌಹಾರ್ದಯುತ ಬದುಕಿಗೆ ಲಕ್ಷದೀಪೋತ್ಸವ ನಾಂದಿಯಾಗಲಿ. ಲಕ್ಷದೀಪೋತ್ಸವದ ಹೊಂಬೆಳಕಿನಲ್ಲಿ ನೈತಿಕತೆ, ಸೇವೆ ಜೀವನ ಮೌಲ್ಯಗಳು ನಿರಂತರ ನಂದಾದೀಪವಾಗಿ ಸರ್ವರ ಸಾರ್ಥಕ ಬದುಕಿಗೆ ದಾರಿದೀಪವಾಗಲಿ ಎಂದು ಅವರು ಹಾರೈಸಿದರು.

ಹರಿಹರಪುರದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಪ್ರಜಾವಾಣಿ ಉಪಸಂಪಾದಕ ಎಸ್. ಸೂರ್ಯಪ್ರಕಾಶ್ ಪಂಡಿತ್ ಮಾತನಾಡಿದರು.

ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ ಮೂಲಕ ಬಂದ ಅಂಕಣಕಾರ ತನ್ವೀರ್ ಅಹಮ್ಮದ್ ಉಲ್ಲಾ ಮಾತನಾಡಿ, ಸತ್ಯಮೇವಜಯತೇ ಎನ್ನುವಂತೆ ಸತ್ಯ ಯಾವಾಗಲೂ ಗೆಲ್ಲುತ್ತದೆ, ಸುಳ್ಳು ಸೋಲುತ್ತದೆ. ಪಾದಯಾತ್ರೆ ತನಗೆ ಅಮೂಲ್ಯ ಜೀವನಪಾಠ ಕಲಿಸಿದೆ. ಹತ್ತು ಸಾವಿರ ಮಂದಿಯನ್ನು ಪಾದಯಾತ್ರೆಯಲ್ಲಿ ತಾನು ಭೇಟಿಯಾಗಿ ಅಪಾರ ಲೋಕಾನುಭವ ಪಡೆದೆ ಎಂದು ಸಂತಸ ವ್ಯಕ್ತಪಡಿಸಿದರು.

ಅಂಕಣ ಬರಹಗಳ ಸಂಗ್ರಹ ಬಿಡುಗಡೆ: ಹೇಮಾವತಿ ಹೆಗ್ಗಡೆಯವರು ಮಂಜುವಾಣಿ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ ‘‘ಮಗಳಿಗೊಂದು ಪತ್ರ’’ ಅಂಕಣ ಬರಹಗಳ ಸಂಕಲವನ್ನು ಸಚಿವ ಡಾ. ಎಂ.ಬಿ. ಪಾಟೀಲ್ ಹಾಗೂ ಡಿ.ವೀರೇಂದ್ರ, ಹೆಗ್ಗಡೆಯವರ ಅಂಕಣ ಬರಹಗಳ ಸಂಗ್ರಹ ‘‘ಧರ್ಮದರ್ಶನ’’ವನ್ನು ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಹೇಮಾವತಿ ವಿ. ಹೆಗ್ಗಡೆ, ಡಿ. ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಪೂರನ್ ವರ್ಮ ಉಪಸ್ಥಿತರಿದ್ದರು.

ಧರ್ಮಸ್ಥಳದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಹೇಮಾವತಿ ಹೆಗ್ಗಡೆ, ಡಿ. ವೀರೇಂದ್ರ ಹೆಗ್ಗಡೆಯವರ ಅಂಕಣ ಬರಹಗಳ ಸಂಗ್ರಹ ಕೃತಿಗಳ ಬಿಡುಗಡೆ ಮಾಡಲಾ ಯಿತು.

> ಮಾನವೀಯತೆಯೇ ಸಕಲ ಧರ್ಮಗಳ ಸಾರ. ಮಾನವನು ತನ್ನ ಜೀವನದಲ್ಲಿ ನೈತಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕವಾಗಿ ಆದರ್ಶ ಬದುಕನ್ನು ನಡೆಸಲು ದಾರಿ ತೋರುವುದೇ ಧರ್ಮದ ಉದ್ದೇಶ ಎಂದು ಹೇಳಿದರು. ಧರ್ಮ ಕೇವಲ ಪೂಜೆ ಹಾಗೂ ಧಾರ್ಮಿಕ ಆಚರಣೆಗಳಿಗೆ ಸೀಮಿತವಾಗದೆ, ಸತ್ಯ, ಅಹಿಂಸೆ, ಕರುಣೆ, ಶಾಂತಿ, ನೆಮ್ಮದಿ, ಪರೋಪಕಾರ, ಸಮಾನತೆ ಮೌಲ್ಯಗಳನ್ನು ಉದ್ದೀಪನಗೊಳಿಸಬೇಕು.
>
> - ಡಿ.ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ

ಸಂಪಾದಕೀಯ

ಡಿಜಿಟಲ್ ವಂಚಕರಿದ್ದಾರೆ, ಎಚ್ಚರಿಕೆ

ಸಂಬಂಧಪಟ್ಟ ಇಲಾಖೆಗಳ ವತಿಯಿಂದ ಎಷ್ಟೇ ಮಾಹಿತಿ ಮತ್ತು ಮುನ್ನೆಚ್ಚರಿಕೆಗಳನ್ನು ನೀಡುತ್ತಿದ್ದರೂ, ಡಿಜಿಟಲ್ ಅರೆಸ್ಟ್, ಸೈಬರ್ ವಂಚನೆ ಇತ್ಯಾದಿಗಳಿಗೆ ಬಲಿಯಾಗುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಬೆಂಗಳೂರಿನ ಮಹಿಳಾ ಟೆಕ್ಕಿಯೊಬ್ಬರು ಹೀಗೆ ಡಿಜಿಟಲ್ ಅರೆಸ್ಟ್‌ಗೆ ಒಳಗಾಗಿ ಹತ್ತತ್ತಿರ 32 ಕೋಟಿ ರುಪಾಯಿಗಳನ್ನು ಕಳೆದುಕೊಂಡಿರುವುದು ಇತ್ತೀಚಿನ ಉದಾಹರಣೆ. 'ನಿಷೇಧಿತ ಎಂಡಿಎಂ ಮಾದಕ ದ್ರವ್ಯವನ್ನು ಒಳಗೊಂಡ ಕೊರಿಯರ್ ಪಾರ್ಸೆಲ್ ನಿಮಗೆ ಬಂದಿದ್ದು, ಅದೀಗ ಮುಂಬೈನಲ್ಲಿನ ಕೇಂದ್ರ ಕಚೇರಿಯಲ್ಲಿದೆ' ಎಂದು ಭಯ ಹುಟ್ಟಿಸುವ ಮೂಲಕ ದುರುಳನೊಬ್ಬ ವಂಚಿಸಿದ ಪ್ರಕರಣವಿದು. ಮತ್ತೊಂದೆಡೆ, ತಮ್ಮ ಕುಟುಂಬದ ಸದಸ್ಯರೊಬ್ಬರು ಹೀಗೆಯೇ ಡಿಜಿಟಲ್ ಅರೆಸ್ಟ್‌ಗೆ ಒಳಗಾಗಿ 20 ಕೋಟಿ ರುಪಾಯಿಗಳನ್ನು ಕಳೆದುಕೊಂಡ ಸಂಗತಿಯನ್ನೂ ತೆಲುಗು ಚಿತ್ರನಟ ನಾಗಾರ್ಜುನ ಅಕ್ಕಿನೇನಿ ಹೇಳಿಕೊಂಡಿದ್ದಾರೆ. 'ಮುಂದುವರಿದ ತಂತ್ರಜ್ಞಾನದ ಕಾಲಘಟ್ಟದಲ್ಲಿರುವವರು ನಾವು' ಎಂದು ಇನ್ನಿಲ್ಲದಂತೆ ಹೆಮ್ಮೆ ಪಟ್ಟುಕೊಳ್ಳುವ ಜನರು ಕೊಂಚವೇ ಯಾಮಾರಿದರೂ ಅವರನ್ನು ವಂಚನೆಯ ಕೂಪಕ್ಕೆ ತಳ್ಳಲು ಕೆಲವರು ಹೊಂಚುಹಾಕುತ್ತಿರುತ್ತಾರೆ ಎಂಬುದಕ್ಕೆ ಇಂಥ ಬೆಳವಣಿಗೆಗಳು ಪುಷ್ಟಿ ನೀಡಬಲ್ಲವು. 'ಸುಲಭಕ್ಕೆ ಮೋಸ ಹೋಗುವವರು ಇರುವವರೆಗೂ, ಮೋಸ ಮಾಡುವವರು ಇದ್ದೇ ಇರುತ್ತಾರೆ' ಎಂಬ ಮಾತು ಗೊತ್ತಿರುವಂಥದ್ದೇ. ಆದ್ದರಿಂದ, ನಮ್ಮ ಜನರು ಇನ್ನಷ್ಟು ಮತ್ತಷ್ಟು ಮಾಹಿತಿವಂತರಾಗಬೇಕಿದೆ. ಇಂಥ ಯಾವುದೇ ಅನುಮಾನಾಸ್ಪದ ಅಥವಾ ಅನಾಮಿಕ ಕರೆಗಳು ಬಂದಾಗ, ಮತ್ತು ಅವು ಬೆದರಿಸುವ ಸ್ವರೂಪದಲ್ಲಿ ಇದ್ದಾಗ ಕಂಗೆಡದೆ, ಅವರು ನೀಡುವ ಲಿಂಕ್‌ಗಳನ್ನು ಒತ್ತದೆ, ಸನಿಹದ ಪೊಲೀಸ್ ಠಾಣೆಗೆ ದೂರು ನೀಡುವುದು ಅಪೇಕ್ಷಣೀಯವಾಗಿರುತ್ತದೆ. ಬೆವರು-ರಕ್ತವನ್ನು ಬಸಿದು ಸಂಪಾದಿಸಿದ ದುಡ್ಡು, ಕಳ್ಳ-ಕಾಕರ ಕೈಸೇರಬಾರದು ಎಂದಿದ್ದರೆ, ನಾವು ಒಂದಿಷ್ಟು ಎಚ್ಚರದಿಂದ ಇರಲೇಬೇಕು...

ಸೊಂಪಾದಕೀಯ

ನೋ ನವೆಂಬರ್ ಕ್ರಾಂತಿ

ದೆಹಲಿಯಲ್ಲಿ ಡಾಕ್ಟರ್‌ಗಳೇ ಉಗ್ರರಾಗಿ ಅಟ್ಟಹಾಸ ಮೆರೆದಿದ್ದು ಎಲ್ಲರಿಗೂ ಗೊತ್ತು. ಆದರೆ ಕರ್ನಾಟಕದಲ್ಲಿ ಸಂಪುಟಕ್ಕೆ ಸರ್ಜರಿ ಮಾಡುವ ಡಾಕ್ಟರ್‌ಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇದು 6 ತಿಂಗಳಿಂದಲೂ ನಡೆಯುತ್ತಿರೋ ಚರ್ಚೆ. ಇದನ್ನು ವಿರೋಧ ಪಕ್ಷದವರೇ ಹೆಚ್ಚಾಗಿ ನಡೆಸು ತ್ತಿದ್ದರು. ಸಿದ್ರಾಮಯ್ಯರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿ ಅಲ್ಲಿ ಡಿ.ಕೆ. ಶಿವ ಕುಮಾರ್‌ರನ್ನು ಪ್ರತಿಷ್ಠಾಪಿಸಲು ಆರ್. ಅಶೋಕ್ ಸೇರಿದಂತೆ ಅನೇಕ ಬಿಜೆಪಿ ನಾಯಕರೇ ಯತ್ನಿಸುತ್ತಿದ್ದರು. ಆದರೆ ಈಗ ಅವರೆಲ್ಲರಿಗೆ ನಿರಾಸೆಯಾಗೋ ವಿಷಯ ಹೊರಬಿದ್ದಿದೆ. ಕಾಂಗ್ರೆಸ್ ಸರಕಾರದ ವಿರುದ್ಧ ಮಾತಾಡೋಕೆ ಏನೂ ಸಿಗಲಿಲ್ಲ ಅಂದಾಗಲೆಲ್ಲ, 'ನವೆಂಬರ್‌ನಲ್ಲಿ ಕ್ರಾಂತಿ ನಡೆಯುತ್ತೆ, ಸಿದ್ರಾಮಯ್ಯ ಅವರ ಟರ್ಮ್ ಮುಗೀತು, ಮುಂದಿನ ಟರ್ನ್ ಡಿಕೆಶಿ ಅವರದ್ದು' ಅಂತ ಮಾತು ಹರಿಬಿಡುತ್ತಿದ್ದ ಬಿಜೆಪಿಗರಿಗೆ ಈಗ 'ಯು ಟರ್ನ್' ಹೊಡೆಯುವ ಅನಿವಾರ್ಯತೆ. ಯಾಕಂದ್ರೆ 'ಕೈ' ಕಮಾಂಡ್ ಈಗ ಎಲ್ಲ ಊಹಾಪೋಹಗಳಿಗೆ ಫುಲ್‌ಸ್ಟಾಪ್ ಇಟ್ಟಿದೆ. ಬಿಹಾರದ ಎಲೆಕ್ಷನ್ ನಂತರ ಕ್ರಾಂತಿ ನಡೆಯುತ್ತೆ ಅಂತ ನಂಬಿದವರ ಮಾತು ನಿಜ ಎನ್ನುವಂತೆ ಸಿಎಂ, ಡಿಸಿಎಂ ಇಬ್ಬರೂ ದೆಹಲಿಗೆ ದೌಡಾಯಿಸಿದ್ದರು. ಅಲ್ಲಿ ಹೈಕಮಾಂಡ್ ಜತೆ ಮಾತನಾಡಿ ಏನಾದ್ರೂ ಹೊಸ ಸುದ್ದಿ ಕೊಡುವ ಆಸೆ ಕೆಲವರಿಗೆ ಇತ್ತು. ಆದರೆ ಬಿಹಾರದ ಸೋಲಿನ ಆಘಾತ ದಿಂದ ಇನ್ನೂ ಹೊರಬರದ ರಾಹುಲ್ ಗಾಂಧಿ ಈ ವಿಷಯದಲ್ಲಿ ತಲೆನೇ ಹಾಕಿಲ್ಲ. ಬದಲಾಗಿ ಈ ಜವಾಬ್ದಾರಿಯನ್ನು ಮಲ್ಲಿಕಾರ್ಜುನ್ ಖರ್ಗೆ ಅವರ ತಲೆಗೆ ಕಟ್ಟಿ ಕೈ ತೊಳೆದುಕೊಂಡುಬಿಟ್ಟರು. ನಂತರ ತಮ್ಮ ಬಳಿಗೆ ಬಂದ ಎಲ್ಲ ನಾಯಕರಿಗೂ ಖರ್ಗೆಯವರು- ಸಿಎಂ ಬದಲಾವಣೆಯೂ ಇಲ್ಲ, ಸಂಪುಟಕ್ಕೆ ಸರ್ಜರಿಯೂ ಇಲ್ಲ. ಯಥಾಸ್ಥಿತಿ ಮುಂದುವರಿಯಲಿ ಅಂತ ಆದೇಶ ಕೊಟ್ಟು ಸಿಎಂ ಬದಲಾವಣೆ ಮತ್ತು ಸಂಪುಟ ಸರ್ಜರಿಯ ವಿಷಯದಲ್ಲಿ ಕೆಲವರ ಆಸೆಗೆ ತಣ್ಣೀರೆರಚಿದ್ದಾರೆ!

ಸಂಪಾದಕರ ಸದ್ಯಶೋಧನೆ

ರಿವರ್ಸ್ ಗಿಯರ್ ವ್ಯವಸ್ಥೆ ಏಕಿಲ್ಲ?

ವಿಮಾನಗಳಿಗೆ ರಿವರ್ಸ್ ಗಿಯರ್ ವ್ಯವಸ್ಥೆ ಏಕೆ ಇಲ್ಲ ಮತ್ತು ವಿಮಾನಗಳು ಹಿಂದಕ್ಕೆ ಚಲಿಸಲು ಏನು ಮಾಡುತ್ತಾರೆ? ಕಾರುಗಳು ಅಥವಾ ಇತರ ವಾಹನಗಳಂತೆ, ಚಕ್ರಗಳಿಗೆ ನೇರವಾಗಿ ಎಂಜಿನ್ ಶಕ್ತಿಯನ್ನು ವರ್ಗಾಯಿಸುವ ಗಿಯರ್ ವ್ಯವಸ್ಥೆಯನ್ನು ವಿಮಾನಗಳು ಹೊಂದಿರುವುದಿಲ್ಲ. ವಿಮಾನಗಳು ಚಲಿಸುವುದು ಮುಖ್ಯವಾಗಿ ಅವುಗಳ ಎಂಜಿನ್‌ಗಳು ಉತ್ಪಾದಿಸುವ ಒತ್ತಡದಿಂದ (Thrust). ವಿಮಾನಗಳಲ್ಲಿ ರಿವರ್ಸ್ ಗಿಯರ್ ವ್ಯವಸ್ಥೆ ಇಲ್ಲದಿರಲು ಮತ್ತು ಅದನ್ನು ಬಳಸದಿರಲು ಹಲವಾರು ಪ್ರಮುಖ ಕಾರಣಗಳಿವೆ. ವಿಮಾನ ನಿಲ್ದಾಣದ ಆಪ್ರಾನ್ (Apron- ವಿಮಾನಗಳು ನಿಲ್ಲುವ ಮತ್ತು ಚಲಿಸುವ ಪ್ರದೇಶ) ಅತ್ಯಂತ ನಿಬಿಡವಾದ ಮತ್ತು ಸಂಕೀರ್ಣವಾದ ಪ್ರದೇಶ. ಇಲ್ಲಿ ಸರಕು ಸಾಗಿಸುವ ವಾಹನಗಳು, ಇಂಧನ ತುಂಬಿಸುವ ಟ್ರಕ್‌ಗಳು, ಬ್ಯಾಗೇಜ್ ಗಾಡಿಗಳು ಮತ್ತು ನೆಲದ ಸಿಬ್ಬಂದಿ ಓಡಾಡುತ್ತಿರುತ್ತಾರೆ. ವಿಮಾನದ ಕಾಕ್‌ಪಿಟ್ ನೆಲದಿಂದ ಬಹಳ ಎತ್ತರದಲ್ಲಿರುತ್ತದೆ ಮತ್ತು ಪೈಲಟ್‌ಗಳಿಗೆ ವಿಮಾನದ ಹಿಂದಿನ ಭಾಗದ ನೇರ ನೋಟ ಇರುವುದಿಲ್ಲ. ಕಾರುಗಳಲ್ಲಿ ಇರುವಂತೆ ಹಿಂದಿನ ನೋಟಕ್ಕೆ ಕನ್ನಡಿಯನ್ನು ಅಥವಾ ಕ್ಯಾಮೆರಾವನ್ನು ವಿಮಾನಗಳು ಹೊಂದಿರುವುದಿಲ್ಲ. ಹೀಗಾಗಿ, ಪೈಲಟ್‌ಗಳು ತಮ್ಮ ವಿಮಾನವನ್ನು ಹಿಂದಕ್ಕೆ ಚಲಿಸಿದರೆ, ಹಿಂದೆ ಇರುವ ವಸ್ತುಗಳು, ವಾಹನಗಳು ಅಥವಾ ಸಿಬ್ಬಂದಿಗೆ ಡಿಕ್ಕಿ ಹೊಡೆಯುವ ಅಪಾಯ ಬಹಳ ಹೆಚ್ಚಿರುತ್ತದೆ. ವಿಮಾನದ ಎಂಜಿನ್‌ಗಳು ಕಡಿಮೆ ವೇಗದಲ್ಲಿ ನಿಖರವಾದ ಹಿಮ್ಮುಖ ಚಲನೆಗೆ ಸೂಕ್ತವಾಗಿ ವಿನ್ಯಾಸಗೊಂಡಿರುವುದಿಲ್ಲ. ಒತ್ತಡವನ್ನು ಬಳಸಿಕೊಂಡು ವಿಮಾನವನ್ನು ನಿಧಾನವಾಗಿ, ನಿಖರವಾಗಿ ಹಿಂದಕ್ಕೆ ತಿರುಗಿಸುವುದು ಕಷ್ಟಕರ ಮತ್ತು ಅಪಾಯಕಾರಿ. ಜೆಟ್ ಎಂಜಿನ್‌ಗಳು ರಿವರ್ಸ್ ಥ್ರಸ್ಟ್ ಅನ್ನು ಬಳಸಿದಾಗ (ಲ್ಯಾಂಡಿಂಗ್ ನಂತರ ವೇಗ ಕಡಿಮೆ ಮಾಡಲು), ಅವು ಹೊರಹಾಕುವ ಗಾಳಿಯನ್ನು ಮುಂದಕ್ಕೆ ಮತ್ತು ಅಡ್ಡಲಾಗಿ ನಿರ್ದೇಶಿಸುತ್ತವೆ. ಈ ಪ್ರಬಲವಾದ ಗಾಳಿಯ ಹರಿವು ನೆಲದ ಮೇಲೆ ಇರುವ ಸಣ್ಣ ಕಲ್ಲುಗಳು, ಲೋಹದ ತುಂಡುಗಳು, ಕೊಳಕು ಅಥವಾ ಇತರ ಕಸದಂಥ ಪರಕೀಯ ವಸ್ತುಗಳನ್ನು (Debris) ಮೇಲಕ್ಕೆ ಎತ್ತಿ, ಅವುಗಳನ್ನು ಎಂಜಿನ್‌ನೊಳಗೆ ಹೀರಿಕೊಳ್ಳುವ ಅಪಾಯವಿರುತ್ತದೆ. ಇದರಿಂದ ಎಂಜಿನ್‌ಗೆ ಗಂಭೀರ ಹಾನಿಯಾಗುತ್ತದೆ ಮತ್ತು ದುರಸ್ತಿ ವೆಚ್ಚ ಹೆಚ್ಚಾಗುತ್ತದೆ. ವಿಮಾನ ನಿಲ್ದಾಣದ ಗೇಟ್ ಬಳಿ ಹೆಚ್ಚಿನ ಎಂಜಿನ್ ಶಕ್ತಿಯನ್ನು ಬಳಸುವುದು ಸಿಬ್ಬಂದಿಗೆ ಮತ್ತು ಹತ್ತಿರದ ಟರ್ಮಿನಲ್ ಕಟ್ಟಡಗಳಿಗೆ ಅಪಾಯವನ್ನುಂಟುಮಾಡುತ್ತದೆ. ವಿಮಾನವನ್ನು ಹಿಂದಕ್ಕೆ ಸರಿಸಲು ಎಂಜಿನ್‌ಗಳನ್ನು ಹೆಚ್ಚಿನ ಶಕ್ತಿಯಲ್ಲಿ ನಿರ್ವಹಿಸುವುದರಿಂದ ಹೆಚ್ಚು ಇಂಧನ ವ್ಯರ್ಥವಾಗುತ್ತದೆ ಮತ್ತು ಕಾರ್ಯಾಚರಣೆಯ ವೆಚ್ಚ ಹೆಚ್ಚುತ್ತದೆ. ಎಂಜಿನ್‌ನ ಘಟಕಗಳು ವೇಗವಾಗಿ ಸವೆತಕ್ಕೆ ಒಳಗಾಗುತ್ತವೆ ಮತ್ತು ಅವುಗಳ ನಿರ್ವಹಣಾ ವೆಚ್ಚವೂ ಜಾಸ್ತಿಯಾಗುತ್ತದೆ. ವಾಸ್ತವವಾಗಿ, ಬಹುತೇಕ ಜೆಟ್ ವಿಮಾನಗಳಲ್ಲಿ ಥ್ರಸ್ಟ್ ರಿವರ್ಸರ್‌ಗಳು ಎಂಬ ವ್ಯವಸ್ಥೆ ಇರುತ್ತದೆ. ಆದರೆ, ಇದರ ಮುಖ್ಯ ಉದ್ದೇಶವೆಂದರೆ ವಿಮಾನ ಲ್ಯಾಂಡಿಂಗ್ ಆದ ನಂತರ, ರನ್‌ವೇ ಮೇಲೆ ವೇಗವಾಗಿ ನಿಲ್ಲಲು ಸಹಾಯ ಮಾಡುವುದು. ಇದು ಕೇವಲ ನೆಲದ ಮೇಲಿನ ಹಿಮ್ಮುಖ ಚಲನೆಗಾಗಿ ವಿನ್ಯಾಸಗೊಂಡ ವ್ಯವಸ್ಥೆ ಅಲ್ಲ. ಹಾಗಾದರೆ ವಿಮಾನ ಹಿಂದಕ್ಕೆ ಚಲಿಸಲು ಏನು ಮಾಡುತ್ತಾರೆ? ವಿಮಾನ ನಿಲ್ದಾಣದಲ್ಲಿ, ವಿಮಾನಗಳು ಸಾಮಾನ್ಯವಾಗಿ ಟರ್ಮಿನಲ್ ಗೇಟ್‌ನಿಂದ ಹಿಂದಕ್ಕೆ ಚಲಿಸಲು ತಮ್ಮದೇ ಶಕ್ತಿಯನ್ನು ಬಳಸುವುದಿಲ್ಲ. ಈ ಉದ್ದೇಶಕ್ಕಾಗಿ, ಅತ್ಯಂತ ಸುರಕ್ಷಿತ ಮತ್ತು ನಿಯಂತ್ರಿತ ವಿಧಾನವನ್ನು ಅನುಸರಿಸಲಾಗುತ್ತದೆ, ಅದನ್ನು ಪುಶ್‌ಬ್ಯಾಕ್ ಎಂದು ಕರೆಯುತ್ತಾರೆ. ವಿಮಾನವನ್ನು ಹಿಂದಕ್ಕೆ ಸರಿಸಲು, ವಿಮಾನ ನಿಲ್ದಾಣದ ಸಿಬ್ಬಂದಿ ಪುಶ್‌ಬ್ಯಾಕ್ ಟ್ರ್ಯಾಕ್ಟರ್ ಅಥವಾ ಟಗ್ ಎಂದು ಕರೆಯಲಾಗುವ ವಿಶೇಷ ವಾಹನವನ್ನು ಬಳಸುತ್ತಾರೆ. ನೆಲದ ಸಿಬ್ಬಂದಿ ಟ್ರ್ಯಾಕ್ಟರ್ ಅನ್ನು ವಿಮಾನದ ಮುಂಭಾಗದ ಚಕ್ರಕ್ಕೆ (Nose Wheel) ಸಂಪರ್ಕಿಸುತ್ತಾರೆ. ಕೆಲವು ಟ್ರ್ಯಾಕ್ಟರ್‌ಗಳು ನೇರವಾಗಿ ಸಂಪರ್ಕಿಸಲು ಟೋಬಾರ್ (Towbar) ಅನ್ನು ಬಳಸಿದರೆ, ಇನ್ನು ಕೆಲವು ಟೋಬಾರ್ ಅಗತ್ಯವಿಲ್ಲದೆಯೇ ಚಕ್ರವನ್ನು ಎತ್ತಿ ಸಾಗಿಸುತ್ತವೆ. ಪೈಲಟ್‌ಗಳು ಏರ್ ಟ್ರಾಫಿಕ್ ಕಂಟ್ರೋಲ್‌ನಿಂದ (ಎಟಿಸಿ) ಅನುಮತಿ ಪಡೆದ ನಂತರ, ಟ್ರ್ಯಾಕ್ಟರ್ ಚಾಲಕನಿಗೆ ಚಲನೆಯ ದಿಕ್ಕನ್ನು (ಯಾವ ಕಡೆಗೆ ತಿರುಗಿಸಬೇಕು) ಸೂಚಿಸುತ್ತಾರೆ. ಟ್ರ್ಯಾಕ್ಟರ್ ಚಾಲಕನು ವಿಮಾನವನ್ನು ನಿಧಾನವಾಗಿ ಮತ್ತು ನಿಯಂತ್ರಿತ ರೀತಿಯಲ್ಲಿ, ಟರ್ಮಿನಲ್ ಗೇಟ್‌ನಿಂದ ದೂರಕ್ಕೆ ಮತ್ತು ಟ್ಯಾಕ್ಸಿವೇ (ವಿಮಾನಗಳು ರನ್‌ವೇಗೆ ಹೋಗಲು ಬಳಸುವ ಮಾರ್ಗ) ಕಡೆಗೆ ಹಿಂದಕ್ಕೆ ತಳ್ಳುತ್ತಾನೆ ಅಥವಾ ಎಳೆಯುತ್ತಾನೆ. ವಿಮಾನವು ಸರಿಯಾದ ಸ್ಥಾನ ತಲುಪಿದ ನಂತರ, ಟ್ರ್ಯಾಕ್ಟರ್‌ನ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ. ಈ ಸಮಯದಲ್ಲಿ ಪೈಲಟ್‌ಗಳು ಎಂಜಿನ್‌ಗಳನ್ನು ಆರಂಭಿಸಿ, ಮುಂದೆ ಚಲಿಸಲು ಮತ್ತು ಟೇಕಾಫ್‌ಗಾಗಿ ರನ್‌ವೇ ಕಡೆಗೆ ಸಾಗಲು ಸಿದ್ಧರಾಗುತ್ತಾರೆ.

ರಷ್ಯನ್ ಇಂಕ್, ವೋಟ್‌ಚೋರಿ, ಓವೈಸಿ ರಾಜಕೀಯ ಪ್ರಾಬಲ್ಯ

ಒಂದು ಕಾಲಕ್ಕೆ ಕಾಂಗ್ರೆಸ್ ಮತ್ತದರ ಮಿತ್ರಪಕ್ಷಗಳನ್ನು ಅಪಾರವಾಗಿ ನಂಬುತ್ತಿದ್ದ ಮುಸ್ಲಿಂ ಮತವರ್ಗ ಬಿಹಾರದಲ್ಲಿ ಈ ಬಾರಿ ಬೇರೆಡೆಗೆ ವಾಲಿದೆ. ತಮ್ಮ ಆಶಯ-ಆಕಾಂಕ್ಷೆಗಳಿಗೆ ಸ್ಪಂದಿಸುವವರು ಬೇಕೇ ವಿನಾ, ಕೇವಲ ರಾಜಕೀಯಕ್ಕಾಗಿ ಬಳಸಿ ಬಿಸಾಕುವ ಮಂದಿ ಬೇಕಾಗಿಲ್ಲ ಎಂಬ ಕಟುಸಂದೇಶವನ್ನು ಬಿಹಾರದ ಮತದಾರರು ನೀಡಿರುವುದನ್ನು ಇಲ್ಲಿ ಗಮನಿಸಬಹುದು.

ಜನಪಥ

ರಾಘವ ಶರ್ಮ ನಿಡ್ಲೆ
vveditoped@gmail.com

ಇದು 1970-80ರ ದಶಕದ ಕಥೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷವು, ಚುನಾವಣೆಗಳಲ್ಲಿ ರಷ್ಯನ್ ಇಂಕ್ ಹೊಂದಿದ ಮತಪತ್ರಗಳನ್ನು ಬಳಸಿ, ಜನರ ಮತಗಳವು ಮಾಡುತ್ತಿದೆ. ಈ ಮೂಲಕ ಚುನಾವಣೆಗಳನ್ನು ಅಕ್ರಮವಾಗಿ ಗೆಲ್ಲುತ್ತಿದೆ ಎಂಬ ಥಿಯರಿಯೊಂದು ಜೋರಾಗಿ ಸದ್ದುಮಾಡಿತ್ತು. ಚುನಾವಣೆಗೆ ಬಳಕೆಯಾದ ಮತಪತ್ರಗಳು ರಾಸಾಯನಿಕವಾಗಿ ಸಂಸ್ಕರಿಸಿದವಾಗಿದ್ದವು. ಅದರಲ್ಲಿ, ಅದೃಶ್ಯವಾಗುವ ಶಾಯಿಯಿಂದ ಮುದ್ರೆ ಹಾಕಿಸಲಾಗುತ್ತಿತ್ತು. ಜನರು ಮತ ಹಾಕಿದ 72 ಗಂಟೆಗಳ ನಂತರ ಮತದಾರರ ನಿಜವಾದ ಮುದ್ರೆ ಕಾಣಿಸುತ್ತಿರಲಿಲ್ಲ ಮತ್ತು ಇಂದಿರಾ ಗಾಂಧಿಯವರ ಕಾಂಗ್ರೆಸ್ ಪಕ್ಷದ ಹಸು ಮತ್ತು ಕರುವಿನ ಚಿಹ್ನೆ ಮೇಲೆ ಶಾಯಿ ಗೋಚರಿಸುತ್ತಿತ್ತು ಎಂಬ ದೂರುಗಳು ರಾಜಕೀಯ ಕಾರಿಡಾರ್‌ಗಳಲ್ಲಿ ಭಾರಿ ಸದ್ದು ಮಾಡಿದ್ದವು. ಆಗ ಜನಸಂಘ ಸೇರಿದಂತೆ ಬಹುಪಾಲು ಪಕ್ಷಗಳ ನಾಯಕರು ಕಾಂಗ್ರೆಸ್ ವಿರುದ್ಧ 'ವೋಟ್‌ಚೋರಿ'ಯ ಗಂಭೀರಾರೋಪ ಮಾಡಿದ್ದರು ಮತ್ತು ಪ್ರಕರಣ ಅಂದು ಸುಪ್ರೀಂಕೋರ್ಟ್ ಮೆಟ್ಟಿಲನ್ನೂ ಏರಿತ್ತು. ರಾಸಾಯನಿಕವಾಗಿ ಸಂಸ್ಕರಿಸಿದ ಈ ಮತಪತ್ರಗಳನ್ನು ರಷ್ಯಾದಲ್ಲಿ ಮುದ್ರಿಸಿ ಭಾರತಕ್ಕೆ ಆಮದು ಮಾಡಿಕೊಳ್ಳಲಾಗುತ್ತಿತ್ತು ಎಂಬ ವಾದಗಳೂ ಬಲವಾಗಿ ಕೇಳಿಬಂದಿದ್ದವು. ಆದರೆ, ''ಈ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ, ಚುನಾವಣೆಗಳು ನ್ಯಾಯಯುತವಾಗಿ ನಡೆದಿವೆ'' ಎಂದು ಕೇಂದ್ರ ಚುನಾವಣಾ ಆಯೋಗ ಅನೇಕ ಬಾರಿ ಸ್ಪಷ್ಟೀಕರಣವನ್ನೂ ನೀಡಿತ್ತು.

ಇದಾಗಿ 40-45 ವರ್ಷಗಳ ನಂತರ ಇಂಥದ್ದೇ ಮಾದರಿಯ ಆರೋಪಗಳು ಮತ್ತೆ ಕೇಳಲಾರಂಭಿಸಿವೆ. ಈಗ ಆರೋಪ ಮಾಡುತ್ತಿರುವವರು ಮಾತ್ರ ಅಂದು ಮತಗಳವಿನ ಆರೋಪ ಹೊತ್ತಿದ್ದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಮೊಮ್ಮಗ ರಾಹುಲ್ ಗಾಂಧಿ. ಅಂದು ಹೇಗೆ ವಿಪಕ್ಷಗಳು ಮಾಡಿದ್ದ ಆರೋಪಗಳನ್ನು ಚುನಾವಣಾ ಆಯೋಗ ಬದಿಗೆ ಸರಿಸಿತ್ತೋ, ಇಂದು ಅದೇ ರೀತಿ ಹಾಲಿ ಚುನಾವಣಾ ಆಯೋಗವೂ ರಾಹುಲ್ ಗಾಂಧಿಯವರ ಆರೋಪಗಳನ್ನು ಕಸದಬುಟ್ಟಿಗೆ ಎಸೆದಿದೆ. ಕಾಂಗ್ರೆಸ್ ಪಾಲಿನ ದುರಂತ ಎಂದರೆ, ಮೊನ್ನೆ ನಡೆದ ಬಿಹಾರ ಚುನಾವಣೆಯುದ್ದಕ್ಕೂ 'ವೋಟ್‌ಚೋರಿ, ವೋಟ್ ಚೋರಿ' ಎಂದು ಅಬ್ಬರಿಸಿ ಬೊಬ್ಬಿರಿದ ರಾಹುಲ್ ಗಾಂಧಿಯವರ ಆರೋಪಗಳನ್ನು ಅಲ್ಲಿನ ಮತದಾರರು ಕೂಡ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ, ಮುಖ್ಯವಾಗಿ, ಒಂದು ಕಾಲಕ್ಕೆ ರಾಜ್ಯಾದ್ಯಂತ ಮನೆ ಮಾತಾಗಿದ್ದ ಪಕ್ಷವೀಗ ಒಂದಂಕಿ ಪಾರ್ಟಿಯಾಗುವ ಮೂಲಕ ಇದ್ದ ಅಲ್ಪ ವಿಶ್ವಾಸವನ್ನೂ ಕಳೆದುಕೊಂಡು, ಹೇಳಹೆಸರಿಲ್ಲದಂತೆ ಮಕಾಡೆ ಮಲಗಿದೆ.

ದುರ್ಬಲ ನಾಯಕತ್ವ ಹಾಗೂ ದಿಕ್ಕು-ದೆಸೆಗಳಿಲ್ಲದ ಪ್ರಚಾರಭಿಯಾನಗಳಿಂದಾಗಿ ಕಾಂಗ್ರೆಸ್ ಭವಿಷ್ಯಕ್ಕೆ ಕತ್ತಲಾವರಿಸಿಬಿಟ್ಟಿದೆ. ಒಂದು ಕಾಲಕ್ಕೆ ಕಾಂಗ್ರೆಸ್ ಮತ್ತದರ ಮಿತ್ರಪಕ್ಷಗಳನ್ನು ಅಪಾರವಾಗಿ ನಂಬುತ್ತಿದ್ದ ಮುಸ್ಲಿಂ ಮತವರ್ಗ ಕೂಡ ಬಿಹಾರದಲ್ಲಿ ಈ ಬಾರಿ ಬೇರೆಡೆಗೆ ವಾಲಿದೆ. ತಮ್ಮ ಆಶಯ-ಆಕಾಂಕ್ಷೆಗಳಿಗೆ ಸ್ಪಂದಿಸುವವರು ಬೇಕೇ ವಿನಾ, ಕೇವಲ ರಾಜಕೀಯಕ್ಕಾಗಿ ಬಳಸಿ ಬಿಸಾಕುವ ಮಂದಿ ಬೇಕಾಗಿಲ್ಲ ಎಂಬ ಕಟುಸಂದೇಶವನ್ನು ಬಿಹಾರದ ಮತದಾರರು ನೀಡಿರುವುದನ್ನು ಇಲ್ಲಿ ಗಮನಿಸಬಹುದು.

ಬಿಹಾರದ ಸೀಮಾಂಚಲ್ ಪ್ರದೇಶದ 24 ಸ್ಥಾನಗಳಲ್ಲಿ ಬಹುಪಾಲನ್ನು ಎನ್‌ಡಿಎ ಗೆದ್ದುಕೊಂಡಿದೆ. ಅಧಿಕ ಮುಸ್ಲಿಂ ಜನಸಂಖ್ಯೆ ಹೊಂದಿರುವ ಪ್ರದೇಶಗಳಲ್ಲಿ ಸಂಸದ ಅಸಾದುದ್ದೀನ್ ಓವೈಸಿ ನೇತೃತ್ವದ ಎಐಎಂಐಎಂ ಮತ್ತು ಮಹಾಘಟಬಂಧನ್ ಪಕ್ಷಗಳ ಮಧ್ಯೆ ಮತಗಳು ವಿಭಜನೆಯಾಗಿವೆ. ಅಂದರೆ, ಮುಸ್ಲಿಮರ ಪ್ರಭಾವ ಹಾಗೂ ಮತಗಳು ಅಧಿಕವಾಗಿರುವ ಕ್ಷೇತ್ರಗಳಲ್ಲಿ ಕೂಡ ಕಾಂಗ್ರೆಸ್ ಒಳಗೊಂಡ ಮಹಾಘಟಬಂಧನಕ್ಕೆ ಮುಸ್ಲಿಂ ಮತಗಳನ್ನು ಆಕರ್ಷಿಸಲು ಸಾಧ್ಯವಾಗಲಿಲ್ಲ ಹಾಗೂ ಪೂರ್ನಿಯಾ, ಅರಾರಿಯಾ, ಕಟಿಹಾರ್ ಮತ್ತು ಕಿಶನ್‌ಗಂಜ್ ಎಂಬ ನಾಲ್ಕು ಜಿಲ್ಲೆಗಳನ್ನು ಒಳಗೊಂಡಿರುವ ಬಿಹಾರದ, ಪಶ್ಚಿಮ ಬಂಗಾಳದೊಂದಿಗೆ ಗಡಿ ಹಂಚಿಕೊಂಡಿರುವ ಸೀಮಾಂಚಲ ಭಾಗದಲ್ಲಿ ಎಐಎಂಐಎಂ ಪ್ರಭಾವಳಿ ಹೆಚ್ಚಾಗಿ, ಆರ್‌ಜೆಡಿ-ಕಾಂಗ್ರೆಸ್ ಅಸ್ತಿತ್ವ ಕಳೆದುಕೊಳ್ಳುತ್ತಿರುವುದನ್ನು ಈ ಫಲಿತಾಂಶ ಎತ್ತಿತೋರಿಸಿದೆ.

ಸೀಮಾಂಚಲದ 24 ಕ್ಷೇತ್ರಗಳಲ್ಲಿ ಎನ್‌ಡಿಎ 14 ಸ್ಥಾನಗಳನ್ನು ಗೆದ್ದುಕೊಂಡಿದೆ. ಅದರಲ್ಲಿ ಬಿಜೆಪಿ 7, ಜೆಡಿಯು 5 ಮತ್ತು ಚಿರಾಗ್ ಪಾಸ್ವಾನ್ ಅವರ ಎಲ್‌ಜೆಪಿ 2 ಸ್ಥಾನಗಳನ್ನು ತಮ್ಮದಾಗಿಸಿಕೊಂಡಿವೆ. ಉಳಿದಂತೆ, ಕಾಂಗ್ರೆಸ್ 4, ಆರ್‌ಜೆಡಿ 1ರಲ್ಲಿ ಮಾತ್ರ ಗೆದ್ದಿವೆ. ಎಲ್ಲಕ್ಕಿಂತ ಮುಖ್ಯವಾಗಿ, 2020ರಂತೆ ಈ ಸಲವೂ ಎಐಎಂಐಎಂ 5 ಸ್ಥಾನಗಳಲ್ಲಿ ವಿಜಯಿಯಾಗಿದೆ. ಕಳೆದ ಸಲ ಗೆದ್ದಿದ್ದ ಎಐಎಂಐಎಂನ ಐವರು ಶಾಸಕರಲ್ಲಿ, 4 ಮಂದಿ ನಂತರ ಆರ್‌ಜೆಡಿ ಜತೆ ಸೇರಿಕೊಂಡಿದ್ದರಿಂದ, ಒಬ್ಬ ಶಾಸಕ ಮಾತ್ರ ಪಕ್ಷದಲ್ಲಿ ಉಳಿದಿದ್ದರು. 2020ರಲ್ಲಿ ಎನ್‌ಡಿಎ 12, ಮಹಾಘಟಬಂಧನ 7 ಸೀಟುಗಳನ್ನು ಇಲ್ಲಿ ಗೆದ್ದಿದ್ದವು. ಈ ಸಲ ಎನ್‌ಡಿಎ ನಿರ್ವಹಣೆಯಲ್ಲಿ ಸುಧಾರಣೆ ಕಂಡಿದ್ದರೆ, 'ಇಂಡಿಯ' ಒಕ್ಕೂಟ ಮತ್ತಷ್ಟು ಕುಸಿತ ಕಂಡಿದೆ. 'ಇಂಡಿಯ' ಒಕ್ಕೂಟದ ಹಿನ್ನಡೆಗೆ ಕಾರಣವಾಗಿರುವ ಮುಸ್ಲಿಂ ಮತಗಳ ವಿಭಜನೆಯಲ್ಲಿನ ಲಾಭದ ಪಾಲು ಎಐಎಂಐಎಂಗೆ ಕೂಡ ಸಿಕ್ಕಿರುವುದು ಗಮನಾರ್ಹ.

ಸೀಮಾಂಚಲದ ಕಿಶನ್‌ಗಂಜ್ ಜಿಲ್ಲೆಯೊಂದರಲ್ಲೇ ಶೇ.67.89ರಷ್ಟು ಮುಸ್ಲಿಮರಿದ್ದರೆ, ಕಟಿಹಾರ್‌ನಲ್ಲಿ ಶೇ.44.47, ಅರಾರಿಯಾದಲ್ಲಿ ಶೇ.42.95 ಮತ್ತು ಪೂರ್ನಿಯಾದಲ್ಲಿ ಶೇ.38.46ರಷ್ಟು ಮುಸಲ್ಮಾನರಿದ್ದಾರೆ. ಜನಸಂಖ್ಯೆಯ ಹಿನ್ನೆಲೆಯಲ್ಲಿ ನೋಡುವುದಾದರೆ, ಈ ಪ್ರದೇಶವು ಮಹಾಘಟಬಂಧನದ ರಾಜಕಾರಣಕ್ಕೆ ಯೋಗ್ಯ ತಾಣವಾಗಿದೆ ಮತ್ತು ಇತಿಹಾಸದಿಂದಲೂ ಕಾಂಗ್ರೆಸ್ ಇಲ್ಲಿ ದೃಢ ರಾಜಕೀಯ ನೆಲೆಯನ್ನು ಹೊಂದಿತ್ತು. ಆದರೆ, ಮಹಾಘಟಬಂಧನದ ಮುಸ್ಲಿಂ-ಯಾದವ್ (ಎಂ-ವೈ) ಪ್ರಭಾವಳಿಯೂ ಇಲ್ಲಿ ಕೆಲಸ ಮಾಡಿಲ್ಲ. ಹಿಂದೂ ಮತಗಳ ಕ್ರೋಡೀಕರಣ ಹಾಗೂ ಜಾತಿ ಸಮೀಕರಣದಿಂದಾಗಿ ಸೀಮಾಂಚಲದಲ್ಲಿ ಎನ್‌ಡಿಎ ತನ್ನ ಸಾಧನೆ ಮುಂದುವರಿಸಿ ರುವುದರ ನಡುವೆ, ಅಸಾದುದ್ದೀನ್ ಓವೈಸಿಯವರ ಪಕ್ಷವು ತನ್ನ ರಾಜಕೀಯ ನೆಲೆಯನ್ನು ಮರುಸ್ಥಾಪನೆ ಮಾಡುವಲ್ಲಿ ಯಶಸ್ವಿಯಾಗಿದೆ.

ಓವೈಸಿ ಪಕ್ಷದ ತಂತ್ರಗಾರಿಕೆ ಹಾಗೂ ನಿರ್ವಹಣೆಯನ್ನು ನೋಡಿದಾಗ 2019ರ ಲೋಕಸಭಾ ಚುನಾವಣೆಯ ಘಟನೆಯೊಂದು ನೆನಪಾಗುತ್ತದೆ. ಅಸಾದುದ್ದೀನ್ ಓವೈಸಿ ಅವರು ಕರ್ನಾಟಕದ ಬಿಜೆಪಿ ಸಂಸದರೊಬ್ಬರನ್ನು ಭೇಟಿ ಮಾಡಿ, ಉಭಯ ಕುಶಲೋಪರಿ ವಿಚಾರಿಸಿದ್ದರು. ಮಾತುಕತೆ ವೇಳೆ, ''ನಿಮ್ಮ ಕ್ಷೇತ್ರದಲ್ಲಿ ಮುಸ್ಲಿಂ ಮತಗಳು ಕಾಂಗ್ರೆಸ್ ಕಡೆಗೆ ಕ್ರೋಡೀಕರಣಗೊಳ್ಳುವುದು ನನಗೆ ಗೊತ್ತಿದೆ. ನನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಲೇ? ಸಹಾಯ ಬೇಕಿದ್ದರೆ ಹೇಳಿ'' ಎಂದು ಓವೈಸಿ ನೇರವಾಗಿ ಕೇಳಿದ್ದರಂತೆ. ಅದಕ್ಕುತ್ತರಿಸಿದ್ದ ಬಿಜೆಪಿ ಸಂಸದರು, ''ಮುಸ್ಲಿಂ ಮತಗಳ ಕ್ರೋಡೀಕರಣವಾಗುವುದು ನಿಜ. ಹಾಗಂತ, ಅದು ನನ್ನನ್ನು ಸೋಲಿಸುವಷ್ಟರ ಮಟ್ಟಿಗೆ ಕೆಲಸ ಮಾಡದು. ಹಾಗಾಗಿ ಈಗ ನಿಮ್ಮ ಸಹಾಯ ಬೇಡ'' ಎಂದು ನಯವಾಗಿ ಹೇಳಿದ್ದರು.

ಅಂದರೆ ಬಿಜೆಪಿಯನ್ನು ಗೆಲ್ಲಿಸುವುದೇ ಓವೈಸಿ ಅವರ ಗುರಿಯಾಗಿತ್ತೇ ಎಂಬ ಪ್ರಶ್ನೆ ಅನೇಕರನ್ನು ಕಾಡಬಹುದು. ಆದರೆ, ವಾಸ್ತವದಲ್ಲಿ ಓವೈಸಿ ಗುರಿ ಕಾಂಗ್ರೆಸ್ ಪಕ್ಷ. ಕಾಂಗ್ರೆಸ್ ಜತೆ ಕೈಜೋಡಿಸುವ ಮಿತ್ರಪಕ್ಷಗಳನ್ನೂ ಎದುರಿಸಿ, ಅವರೊಂದಿಗಿರುವ ಮುಸ್ಲಿಂ ಮತಗಳನ್ನು ತಮ್ಮ ಪಕ್ಷದೆಡೆ ಸೆಳೆದುಕೊಳ್ಳುವ ತಂತ್ರಗಾರಿಕೆಯನ್ನೇ ಓವೈಸಿ ಅನುಸರಿಸುತ್ತಿದ್ದಾರೆ. ''ಬಿಜೆಪಿಯವರು ಹೇಗೂ ನಿಮ್ಮ ಅಭಿವೃದ್ಧಿಯನ್ನು ಬಯಸುವುದಿಲ್ಲ. ಆದರೆ, ನೀವು ದಶಕಗಳ ಕಾಲ ನಂಬಿದ್ದ, ಮತ ಹಾಕಿ ಬೆಂಬಲಿಸಿದ್ದ ಕಾಂಗ್ರೆಸ್ ಪಕ್ಷ ನಿಮಗಾಗಿ ಏನು ಮಾಡಿತು? ಈಗಲೂ ಮುಸಲ್ಮಾನರ ಪರಿಸ್ಥಿತಿ ಹೀಗೆ ಯಾಕೆ?

ಮುಸ್ಲಿಮರನ್ನು ತನ್ನ ಲಾಭಕ್ಕಾಗಿ ಬಳಸಿದ ಕಾಂಗ್ರೆಸ್, ಅವರ ಶ್ರೇಯೋಭಿವೃದ್ಧಿಗೆ ಕೊಡುಗೆ ನೀಡಿತೆ?'' ಎಂದು ಪ್ರಶ್ನಿಸುತ್ತಾ ಕಾಂಗ್ರೆಸ್ ಅನ್ನು ಮೂಲೆಗುಂಪು ಮಾಡಲು ಯತ್ನಿಸುತ್ತಾರೆ ಓವೈಸಿ. ಬಿಹಾರದಲ್ಲೂ ಇಂಥದ್ದೇ ಪ್ರಶ್ನೆಗಳನ್ನು ಮುಂದಿಡುತ್ತಾ, ಕಾಂಗ್ರೆಸ್-ಆರ್‌ಜೆಡಿಯ ಸಾಂಪ್ರದಾಯಿಕ ಮತಗಳನ್ನು ನಿಧಾನವಾಗಿ ತಮ್ಮ ತೆಕ್ಕೆಗೆ ಹಾಕಿಕೊಳ್ಳುತ್ತಿದ್ದಾರೆ.

''ಬಿಜೆಪಿಗೂ ನನ್ನ ಪಕ್ಷಕ್ಕೂ ಯಾವುದೇ ವ್ಯತ್ಯಾಸವಿಲ್ಲ'' ಎನ್ನುವ ಓವೈಸಿ, ''ಬಿಜೆಪಿಯವರು ಹಿಂದೂಗಳ ರಕ್ಷಣೆ ಬಗ್ಗೆ ಮಾತನಾಡುತ್ತಾರೆ, ನಾನು ಮುಸ್ಲಿಮರ ಹಿತರಕ್ಷಣೆ ಬಗ್ಗೆ ಮಾತನಾಡುತ್ತೇನೆ. ನಾನೇನು ಬಾಂಗ್ಲಾದೇಶ ಅಥವಾ ಪಾಕಿಸ್ತಾನ ಪರ ಮಾತನಾಡುವವನೇನಲ್ಲ. ದೇಶವಿರೋಧಿ ಮನಸ್ಸುಗಳನ್ನು ಟೀಕಿಸುವ ಮತ್ತು ಭಾರತದ ಪರ ಧ್ವನಿ ಎತ್ತುವ ಅಪ್ಪಟ ರಾಷ್ಟ್ರೀಯವಾದಿ ನಾನು'' ಎಂದೇ ತಮ್ಮನ್ನು ವ್ಯಾಖ್ಯಾನಿಸಿಕೊಳ್ಳುತ್ತಾರೆ. ಹಾಗೆ ನೋಡಿದರೆ, ಬಿಜೆಪಿ, ಕಾಂಗ್ರೆಸ್ ಎರಡೂ ಪಕ್ಷಗಳಲ್ಲಿ ಅವರಿಗೆ ರಾಜಕೀಯ ಮೀರಿದ ಸ್ನೇಹಿತರಿದ್ದಾರೆ. ಕೆಲ ದಿನಗಳ ಹಿಂದೆ, ಮಹಾರಾಷ್ಟ್ರದ ಜುಬಿಲಿ ಹಿಲ್ಸ್ ವಿಧಾನಸಭೆ ಕ್ಷೇತ್ರದ ಉಪಚುನಾವಣೆಗೆ ಅವರು ಕಾಂಗ್ರೆಸ್ ಅಭ್ಯರ್ಥಿ ನವೀನ್ ಯಾದವ್‌ರನ್ನು ಬೆಂಬಲಿಸಿದ್ದರು ಮತ್ತು ಚುನಾವಣೆ ಗೆದ್ದ ಕೂಡಲೇ ನವೀನ್ ಯಾದವ್ ಮೊದಲು ಭೇಟಿ ಮಾಡಿದ್ದು ಇದೇ ಅಸಾದುದ್ದೀನ್ ಓವೈಸಿಯವರನ್ನೇ. ''ನವೀನ್ ನನ್ನ ಸ್ನೇಹಿತ. ಹೀಗಾಗಿ ನಮ್ಮ ಬೆಂಬಲ. ಹಾಗಂತ ಕಾಂಗ್ರೆಸ್ ಅನ್ನು ನಾನು ಸೈದ್ಧಾಂತಿಕವಾಗಿ ವಿರೋಧಿಸುತ್ತಲೇ ಇರುತ್ತೇನೆ'' ಎನ್ನುತ್ತಾರೆ ಓವೈಸಿ.

''ಬಿಹಾರದಲ್ಲಿ 'ಇಂಡಿಯ' ಒಕ್ಕೂಟದ ಮಿತ್ರಪಕ್ಷವಾಗಿ ನಮ್ಮನ್ನೂ ಸೇರಿಸಿಕೊಳ್ಳಿ'' ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್‌ಗೆ ಪತ್ರ ಬರೆದಿದ್ದ ಓವೈಸಿ, ಕಾಂಗ್ರೆಸ್ ಅನ್ನು ಹೊರತುಪಡಿಸಿದ ಮೈತ್ರಿಗೆ ಮಾತ್ರ ನನ್ನ ಬೆಂಬಲ ಎಂಬ ಷರತ್ತನ್ನೂ ಹಾಕಿದ್ದರು. ಆದರೆ, ಕಾಂಗ್ರೆಸ್ ಅನ್ನು ದೂರ ವಿಡಲು ಆರ್‌ಜೆಡಿ ಮನಸ್ಸು ಮಾಡಲಿಲ್ಲ. ಬಹುಶಃ ಈಗ ಆರ್‌ಜೆಡಿಗೆ ತನ್ನ ತಪ್ಪಿನ ಅರಿವಾಗಿರಬಹುದು.

ಓವೈಸಿ ಅವರ ಪಕ್ಷವನ್ನು ಕಾಂಗ್ರೆಸ್ ನಾಯಕರು ಬಿಜೆಪಿಯ 'ಬಿ' ಟೀಮ್ ಎಂದು ಆರೋಪಿಸುತ್ತಾರೆ. ಮುಸ್ಲಿಂ ಅಭ್ಯರ್ಥಿಗಳನ್ನು ನಿಲ್ಲಿಸಿ, ಅಲ್ಲಿ ಮುಸ್ಲಿಮರ ಮತ ವಿಭಜನೆ ಮಾಡಿ, ಆ ಮೂಲಕ ಬಿಜೆಪಿಗೆ ನೆರವಾಗುತ್ತಾರೆ ಎನ್ನುವುದು ಓವೈಸಿ ಮೇಲಿನ ಸಾಮಾನ್ಯ ಆರೋಪ. ಭಾರತೀಯ ಮುಸ್ಲಿಂ ಸಮಾಜದ ಪ್ರಶ್ನಾತೀತ ನಾಯಕನಾಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿರುವ ಅಸಾದುದ್ದೀನ್ ಓವೈಸಿ, ''ಕಾಂಗ್ರೆಸ್ ಪಕ್ಷದ ಓಲೈಕೆ ಹಾಗೂ ತುಷ್ಟೀಕರಣ ರಾಜಕಾರಣದಿಂದಾಗಿಯೇ ಮುಸ್ಲಿಮರು ಹಿಂದುಳಿದಿದ್ದಾರೆ'' ಎಂದು ಪ್ರತಿಪಾದಿಸುತ್ತಾ, ತಾವು ಕಾಂಗ್ರೆಸ್‌ಗೆ ಪರ್ಯಾಯ ಎಂದೇ ಬಿಂಬಿಸುತ್ತಾರೆ. ಆ ಮೂಲಕ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳು ಮುಸ್ಲಿಂ ಸಮಾಜದಲ್ಲಿ ಸಾಧಿಸಿರುವ ಪ್ರಭಾವ ತಗ್ಗಿಸಲು ಅವರು ಪ್ರಯತ್ನಿಸುತ್ತಿರುತ್ತಾರೆ. ಅದರ ಮುಂದುವರಿದ ಭಾಗಕ್ಕೆ ಈಗ ಬಿಹಾರವೂ ಸಾಕ್ಷಿಯಾಗಿದೆ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇದರ ಲಾಭಾರ್ಥಿ ಬಿಜೆಪಿ ಕೂಡ ಹೌದು.

ಕರ್ನಾಟಕ, ತೆಲಂಗಾಣ, ಕೇರಳ, ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ, ಹಿಮಾಚಲ ಪ್ರದೇಶ, ಹರಿಯಾಣ, ಉತ್ತರಾಖಂಡ, ಅಸ್ಸಾಂ ರಾಜ್ಯಗಳಲ್ಲಿ ಕಾಂಗ್ರೆಸ್ ತಕ್ಕಮಟ್ಟಿಗೆ ಅಸ್ತಿತ್ವ ಉಳಿಸಿಕೊಂಡಿರುವುದು ಬಿಟ್ಟರೆ, ಬೇರೆ ರಾಜ್ಯಗಳಲ್ಲಿ ಅತಿಸಣ್ಣ ರಾಜಕೀಯ ಪಕ್ಷವಾಗಿ ಕುಸಿದುಬಿಟ್ಟಿದೆ. ಈ ರಾಜ್ಯಗಳಲ್ಲಿ ಒಂದು ಕಾಲಕ್ಕೆ ಕಾಂಗ್ರೆಸ್ ಜತೆಗಿದ್ದ ವೋಟ್‌ಬ್ಯಾಂಕ್‌ಗಳನ್ನು ಬಿಜೆಪಿ ಮತ್ತು ಪ್ರಾದೇಶಿಕ ಪಕ್ಷಗಳು ಕಸಿದುಕೊಳ್ಳುತ್ತಿವೆ. ಬಿಹಾರದಲ್ಲಿ ಕಾಂಗ್ರೆಸ್ ಜತೆಗಿದ್ದ ಮುಸಲ್ಮಾನರು 90ರ ದಶಕದ ನಂತರ ಆರ್‌ಜೆಡಿ ಕಡೆಗೆ ವಾಲಿ, ಈಗ ಓವೈಸಿಯವರ ಎಐಎಂಐಎಂ ಕಡೆ ನೋಡುತ್ತಿರುವುದಕ್ಕೆ 2020 ಮತ್ತು 2025ರ ವಿಧಾನಸಭೆ ಚುನಾವಣೆಗಳು ಸಾಕ್ಷಿಯಾಗಿವೆ. ಈ ಹಿನ್ನೆಲೆಯಲ್ಲಿ 2026ರ ಅಸ್ಸಾಂ, ತಮಿಳುನಾಡು, ಪಶ್ಚಿಮ ಬಂಗಾಳ ಹಾಗೂ 2027ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗಳಲ್ಲಿ ಎಐಎಂಐಎಂ ಯಾವ ನಿಲುವು ತಾಳಲಿದೆ ಮತ್ತು ಕಾಂಗ್ರೆಸ್ ಮತ್ತದರ ಮಿತ್ರಪಕ್ಷಗಳಿಗೆ ಎಷ್ಟರಮಟ್ಟಿಗೆ ಹಾನಿಮಾಡಲಿದೆ ಎನ್ನುವುದನ್ನು ಕಾದು ನೋಡಬೇಕು.

2014ರಲ್ಲಿ 'ಸಂಸತ್ ರತ್ನ' ಮತ್ತು 2022ರಲ್ಲಿ 'ಎಕ್ಸಲೆಂಟ್ ಎಂಪಿ' ಎಂಬ ಗೌರವಕ್ಕೆ ಪಾತ್ರರಾಗಿದ್ದ ಅಸಾದುದ್ದೀನ್ ಓವೈಸಿ, ಸಂಸತ್ತಿನಲ್ಲಿ ಮಾತನಾಡಲು ಸಿಕ್ಕ ಅವಕಾಶಗಳನ್ನು ಬಹಳ ಚೆನ್ನಾಗಿ ಬಳಸಿಕೊಳ್ಳುತ್ತಾರೆ. ಸಂವಿಧಾನ ಹಾಗೂ ಕಾನೂನುಗಳನ್ನು ಆಳವಾಗಿ ತಿಳಿದುಕೊಂಡಿರುವ ಓವೈಸಿ, ಲಂಡನ್‌ನ ಪ್ರತಿಷ್ಠಿತ ಲಿಂಕೋಲ್ನ್ಸ್ ಇನ್ ಶಿಕ್ಷಣ ಸಂಸ್ಥೆಯಿಂದ 'ಬ್ಯಾರಿಸ್ಟರ್-ಎಟ್-ಲಾ' ಪದವಿಯನ್ನೂ ಪಡೆದಿದ್ದಾರೆ. ಸಂಸತ್ತಿನಲ್ಲಿ ಕಾಣಸಿಗುವ ಕೆಲವೇ ಕೆಲವು ಚಿಂತನಶೀಲ, ಬುದ್ಧಿಜೀವಿ ಸಂಸದರಲ್ಲಿ ಓವೈಸಿ ಕೂಡ ಒಬ್ಬರು ಮತ್ತು ಅಪಾರ ಜ್ಞಾನದ ಕಾರಣದಿಂದಲೇ ಹಿರಿಯ ಸಂಸದರೂ ಅವರನ್ನು ಗೌರವದಿಂದ ಕಾಣುತ್ತಾರೆ. ಆದರೆ, ಓವೈಸಿ ಸೋದರ ಅಕ್ಬರುದ್ದೀನ್ ಓವೈಸಿ ಮಾತ್ರ ಕಟ್ಟರ್ ಪಂಥೀಯ. ಪ್ರಚೋದನಕಾರಿ ಭಾಷಣವೇ ಅವರ ಬಂಡವಾಳ.

ಅಸಾದುದ್ದೀನ್ ಓವೈಸಿ ಮಿತ್ರರಾದ ರಾಜ್ಯ ಬಿಜೆಪಿಯ ಮಾಜಿ ಸಂಸದರೊಬ್ಬರು ಒಮ್ಮೆ ಅವರಲ್ಲಿ ಮಾತನಾಡುತ್ತಾ, ''ಅಲ್ಲಾ ನೀವು ನೋಡಿದರೆ ಕಾನೂನು, ಸಂವಿಧಾನ ಎಂದು ಮಾತನಾಡುತ್ತೀರಿ. ಆದರೆ, ನಿಮ್ಮ ಸೋದರ ಯಾಕೆ ಹೀಗೆ?'' ಎಂದು ಕೇಳಿದರಂತೆ. ಅದಕ್ಕೆ ಅಸಾದುದ್ದೀನ್ ಓವೈಸಿ, ''ನೋಡಿ ಭಯ್ಯಾ, ರಾಜಕಾರಣದಲ್ಲಿ ಕೆಟ್ಟ ಪೊಲೀಸ್, ಒಳ್ಳೆಯ ಪೊಲೀಸ್ (ಬ್ಯಾಡ್ ಕಾಪ್, ಗುಡ್ ಕಾಪ್) ಎಂಬ ಎರಡೂ ಪಾತ್ರಗಳು ಮುಖ್ಯ. ಇದು ನಿಮಗೂ ಗೊತ್ತಲ್ಲವೇ'' ಎಂದು ಪಾತ್ರವರ್ಣನೆ ಮಾಡಿದರಂತೆ!

(ಲೇಖಕರು ಹಿರಿಯ ಪತ್ರಕರ್ತರು)

ಕೊನೆಮೊದಲಿಲ್ಲದ ಮಾನವ-ಪ್ರಕೃತಿ-ವನ್ಯಜೀವಿ ಸಂಘರ್ಷ

ವನ್ಯಜೀವಿಗಳು ಮತ್ತು ಪರಿಸರಕ್ಕೆ ಸಂಕಷ್ಟ ಒದಗುವುದರಿಂದ ಮರಗಳು ನಾಶವಾಗಿ, ನೀರನ್ನು ಇಂಗಿಸುವ ಮಣ್ಣಿನ ಸಾಮರ್ಥ್ಯ ಕುಂಠಿತವಾಗುತ್ತದೆ. ವರ್ಷಗಳು ಉರುಳಿದಂತೆ ಅಂತರ್ಜಲ ಮಟ್ಟವೂ ಕುಸಿಯುತ್ತದೆ. ಮಣ್ಣಿನ ಸವಕಳಿಯ ಪರಿಣಾಮ ಗುಡ್ಡ ಕುಸಿತ ಸಂಭವಿಸುತ್ತದೆ. ದೂರದ ಕೊಡಗಿನ ಬ್ರಹ್ಮಗಿರಿ ದಟ್ಟಾರಣ್ಯದಲ್ಲಿ ಹುಲಿ, ಆನೆ, ಚಿರತೆ ಮತ್ತಿತರ ವನ್ಯಜೀವಿಗಳು ಸುಸ್ಥಿತಿಯಲ್ಲಿ ಇದ್ದರೆ ಮಾತ್ರವೇ, ಬೆಂಗಳೂರಿನ ಮನೆಗಳಿಗೆ ಕಾವೇರಿ ನೀರು ಬರಲು ಸಾಧ್ಯ!

ವಿಶ್ಲೇಷಣೆ

ರವೀ ಸಜಂಗದ್ದೆ
vveditoped@gmail.com

ಈ ಭೂಮಿಯ ಮೇಲೆ ಮನುಷ್ಯನ ಅಸ್ತಿತ್ವ ಶುರುವಾದಾಗಿನಿಂದಲೂ ನಡೆಯುತ್ತಲೇ ಬಂದಿದೆ 'ಮನುಷ್ಯ-ಪರಿಸರ-ವನ್ಯಜೀವಿ'ಗಳ ನಡುವಿನ ತ್ರಿಕೋನ ಸಂಘರ್ಷ; ಇದನ್ನು ಪ್ರಪಂಚದ ಅತ್ಯಂತ ದೀರ್ಘ, ನಿರಂತರ ಹಣಾಹಣಿ ಎಂದರೂ ತಪ್ಪಾಗಲಾರದು! 'ಅಭಿವೃದ್ಧಿ'ಯ ಹೆಸರಿನಲ್ಲಿ ಮನುಷ್ಯನು ಪ್ರಕೃತಿಯ ಮೇಲೆ ನಿರಂತರ ಪ್ರಹಾರ ಮಾಡಿದ ಪರಿಣಾಮ, ತಾಪಮಾನ ಏರಿಕೆಯಂಥ ಅನೇಕ ತೊಂದರೆ/ವಿಕೋಪಗಳಿಗೆ ಸಾಕ್ಷಿಯಾಗುತ್ತಾ ಬಂದಿದ್ದೇವೆ. ಜತೆಗೆ, ಪರಿಸರ ನಾಶ, ಕಾಡುಪ್ರದೇಶವನ್ನು ಕಡಿದು ನಾಡಾಗಿ ಪರಿವರ್ತಿಸುವ ಮಾನವ ಚಾಳಿಯ ಪರಿಣಾಮವಾಗಿ ಹುಲಿ, ಚಿರತೆ, ಆನೆ, ಕರಡಿ, ಕಾಡೆಮ್ಮೆ ಮುಂತಾದ ಕಾಡುಪ್ರಾಣಿಗಳು ಆಹಾರ-ನೀರನ್ನು ಅರಸಿ ನಾಡಿಗೆ ನುಗ್ಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಹೀಗಾದಾಗ, ಸಹಜವಾಗಿ ಮನುಷ್ಯ ಮತ್ತು ಮೃಗಗಳು ಸ್ವರಕ್ಷಣೆಗಾಗಿ ಹೋರಾಡುವುದು, ಅದರಲ್ಲಿ ಪರಸ್ಪರರ ಜೀವನಷ್ಟವಾಗುವುದು/ಅಂಗವೈಕಲ್ಯ ಒದಗುವುದು ಮಾಮೂಲಾಗಿಬಿಟ್ಟಿದೆ.

ಈ ಸಂಘರ್ಷಕ್ಕೆ ಇದುವರೆಗೂ ನಿರ್ದಿಷ್ಟ, ವೈಜ್ಞಾನಿಕ ಪರಿಹಾರವನ್ನು ಕಂಡುಕೊಳ್ಳಲು ಸರಕಾರಗಳು, ಪ್ರಾಣಿದಯಾ ಸಂಘಟನೆಗಳು, ವನ್ಯಜೀವಿ ಆಂದೋಲನಕಾರರು ಮತ್ತು ವಿಜ್ಞಾನಿಗಳಿಗೆ ಆಗದ ಕಾರಣದಿಂದಾಗಿ ಇದು ಚರ್ಚಾವಿಷಯವಾಗಿ ಮಾತ್ರವೇ ಉಳಿದಿದೆ. ಹೀಗಾಗಿ ಕಾಡಿನ ಪ್ರಮಾಣ ಮತ್ತು ಕಾಡುಪ್ರಾಣಿಗಳ ಸಂಖ್ಯೆ ದಿನಗಳೆದಂತೆ ಕ್ಷೀಣಿಸುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಗೆ ಕೊಡಲಿಪೆಟ್ಟು ನೀಡುತ್ತಿರುವ ಮನುಷ್ಯ, ತನ್ನ ಈ ಕೃತ್ಯದಿಂದಾಗಿ ಅಂತಿಮವಾಗಿ ತನ್ನ ಅಸ್ತಿತ್ವಕ್ಕೇ ಸಂಚಕಾರ ಒದಗಲಿದೆ ಎಂಬುದನ್ನು ಅರಿಯುತ್ತಿಲ್ಲ, ಇದು ವಿಪರ್ಯಾಸ!

ಋತುಮಾನಕ್ಕೆ ಅನುಗುಣವಾಗಿ ನೀರು-ಆಹಾರದ ತಲಾಶೆ, ಸಂತಾನೋತ್ಪತ್ತಿಯ ಉದ್ದೇಶಗಳನ್ನು ಇಟ್ಟುಕೊಂಡು ಒಂದು ಕಾಡಿನಿಂದ ಮತ್ತೊಂದಕ್ಕೆ ವಲಸೆ ಹೋಗುತ್ತಿದ್ದ ಕಾಡುಪ್ರಾಣಿಗಳು ಈಗ ನಾಡಿನತ್ತ ಮುಖ ಮಾಡಿವೆ. ಒಂದು ಕಾಲಕ್ಕೆ ಅವು ನಿರಾಳವಾಗಿ ಓಡಾಡಿಕೊಂಡಿದ್ದ ಕಾಡಿನ ಪರಿಸರ ಈಗ ನಾಡಾಗಿರುವುದು ಇದಕ್ಕೆ ಮುಖ್ಯ ಕಾರಣ. ರೆಸಾರ್ಟ್, ಸಫಾರಿ, ಹೋಮ್ ಸ್ಟೇ, ಕಾಡು ವೀಕ್ಷಣೆ ಮುಂತಾದ ಹೆಸರಿನಲ್ಲಿ ನಾವು ವನ್ಯಜೀವಿಗಳ ಆವಾಸಸ್ಥಾನಕ್ಕೆ ಹೋಗಿ, ಅವುಗಳ ಬದುಕಿನ ಹಕ್ಕುಗಳಿಗೆ ಧಕ್ಕೆ ತಂದಿದ್ದೇವೆ. ಅರಣ್ಯ ಪ್ರದೇಶದಲ್ಲಿ ಹಾದುಹೋಗುವ 'ಕಾರಿಡಾರ್' ಹೆಸರಿನ ಯೋಜನೆಗಳು, ವಿಸ್ತರಿಸುತ್ತಿರುವ ರಾಷ್ಟ್ರೀಯ ಹೆದ್ದಾರಿಗಳು/ರೈಲುಮಾರ್ಗಗಳು, ಕಾಡಿನೊಳಗೆ ಹಾದುಹೋಗುವ ವಿದ್ಯುಚ್ಛಕ್ತಿ ಪ್ರಸರಣ ತಂತಿಗಳು ವನ್ಯಜೀವಿಗಳ ಪಾಲಿಗೆ ಮೃತ್ಯುಕೂಪಗಳಾಗಿ ಪರಿಣಮಿಸಿವೆ, ಇಲ್ಲವೇ ಅವುಗಳ ಸಂಖ್ಯೆ ತಗ್ಗುವುದಕ್ಕೆ ಕಾರಣವಾಗಿವೆ. ನಿಸರ್ಗದ ನಡುವೆ 'ರೆಸಾರ್ಟ್' ಹೆಸರಿನಲ್ಲಿ ತಲೆಯೆತ್ತಿರುವ ಕಟ್ಟಡಗಳು ಇತ್ತೀಚಿನ ಶುದ್ಧ ನಾನ್ಸೆನ್ಸ್! ಅರಣ್ಯ ಪ್ರದೇಶದಲ್ಲಿ ನಿರ್ಮಿಸಿರುವ ಕಬಿನಿ, ಹಾರಂಗಿ, ಭದ್ರಾ ಮುಂತಾದ ಅಣೆಕಟ್ಟುಗಳಿಂದಾಗಿ ಕಾಡುಗಳು ಮತ್ತು ಕಾಡುಪ್ರಾಣಿಗಳು ನಾಶವಾಗಿವೆ; ಆನೆ-ಹುಲಿಗಳಾದರೆ ಅಣೆಕಟ್ಟಿನ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಈಜಿಕೊಂಡು ಹೋಗುತ್ತವೆ, ಉಳಿದ ಪ್ರಾಣಿಗಳಿಗೆ ಅದು ಅಸಾಧ್ಯವಾಗಿ ಜಲದಿಗ್ಬಂಧನವಾಗುತ್ತದೆ! ಆಧುನಿಕತೆ, ತಂತ್ರಜ್ಞಾನ, ಅಭಿವೃದ್ಧಿಯಂಥ ಹಣೆಪಟ್ಟಿಗಳು ಮನುಷ್ಯನ ಶ್ರೇಯೋಭಿವೃದ್ಧಿಯನ್ನಷ್ಟೇ ತಲೆಯಲ್ಲಿಟ್ಟುಕೊಂಡ ಸ್ವಾರ್ಥದ ನಿಲುವುಗಳು; ಪರಿಸರ ಮತ್ತು ವನ್ಯಜೀವಿಗಳ ಹಿತರಕ್ಷಣೆಯ ದೃಷ್ಟಿಕೋನ ಇಲ್ಲಿ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ದುರಂತ!

ಪ್ರಕೃತಿ ಮತ್ತು ವನ್ಯಜೀವಿಗಳ ಜತೆಗಿನ ಮನುಷ್ಯನ ಸಂಘರ್ಷಕ್ಕೆ ಕಡಿವಾಣ ಹಾಕಲು ಇಲ್ಲಿ ಸೂಚಿಸಲಾಗಿರುವ ಒಂದಷ್ಟು ಕ್ರಮಗಳನ್ನು ಅನುಸರಿಸಬಹುದು:

- ಪರಿಸರದ ಮೇಲಿನ ಮಾನವನ ನಿರಂತರ ದಾಳಿಯಿಂದಾಗಿ ಭಾರತದಲ್ಲಿ ಕಾಡಿನ ಒಟ್ಟಾರೆ ದಟ್ಟತೆ/ಗುಣಮಟ್ಟ ಕುಸಿದಿರುವುದರಿಂದ, 'ಕಾಡು-ಪರಿಸರ-ವನ್ಯಜೀವಿ ಸಂರಕ್ಷಣೆ ನೀತಿ'ಯಲ್ಲಿ ಆಮೂಲಾಗ್ರ ಬದಲಾವಣೆ ತಂದು, ಜಾರಿಗೊಳಿಸುವ ಕೆಲಸವನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಮಾಡಬೇಕು.
- ವನ್ಯಜೀವಿಗಳ ಸಂತತಿ ಹೆಚ್ಚಾಗಲು ಅವಕ್ಕೆ ಪೂರಕ ಪರಿಸರ ಮತ್ತು ಆಹಾರದ ವ್ಯವಸ್ಥೆಯನ್ನು ಕಲ್ಪಿಸಬೇಕು. ಕಾಡುಪ್ರಾಣಿಗಳು ಒಂದು ನೆಲೆಯಿಂದ ಇನ್ನೊಂದಕ್ಕೆ ಹೋಗಲು ಇರುವ ಸಂಪರ್ಕಮಾರ್ಗವನ್ನು ಅಭಿವೃದ್ಧಿಯ ಹೆಸರಲ್ಲಿ ನಾವು ತುಂಡುಮಾಡಿದ್ದೇವೆ; ಇಂಥ ಸಂಪರ್ಕಮಾರ್ಗಗಳ ಮರುಸ್ಥಾಪನೆಯಾಗಬೇಕು.
- ಕಾಡಿನ ಒಂದು ಪ್ರದೇಶದಿಂದ ಇನ್ನೊಂದಕ್ಕೆ ವನ್ಯಜೀವಿಗಳು ಯಾಕಾಗಿ ಹೋಗುತ್ತವೆ? ಎನ್ನುವ ಕುರಿತಾದ ದೀರ್ಘಕಾಲಿಕ ಅಧ್ಯಯನ/ಸಂಶೋಧನೆಯ ಅಗತ್ಯವಿದೆ. ಜತೆಗೆ, ಕಾಡಿನ ಸಸ್ಯಸಂಕುಲದ ಗುಣಮಟ್ಟದ ಅಭಿವೃದ್ಧಿಗೆ ಒತ್ತು ನೀಡಿ, ಪ್ರಾಣಿಗಳಿಗೆ ಉಪದ್ರವ ಕೊಡುವ ಪಾರ್ಥೇನಿಯಂ, ಲಂಟಾನ, ಯುಪಟೋರಿಯಂ ಮುಂತಾದ ಕಳೆಗಿಡಗಳ ನಿರ್ಮೂಲನೆಗೂ ಯೋಜನೆ ತರಬೇಕಿದೆ. ಈ ಗಿಡಗಳು ಹಸಿರು ಹುಲ್ಲೂ ಬೆಳೆಯದಂತೆ ಮಾಡುವುದರ ಜತೆಗೆ ಕಾಡ್ಗಿಚ್ಚು ಉಂಟಾಗಲು ನೇರಹೊಣೆಯಾಗಿವೆ.
- ಅಂಕಿ-ಅಂಶಗಳನ್ನು ಪ್ರಕಟಿಸಿ ಹೆಮ್ಮೆಪಟ್ಟುಕೊಳ್ಳುವಲ್ಲಿ ಮಾತ್ರವೇ ಕಾಡು ಮತ್ತು ಪರಿಸರದ ಬಗೆಗಿನ ಸಚಿವಾಲಯಗಳು/ಇಲಾಖೆಗಳು ಶ್ರಮ ವಹಿಸುತ್ತಿರುವಂತೆ ತೋರುತ್ತದೆ! ವನ್ಯಜೀವಿಗಳ ಸಂತತಿಯನ್ನು ಉಳಿಸಿ ಬೆಳೆಸಲು ವಸ್ತುನಿಷ್ಠ ಯೋಜನೆಯನ್ನು ರೂಪಿಸಿ, ಬದಲಾದ ಹವಾಮಾನ ಮತ್ತು ಅರಣ್ಯ ಅತಿಕ್ರಮಣದಿಂದಾಗಿ ಪ್ರಾಣಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಬೇಕಾಗಿದೆ. ಆಹಾರ ಮತ್ತು ನೀರಿನ ಕುರಿತು ಗಮನಹರಿಸಿ, ಇವೆರಡೂ ಕಾಲಕಾಲಕ್ಕೆ ವನ್ಯಜೀವಿಗಳ ಪ್ರದೇಶದಲ್ಲೇ ಸಿಗುವಂತಾದರೆ ಬಹುತೇಕ ಸಮಸ್ಯೆಯನ್ನು ನೀಗಿದಂತೆ.
- 'ವರ್ಲ್ಡ್ ವೈಲ್ಡ್‌ಲೈಫ್ ಫಂಡ್' ವರದಿಯ ಪ್ರಕಾರ, ವಿಶ್ವಾದ್ಯಂತ ಕಳೆದ 5 ದಶಕಗಳಲ್ಲಿ ವನ್ಯಜೀವಿಗಳ ಸಂಖ್ಯೆಯಲ್ಲಿ ಶೇ.52ರಷ್ಟು ಇಳಿಕೆಯಾಗಿದೆ. ಮನುಷ್ಯನೇ ಇದಕ್ಕೆ ನೇರ ಮತ್ತು ಏಕೈಕ ಕಾರಣ. 'ಮೃಗಾಲಯ ಅಥವಾ ಫಾರ್ಮ್‌ನಲ್ಲಿ ವನ್ಯಜೀವಿಗಳನ್ನು ಬೆಳೆಸಿ, ಸಂವರ್ಧನೆ ಮಾಡುತ್ತೇವೆ' ಎಂದಾದರೆ, ಅದು ಅವುಗಳ ಸೂಕ್ತ ಸಂರಕ್ಷಣೆ ಖಂಡಿತಾ ಆಗಲಾರದು. ಅವುಗಳ ಸಹಜನೆಲೆಯಾದ ಕಾಡುಗಳನ್ನು ಸಂರಕ್ಷಿಸಿದಾಗ ಮಾತ್ರವೇ ವನ್ಯಜೀವಿಗಳ ಸಂರಕ್ಷಣೆ-ಸಂವರ್ಧನೆಯೂ ಆದೀತು.
- ಕೈಗಾರಿಕೆ/ಗಣಿಗಾರಿಕೆ, ಕೃಷಿ ವಿಸ್ತರಣೆ, ಬೇಟೆ, ರಸ್ತೆ-ರೈಲು ಮಾರ್ಗ ಮುಂತಾದ 'ಅಭಿವೃದ್ಧಿಪರ' ಚಟುವಟಿಕೆಗಳಿಂದಾಗಿ ವನ್ಯಜೀವಿಗಳಿಗೆ ಸಂಚಕಾರ ಒದಗಿದೆ. ಇಂಥ ಚಟುವಟಿಕೆಗಳಿಗೆ ಪೂರ್ಣವಿರಾಮ ಬೀಳಲೇಬೇಕು.

- ಕಾಡಂಚಿನ ಕೃಷಿಕರಿಗೆ ಸೂಕ್ತ ಭದ್ರತೆ ಒದಗಿಸುವ ಕೆಲಸವೂ ಆಗಬೇಕು. ಅವರ ಕೃಷಿಯೇತರ ಆದಾಯದ ಮೂಲವನ್ನು ವೃದ್ಧಿಸಿ, ಒಂದಷ್ಟು ಶಕ್ತಿ ತುಂಬಿದರೆ ಅವರೂ ಕಾಡಿನೊಳಗೆ ಹೆಚ್ಚು ಹೋಗಲಾರರು. ಕಾಡಂಚಿನ ಜನರು ಬದುಕನ್ನು ಕಟ್ಟಿಕೊಳ್ಳುವ ಭರದಲ್ಲಿ ವನ್ಯಜೀವಿಗಳಿಗೆ ತುತ್ತಾಗಿ ಬದುಕಿಗೇ ಸಂಚಕಾರ ತಂದುಕೊಳ್ಳುವಂತಾಗುವ ಪರಿಪಾಠಕ್ಕೆ ಅಂತ್ಯಹಾಡಬೇಕು.
- ಅರಣ್ಯ ಇಲಾಖೆಯ ನೌಕರರು ತಂತಮ್ಮ ಕೆಲಸಗಳನ್ನು ಕಾಯಾ-ವಾಚಾ-ಮನಸಾ ಮಾಡುವುದರ ಜತೆಗೆ, ಸ್ಥಳೀಯರನ್ನು ಒಳಗೊಂಡ ಕಾವಲು ಪಡೆಯನ್ನು ರಚಿಸಬೇಕು. ಕಾಡಂಚಿನ ಪ್ರದೇಶಗಳ ಜನರಿಗೆ ಅರಣ್ಯ ಕಾಯಿದೆ, ವನ್ಯಜೀವಿ ಸಂರಕ್ಷಣೆಯ ಕುರಿತು ಅರಿವು ಮೂಡಿಸಬೇಕು. ಕಾಡುಪ್ರಾಣಿಗಳ ದಾಳಿಯಿಂದಾಗಿ ಅನಾಹುತಕ್ಕೊಳಗಾದ/ಮರಣಿಸಿದವರ ಕುಟುಂಬಕ್ಕೆ ಸೂಕ್ತ-ಸಕಾಲಿಕ ಪರಿಹಾರ ಒದಗಿಸುವ ವ್ಯವಸ್ಥೆಯಾಗಬೇಕು.
- ಕಾಡಂಚಿನಲ್ಲಿ ಅನಧಿಕೃತವಾಗಿ ತಲೆಯೆತ್ತಿರುವ ರೆಸಾರ್ಟ್, ಹೋಮ್‌ಸ್ಟೇಗಳನ್ನು ನಿರ್ದಾಕ್ಷಿಣ್ಯವಾಗಿ ಮುಚ್ಚಿಸಬೇಕು. ಕಾಡಿನೊಳಗೆ ಜನರ ಅತಿಕ್ರಮ ಪ್ರವೇಶ ನಿಂತಾಗ, ವನ್ಯಜೀವಿಗಳ ದಾಳಿಯೂ ಕಡಿಮೆಯಾಗುತ್ತದೆ. ಸ್ಥಳೀಯ ಅರಣ್ಯಾಧಿಕಾರಿಗಳಿಂದ ಅನುಮತಿ ಪಡೆದು, ಪ್ರವೇಶಾವಕಾಶ ಇರುವ ಪ್ರದೇಶದಲ್ಲಷ್ಟೇ ಜನರು ಓಡಾಡುವಂತೆ ಆಗಬೇಕು. ಅರಣ್ಯ ಮತ್ತು ವನ್ಯಜೀವಿಗಳ ನಾಶಕ್ಕೆ ಅರಣ್ಯವಾಸಿಗಳು/ಕಾಡಂಚಿನ ಜನರೇ ಕಾರಣ ಎಂದು ಕೀಳಾಗಿ ಬಿಂಬಿಸುವ ಪರಿಪಾಠ ನಿಲ್ಲಬೇಕು.
- ಕಾಡಂಚಿನ ಜನರು ಗಡ್ಡೆ-ಗೆಣಸು, ಜೇನುತುಪ್ಪ, ಸೌದೆ, ಮಾಂಸ, ಮೇವು, ತರಗೆಲೆ ಗೊಬ್ಬರ ಮುಂತಾದವುಗಳಿಗೆ ಅರಣ್ಯಗಳನ್ನು ಅವಲಂಬಿಸಿದ್ದಾರೆ. ಇಂಥ ಒಡನಾಟಕ್ಕೆ ನಮ್ಮಲ್ಲಿನ ಕಾನೂನುಗಳು ಕತ್ತರಿ ಹಾಕಿರುವುದರಿಂದ ಅವರ ಹೊಟ್ಟೆಯ ಮೇಲೆ ಹೊಡೆದಂತಾಗಿದೆ. ಪರಿಣಾಮವಾಗಿ, ಬೀದಿಗೆ ಬಿದ್ದ ಕುಟುಂಬಗಳ ಸಂಖ್ಯೆಯೂ ದೊಡ್ಡದಿದೆ. ಅಂಥವರನ್ನು ಸಂರಕ್ಷಿಸಿ ಬದುಕು ಕಟ್ಟಿಕೊಳ್ಳಲು ಅವಕಾಶ ನೀಡಬೇಕು.

ಇನ್ನು, ಮೃಗಾಲಯಗಳಲ್ಲಿರುವ ಪ್ರಾಣಿಗಳ ಪಾಡು, ಅಲ್ಲಿನ ಅವ್ಯವಸ್ಥೆಗಳು ಹೇಳತೀರದು. ಇಲ್ಲಿ ಸಮರ್ಪಕ ಆಹಾರ-ಆರೈಕೆ-ಚಿಕಿತ್ಸೆ ಸಿಗದೆ ಸಾಯುವ ಪ್ರಾಣಿಗಳ ಸಂಖ್ಯೆಯೂ ದೊಡ್ಡದಿದೆ. ಹೀಗಾದಾಗ ಒಂದಷ್ಟು ಪ್ರತಿಭಟನೆ, ಸಚಿವರು-ಅಧಿಕಾರಿಗಳ ಸಭೆ, ಕೆಳಸ್ತರದ ನೌಕರರ ಮೇಲೆ ಶಿಸ್ತುಕ್ರಮ ಮತ್ತು ತನಿಖೆಗೆ ಆದೇಶ ಇಷ್ಟಾಗಿಬಿಟ್ಟರೆ, ಅಲ್ಲಿಗೆ ವಾರ್ತಾಪ್ರಸಾರ ಮುಕ್ತಾಯ! ಮುಂದೆ ಅಂಥದೇ ಅವಘಡವಾದಾಗ ಮತ್ತದೇ 'ಶೋ' ಪುನರಾವರ್ತನೆ. ಈ ವಲಯದಲ್ಲಿ ಆಗಬೇಕಿರುವ ಸುಧಾರಣೆಗಳು ಸಾಕಷ್ಟಿವೆ. ಆದರೆ, ನಮ್ಮಲ್ಲಿ ಎಲ್ಲವೂ ಇದೆ- ಇಚ್ಛಾಶಕ್ತಿಯೊಂದನ್ನು ಬಿಟ್ಟು!

ಲಭ್ಯವಿರುವ ಅಂಕಿ-ಅಂಶಗಳು ಮತ್ತು ಪರಿಸರ ವಿಜ್ಞಾನಿಗಳು ನೀಡಿರುವ ವಿವರಗಳು ನಿಜಕ್ಕೂ ಗಾಬರಿ ಹುಟ್ಟಿಸುತ್ತವೆ. ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದಲ್ಲಿ, ವನ್ಯಜೀವಿ ಪ್ರಭೇದಗಳು ಮತ್ತು ಕಾಡಿನ ಕ್ಷೀಣಿಸುವಿಕೆಯು ಊಹೆಗೂ ಮೀರಿದ ವೇಗದಲ್ಲಿ ನಡೆಯಲಿದೆ. ವನ್ಯಜೀವಿಗಳು ಮತ್ತು ಪರಿಸರಕ್ಕೆ ಸಂಕಷ್ಟ ಒದಗುವುದರಿಂದ ಮರಗಳು ನಾಶವಾಗಿ, ನೀರನ್ನು ಇಂಗಿಸುವ ಮಣ್ಣಿನ ಸಾಮರ್ಥ್ಯ ಕುಂಠಿತವಾಗಿ, ನೀರಿನ ಸೆಲೆಗಳು ಬತ್ತಿಹೋಗುತ್ತವೆ. ವರ್ಷಗಳು ಉರುಳಿದಂತೆ ಅಂತರ್ಜಲ ಮಟ್ಟವು ಮತ್ತಷ್ಟು ಕುಸಿಯುತ್ತದೆ. ಮಣ್ಣಿನ ಸವಕಳಿಯ ಪರಿಣಾಮ ಗುಡ್ಡ ಕುಸಿತದಂಥ ಅವಘಡಗಳು ಸಂಭವಿಸುತ್ತವೆ. ಕಾಡಿದ್ದರೆ ನಾಡು-ವನ್ಯಮೃಗಗಳು, ಕಾಡಿದ್ದರೆ ಮನುಷ್ಯ! ದೂರದ ಕೊಡಗಿನ ಬ್ರಹ್ಮಗಿರಿ ದಟ್ಟಾರಣ್ಯದಲ್ಲಿ ಹುಲಿ, ಆನೆ, ಚಿರತೆ ಮತ್ತಿತರ ವನ್ಯಜೀವಿಗಳು ಸುಸ್ಥಿತಿಯಲ್ಲಿ ಇದ್ದರೆ ಮಾತ್ರವೇ, ಬೆಂಗಳೂರಿನ ಮನೆಗಳಿಗೆ ಕಾವೇರಿ ನೀರು ಬರಲು ಸಾಧ್ಯ!

ವಿಕಾಸವಾದದ ಪಯಣದಲ್ಲಿ ಮಾನವನಿಗಿಂತ ಬಹಳ ಮೊದಲೇ ಭುವಿಯಲ್ಲಿದ್ದಿದ್ದು, ಮಾನವರು ಜೀವಿಸಲು ಅನುಕೂಲಕರ ವಾತಾವರಣವನ್ನು ಸೃಷ್ಟಿಸಿದ್ದು ಇದೇ ಅರಣ್ಯ ಮತ್ತು ಪ್ರಾಣಿಗಳು. ಅವು ಮರೆಯಾದರೆ ಮನುಷ್ಯನು ಕ್ರಮೇಣ ಅಸ್ತಿತ್ವವನ್ನು ಕಳೆದುಕೊಳ್ಳುವುದು ಕಟ್ಟಿಟ್ಟಬುತ್ತಿ. ಈ ಅಪ್ರಿಯ ಸತ್ಯವನ್ನು ಸಂಬಂಧಪಟ್ಟವರು ಇನ್ನಾದರೂ ಅರಿಯಲಿ...

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಅಲಮೇಲು, ಮೇಲುಕೋಟೆ**
ಭಟ್ಟರಿಗೆ ಫೋನ್ ಮಾಡಿದಾಗೆಲ್ಲ ‘ನೀವು ಕರೆ ಮಾಡಿದವರು ವ್ಯಸ್ತರಾಗಿದ್ದಾರೆ. ಕೆಲ ಸಮಯದ ನಂತರ ಪ್ರಯತ್ನಿಸಿ’ ಅಂತ ರೆಕಾರ್ಡೆಡ್ ಮೆಸೇಜ್ ಮೊಳಗತ್ತಲ್ಲಾ?
- **ಸದ್ಯ, ಅಸ್ತವ್ಯಸ್ತವಾಗಿದ್ದಾರೆ ಅಂತ ಹೇಳಲಿಲ್ಲವಲ್ಲ!**

- **ಕೀರ್ತಿನಾರಾಯಣ, ಕೃಷ್ಣಮೂರ್ತಿಪುರಂ**
ಯಾವ ಬೇಡಿಕೆಗಳಿಗೂ, ದರಕ್ಕೂ ಜಪ್ಪಯ್ಯ ಎನ್ನದಿದ್ದ ಮುಷ್ಕರ ನಿರತ ಕಬ್ಬು ಬೆಳೆಗಾರರನ್ನು ಸಿಎಂ ಸಿದ್ದು ಏನು ಹೇಳಿ ಬಗ್ಗಿಸಿದರು?
- **‘ಕಬ್ಬು ಡೊಂಕಾದರೇನು ಅದರ ಸಿಹಿ ಡೊಂಕೇನು…’!**

- **ತಿಟ್ಟೆ ಕೃಷ್ಣಮೂರ್ತಿ, ಸೋಸಲೆ**
ಭಟ್ರೇ, ಡಿಕೆಶಿ ಅವರಿಗೆ ಯಾವ ಹೆಜ್ಜೆ ಪರಿಚಯವಿದೆ?
- **ಮೀನಿನ ಹೆಜ್ಜೆ, ಹೆಣ್ಣಿನ ಹೆಜ್ಜೆ, ಪ್ರಸ್ತುತ ನೀರಿನ ಹೆಜ್ಜೆ!**

- **ಸಿದ್ದೇಶ್ ಅರಸೀಕೆರೆ, ಬೆಂಗಳೂರು**
ಭಟ್ರೇ, ಚುನಾವಣೆಯ ನಂತರ ಯಾರು ಟಿವಿ ಇಂಟರ್‌ವ್ಯೂ ಕೊಡ್ತಾರೋ ಅವರ ಬಗೆ ಏನು ಅನಿಸುತ್ತದೆ?
– ಅವರೇ ಚುನಾವಣೆಯಲ್ಲಿ ಗೆದ್ದಿರಬಹುದಾ ಎಂಬ ಅನುಮಾನ ಮೂಡುತ್ತದೆ!

- **ರಾಜು, ಸಿದ್ದಾಪುರ**
ಭಟ್ರೇ, ಮದುವೆಯನ್ನು ‘ಗಂಟು’ ಎಂದು ಏಕೆ ಕರೆಯುತ್ತಾರೆ?
– ಕಗ್ಗಂಟು ಎಂದು ಕರೆಯಬೇಕಿತ್ತು ಅಂತೀಯಾ?!

- **ರಮೇಶ ಹರಿವಾಣ, ತುಮಕೂರು**
ಭಟ್ರೇ, ಮದುವೆಯ ನಂತರ ಗಂಡನಿಗೆ ಮೊದಲು ಗೊತ್ತಾಗುವ ಸತ್ಯ ಯಾವುದು?
- **ತಾನು ಫ್ರಿಜ್‌ನಲ್ಲಿರುವ ‘ಐಸ್ ಕ್ರೀಮ್’ ಅಲ್ಲ, ‘ಐಸ್ ಕ್ಯೂಬ್’ ಮಾತ್ರ ಎಂದು!**

- **ವೆಂಕಟರಮಣ ಹೆಗಡೆ, ಹೊನ್ನಾವರ**
ಭಟ್ರೇ, ಮದುವೆ ಎಂದರೆ ಏನು?
– ಪ್ರೀತಿಯಿಂದ ಆರಂಭಿಸಿ, ಕೊನೆಗೆ ನೀವು ಟಿವಿ ರಿಮೋಟ್‌ಗಾಗಿ ಹೋರಾಡುವ ಕದನ!

- **ಜಿ.ಕೆ.ಸತ್ಯ, ಕಡೂರು**
ಭಟ್ರೇ, ಒಬ್ಬ ಮನುಷ್ಯ ಮದುವೆಯಾಗಲು ಪ್ರಮುಖ ಕಾರಣ ಏನು?
- **ಜೀವನಪೂರ್ತಿ ಯಾರು ನಿಮ್ಮ ತಪ್ಪಲ್ಲ ಎಂದು ಹೇಳಲು ಒಬ್ಬರು ಬೇಕಾಗಿರುತ್ತಾರೆ!**

- **ಕಿತ್ತೂರು ಪರಮ, ಬೆಳಗಾವಿ**
ಭಟ್ರೇ, ಗಂಡ-ಹೆಂಡತಿಯರ ನಡುವೆ ಸದಾ ನಡೆಯುವ ಒಪ್ಪಂದ ಯಾವುದು?
- **ಹೆಂಡತಿ ಸದಾ ಸರಿ, ಮತ್ತು ಗಂಡ ಅದನ್ನು ಒಪ್ಪಿಕೊಳ್ಳಬೇಕು ಎಂಬುದು!**

- **ಅರುಣಾ, ಶಿವಮೊಗ್ಗ**
ಭಟ್ರೇ, ಗಂಡಸು ಮದುವೆಯಾದ ಮೇಲೆ ಶಾಂತವಾಗಲು ಕಾರಣವೇನು?
- **ಹೊರಗೆ ಮಾತನಾಡುವುದರಿಂದ ಯಾವುದೇ ಉಪಯೋಗವಿಲ್ಲ ಎಂದು ಅರಿವಾಗುವುದರಿಂದ!**

- **ನಿತ್ಯಾನಂದ ಪರಪ್ಪನವರ, ಹೊಸಕೋಟೆ**
ಸರ್, ದೇವರಿಗೆ ಎಲ್ಲಾ ಭಾಷೆಗಳೂ ಬರುತ್ತವಾ?
- **ಇಲ್ಲದಿದ್ದರೆ ಆತ ಗೂಗಲ್ ಟ್ರಾನ್ಸಲೇಟರ್ ಯಾಕೆ ಕಂಡುಹಿಡಿಯುತ್ತಿದ್ದ?!**

ವಂಚಕರ ಚಾಲಾಕಿತನಕ್ಕೆ ಮದ್ದರೆಯುವವರಾರು?

ಕೇಂದ್ರ ಸರಕಾರ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ತಡೆಗೆ ಹಲವು ಕ್ರಮಗಳನ್ನು ಕೈಗೊಂಡರೂ ಸೈಬರ್ ಚಾಲಾಕಿಗಳ ಮುಂದೆ ಇವು ನಗಣ್ಯ ಎನಿಸಿವೆ. ವಂಚನೆಗೆ ಒಳಗಾದವರು ತಕ್ಷಣವೇ 1930ಕ್ಕೆ ಕರೆ ಮಾಡಿ ದೂರು ದಾಖಲಿಸಲು ಅವಕಾಶ ನೀಡಲಾಗಿದೆ. ಆದರೆ ದಾಖಲಾದ ದೂರುಗಳ ಬೆನ್ನು ಹತ್ತಿ ವಂಚಕರನ್ನು ಪತ್ತೆ ಮಾಡಿ, ಹಣವನ್ನು ಮರಳಿ ಪಡೆಯುವ ವಿಧಾನ ಇನ್ನೂ ಓಬೀರಾಯನ ಕಾಲದಲ್ಲಿದೆ.

ಲೋಕಮತ

ಲೋಕೇಶ್ ಕಾಯರ್ಗ
vveditoped@gmail.com

ನಮ್ಮ ಪೊಲೀಸರು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಲ್ಲರು. ಎಂಥದ್ದೇ ಅಪರಾಧ ಪ್ರಕರಣಗಳನ್ನು ಭೇದಿಸಬಲ್ಲರು. ಕನ್ನಡದ ಹಿರಿಯ ನಟ ಉಪೇಂದ್ರ ಅವರ ಪತ್ನಿ ನಟಿ ಪ್ರಿಯಾಂಕಾ ಉಪೇಂದ್ರ ಅವರ ವಾಟ್ಸ್ ಆ್ಯಪ್ ಹ್ಯಾಕ್ ಮಾಡಿದ ಖದೀಮನನ್ನು ದೂರದ ಬಿಹಾರದಲ್ಲಿ ಪತ್ತೆ ಹಚ್ಚಿ ಕರೆ ತರುವಲ್ಲಿ ಬೆಂಗಳೂರು ಪೊಲೀಸರು ಯಶಸ್ವಿಯಾಗಿದ್ದಾರೆ. ಈ ಖದೀಮ ಬಿಹಾರದಿಂದ ತಪ್ಪಿಸಿಕೊಂಡು ದೆಹಲಿಗೆ ಹಾರಿದರೂ ನಮ್ಮ ಪೊಲೀಸರ ಕೈಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಪೊಲೀಸರ ಈ ಸಾಧನೆಗೆ ಭೇಷ್ ಎನ್ನಲೇಬೇಕು. ಆದರೆ ಇಂಥದ್ದೇ ಇತರ ಪ್ರಕರಣಗಳಲ್ಲಿ ನಮ್ಮ ಪೊಲೀಸರ ಸಾಧನೆ ಗಮನಿಸಿದರೆ ಕಳಪೆ ಎನ್ನದೇ ವಿಧಿ ಇಲ್ಲ.

ಆನ್‌ಲೈನ್ ವಂಚನೆಗೆ ಗುರಿಯಾದ ನಿಮ್ಮ ಹತ್ತಿರದ ಸಂಬಂಧಿಕರು ಇಲ್ಲವೇ ಸ್ನೇಹಿತರನ್ನು ಕೇಳಿ ನೋಡಿ. ಅವರು ಕಳೆದುಕೊಂಡ ಹಣ ಬರುವುದಿರಲಿ, ಕನಿಷ್ಠ ಪಕ್ಷ ಅಪರಾಧಿಯನ್ನು ಪತ್ತೆ ಹಚ್ಚುವ ಕೆಲಸವೂ ನಡೆಯುವುದಿಲ್ಲ. ಪೊಲೀಸ್ ಠಾಣೆಗೆ ಹೋದರೆ, ‘‘ ನಾವು ಪ್ರಕರಣ ದಾಖಲು ಮಾಡುತ್ತೇವೆ. ಆದರೆ ನಿಮ್ಮ ದುಡ್ಡು ವಾಪಸ್ ಬರುವುದು ಕಷ್ಟ’’ ಎಂಬ ನಿರುತ್ಸಾಹಿ ಮಾತುಗಳು ಕೇಳಿ ಬರುತ್ತವೆ. ಬಹುತೇಕ ಸಂದರ್ಭಗಳಲ್ಲಿ ಎಫ್ ಐಆರ್ ದಾಖಲಾದ ಬಳಿಕ ಹಲವು ಬಾರಿ ಠಾಣೆಗೆ ಎಡತಾಕಿದರೂ, ಅಪರಾಧಿಗಳ ಜಾಡು ಹಿಡಿಯುವ ಪ್ರಯತ್ನವೇ ನಡೆದಿರುವುದಿಲ್ಲ. ವಂಚಕರು ಎಲ್ಲಿಯವರು ? ಅವರ ಬ್ಯಾಂಕ್ ಖಾತೆ ಎಲ್ಲಿದೆ ? ವಂಚಕರ ಖಾತೆಯಲ್ಲಿರುವ ಹಣ ಸ್ತಂಭನಕ್ಕೆ ಆಯಾ ಬ್ಯಾಂಕ್‌ಗಳಿಗೆ ಮನವಿ ಮಾಡಬಹುದೇ ಇತ್ಯಾದಿ ಪ್ರಶ್ನೆಗಳನ್ನು ಮುಂದಿಟ್ಟು ಠಾಣೆಗೆ ಹೋಗುವ ಸಂತ್ರಸ್ತರಿಗೆ ಸಿಗುವುದು, ‘ನಾಳೆ ಬನ್ನಿ’ ಎಂಬ ಸಿದ್ಧ ಉತ್ತರ.

ಆನ್‌ಲೈನ್ ವಂಚನೆ ಪ್ರಕರಣಗಳಲ್ಲಿ ಸಮಯ ಎಲ್ಲಕ್ಕಿಂತ ಮುಖ್ಯ. ಹಣ ಕಳೆದುಕೊಂಡವರು ತಕ್ಷಣವೇ ಸೈಬರ್ ಠಾಣೆಗೆ ಬಂದು ದೂರು ನೀಡಿದರೆ, ದುಡ್ಡು ವಂಚಕರ ಖಾತೆಗೆ ಸೇರದಂತೆ ಮಾಡಲು ಸಾಧ್ಯವಿದೆ. ಆದರೆ ಇದನ್ನು ಮಾಡಬೇಕಾದವರು ಸೈಬರ್ ಠಾಣೆ ಪೊಲೀಸರು. ನಮ್ಮ ಪೊಲೀಸರು ಸಮರೋಪಾದಿಯಲ್ಲಿ ಕಾರ್ಯಪ್ರವೃತ್ತರಾಗದೇ ಹೋದರೆ ಅದೆಷ್ಟೇ ಮೊತ್ತದ ಪ್ರಕರಣವಾದರೂ ಹಳ್ಳ ಹಿಡಿಯುವುದು ಖಚಿತ. ಸೈಬರ್ ಅಪರಾಧವಾಗಲಿ, ಆನ್‌ಲೈನ್ ವಂಚನೆ ಪ್ರಕರಣಗಳಾಗಲಿ ಪೊಲೀಸರ ಮೇಲೆ ಮೇಲ್ಮಟ್ಟದಲ್ಲಿ ಒತ್ತಡ ಹೇರದೇ ಹೋದರೆ, ಪ್ರಕರಣಗಳು ಮುಂದಕ್ಕೆ ಸಾಗುವುದಿಲ್ಲ ಎನ್ನುವುದು ಬಹುತೇಕರ ಅಭಿಪ್ರಾಯ.

ಇದೀಗ ರಾಜ್ಯದಲ್ಲೇ ಅತಿ ದೊಡ್ಡ ಡಿಜಿಟಲ್ ಅರೆಸ್ಟ್ ಪ್ರಕರಣವೊಂದು ಬೆಳಕಿಗೆ ಬಂದಿದೆ. ಬೆಂಗಳೂರಿನ ಮಹಿಳಾ ಟೆಕ್ಕಿಯೊಬ್ಬರು ‘ ಡಿಜಿಟಲ್ ಅರೆಸ್ಟ್ ’ ಹೆಸರಿನಲ್ಲಿ 31.83 ಕೋಟಿ ಹಣ ಕಳೆದುಕೊಂಡಿದ್ದಾರೆ. ಈ ಬಗ್ಗೆ ಪ್ರಕರಣ ಸಂಬಂಧ ಪ್ರತಿಕ್ರಿಯಿಸಿರುವ ಗೃಹಸಚಿವ ಪರಮೇಶ್ವರ್ ಅವರು ಎಂದಿನಂತೆ, ‘ವಂಚಕರನ್ನು ಹಿಡಿದೇ ಸಿದ್ಧ’ ಎಂದು ಗುಡುಗಿದ್ದಾರೆ. ಆದರೆ ಕಳೆದ ಐದು ವರ್ಷಗಳಲ್ಲಿ ಸೈಬರ್ ವಂಚನೆಗೆ ಸಂಬಂಧಿಸಿದ ಬಹುತೇಕ ಪ್ರಕರಣಗಳಲ್ಲಿ ನಮ್ಮ ಗುಡುಗಾಟಗಳೆಲ್ಲವೂ ಗೊಣಗಾಟವಾಗಿ ಪರಿವರ್ತನೆಯಾಗಿವೆಯೇ ಹೊರತು ಫಲಿತಾಂಶ ಸಿಕ್ಕಿಲ್ಲ.

ಯಾವುದೇ ವ್ಯಕ್ತಿ ಜೀವನ ಪರ್ಯಂತ ಕಷ್ಟಪಟ್ಟು ದುಡಿದು ಗಳಿಸಿದ ಹಣವನ್ನು ಕ್ಷಣ ಮಾತ್ರದಲ್ಲಿ ಕಳೆದುಕೊಂಡಾಗ ಆಗುವ ಯಾತನೆಯನ್ನು ಬಣ್ಣಿಸಲು ಸಾಧ್ಯವಿಲ್ಲ. ಇಂಥವರು ಅಲ್ಪ ಸ್ವಲ್ಪ ಹಣವಾದರೂ ಸಿಗಲಿ ಎಂದು ಪೆಚ್ಚು ಮೋರೆ ಹಾಕಿಕೊಂಡು ಠಾಣೆಗಳಿಗೆ ಬಂದಾಗ ಪೊಲೀಸರೇ ಸಾಂತ್ವನ ಹೇಳಿ, ಧೈರ್ಯ ತುಂಬಬೇಕಾಗುತ್ತದೆ. ಇದರಿಂದ ಆಘಾತಕ್ಕೊಳಗಾದ ವ್ಯಕ್ತಿ ಜೀವಕ್ಕೆ ಅಪಾಯ ತಂದುಕೊಳ್ಳುವುದನ್ನು ತಡೆಯಬಹುದು. ಆದರೆ ನಮ್ಮ ಪೊಲೀಸರ ಬಾಯಲ್ಲಿ ಇಂತಹ ಉಪಚಾರದ ಮಾತುಗಳು ಬರುವುದು ಅಪರೂಪ.

ಕನಿಷ್ಠ ಪಕ್ಷ ಅಪರಾಧಿಯನ್ನು ಪತ್ತೆ ಹಚ್ಚುವ ಕೆಲಸವಾದರೂ ಅಗಲಿ ಎಂದರೆ, ಹೆಚ್ಚಿನ ಪ್ರಕರಣಗಳಲ್ಲಿ ತನಿಖೆಯನ್ನೇ ನಡೆಸದೆ ‘ಬಿ’ ರಿಪೋರ್ಟ್ ಸಲ್ಲಿಸಲಾಗುತ್ತದೆ.

ಸೈಬರ್ ಅಪರಾಧಕ್ಕೆ ಸಂಬಂಧಿಸಿ ಕಳೆದ ವರ್ಷ ನವೆಂಬರ್ 30ರ ತನಕ ರಾಜ್ಯದಲ್ಲಿ 20,875 ಎಫ್ ಐಆರ್ ದಾಖಲಾಗಿವೆ. ಈ ಪೈಕಿ ಪತ್ತೆಯಾಗಿರುವುದು ಕೇವಲ 873 ಪ್ರಕರಣಗಳು. 112 ಪ್ರಕರಣಗಳಲ್ಲಿ ಬಿ ರಿಪೋರ್ಟ್ ದಾಖಲಾಗಿದೆ. 16784 ಪ್ರಕರಣಗಳಲ್ಲಿ ಇನ್ನೂ ತನಿಖೆ ಮುಂದುವರಿದಿದೆ. ಇದು ಕಳೆದ ವಿಧಾನಸಭಾ ಅಧಿವೇಶನದಲ್ಲಿ ನಮ್ಮ ಗೃಹ ಇಲಾಖೆ ಸದನಕ್ಕೆ ನೀಡಿದ ಮಾಹಿತಿ. ಇದರಲ್ಲಿ ಸಾಮಾಜಿಕ ಜಾಲತಾಣದಲ್ಲಿ ಕಿರುಕುಳ, ಬೆದರಿಕೆ ಒಡ್ಡಿದ ಪ್ರಕರಣಗಳೂ ಸೇರಿವೆ. ಪೊಲೀಸರು ಬಗೆಹರಿಸಿದ 873 ಪ್ರಕರಣಗಳಲ್ಲಿ ಹೆಚ್ಚಿನವು ಈ ರೀತಿಯ ಸ್ಥಳೀಯ ದೂರುಗಳು.

ಆನ್‌ಲೈನ್ ವಂಚನೆ ವಿಷಯಕ್ಕೆ ಬಂದಾಗ 2023ರಿಂದ ಈ ತನಕ ರಾಜ್ಯದಲ್ಲಿ 60 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಸೈಬರ್ ವಂಚಕರನ್ನು ಬಂಧಿಸಿ, ಚಾರ್ಜ್‌ಶೀಟ್ ಸಲ್ಲಿಸಲಾದ ಅಥವಾ ಪತ್ತೆ ಹಚ್ಚಿದ ಪ್ರಕರಣಗಳ ಪ್ರಮಾಣವು ಶೇ.10 ಕ್ಕಿಂತಲೂ ಕಡಿಮೆ ಇದೆ. ಇನ್ನು ಶಿಕ್ಷೆಗೆ ಗುರಿಯಾದ ಆರೋಪಿಗಳ ಸಂಖ್ಯೆ ಇನ್ನೂ 80 ದಾಟಿಲ್ಲ. ರಾಜಧಾನಿ ಬೆಂಗಳೂರು ಒಂದರಲ್ಲಿಯೇ ದಿನವೊಂದಕ್ಕೆ ಸರಾಸರಿ 48ರಿಂದ 50 ಆನ್‌ಲೈನ್ ವಂಚನೆ ಪ್ರಕರಣಗಳು ದಾಖಲಾಗುತ್ತಿವೆ. ಕಳೆದ ವರ್ಷ ಸುಮಾರು 17,560 ಪ್ರಕರಣಗಳು ದಾಖಲಾಗಿವೆ. ಜನರು 3,000 ಕೋಟಿಗೂ ಮಿಕ್ಕಿದ ಹಣವನ್ನು ಕಳೆದುಕೊಂಡಿದ್ದಾರೆ. ಆದರೆ ಪತ್ತೆಯಾದ ಪ್ರಕರಣಗಳು ಮೂರಂಕಿ ದಾಟಿಲ್ಲ. ವಂಚಕರ ಖಾತೆಯಲ್ಲಿದ್ದ ಸುಮಾರು 652 ಕೋಟಿ ಹಣ ಫ್ರೀಜ್ ಮಾಡಲಾಗಿದ್ದರೂ ವಸೂಲಿ ಮಾಡಲು ಸಾಧ್ಯವಾಗಿದ್ದು ಕೇವಲ 139 ಕೋಟಿ ರು. ಮಾತ್ರ.

ಇನ್ನು ರಾಷ್ಟ್ರ ಮಟ್ಟಕ್ಕೆ ಬಂದರೆ ಆನ್‌ಲೈನ್ ವಂಚನೆ ಪ್ರಕರಣಗಳು ಇನ್ನಷ್ಟು ಬೆಚ್ಚಿ ಬೀಳಿಸುವಂತಿದೆ. ದೇಶದಲ್ಲಿ ದಿನಕ್ಕೆ ಸರಾಸರಿ 7,000 ಸೈಬರ್ ಅಪರಾಧ ದೂರುಗಳು ದಾಖಲಾಗುತ್ತಿವೆ. ಇವುಗಳಲ್ಲಿ ಶೇ.85ರಷ್ಟು ಪ್ರಕರಣಗಳು ಆನ್‌ಲೈನ್ ಹಣಕಾಸು ವಂಚನೆಗೆ ಸಂಬಂಧಿಸಿವೆ. 2024 ರಲ್ಲಿ ಸುಮಾರು 22.68 ಲಕ್ಷ ಸೈಬರ್ ಅಪರಾಧ ಪ್ರಕರಣಗಳು ವರದಿಯಾಗಿದ್ದು, ಭಾರತೀಯರು ಒಂದೇ ವರ್ಷ ಸುಮಾರು 22,845 ಕೋಟಿ ರು. ಕಳೆದುಕೊಂಡಿದ್ದಾರೆ. ಅಂದರೆ ದಿನವೊಂದಕ್ಕೆ ಸರಾಸರಿ 6.25 ಕೋಟಿ ರು. ದುಡ್ಡು ವಂಚಕರ ಪಾಲಾಗುತ್ತಿದೆ.

ಇಷ್ಟೆಲ್ಲ ಅಂಕಿ ಅಂಶಗಳನ್ನು ಮುಂದಿಡಲು ಕಾರಣ, ನಮ್ಮ ಪೊಲೀಸರ ವೈಫಲ್ಯವನ್ನು ಬೊಟ್ಟು ಮಾಡುವುದಲ್ಲ. ಸೈಬರ್ ಅಪರಾಧವನ್ನು ತಡೆಯುವುದು ನಮ್ಮ ಪೊಲೀಸರ ವ್ಯಾಪ್ತಿಯನ್ನು ಮೀರಿದ್ದು. ಇದು ಉಳಿದ ಅಪರಾಧ ಪ್ರಕರಣಗಳಂತೆ ಠಾಣೆಗಳ ಸರಹದ್ದಿನಲ್ಲಿ ನಡೆಯುವಂಥದ್ದಲ್ಲ. ಬಹುತೇಕ ಪ್ರಕರಣಗಳೆಲ್ಲವೂ ದೇಶದ ಗಡಿ ದಾಟಿ ಅಂತಾರಾಷ್ಟ್ರೀಯ ವ್ಯಾಪ್ತಿಯನ್ನು ಹೊಂದಿವೆ. ಕಾಂಬೋಡಿಯಾ, ಲಾವೋಸ್, ಮ್ಯಾನ್ಮಾರ್ ಮುಂತಾದ ಆಗ್ನೇಯ ಏಷ್ಯಾ ದೇಶಗಳು, ಮಲೇಷ್ಯಾ, ಅಫ್ಘಾನಿಸ್ತಾನ, ಪಾಕಿಸ್ತಾನದಂತಹ ನೆರೆ ರಾಷ್ಟ್ರಗಳು, ನೈಜೀರಿಯಾದಂತಹ ಆಫ್ರಿಕಾದ ದೇಶಗಳ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆಯಾಗುವ ಹಣವನ್ನು ತಡೆಯುವುದು ಇಲ್ಲವೇ ಮರಳಿ ಪಡೆಯುವುದು ನಮ್ಮ ಪೊಲೀಸರ ಕಾರ್ಯವ್ಯಾಪ್ತಿಗೆ ನಿಲುಕದ ಸಂಗತಿ.

ಬಿಹಾರ, ಜಾರ್ಖಂಡ್, ಉತ್ತರಪ್ರದೇಶ, ಹರಿಯಾಣ ಮುಂತಾದ ಉತ್ತರ ಭಾರತದ ರಾಜ್ಯಗಳಿಂದ ಕಾರ್ಯಾಚರಿಸುವ ಸೈಬರ್ ವಂಚಕರನ್ನು ಪತ್ತೆ ಮಾಡಬೇಕಾದರೂ ಮೊದಲು ನಮ್ಮ ಬ್ಯಾಂಕ್‌ಗಳನ್ನು ಸಂಪರ್ಕಿಸಿ, ಖಾತೆ ಫ್ರೀಜ್ ಮಾಡಲು ತಿಳಿಸಬೇಕು. ನಂತರ ಆಯಾ ರಾಜ್ಯದ ಪೊಲೀಸರನ್ನು ಸಂಪರ್ಕಿಸಿ ವಂಚಕರ ಪತ್ತೆಗೆ ಮುಂದಾಗಬೇಕು. ಇಡೀ ಊರಿಗೆ ಊರೇ ಸೈಬರ್ ವಂಚಕರಿಂದ ತುಂಬಿದ ಹಳ್ಳಿಗಳು ನಮ್ಮ ದೇಶದಲ್ಲಿವೆ. ಇಂಥ ಕಡೆ ನಮ್ಮ ಪೊಲೀಸರು ಹೋದರೂ ಅಪರಾಧಿಗಳನ್ನು ಬಂಧಿಸಿ, ತರುವುದು ಸುಲಭದ ಕೆಲಸವಲ್ಲ.

ಸೈಬರ್ ವಂಚನೆಯನ್ನು ಸಮರ್ಥವಾಗಿ ತಡೆಯಬೇಕಾದರೆ ಪೊಲೀಸರು, ಸೈಬರ್ ತಜ್ಞರು, ಬ್ಯಾಂಕಿಂಗ್ ತಜ್ಞರು ಮತ್ತು ವಿದೇಶಾಂಗ ಖಾತೆಗೆ ಸಂಬಂಧಿಸಿದ ಸಿಬ್ಬಂದಿಯನ್ನೊಳಗೊಂಡ ಪ್ರತ್ಯೇಕ ಕೇಂದ್ರೀಯ ದಳ ಅತ್ಯಗತ್ಯ. ಈ ಪಡೆ ಇಲಾಖೆಗಳನ್ನು ಮತ್ತು ಗಡಿಗಳನ್ನು ಮೀರಿ ಕೆಲಸ ನಿರ್ವಹಿಸಲು ಸಾಧ್ಯವಾದರೆ ಮಾತ್ರ ವಂಚನೆ ಪ್ರಕರಣಗಳನ್ನು ಪತ್ತೆ ಹಚ್ಚಲು ಮತ್ತು ಅಪರಾಧಿಗಳನ್ನು ಶಿಕ್ಷಿಸಲು ಸಾಧ್ಯವಿದೆ.

ಕೇಂದ್ರ ಸರಕಾರ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ತಡೆಗೆ ಹಲವು ಕ್ರಮಗಳನ್ನು ಕೈಗೊಂಡರೂ ಸೈಬರ್ ಚಾಲಾಕಿಗಳ ಮುಂದೆ ಇವು ನಗಣ್ಯ ಎನಿಸಿವೆ. ವಂಚನೆಗೆ ಒಳಗಾದವರು ತಕ್ಷಣವೇ 1930ಕ್ಕೆ ಕರೆ ಮಾಡಿ ದೂರು ದಾಖಲಿಸಲು ಅವಕಾಶ ನೀಡಲಾಗಿದೆ. ಆದರೆ ದಾಖಲಾದ ದೂರುಗಳ ಬೆನ್ನು ಹತ್ತಿ ವಂಚಕರನ್ನು ಪತ್ತೆ ಮಾಡಿ, ಹಣವನ್ನು ಮರಳಿ ಪಡೆಯುವ ವಿಧಾನ ಇನ್ನೂ ಓಬೀರಾಯನ ಕಾಲದಲ್ಲಿದೆ. ಇಂತಹ ವಂಚನೆ ಪ್ರಕರಣಗಳಲ್ಲಿ ಒಂದೊಂದು ಬ್ಯಾಂಕಿನ ನೀತಿ ಒಂದೊಂದು ರೀತಿಯದ್ದಾಗಿದೆ. ಕೆಲವು ಬ್ಯಾಂಕ್‌ಗಳು ಪೊಲೀಸರ ಮನವಿಗೆ ತಕ್ಷಣ ಸ್ಪಂದಿಸಿ ಅಕೌಂಟ್ ಫ್ರೀಜ್ ಮಾಡುವ ಜತೆಗೆ ಹಣವನ್ನು ಹಿಂತಿರುಗಿಸಲು ಸಹಕರಿಸುತ್ತವೆ. ಇನ್ನು ಕೆಲವು ಬ್ಯಾಂಕುಗಳು ಕೋರ್ಟ್ ಆದೇಶದ ಹೊರತಾಗಿ ಹಣ ವರ್ಗಾವಣೆ ಸಾಧ್ಯವಿಲ್ಲ ಎನ್ನುತ್ತವೆ.

ಸೈಬರ್ ವಂಚಕರು ತಮ್ಮ ಖಾತೆಗೆ ಹಣ ವರ್ಗಾವಣೆಯಾದ ಕೆಲವೇ ಕ್ಷಣಗಳಲ್ಲಿ ಬೇರೆ ಖಾತೆಗಳಿಗೆ ಈ ಹಣವನ್ನು ವರ್ಗಾಯಿಸಿಕೊಳ್ಳುತ್ತಾರೆ. ವಂಚನೆಗೊಳ ಗಾದವರು ದೂರು ನೀಡಿದ ತಕ್ಷಣವೇ ಯಾವ ಖಾತೆಗೆ ಈ ಹಣ ವರ್ಗಾವಣೆಯಾಗಿದೆ ಎಂದು ಪತ್ತೆ ಹಚ್ಚುವುದು ಮುಖ್ಯ. ಈ ಸಂದರ್ಭದಲ್ಲಿ ಪೊಲೀಸರು ಮತ್ತು ಬ್ಯಾಂಕ್ ಸಿಬ್ಬಂದಿ ನಿಮಿಷಗಳಲ್ಲಿ ಕಾರ್ಯಾಚರಣೆ ನಡೆಸಿದರಷ್ಟೇ ಹಣ ಮರಳಿ ಪಡೆಯಲು ಸಾಧ್ಯ. ಇಲ್ಲಿ ಯಾರೇ ವಿಳಂಬ ಮಾಡಿದರೂ ನಷ್ಟ ಗ್ರಾಹಕರಿಗೆ.

ಬಹುತೇಕ ಸಂದರ್ಭಗಳಲ್ಲಿ ವಂಚಕರು ಹಲವು ಖಾತೆಗಳಿಗೆ ಹಣ ವರ್ಗಾಯಿಸಿಕೊಂಡು ಹಣ ಡ್ರಾ ಮಾಡಲು ಪ್ರಯತ್ನಿಸುತ್ತಾರೆ. ಯಾವುದೋ ಒಂದು ಖಾತೆಯಲ್ಲಿ ಕೆಲವು ಲಕ್ಷ ಹಣ ಉಳಿದಿದೆ ಎಂದಿಟ್ಟುಕೊಳ್ಳೋಣ. ಬ್ಯಾಂಕ್ ಸಿಬ್ಬಂದಿ ಇದನ್ನು ಮನದಟ್ಟು ಮಾಡಿಕೊಂಡು ಹಣ ವರ್ಗಾಯಿಸಿದರೆ ಸರಿ. ಒಂದು ವೇಳೆ ಕೋರ್ಟ್ ಆದೇಶಕ್ಕೆ ಪಟ್ಟು ಹಿಡಿದರೆ ಗ್ರಾಹಕರು ವಕೀಲರನ್ನು ಹಿಡಿದು ನ್ಯಾಯಾಲಯದ ಆದೇಶ ತರಬೇಕಾದರೆ ಮತ್ತೆ ಇಷ್ಟೇ ಹಣ ಖರ್ಚು ಮಾಡಬೇಕು. ಆನ್‌ಲೈನ್ ವಂಚನೆಗೊಳಗಾದ ಬಹುತೇಕರು ತಮ್ಮ ಹಣ ‘ದೇವರ ಹುಂಡಿ ಸೇರಿದೆ’ ಎಂದು ಸುಮ್ಮನಾಗುವುದೇ ಹೆಚ್ಚು. ಕೆಲವರು ಸಂಬಂಧಿಕರ ಕಿಡಿ ನುಡಿ, ಮರ್ಯಾದೆಗೆ ಅಂಜಿ ದೂರು ನೀಡಲೂ ಮುಂದಾಗುವುದಿಲ್ಲ.

ವ್ಯಕ್ತಿಯೊಬ್ಬನ ದುಡಿಮೆಯ ಹಣವನ್ನು ಮೋಸದಿಂದ ಲಪಟಾಯಿಸಿ ಆತನ ಬದುಕನ್ನು ಕತ್ತಲೆಗೆ ತಳ್ಳುವ ಸೈಬರ್ ವಂಚನೆ ದೇಶದ್ರೋಹಕ್ಕಿಂತಲೂ ಮಿಗಿಲಾದ ಅಪರಾಧ ಕೃತ್ಯ. ಇಂಥವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲು ಕಾನೂನು ತಿದ್ದುಪಡಿ ತರುವುದು ಅತ್ಯವಶ್ಯಕ. ಸೈಬರ್ ವಂಚನೆಯನ್ನು ಪೂರ್ತಿ ತಡೆಯುವುದು ಸದ್ಯಕ್ಕಂತೂ ಆಗದ ಮಾತು. ಆದರೆ ಈ ಆರ್ಥಿಕ ಅಪರಾಧವನ್ನು ನಿಯಂತ್ರಿಸಲು ಸಾಧ್ಯವಿದೆ. ಜನರಲ್ಲಿ ಅದರಲ್ಲೂ ದಿನಪತ್ರಿಕೆ, ಟಿ.ವಿ ಸುದ್ದಿಗಳನ್ನು ನೋಡಲೂ ಪುರುಸೊತ್ತಿಲ್ಲದೆ, ಸದಾ ‘ಕಾಯಕ’ ನಿರತ ದೊಡ್ಡ ಮನುಷ್ಯರಿಗೆ ಈ ದೇಶದ ಕಾನೂನಿನಲ್ಲಿ ‘ಡಿಜಿಟಲ್ ಅರೆಸ್ಟ್’ ಎಂಬ ಪದ ಇಲ್ಲ ಎನ್ನುವುದನ್ನು ತಿಳಿ ಹೇಳಬೇಕಾಗಿದೆ.

ಸೈಬರ್ ವಂಚನೆಗಳು ನಡೆದಾಗ ತಕ್ಷಣ ಕಾರ್ಯೋನ್ಮುಖವಾಗಲು ಕೇಂದ್ರ ಮತ್ತು ರಾಜ್ಯ ಇಲಾಖೆಗಳ ಸಿಬಂದಿಯನ್ನೊಳಗೊಂಡ ಪ್ರತ್ಯೇಕ ದಳ ಅತ್ಯಗತ್ಯ. ವಂಚನೆಗೊಳಗಾದವರು ದೂರುಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸಾಮಾನ್ಯ ಕೋರ್ಟ್‌ಗಳಲ್ಲಿ ವರ್ಷಗಟ್ಟಲೆ ಕಾಯಬೇಕು. ಇದನ್ನು ತಪ್ಪಿಸಲು ಲೋಕ ಅದಾಲತ್ ಮಾದರಿ ಯಲ್ಲಿ ಪ್ರತ್ಯೇಕ ಅದಾಲತ್ ನಡೆಸುವುದು ಉತ್ತಮ.

ಇಂದಿನ ಡಿಜಿಟಲೀಕರಣದ ಯುಗದಲ್ಲಿ ನಮ್ಮ ಬಹುತೇಕ ಎಲ್ಲ ದಾಖಲೆಗಳು ಆನ್‌ಲೈನ್‌ನಲ್ಲಿ ಲಭ್ಯ. ಇವುಗಳು ಸೋರಿಕೆಯಾಗದಂತೆ ತಡೆಯುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ನಮ್ಮ ಸೈಬರ್ ತಜ್ಞರು ಇನ್ನಷ್ಟು ಸುರಕ್ಷತಾ ಕ್ರಮಗಳನ್ನು ಸೂಚಿಸಬೇಕಾಗಿದೆ. ಸಂಭಾವ್ಯ ಅಪಾಯಗಳ ಬಗ್ಗೆ ಮುಂಚಿತವಾಗಿ ಮಾಹಿತಿ ಹಂಚಿಕೊಳ್ಳಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಆತುರಕ್ಕೆ ಬೀಳದೆ ನಮ್ಮ ಹಣ ಮತ್ತು ದಾಖಲೆಗಳ ಸುರಕ್ಷತೆ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿದೆ. ವಂಚಕರ ಚಾಲಾಕಿತನಕ್ಕೆ ನಾವೇ ಮದ್ದರೆಯಬೇಕಿದೆ.

ಹಸನಾಗುವುದೇ ಸಹಕಾರಿ ಸಂಸ್ಥೆಗಳ ರಹದಾರಿ?

ಪ್ರತಿಸ್ಪಂದನ

ಹೊಸೂರು ರತ್ನಾಕರ ಶೆಟ್ಟಿ
vveditoped@gmail.com

‘ಸಹಕಾರ’ ಅಂಕಣದಲ್ಲಿ (ನ.15) ಪ್ರಕಟವಾದ ಲಕ್ಷ್ಮೀಪತಯ್ಯ ಅವರ ‘ಸಹಕಾರ ಸಪ್ತಾಹದ ಮಹತ್ವ’ ಬರಹವು ಸಕಾಲಿಕವಾಗಿ ಮೂಡಿ ಬಂದಿದೆ. ಸಹಕಾರಿ ತತ್ವದ ಪರಿಕಲ್ಪನೆ ಹಾಗೂ ಅದಕ್ಕಾಗಿ ಶ್ರಮಿಸಿದ ಅಂದಿನ ಕೃಷಿ ಮಂತ್ರಿ, ಎಂ.ವಿ. ಕೃಷ್ಣಪ್ಪ ಅವರು 1952ರಲ್ಲಿ ಅಂದಿನ ಪ್ರಧಾನಿ ನೆಹರುರವರ ವಿಶ್ವಾಸ ಗಳಿಸಿ, ವಿದೇಶಗಳಿಂದ ಹೊಸ ತಳಿಗಳ ಹಸುಗಳನ್ನು ತಂದು ಭಾರತದ ರೈತರಿಗೆ ಪರಿಚಯಿಸಿ, ಸಹಕಾರಿ ತತ್ವದ ಮೂಲಕ ಕ್ಷೀರೋತ್ಪನ್ನ ಕ್ರಾಂತಿಗೆ ಮುನ್ನುಡಿ ಬರೆದಿರುವುದು ಈಗ ಇತಿಹಾಸ.

ಪ್ರಾಯಶಃ, ರೈತರ ಬಗೆಗಿನ ಎಂ.ವಿ. ಕೃಷ್ಣಪ್ಪ ಅವರ ಕಾಳಜಿ ಅಥವಾ ಉತ್ಸಾಹವು ತದನಂತರದ ನಮ್ಮ ಜನನಾಯಕರಲ್ಲಿ ಕಾಣೆಯಾಗಿರುವುದರ ಪರಿಣಾಮ, ಸುಮಾರು 7 ದಶಕಗಳ ನಂತರವೂ ಸಹಕಾರ ಕ್ಷೇತ್ರವು ಉದ್ದೇಶಿತ ಗುರಿ ಸಾಧನೆಯಲ್ಲಿ ವಿಫಲವಾಗಿದೆ ಎಂದೇ ಹೇಳಬಹುದು. ಸದಾ ಮುಂಗಾರಿನ ಜತೆ ಗುದ್ದಾಡಿಯೇ ಬದುಕಬೇಕಾದ ರೈತರ ಆರ್ಥಿಕತೆಯು ಎಂದೂ ಸ್ಥಿರವಾಗಿರದು ಎನ್ನುವ ದೂರ ದೃಷ್ಟಿಯಿಂದೇ ಇರಬೇಕು ಅಂದಿನ ನೇತಾರರು ಸಹಕಾರಿ ಪರಿಕಲ್ಪನೆಯನ್ನು ಪರಿಚಯಿಸಿದ್ದು.

‘ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ’ ಎನ್ನುವ ಸಹಕಾರಿ ತತ್ವವು ಗ್ರಾಮೀಣ ಜನತೆಯ ಆರ್ಥಿಕ ಅಭಿವೃದ್ಧಿಯ ರಹದಾರಿಯಾಗಬಲ್ಲ ಎಲ್ಲಾ ಸಾಧ್ಯತೆಗಳು ನಿಚ್ಚಳವಾಗಿದ್ದವು. ಚದುರಿಹೋಗಿರುವ ರೈತರು, ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರ ಕೃಷಿ ಚಟುವಟಿಕೆಗಳಿಗೆ ಬೇಕಾದ ಬೀಜ, ರಸಗೊಬ್ಬರವನ್ನು ಒದಗಿಸುವಲ್ಲಿ ಸಹಕಾರ ವ್ಯವಸ್ಥೆಯು ನೆರವಾಗಬಲ್ಲದು. ಮಾತ್ರವಲ್ಲ, ಶೋಷಣೆಗೆ ಒಳಗಾಗುತ್ತಿರುವ ರೈತರಿಗೆ ನೆರವು ನೀಡಿ, ಮಧ್ಯವರ್ತಿಗಳ ಪಾಲಾಗುತ್ತಿರುವ ಅಧಿಕ ಲಾಭಾಂಶವನ್ನು ಅವರಿಗೆ ಕೊಡಿಸುವಲ್ಲಿ, ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವಲ್ಲಿ ಈ ವ್ಯವಸ್ಥೆಯ ಸಾಂಘಿಕ ಶಕ್ತಿಯು ನೆರವಾಗಬಲ್ಲದು. ಹೀಗೆ ಸಹಕಾರ ತತ್ವದ ಮೂಲಕ ಯಶಸ್ಸಿನ ಉತ್ತುಂಗಕ್ಕೆ ಏರಿದವರ ಉದಾಹರಣೆಗಳು ಸಾಕಷ್ಟಿವೆ. ಗುಜರಾತಿನ ಏಳು ಬಡ ಮಹಿಳೆಯರಿಂದ ಆರಂಭಗೊಂಡ ‘ಲಿಜ್ಜತ್ ಪಾಪಡ್’ ಇಂದು ವಾರ್ಷಿಕ 20,000 ಕೋಟಿ ರುಪಾಯಿಗೂ ಮಿಗಿಲಾದ ವ್ಯವಹಾರ ಮಾಡುತ್ತಿದ್ದರೆ, ಗುಜರಾತಿನ ಮತ್ತೊಂದು ಬ್ರ್ಯಾಂಡ್ ಎನಿಸಿಕೊಂಡಿರುವ ‘ಅಮುಲ್’ ಇವತ್ತು ಹೈನು ಉತ್ಪನ್ನಗಳ ವಿಷಯದಲ್ಲಿ ಮನೆಮಾತಾಗಿದೆ. ಹಾಗೆಯೇ ಕರ್ನಾಟಕದ ಕೆಎಂಎಫ್ ಕೂಡ ‘ನಂದಿನಿ’ ಬ್ರ್ಯಾಂಡ್‌ನ ಮೂಲಕ ಮಾರುಕಟ್ಟೆಯಲ್ಲಿ ವಿಜೃಂಭಿಸಿ, ಕರ್ನಾಟಕದ ಸುಮಾರು 25 ಲಕ್ಷ ಬಡ ರೈತ ಕುಟುಂಬಗಳ ಪಾಲಿನ ಆಶಾಕಿರಣವಾಗಿ ಹೊರಹೊಮ್ಮಿದೆ.

ಹೌದು, ಈ ಎಲ್ಲಾ ಸಂಸ್ಥೆಗಳೂ ಸಹಕಾರಿ ತತ್ವದ ಅಡಿಯಲ್ಲಿ ಉದಯಿಸಿ ಬೆಳೆದು ಮಿಂಚುತ್ತಿರುವ ಧ್ರುವತಾರೆಗಳೇ. ಏಕೆಂದರೆ, ಇವು ಅಸಾಮಾನ್ಯ ಸಾಧನೆಯನ್ನು ಮಾಡಿರುವುದಷ್ಟೇ ಅಲ್ಲ, ಆರ್ಥಿಕ ಅಭಿವೃದ್ಧಿಯ ಸಂಪೂರ್ಣ ಫಲವನ್ನು, ಅಪಾರ ಸಂಖ್ಯೆಯ ಬಡಜನರಿಗೆ ಹಂಚುವ ಮೂಲಕ ಬಹು ಅಪೇಕ್ಷಿತ ‘ಆರ್ಥಿಕ ಒಳಗೊಳ್ಳುವಿಕೆ’ ಮತ್ತು ‘ಸಂಯೋಜಿತ ಬೆಳವಣಿಗೆ’ (Economic Inclusion & Inclusive Growth) ಎಂಬ ಪರಿಕಲ್ಪನೆಗಳಿಗೆ ವಿಶೇಷ ವ್ಯಾಖ್ಯಾನವನ್ನೂ ನೀಡಿವೆ. ಇಂಥ ಯಶೋಗಾಥೆಗಳು ನಿರಂತರವಾಗಿ ಹರಿದು ಬರುತ್ತಿದ್ದರೆ, ಸಮಾಜದ ಹಾಗೂ ಗ್ರಾಮೀಣ ಆರ್ಥಿಕತೆಯ ಅಭಿವೃದ್ಧಿಗೆ ಟೊಂಕಕಟ್ಟಿ ಹೆಣಗಾಡುತ್ತಿರುವ ಪರಿಣತರೂ ನೆಮ್ಮದಿಯ ನಿಟ್ಟುಸಿರನ್ನು ಬಿಡುವಂತಾಗುತ್ತದೆ.

ಆದರೆ ವಾಸ್ತವದಲ್ಲಿ ಬಹುತೇಕ ಸಹಕಾರಿ ಸಂಸ್ಥೆಗಳು ಸದಾ ಸಮಸ್ಯೆಯ ಸುಳಿಯಲ್ಲೇ ಒದ್ದಾಡುವುದು ನೇತಾರರ, ಆರ್ಥಿಕ ಪರಿಣತರ ನಿದ್ರೆಗೆಡಿಸುವಂತಾಗಿದೆ. ಹೀಗಾಗಿ, ಸಹಕಾರಿ ಸಂಸ್ಥೆಗಳ ಮೂಲಭೂತ ಸಮಸ್ಯೆಗಳತ್ತ ಒಂದಿಷ್ಟು ಗಮನಹರಿಸೋಣ:

ಬಂಡವಾಳದ ಕೊರತೆ: ಸಹಕಾರಿ ಸಂಸ್ಥೆಗಳು, ವಿಶೇಷವಾಗಿ ಹಣಕಾಸು ನಿರ್ವಹಣೆ ಮಾಡುವ ಸಂಘಗಳು ಬಂಡವಾಳದ ಕೊರತೆಯಿಂದ ಬಳಲುತ್ತಿವೆ. ‘ಚಿಕ್ಕದೇ ಚೊಕ್ಕದು’ (small is beautiful) ಎನ್ನುವ ಕಾಲ ಬದಿಗೆ ಸರಿದಿದೆ. ಈಗ ಏನಿದ್ದರೂ ಬಲಾಢ್ಯ ಸಂಸ್ಥೆಗಳದ್ದೇ ಕಾರುಬಾರು. ಅಪಾರ ಪ್ರಮಾಣದ ಬಂಡವಾಳವನ್ನು ಸುರಿದು, ಇಂದಿನ ಲಾಭ- ನಷ್ಟಗಳ ಬಗ್ಗೆ ಚಿಂತಿಸದೆ, ಮಾರುಕಟ್ಟೆಯಲ್ಲಿ ಸ್ಥಿರವಾಗಿ ನೆಲೆಸಿ, ಮುಂಬರುವ ದಿನಗಳಲ್ಲಿ ಎಲ್ಲವನ್ನೂ ಬಾಚಿಕೊಳ್ಳುವ ಹಪಾಹಪಿಯು ಇಂದಿನ ಮಾರುಕಟ್ಟೆಯ ಟ್ರೆಂಡ್ ಎಂದೇ ಹೇಳಬಹುದು. ಆದರೆ, ಸಹಕಾರಿ ಸಂಸ್ಥೆಗಳ ಷೇರುದಾರರು ಸಾಮಾನ್ಯರಾಗಿರುವುದರಿಂದ, ಆ ಮಟ್ಟದ ಬಂಡವಾಳದ ಹರಿವು ಅಸಾಧ್ಯವೆಂದೇ ಹೇಳಬೇಕು.

ಪರಿಣತರ ಕೊರತೆ: ಈಗ ಎಲ್ಲಾ ವಸ್ತುಗಳು, ಸೇವೆಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧೆಗೆ ಇಳಿಯಬೇಕಾದ ಅನಿವಾರ್ಯತೆಯ ಹಂತಕ್ಕೆ ಬಂದು ಮುಟ್ಟಿದ್ದೇವೆ. ಹಾಗಾಗಿ, ನಾವು ಉತ್ಕೃಷ್ಟ ಗುಣಮಟ್ಟದ ವಸ್ತು/ಸೇವೆಗಳನ್ನು ಸೃಷ್ಟಿಸಬೇಕು. ಇದಕ್ಕಾಗಿ ವಿಶೇಷ ಪರಿಣತರ ದಂಡನ್ನು, ಅವರು ಕೇಳಿದಷ್ಟು ವೇತನ ನೀಡಿ, ಮಾರುಕಟ್ಟೆಯ ಸ್ಪರ್ಧಾ ಅಖಾಡಕ್ಕೆ ಇಳಿಯಬೇಕಾಗುತ್ತದೆ. ಆದರೆ ಇದು ನಮ್ಮ ಸಹಕಾರ ಸಂಘಗಳ ಸದ್ಯದ ಪರಿಸ್ಥಿತಿಯಲ್ಲಿ ಅಸಾಧ್ಯವೇ.

ಛಲವಿಲ್ಲದ ಕೈಂಕರ್ಯ: ನಮ್ಮಲ್ಲನೇಕರು ಸಹಕಾರಿ ತತ್ವದ ಮೂಲಮಂತ್ರವನ್ನೇ ಮರೆತಿರುತ್ತಾರೆ. ಹೀಗಾಗಿ, ‘ಎಲ್ಲರಿಗಾಗಿ ನಾನು’ ಎನ್ನುವುದು ತೆರೆಯ ಮರೆಗೆ ಸರಿದು, ‘ನನಗಾಗಿ ಎಲ್ಲರೂ’ ಏನಾದರೂ ಮಾಡಲು ಎನ್ನುವ ಸ್ವಾರ್ಥತೆ ನುಸುಳುತ್ತದೆ. ಆಗ ಸಾಂಘಿಕ ಸಾಧನೆಗೆ ಅಡ್ಡಿಯಾಗುವುದು ಸಹಜ. ಸಂಘ-ಸಂಸ್ಥೆಯ ಎಲ್ಲಾ ಪಾಲುದಾರರು ಉದ್ದೇಶಿತ ಗುರಿ ಸಾಧನೆಯತ್ತ ಸಾಗುವುದು ತುಸು ಕಷ್ಟವೇ ಸರಿ. ಈಗಿನ ಉದ್ದಿಮೆ/ವ್ಯವಹಾರವೆಂದರೆ ಬರೀ ಹೂಡಿಕೆ ಒಂದೇ ಅಲ್ಲ, ಅದೊಂದು ತಪಸ್ಸು. ಅದಕ್ಕಾಗಿ ಹೂಡಿಕೆದಾರರ ಅವಿರತ ಶ್ರಮ, ತ್ಯಾಗ, ಅಪಮಾನ, ಸೋಲು, ಹತಾಶೆ ಎಲ್ಲವನ್ನೂ ಮೀರಿ ಬೆಳೆಯುವ ದೃಢಸಂಕಲ್ಪವಿರಬೇಕು. ಈ ಎಲ್ಲ ಗುಣಗಳನ್ನು ಸಮೂಹದ ಪಾಲುದಾರರಲ್ಲಿ ಕಾಣುವುದು ತುಸು ಕಷ್ಟವೇ ಸರಿ. ಇದು ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಮಾರಕವಾಗಬಹುದು.

ಅತಿಯಾದ ರಾಜಕೀಯ ಹಸ್ತಕ್ಷೇಪ: ಪ್ರಾಯಶಃ ಇದು ಸಹಕಾರಿ ಸಂಸ್ಥೆಗಳಿಗೆ ಅಂಟಿದ ಒಂದು ಘೋರಶಾಪವೆಂದೇ ಹೇಳಬಹುದು. ಯಾವುದೇ ಸಂಸ್ಥೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಪೂರ್ವನಿರ್ಧಾರಿತ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಆಂತರಿಕ ಆಗುಹೋಗುಗಳ ಬಗ್ಗೆ ರಾಜಕಾರಣಿಗಳ ಅನವಶ್ಯಕ ಮೂಗುತೂರಿಕೆಯಿಂದ ಕ್ರಿಯಾಶೀಲತೆ ಮತ್ತು ವೃತ್ತಿಪರತೆಯ ಮೇಲೆ ವ್ಯತಿರಿಕ್ತ ಪರಿಣಾಮವಾಗುತ್ತದೆ. ಸಂಘ-ಸಂಸ್ಥೆಗಳ ಮೇಲಿನ ತಮ್ಮ ಹಿಡಿತವನ್ನು ಮತ್ತಷ್ಟು ಗಟ್ಟಿಗೊಳಿಸಲು ರಾಜಕಾರಣಿಗಳು ಸದಾ ಇನ್ನಿಲ್ಲದ ಕಸರತ್ತನ್ನು ಮಾಡುತ್ತಲೇ ಇರುತ್ತಾರೆ. ಸರಕಾರಿ ಸ್ವಾಮ್ಯದ ಸಹಕಾರಿ ಸಂಸ್ಥೆಗಳಲ್ಲಿ ಈ ರೀತಿಯ ಅತಿರೇಕಗಳಿಗೆ ಎಲ್ಲೆಯೇ ಇರುವುದಿಲ್ಲ. ಈ ಪಿಡುಗುಗಳನ್ನು ಮೀರಿ ಬೆಳೆಯುವ ಸಾಹಸ ತುಸು ಕಷ್ಟದ್ದೇ ಸರಿ.

ಆಂತರಿಕ ಲೆಕ್ಕಪರಿಶೋಧನೆಯ ಅಸಮರ್ಪಕತೆ: ಯಾವುದೇ ಸಂಸ್ಥೆಯಲ್ಲಿ ನಡೆಯಬಹುದಾದ ಆಂತರಿಕ ಕ್ರಿಯಾಲೋಪಗಳನ್ನು ಸಕಾಲಕ್ಕೆ ಪತ್ತೆಹಚ್ಚುವ ವ್ಯವಸ್ಥೆ ಇಲ್ಲದಿದ್ದಲ್ಲಿ, ಅಂಥ ಸಂಸ್ಥೆಯು ಬಹಳಷ್ಟು ಹಾನಿಯನ್ನು ಅನುಭವಿಸಬೇಕಾಗುತ್ತದೆ. ಇಲ್ಲಿ ಹಾನಿಯಾದ ಮೇಲೆ ಕಾರ್ಯಪ್ರವೃತ್ತರಾಗುವುದಕ್ಕಿಂತ, ಹಾನಿಯಾಗದಂತೆ ತಡೆಯಬಲ್ಲ ಸಮರ್ಥ, ಸಂವೇದನಾಶೀಲ ತಜ್ಞರ ತಂಡ ಕಾವಲಾಗಿರಬೇಕು. ಇದಕ್ಕಾಗಿ ಸಂಸ್ಥೆಯು ಅಧಿಕ ವೆಚ್ಚವನ್ನು ಭರಿಸಲು ಶಕ್ತವಾಗಿರಬೇಕು. ಆದರೆ ನಮ್ಮ ಸಹಕಾರಿ ಸಂಸ್ಥೆಗಳು ಆ ಪರಿಯ ಆರ್ಥಿಕ ಸದೃಢತೆಯನ್ನು ಹೊಂದಿರುವುದಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ‘ಊರು ಕೊಳ್ಳೆ ಹೊಡೆದ ನಂತರ ದಿಡ್ಡಿಬಾಗಿಲು ಹಾಕಿದಂತೆ’ ಬಹಳಷ್ಟು ಹಾನಿಯ ನಂತರ ಸಂಸ್ಥೆಗಳು ಕ್ರಮಕ್ಕೆ ಮುಂದಾಗುತ್ತವೆ.

ಹೀಗೆ ಸಾಲು ಸಾಲು ಸಮಸ್ಯೆಗಳ ನಡುವೆ ಅಲ್ಲಲ್ಲಿ ಆಶಾಕಿರಣಗಳು ಗೋಚರಿಸುವ ಬಗೆಗಿನ ಪ್ರಬಲ ನಂಬಿಕೆಯೊಂದಿಗೆ ಮುನ್ನುಗ್ಗಿ, ‘ಅಮುಲ್’, ‘ಕೆಎಂಎಫ್’ಗಳಂಥ ಬಲಾಢ್ಯ ಸಹಕಾರಿ ಸಂಸ್ಥೆಗಳನ್ನು ಕಟ್ಟಲು ಸರಕಾರಿ ವ್ಯವಸ್ಥೆಯು ಉತ್ಸಾಹಿ ಉದ್ದಿಮೆದಾರರ ಜತೆ ಸಮರ್ಪಕ ಭಾವದೊಂದಿಗೆ ಕೈಜೋಡಿಸಲು ಇದು ಸಕಾಲ.

(ಲೇಖಕರು ಹವ್ಯಾಸಿ ಬರಹಗಾರರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪ್ರಲೋಭನೆಗಳ ಹುನ್ನಾರ!

‘ಉಚಿತ ಉಚಿತ’ ಎನ್ನುವ ಮಂತ್ರಜಪದಿಂದಲೇ ಅನೇಕ ರಾಷ್ಟ್ರಗಳು ನಮ್ಮ ಕಣ್ಣೆದುರೇ ಕುಸಿದ ಉದಾಹರಣೆಗಳಿವೆ. ಸಮಾಜವಾದದ ಅನಾಹುತಗಳ ಕುರಿತಾದ ಡಾ. ನಿರಂಜನ ಪೂಜಾರ ಅವರ ಎರಡನೇ ಲೇಖನದಲ್ಲಿ (ನ.17) ಸೋವಿಯತ್ ಒಕ್ಕೂಟ, ಚೀನಾ ಮತ್ತು ಪೂರ್ವ ಯುರೋಪಿನ ದೇಶಗಳು ಅನುಭವಿಸಿದ ಆರ್ಥಿಕ ಪತನ ಹಾಗೂ ರಾಜಕೀಯ ಅರಾಜಕತೆಯನ್ನು ಅವರು ಜಾಡು ಬಿಡದೆ ವಿವರಿಸಿದ್ದಾರೆ. ಈ ಪೈಕಿ ವೆನಿಜುವೆಲಾದ ಸ್ಥಿತಿ ಅತ್ಯಂತ ಹೃದಯವಿದ್ರಾವಕ- ಶ್ರಮಕ್ಕೆ ಮೌಲ್ಯವಿಲ್ಲದ ವ್ಯವಸ್ಥೆ, ಆದಾಯಕ್ಕಿಂತ ಹೆಚ್ಚಿನ ವೆಚ್ಚ, ಕೊನೆಗೆ ಪಾತಾಳಕ್ಕಿಳಿದ ಆರ್ಥಿಕತೆ!

1991ರಲ್ಲಿ ನಾವೂ ಇದೇ ರೀತಿಯ ಸಮಾಜವಾದಿ ಹೊಡೆತಕ್ಕೆ ಒಳಗಾಗಿದ್ದೆವು. ಆಗ ಶೇ.45ರಷ್ಟು ಜನಸಂಖ್ಯೆಯು ಬಡತನ ರೇಖೆಗಿಂತ ಕೆಳಗೆ ಬೀಳುವಂಥ ಸಂಕಟವನ್ನು ಅನುಭವಿಸಿತ್ತು. ಆ ನರಳಾಟವನ್ನು ಈಗಲೂ ಮರೆಯಲು ಸಾಧ್ಯವಿಲ್ಲ. ಇಂದಿಗೂ ಇದೇ ದಾರಿಗೆ ನಮ್ಮನ್ನು ಎಳೆಯುತ್ತಿದೆ ಪ್ರಲೋಭನೆಗಳ ಸರಪಳಿ, ಅಂಕಿ-ಸಂಖ್ಯೆಗಳ ಆಧಾರವಿಲ್ಲದ ಚುನಾವಣಾ ಭರವಸೆಗಳು! ಉದಾಹರಣೆಗೆ, ಬಿಹಾರದ ಜನತೆಗೆ ಒಂದು ಕೋಟಿಯಷ್ಟು ಹೊಸ ಸರಕಾರಿ ಉದ್ಯೋಗವನ್ನು ನೀಡುತ್ತೇವೆ ಎಂಬ ಬಿಜೆಪಿಯ ಭರವಸೆ. ಅಂದರೆ, 13 ಕೋಟಿ ಜನಸಂಖ್ಯೆಯಿರುವ ಆ ರಾಜ್ಯದಲ್ಲಿ ಈಗಿರುವ 27 ಲಕ್ಷ ಸರಕಾರಿ ನೌಕರಿಗಳ ಜತೆಗೆ, ಮತ್ತೆ 100 ಲಕ್ಷ ಉದ್ಯೋಗಗಳ ಸೃಷ್ಟಿಯೇ? ಅವರ ಸಂಬಳ, ಸೌಕರ್ಯ-ಸವಲತ್ತುಗಳ ವೆಚ್ಚ ಎಷ್ಟಾಗುತ್ತದೆ? ಈಗಿನ ಹೊರೆಯೇ 40,000 ಕೋಟಿಯಷ್ಟಿದೆ; ಹೊಸ ನೇಮಕಾತಿಗಳೊಂದಿಗೆ ಅದೇ ಅನುಪಾತದಲ್ಲಿ ಹೆಚ್ಚಾಗುವ ಹೊರೆಯು 1,60,000 ಕೋಟಿಯನ್ನು ತಲುಪಲಿದೆ. ಅಂದರೆ, ಒಟ್ಟು 2 ಲಕ್ಷ ಕೋಟಿ! ಬಿಹಾರದ 2024ರ ಬಜೆಟ್ 3 ಲಕ್ಷ ಕೋಟಿ ಎನ್ನುವುದನ್ನೂ ಗಮನಿಸಬೇಕು…!

ಉಚಿತ ಭರವಸೆಗಳ ಸ್ಪರ್ಧೆಯಲ್ಲಿ ಆಮ್ ಆದ್ಮಿ ಪಕ್ಷ, ರಾಷ್ಟ್ರೀಯ ಜನತಾದಳ, ಕಾಂಗ್ರೆಸ್‌ಗಿಂತ ಎಲ್ಲಿಯೂ ಹಿಂದೆ ಬೀಳದ ವಾಗ್ದಾನಗಳನ್ನು ಬಿಜೆಪಿಯೂ ನೀಡುತ್ತಿರುವುದು ಚಿಂತೆಯನ್ನು ಉಂಟುಮಾಡಿರುವ ಸಂಗತಿ. ಲಂಗು-ಲಗಾಮು ಇಲ್ಲದ ಇಂಥ ಭರವಸೆಗಳಿಗೆ ತಡೆಯಿಲ್ಲವೇ? ಇಂಥ ಮಹತ್ತರ ಘೋಷಣೆಯ ಹಿಂದೆ ಇರುವ ಲೆಕ್ಕಾಚಾರವನ್ನು ಬಹಿರಂಗಪಡಿಸುವ ಬಾಧ್ಯತೆಯು ಯಾವ ಸಂಹಿತೆಯಲ್ಲೂ ಇಲ್ಲವೇ? ಮತದಾರರಿಗೂ ಈ ಸಂಖ್ಯೆಗಳ ಬಗ್ಗೆ ಪ್ರಶ್ನಿಸುವ ನಿರ್ದಿಷ್ಟ ಹಕ್ಕು, ವ್ಯವಸ್ಥೆ ಎಲ್ಲಿದೆ? ನಾವು ನಿಜವಾಗಿ ಯಾವ ದಿಕ್ಕಿನತ್ತ ಹೆಜ್ಜೆ ಇಡುತ್ತಿದ್ದೇವೆ? ವೆನಿಜುವೆಲಾದ ಕಣ್ಣೀರಿನ ಕಥೆಯನ್ನು ನಾವು ಓದಿ ಚರ್ಚಿಸಿಬಿಟ್ಟರೆ ಮಾತ್ರವೇ ಆಯಿತೇ? ಪಾಠ ಕಲಿಯದೆಯೇ ಮುಂದುವರಿಯುವುದೇ ನಮ್ಮ ಹಣೆಬರಹವಾಗಿಹೋಯಿತೇ?

– ಶರದ್ ದೇಶಪಾಂಡೆ, ಹುಬ್ಬಳ್ಳಿ

ಸಮೀಕರಣದ ಪರಿವರ್ತನೆ

ಬಿಹಾರದ ವಿಧಾನಸಭಾ ಚುನಾವಣೆಯು, ಸಾಂಪ್ರದಾಯಿಕ 'MY' (ಮುಸ್ಲಿಂ-ಯಾದವ) ಸಮೀಕರಣವು ಬಲವನ್ನು ಕಳೆದುಕೊಂಡಿರುವುದನ್ನು ತೋರಿಸಿತು. ಅದು ಎನ್‌ಡಿಎ ಒಕ್ಕೂಟದ ಹೊಸ ತಂತ್ರವಾದ "MY" (ಮಹಿಳಾ-ಯುವ) ಶಕ್ತಿಯ ಮೇಲೆ ಕೇಂದ್ರೀಕೃತವಾಗಿತ್ತು. ಯುವ ಜಾನಪದ ಗಾಯಕಿ ಮೈಥಿಲಿ ಠಾಕೂರ್ ಅವರ ಗೆಲುವು ‘ಸಾಂಸ್ಕೃತಿಕ ಶಕ್ತಿಯ ಪ್ರವೇಶ’ಕ್ಕೆ ಸಾಕ್ಷಿಯಾಯಿತು. ರಾಜಕೀಯೇತರ ನೆಲೆಯವರಾದ ಅವರ ಕಳಂಕರಹಿತ ಮತ್ತು ಸರಳ ವ್ಯಕ್ತಿತ್ವವು ಮತದಾರರಿಗೆ ಹೊಸ ಭರವಸೆಯನ್ನು ನೀಡಿತು. ಜನರು ಜಾತಿ ಲೆಕ್ಕಾಚಾರಗಳನ್ನೂ ಮೀರಿ, ಮೌಲ್ಯಗಳಿಗೆ ಮತ್ತು ನೈತಿಕತೆಗೆ ಮತವನ್ನು ಹಾಕುತ್ತಿದ್ದಾರೆ. ರಾಷ್ಟ್ರೀಯ ಜನತಾದಳ ಪಕ್ಷದ ಹಳೆಯ ‘ಜಂಗಲ್‌ರಾಜ್’ ನೆನಪು ಮತ್ತು ತೇಜಸ್ವಿ ಯಾದವ್ ಮೇಲಿನ ಅತಿವಿಶ್ವಾಸವು ವಿಫಲವಾಯಿತು. ಮೈಥಿಲಿ ಅವರ ವಿಜಯವು ಭಾರತದ ರಾಜಕೀಯ ವಲಯದಲ್ಲಿನ ಹೊಸ ಆಶಯಗಳ ಪಾಲಿಗೆ ದಾರಿದೀಪವಾಗಿದೆ ಎಂದರೆ ಅತಿಶಯೋಕ್ತಿ ಆಗಲಾರದು.

– ಎಸ್.ಎನ್.ಭಟ್, ಸೈಪಂಗಲ್ಲು

ತಂದಿತು ಹೊಸಪದ!

ಡಾ. ಜಗದೀಶ್ ಅಂಗಡಿಯವರು ‘ಕನ್ನಡ ಕಸ್ತೂರಿ’ ಅಂಕಣದಲ್ಲಿ (ನ.17) ಬರೆದಿರುವಂತೆ, ಪ್ರಾಥಮಿಕ ಶಾಲೆಗಳಲ್ಲಿ ಭಾಷೆಯನ್ನು ಶಿಸ್ತುಬದ್ಧವಾಗಿ ಕಲಿಸುತ್ತಿಲ್ಲ. ಇದಕ್ಕೆ ಉದಾಹರಣೆ, ಸರಕಾರಿ ಶಾಲೆಯಲ್ಲಿ ಒಂದನೇ ತರಗತಿಯಲ್ಲಿ ಕಲಿಯುತ್ತಿರುವ ನಮ್ಮ ಅಪಾರ್ಟ್‌ಮೆಂಟ್‌ನ ಭದ್ರತಾ ಸಿಬ್ಬಂದಿಯ ಮಗಳು.

ಮತ್ತಷ್ಟು ಕಲಿಯಲೆಂದು ಆ ಪುಟ್ಟ ಬಾಲಕಿಯನ್ನು ಮನೆಯ ಹತ್ತಿರ ಟ್ಯೂಷನ್‌ಗೆ ಸೇರಿಸಿದ್ದಾರೆ. ಎರಡು ದಿನಗಳ ಹಿಂದೆ ನನ್ನ ಬಳಿ ಆಟವಾಡಲು ಆಕೆ ಬಂದಾಗ, ‘ಟ್ಯೂಷನ್‌ನಲ್ಲಿ ಏನು ಕಲಿತೆ?’ ಎಂದು ಕೇಳಿದೆ. ಅದಕ್ಕೆ ಅವಳು ‘ಅಟುಲ’ ಕಲಿತೆ ಎಂದಳು. ಅದೇನೆಂದು ನನಗೆ ಅರ್ಥವಾಗದೆ ಮತ್ತೊಮ್ಮೆ ಕೇಳಿದರೆ, ‘ಅಟುಲ ಬರೆದೆ’ ಎಂದಳು. ಇದೇನೋ ಹೊಸ ಪದ, ನನಗೆ ಗೊತ್ತಿಲ್ಲದ್ದು ಅಂದುಕೊಂಡು ಅವಳು ಬರೆದಿರುವ ಪುಸ್ತಕವನ್ನು ತರಲು ಹೇಳಿದೆ. ಅದರಲ್ಲಿ ಇದ್ದದ್ದು ‘ಅ’ದಿಂದ ‘ಲ’ವರೆಗಿನ ಅಕ್ಷರಗಳು. ಆಕೆಯ ಶಿಕ್ಷಕಿಯು ‘ಇಂದ’ ಎಂಬ ಕನ್ನಡ ಪದವನ್ನು ಇಂಗ್ಲಿಷ್‌ನ To ಪದಕ್ಕೆ ಬದಲಾಯಿಸಿ, ಎರಡು ಕನ್ನಡ ಅಕ್ಷರಗಳ ಮಧ್ಯೆ ‘ಸ್ಯಾಂಡ್‌ವಿಚ್’ ಮಾಡಿದ್ದೇ ಈ ಹೊಸಪದದ ಸೃಷ್ಟಿಗೆ ಕಾರಣವಾಗಿತ್ತು! ಆ ಕ್ಷಣಕ್ಕೆ ನಗು ಹೊಮ್ಮಿದರೂ, ಇಂಥ ಶಿಕ್ಷಕಿಯರ ಕೈಯಲ್ಲಿ ಸಿಲುಕಿರುವ ಕನ್ನಡ ಭಾಷೆಯ ಭವಿಷ್ಯವನ್ನು ನೆನೆದು ಒಂದಿಷ್ಟು ಭಯವಾಗಿದ್ದು ಸುಳ್ಳಲ್ಲ…

– ಶೈಲಜಾ ವಾಸುಕಿ, ಬೆಂಗಳೂರು

ಸೀಟು ಮೀಸಲಾತಿ!

ನಮ್ಮ ಸಂಸದರು ಮತ್ತು ವಿಧಾನಸಭಾ ಸದಸ್ಯರಿಗಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ವಿಶೇಷ ಸೀಟುಗಳನ್ನು ದೀರ್ಘಕಾಲದಿಂದ ಮೀಸಲಿಟ್ಟಿದ್ದಾರೆ. ಸಾಮಾನ್ಯವಾಗಿ ಸರಕಾರಿ ಬಸ್ಸುಗಳಲ್ಲಿ ಅವರು ಪ್ರಯಾಣಿಸುವುದೇ ವಿರಳ. ಇಂದು ಆ ಮೀಸಲಾತಿಯ ಯಾವುದೇ ವಾಸ್ತವಿಕ ಬಳಕೆ ಇಲ್ಲ. ಹೀಗಾಗಿ ಈ ಮೀಸಲಾತಿಯನ್ನು ಮುಂದುವರಿಸುವುದು ಒಂದು ರೀತಿಯಲ್ಲಿ ಹಳೆಯ ಪದ್ಧತಿಯನ್ನು ಕೇವಲ ಆಚರಣೆಗಾಗಿ ಇಟ್ಟುಕೊಳ್ಳುವಂತಾಗಿದೆ. ಜನಪ್ರತಿನಿಧಿಗಳು ಸಾರ್ವಜನಿಕರೊಂದಿಗೆ ಸಂಚರಿಸಿ ಜನಜೀವನವನ್ನು ಅರಿಯಲಿ ಎಂಬ ಉದ್ದೇಶದಿಂದ ಆಗಿನ ಕಾಲದಲ್ಲಿ ಈ ಸೌಲಭ್ಯ ನೀಡಿರಬಹುದು. ಆದರೆ ವಾಸ್ತವವಾಗಿ ನಮ್ಮ ಜನಪ್ರತಿನಿಧಿಗಳಲ್ಲಿ ಹೆಚ್ಚಿನವರು ಸರಕಾರಿ ಬಸ್ಸುಗಳನ್ನು ಬಳಸದ ಕಾರಣ, ಇಂಥ ಬಳಕೆಯೇ ಇಲ್ಲದ ಮೀಸಲಾತಿಯನ್ನು ಏಕೆ ಮುಂದುವರಿಸಬೇಕು? ಎಂಬ ಪ್ರಶ್ನೆ ಉದ್ಭವಿಸುತ್ತದೆ.

– ಜಿ.ನಾಗೇಂದ್ರ, ಕಾವೂರು, ಸಂಡೂರು

ಕಥೆ–ವ್ಯಥೆ

ಬಳಕೆದಾರರಿಗೆ ಸಿಹಿ
ಬೆಳೆಗಾರರಿಗೆ ಕಹಿ
ಸರಕಾರಕ್ಕೆ ಉಭಯಸಂಕಟ
ಕಾರ್ಖಾನೆಗಳಿಗೆ ಹಠ
ಇದು ಕಬ್ಬಿನ ಕಥೆ
ಕನ್ನಡನಾಡಿನ ಸದ್ಯದ ವ್ಯಥೆ,

– ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 308

ಸಮಾಚಾರ ಸಣ್ಣದಲ್ಲ

ಪಿಎಂ-ಕಿಸಾನ್ ನಿಧಿ ಕಂತು ಇಂದು ಖಾತೆಗೆ

ಜೈಪುರ: ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ(ಪಿಎಂ-ಕಿಸಾನ್) ಯೋಜನೆಯ 21ನೇ ಕಂತು ಹಣವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಬಿಡುಗಡೆ ಮಾಡಲಿದ್ದಾರೆ. ದೇಶಾದ್ಯಂತದ 9 ಕೋಟಿ ರೈತರಿಗೆ 18 ಸಾವಿರ ಕೋಟಿ ರು. ಆರ್ಥಿಕ ನೆರವು ಸಿಗಲಿದೆ. ಪಿಎಂ-ಕಿಸಾನ್ ನಿಧಿ ಯೋಜನೆ ಆರಂಭವಾದಾಗಿನಿಂದ ಪ್ರಧಾನಿ ಮೋದಿ ಸರಕಾರ ಈವರೆಗೆ 20 ಕಂತುಗಳನ್ನು ಬಿಡುಗಡೆ ಮಾಡಿದೆ. 21ನೇ ಕಂತು ಬಿಡುಗಡೆಯಿಂದ ರಾಜಸ್ಥಾನದ 66.62 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ 1,332 ಕೋಟಿ ರು. ಜಮಾ ಆಗಲಿದೆ. ಜೈಪುರದ ದುರ್ಗಾಪುರದಲ್ಲಿ ಬುಧವಾರ ಆಯೋಜಿಸಲಾದ ರಾಜ್ಯ ಕೃಷಿ ನಿರ್ವಹಣಾ ಸಂಸ್ಥೆಯ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಭಾಗವಹಿಸಲಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿಯೂ ಇದೇ ರೀತಿ ಕಾರ್ಯಕ್ರಮಗಳು ನಡೆಯಲಿವೆ ಎಂದು ರಾಜಸ್ಥಾನ ಸರಕಾರದ ಅಧಿಕೃತ ಹೇಳಿಕೆಯಲ್ಲಿ ಮಂಗಳವಾರ ತಿಳಿಸಲಾಗಿದೆ.

ಪಾಕ್‌ನ 255 ಡ್ರೋನ್ ನಾಶ: ಬಿಎಸ್ಸೆಫ್ ಸಾಧನೆ

ಚಂಡೀಗಢ: ಪಾಕಿಸ್ತಾನದಿಂದ ಹೆರಾಯಿನ್ ಮತ್ತು ಶಸ್ತ್ರಾಸ್ತ್ರಗಳನ್ನು ಹೊತ್ತುಕೊಂಡು ಹಾರಿ ಬಂದಿರುವ 255 ಡ್ರೋನ್‌ಗಳನ್ನು 2025ರ ಜನವರಿಯಿಂದ ಈವರೆಗೆ ಹೊಡೆದು ಉರುಳಿಸಲಾಗಿದೆ ಎಂದು ಗಡಿ ಭದ್ರತಾ ಪಡೆಯ(ಬಿಎಸ್‌ಎಫ್) ಪಂಜಾಬ್ ಗಡಿ ಭಾಗದ ಹಿರಿಯ ಅಧಿಕಾರಿ ಮಂಗಳವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಮುಂದೆ ಚಳಿಗಾಲದ ಋತುವಿನಲ್ಲಿ ಪಾಕ್‌ನ ಗಡಿ ಆಚೆಯಿಂದ ಕಳ್ಳಸಾಗಣೆ ಚಟುವಟಿಕೆ ಹೆಚ್ಚುವ ಸಾಧ್ಯತೆ ಇದೆ. ಹಿಮ ಸುರಿಯುವ ಚಳಿಗಾಲದ ಋತುವಿನಲ್ಲಿ ಆಕಾಶದಲ್ಲಿ ಗೋಚರಿಸುವ ಪ್ರಮಾಣ ಕಡಿಮೆ ಆಗುತ್ತದೆ. ಆ ಸಂದರ್ಭವನ್ನೇ ಡ್ರೋನ್ ಮೂಲಕ ಕಳ್ಳಸಾಗಣೆ ಮಾಡುವವರು ಹೆಚ್ಚು ಬಳಸಿಕೊಳ್ಳುತ್ತಾರೆ. ಅವರ ಈ ದುಸ್ಸಾಹಸವನ್ನು ತಡೆಯಲು ಬಿಎಸ್‌ಎಫ್ ಕಣ್ಗಾವಲು ಹೆಚ್ಚಿಸಲಾಗಿದೆ. ಅಧಿಕ ಮಂಜು ಸುರಿಯುವ ದಿನಗಳಲ್ಲಿ ವಿಶೇಷ ಕಣ್ಗಾವಲು ಉಪಕರಣಗಳನ್ನು ಬಳಸಿಕೊಳ್ಳಲಾಗುವುದು. ಗಡಿ ಭಾಗದ ಸಂಪರ್ಕ ರಸ್ತೆಗಳಲ್ಲಿ ಬಿಎಸ್‌ಎಫ್ ಪಡೆಗಳ ಜತೆಗೆ ಪಂಜಾಬ್ ಪೊಲೀಸರೂ ಜಂಟಿ ತಪಾಸಣೆ ನಡೆಸುತ್ತಾರೆ ಎಂದು ಬಿಎಸ್‌ಎಫ್ ಇನ್‌ಸ್ಪೆಕ್ಟರ್ ಜನರಲ್ ಅತುಲ್ ಫುಲ್‌ಜಲೆ ಅವರು ಹೇಳಿದ್ದಾರೆ.

ಹಾಲಿ-ಮಾಜಿ ಉಪ ರಾಷ್ಟ್ರಪತಿಗಳ ಭೇಟಿ

ದೆಹಲಿ: ಆರೋಗ್ಯ ಕಾರಣ ನೀಡಿ ಉಪ ರಾಷ್ಟ್ರಪತಿ ಸ್ಥಾನಕ್ಕೆ ಜುಲೈ 21 ರಂದು ರಾಜೀನಾಮೆ ನೀಡಿದ ಜಗದೀಪ್ ಧನಕರ್ ಅವರನ್ನು ಅವರ ನಿವಾಸದಲ್ಲೇ ನೂತನ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಮಂಗಳವಾರ ಮಧ್ಯಾಹ್ನ ಭೇಟಿಯಾಗಿ ಕುಶಲ ವಿಚಾರಿಸಿದರು. ಇದು ಹಾಲಿ ಮತ್ತು ಮಾಜಿ ಉಪ ರಾಷ್ಟ್ರಪತಿಗಳ ನಡುವಿನ ಮೊದಲ ಔಪಚಾರಿಕ ಭೇಟಿಯಾಗಿದೆ. ರಾಧಾಕೃಷ್ಣನ್ ಉಪ ರಾಷ್ಟ್ರಪತಿಯಾಗಿ ಸೆಪ್ಟೆಂಬರ್‌ನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಆ ಸಂದರ್ಭ ಧನಕರ್ ಅವರು ರಾಧಾಕೃಷ್ಣನ್ ಅವರನ್ನು ಭೇಟಿಯಾಗಿದ್ದರು.

ಜೆಡಿಯು ಪ್ರಣಾಳಿಕೆ ಜಾರಿ ರಾಜಕೀಯ ಬಿಡುವೆ

ಪಟನಾ: ಜೆಡಿಯು ಪಕ್ಷವು ವಿಧಾನಸಭಾ ಚುನಾವಣೆ ಪ್ರಚಾರ ಮಾಡುವ ವೇಳೆ 10,000 ರಿಂದ 60,000 ಫಲಾನುಭವಿಗಳಿಗೆ ತಲಾ 2 ಲಕ್ಷ ರು.

ನೀಡುವುದಾಗಿ ಭರವಸೆ ನೀಡಿದ್ದರು. ಸ್ವ ಉದ್ಯೋಗ ಉಪಕ್ರಮದಡಿ 1.50 ಕೋಟಿ ಮಹಿಳೆಯರಿಗೆ ತಲಾ 2 ಲಕ್ಷ ರು. ನೀಡುವ ಭರವಸೆ ನೀಡಿ ಗೆದ್ದಿದ್ದಾರೆ. ಇಂಥ ಭರವಸೆ ನೀಡದೇ ಇದ್ದಿದ್ದರೆ ಜೆಡಿಯು ಕೇವಲ 25 ಸ್ಥಾನ ಗಳಿಸಿ ಹಿನ್ನಡೆ ಅನುಭವಿಸುತ್ತಿತ್ತು ಎಂದು ಹೇಳಿರುವ ಜನ ಸುರಾಜ್ ಪಕ್ಷದ ನಾಯಕ ಪ್ರಶಾಂತ್ ಕಿಶೋರ್, ಒಂದೊಮ್ಮೆ ನಿತೀಶ್ ಕುಮಾರ್ ಅವರು ಪಕ್ಷದ ಈ ಪ್ರಣಾಳಿಕೆಯ ಭರವಸೆಗಳನ್ನು ಈಡೇರಿಸಿದರೆ, ನಾನು ರಾಜಕೀಯವನ್ನೇ ಬಿಟುಬಿಡುತ್ತೇನೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಸವಾಲು ಎಸೆದಿದ್ದಾರೆ. ಜನ ಸುರಾಜ್ ಪಕ್ಷ ಚುನಾವಣಾ ಕಣದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ಹೋರಾಡಿತು ಎಂದರು.



{ಲಾಲು ಪ್ರಸಾದ್ ಯಾದವ್} ಆರ್‌ಜೆಡಿ ಮುಖ್ಯಸ್ಥ

ತೇಜಸ್ವಿ ಮತ್ತು ರೋಹಿಣಿ ನಡುವಿನ ಮನಸ್ತಾಪ ಶೀಘ್ರವೇ ಬಗೆಹರಿಯಲಿದೆ. ಇದು ನಮ್ಮ ಕುಟುಂಬದ ಆಂತರಿಕ ವಿಷಯ. ಅದನ್ನು ಕುಟುಂಬದೊಳಗೇ ಪರಿಹರಿಸಲಾಗುವುದು. ಅದನ್ನು ನಿಭಾಯಿಸಲು ನಾನು ಇದ್ದೇನೆ. ತೇಜಸ್ವಿ ಯಾದವ್ ಬಿಹಾರ ಚುನಾವಣೆಗೆ ತುಂಬಾ ಶ್ರಮಿಸಿದ್ದಾರೆ. ಇನ್ನು ಮುಂದೆಯೂ ಪಕ್ಷವನ್ನು ತೇಜಸ್ವಿಯೇ ಮುನ್ನಡೆಸುತ್ತಾರೆ.

ಎಸ್‌ಐಆರ್ ಪ್ರಕ್ರಿಯೆ ಸರಳಗೊಳಿಸಲು 'ಕೃತಕ ಬುದ್ಧಿಮತ್ತೆ' ತಂತ್ರಜ್ಞಾನ | ಮೃತರ ಹೆಸರು ಮತದಾರರ ಪಟ್ಟಿಯಲ್ಲಿದ್ದರೆ ಪತ್ತೆಗೆ ಸಹಕಾರಿ

ಎಸ್‌ಐಆರ್: ನಕಲಿ ಮತದಾರರ ಪತ್ತೆಗೆ ಎಐ ಬಳಕೆ

ಕೋಲ್ಕತ್ತ: ದೇಶದ 9 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಸದ್ಯ ನಡೆಯುತ್ತಿರುವ ಮತದಾರರ ಪಟ್ಟಿಗಳ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ವೇಳೆ ನಕಲಿ ಮತದಾರರು, ಹಲವು ಮತ ಕ್ಷೇತ್ರಗಳಲ್ಲಿ ಇರುವವರ ಹೆಸರು ಪತ್ತೆಗೆ ಮತ್ತು ಮೃತರಾದ ಬಳಿಕವೂ ಮತದಾರರ ಪಟ್ಟಿಯಲ್ಲಿ ಹೆಸರು ಉಳಿದಿದ್ದರೆ ಅಂತಹ ಲೋಪಗಳನ್ನು ಗುರುತಿಸಿ, ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲು 'ಕೃತಕ ಬುದ್ಧಿಮತ್ತೆ'(ಎಐ) ತಂತ್ರಜ್ಞಾನ ಆಧಾರಿತ ಪರಿಶೀಲನಾ ವ್ಯವಸ್ಥೆ ಬಳಸಿಕೊಳ್ಳಲು ಚುನಾವಣಾ ಆಯೋಗ ಸಜ್ಜಾಗಿದೆ.

ಮತದಾರರ ಪಟ್ಟಿಯಲ್ಲಿ ಹಾಗೂ ಚುನಾವಣಾ ಆಯೋಗದಲ್ಲಿನ ದತ್ತಾಂಶದಲ್ಲಿರುವ ಫೋಟೋಗಳ ಮುಖದ ಹೋಲಿಕೆಗಳನ್ನು ಆಧಾರ್ ದತ್ತಾಂಶದ ಜತೆಗೆ ವಿಶ್ಲೇಷಿಸಲಾಗುವುದು. ಅಲ್ಲದೇ, ಹಲವು ಸ್ಥಳಗಳಲ್ಲಿ ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಿರುವ ವ್ಯಕ್ತಿಗಳನ್ನೂ ಇದೇ ತಂತ್ರಜ್ಞಾನದಡಿ ಗುರುತಿಸಲಾಗುವುದು. ಈ ಬಗೆಯಲ್ಲಿ 'ಎಐ' ತಂತ್ರಜ್ಞಾನವು ಎಸ್‌ಐಆರ್ ಪ್ರಕ್ರಿಯೆಗೆ ನೆರವಾಗಲಿದೆ ಎಂದು ಪಶ್ಚಿಮ ಬಂಗಾಳ ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಒಬ್ಬ ಮತದಾರನ ಫೋಟೊ ವಿವಿಧ ಪ್ರದೇಶಗಳಲ್ಲಿನ ಮತದಾರರ ಪಟ್ಟಿಯಲ್ಲಿದ್ದರೆ ಅದನ್ನು ಪತ್ತೆಹಚ್ಚಲು 'ಎಐ' ಆಧರಿಸಿದ ಮುಖ ಹೊಂದಾಣಿಕೆ ತಂತ್ರಜ್ಞಾನ ನೆರವಾಗುತ್ತದೆ ಎಂದಿದ್ದಾರೆ.

ಮತದಾರರ ನೋಂದಣಿ ಸಮಯದಲ್ಲಿ ವಲಸೆ ಕಾರ್ಮಿಕರ ಛಾಯಾಚಿತ್ರ ದುರುಪಯೋಗವಾಗುತ್ತಿದೆ ಎಂಬ ದೂರು ಹೆಚ್ಚಾಗಿವೆ. ಹಾಗಾಗಿ 'ಎಐ' ತಂತ್ರಜ್ಞಾನದ ನೆರವು ಪಡೆಯುತ್ತಿದ್ದೇವೆ. ಇದರ ಜತೆಗೇ ಮತದಾರರ ಮನೆಗೆ ಭೇಟಿ ನೀಡುವುದು, ಮತದಾರರ ಛಾಯಾಚಿತ್ರ ನೇರ ತೆಗೆದುಕೊಳ್ಳುವುದು ಅಗತ್ಯವಾಗಿರುವುದರಿಂದ ಬೂತ್ ಮಟ್ಟದ ಅಧಿಕಾರಿ(ಬಿಎಲ್‌ಒ)ಗಳು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಅಧಿಕಾರಿ ಸ್ಪಷ್ಟಪಡಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಮತದಾರರ ಮನೆ ಬಾಗಿಲಿಗೆ ತೆರಳಿ ಬಿಎಲ್‌ಒಗಳು 'ಎಸ್‌ಐಆರ್' ಪ್ರಕ್ರಿಯೆ ನಡೆಸಿದ್ದಾರೆ.

ಗಡುವಿನೊಳಗೆ ಪೂರ್ಣ: ಅಗರ್ವಾಲ್ ವಿಶ್ವಾಸ

ಪಶ್ಚಿಮ ಬಂಗಾಳದಲ್ಲಿ 'ಎನ್ಯುಮರೇಷನ್ ಫಾರಂ'(ಇಎಫ್) ವಿತರಣೆ, ಭರ್ತಿಯಾದ ಬಳಿಕ ಮರಳಿ ಸಂಗ್ರಹಣೆ, ಫಾರಂನಲ್ಲಿನ ವಿವರಗಳನ್ನು ಡಿಜಿಟಲ್ ಸ್ವರೂಪಕ್ಕೆ ಬದಲಿಸುವುದು ಮೊದಲಾದ ಪ್ರಕ್ರಿಯೆಗಳು ಎಲ್ಲವೂ ನ.25-26ಕ್ಕೆ ಮುಗಿಯಬೇಕಿದೆ. ಗಡುವಿಗೆ ತಕ್ಕಂತೆಯೇ ಪಶ್ಚಿಮ ಬಂಗಾಳದಲ್ಲಿ 'ಎಸ್‌ಐಆರ್' ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸೋಮವಾರ ಮಧ್ಯಾಹ್ನ 3ರವರೆಗೆ ಲಭ್ಯವಿರುವ ಅಂಕಿ ಅಂಶ ಪ್ರಕಾರ, ಪಶ್ಚಿಮ ಬಂಗಾಳದಲ್ಲಿ 7.63 ಕೋಟಿ (ಶೇ.99.56) ಮತದಾರರಿಗೆ 'ಇಎಫ್' ವಿತರಣೆ ಕಾರ್ಯ ಪೂರ್ಣಗೊಂಡಿದೆ. ಭರ್ತಿಯಾಗಿ ಮರಳಿರುವ 'ಇಎಫ್'ಗಳ ಡಿಜಿಟಲೀಕರಣ ಪ್ರಕ್ರಿಯೆ ಶೇ.9.55ರಷ್ಟು (73.19 ಲಕ್ಷ ಮತದಾರರದು) ಪೂರ್ಣವಾಗಿದೆ ಎಂದು ಮನೋಜ್ ಅಗರ್ವಾಲ್ ತಿಳಿಸಿದ್ದಾರೆ.

ಎಸ್‌ಐಆರ್ ಭೀತಿ: ಬಾಂಗ್ಲಾ ನುಸುಳುಕೋರರು ವಾಪಸ್

ಹೆಚ್ಚು ಹಣ ಸಿಗುವ ದುಡಿಮೆ, ಉಚಿತ ಆಹಾರ-ವಸತಿ, ಸರಾಗ ಬದುಕಿನ ಅವಕಾಶಗಳು, ಸುಲಭವಾಗಿ ಆಧಾರ್ ಕಾರ್ಡ್, ಮತದಾರರ ಚೀಟಿ, ಮತದಾನ ಮಾಡಿದರೆ ಹಣ ಸಿಗುತ್ತದೆ ಎಂಬ ಆಸೆಯಿಂದ ಭಾರತದೊಳಕ್ಕೆ ಅಕ್ರಮವಾಗಿ ನುಸುಳಿಕೊಂಡು ಬಂದಿದ್ದ ಬಾಂಗ್ಲಾದೇಶದ ಪ್ರಜೆಗಳು ಈಗ ಪಶ್ಚಿಮ ಬಂಗಾಳದಲ್ಲಿ 'ಎಸ್‌ಐಆರ್' ಶುರುವಾಗಿರುವುದರಿಂದ ತಮ್ಮ ನಿಜ ಚಹರೆ ಬದಲಾಗುತ್ತದೆ, ಶಿಕ್ಷೆಯಾಗುತ್ತದೆ ಎಂಬ ಭಯದಲ್ಲಿ ಸಾವಿರಾರು ಸಂಖ್ಯೆಯಲ್ಲಿ ತಮ್ಮ ದೇಶಕ್ಕೆ ವಾಪಸಾಗುತ್ತಿದ್ದಾರೆ. ಹೀಗೆ ಸಾವಿರಾರು ಸಂಖ್ಯೆಯಲ್ಲಿ ಬಾಂಗ್ಲಾದೇಶ ಪ್ರಜೆಗಳ ಗುಂಪು ಭಾರತದ ಗಡಿ ಭಾಗದಲ್ಲಿ ಇತ್ತೀಚೆಗೆ ಹೆಚ್ಚಾಗಿ ಕಾಣಬರುತ್ತಿದೆ. ಈ ಗುಂಪಿನಲ್ಲಿನ ಜನರನ್ನು ಮಾಧ್ಯಮ ಪ್ರತಿನಿಧಿಗಳು ಮಂಗಳವಾರ ಮಾತನಾಡಿಸಿದಾಗ, 'ತಮ್ಮ ಬಳಿ ಭಾರತದ ಪ್ರಜೆ ಎಂದು ಹೇಳಿಕೊಳ್ಳಲು ಯಾವುದೇ ದಾಖಲೆ ಇಲ್ಲ. ಸರಿಯಾದ ಕಾಗದಪತ್ರಗಳಿಲ್ಲ. ಈಗ ಮತದಾರರ ಗುರುತಿನ ಚೀಟಿ ಇದ್ದರೂ ಅದು ನಕಲಿಯೋ, ಅಸಲಿಯೋ ಎಂಬ ಭಯವಿದೆ. ಸಿಕ್ಕಿಕೊಂಡರೆ ಜೈಲು ಸೇರಬೇಕು. ಅದರ ಬದಲು ನಮ್ಮ ದೇಶಕ್ಕೆ ಮರಳುವುದೇ ಸುರಕ್ಷಿತ ಎನಿಸಿದೆ. ಹಾಗಾಗಿ ವಾಪಸಾಗುತ್ತಿದ್ದೇವೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಸಿಇಸಿ' ವರ್ಚುವಲ್ ಸಭೆ

ಈ ಮಧ್ಯೆ, ಭಾರತೀಯ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾದ (ಸಿಇಸಿ) ಜ್ಞಾನೇಶ್ ಕುಮಾರ್ ಅವರು, ಸದ್ಯ 'ಎಸ್‌ಐಆರ್' ನಡೆಯುತ್ತಿರುವ 9 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾ ಅಧಿಕಾರಿಗಳ ಜತೆಗೆ ಸೋಮವಾರ ವರ್ಚುವಲ್(ವಿಡಿಯೊ ಕಾನ್ಫರೆನ್ಸ್) ಸಭೆ ನಡೆಸಿದ್ದಾರೆ. ಮತದಾರ ಮೃತಪಟ್ಟಿದ್ದರೆ ಅಥವಾ ಬೇರೆಡೆಗೆ ಸ್ಥಳಾಂತರಗೊಂಡಿದ್ದರೆ ಅಥವಾ ಎರಡು ಕ್ಷೇತ್ರಗಳಲ್ಲಿ ಹೆಸರು ನೋಂದಣಿ ಆಗಿದ್ದರೆ ಅಂತಹವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಸುವುದಕ್ಕೆ ಅರ್ಜಿ ಸಲ್ಲಿಸಿದ್ದರೆ ಅದರ ಸಂಪೂರ್ಣ ಹೊಣೆಯು ಅರ್ಜಿಗೆ ಸಹಿ ಹಾಕಿದವರ ಮೇಲೆಯೇ ಇರುತ್ತದೆ ಎಂದು 'ಸಿಇಸಿ' ಸ್ಪಷ್ಟವಾಗಿ ಹೇಳಿದ್ದಾರೆ ಎಂದು ಮನೋಜ್ ಅಗರ್ವಾಲ್ ತಿಳಿಸಿದ್ದಾರೆ.

ತಮಿಳುನಾಡಿನ ಕಂದಾಯ ಇಲಾಖೆ ನೌಕರರು ಕೆಲಸ ಹೊರೆ, ಗಡುವಿನ ಒತ್ತಡ ಕಾರಣ ನೀಡಿ ಎಸ್‌ಐಆರ್ ಕೆಲಸ ಬಹಿಷ್ಕರಿಸಿದ್ದಾರೆ.

ತ.ನಾಡಲ್ಲಿ ಕಂದಾಯ ಇಲಾಖೆ ನೌಕರರಿಂದ ಎಸ್‌ಐಆರ್ ಸ್ಥಗಿತ

ಚೆನ್ನೈ: ತಮಿಳುನಾಡು ರಾಜ್ಯ ಕಂದಾಯ ಇಲಾಖೆ ನೌಕರರ ಸಂಘಗಳ ಒಕ್ಕೂಟ(ಎಫ್‌ಇಆರ್‌ಎ) ಮಂಗಳವಾರದಿಂದ 'ಎಸ್‌ಐಆರ್' ಕೆಲಸವನ್ನು ಬಹಿಷ್ಕರಿಸಿದೆ.

ಎಸ್‌ಐಆರ್ ಪೂರ್ಣಗೊಳಿಸಲು ಡಿ.4ರ ಗಡುವು ನೀಡಲಾಗಿದೆ. ಅತಿಯಾದ ಕೆಲಸದ ಹೊರೆ, ಗಡುವಿನೊಳಗೆ ಪ್ರಕ್ರಿಯೆ ಪೂರ್ಣಗೊಳಿಸಬೇಕಾದ ಒತ್ತಡ, ಅಸಮರ್ಪಕ ತರಬೇತಿ ನೀಡಿರುವುದು ಮೊದಲಾದ ಕಾರಣಗಳಿಂದಾಗಿ 'ಎಸ್‌ಐಆರ್' ಪ್ರಕ್ರಿಯೆಯಲ್ಲಿ ಭಾಗಿಯಾಗಲು ತಮಗೆ ಸಾಧ್ಯವಾಗುತ್ತಿಲ್ಲ' ಎಂದು 'ಪೆರುಂದಿರಲ್(ಸಾಮೂಹಿಕ) ಮನವಿ' ಕಾರ್ಯಕ್ರಮ ಸಂದರ್ಭ 'ಎಫ್‌ಇಆರ್‌ಎ' ಸಂಘದ ಪದಾಧಿಕಾರಿಗಳು ರಾಜ್ಯದ 32 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಲಿಖಿತ ಪತ್ರದ ಮೂಲಕ ತಿಳಿಸಿದ್ದಾರೆ ಎಂದು ಸಂಘದ ರಾಜ್ಯ ಸಂಯೋಜಕ ಎಂ.ಪಿ.ಮುರುಗನ್ ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ.

ಕೆಲಸದ ಒತ್ತಡ ತಗ್ಗಿಸಲು ಹೆಚ್ಚುವರಿಯಾಗಿ ಬೂತ್ ಮಟ್ಟದ ಅಧಿಕಾರಿಗಳನ್ನು ನೇಮಿಸಬೇಕು, ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿ ನಿಯೋಜಿಸಬೇಕು, ಎಲ್ಲರಿಗೂ ಸಮರ್ಪಕ ತರಬೇತಿ ನೀಡಬೇಕು ಎಂದು ಒತ್ತಾಯಿಸಿ 'ಎಸ್‌ಐಆರ್' ಕೆಲಸ ಸ್ಥಗಿತಗೊಳಿಸಲಾಗಿದೆ ಎಂದಿದ್ದಾರೆ.

ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಎಸ್‌ಐಆರ್ ಕೆಲಸ ವಿರೋಧಿಸಿ ಕಂದಾಯ ಇಲಾಖೆ ನೌಕರರು ಪ್ರತಿಭಟನೆ ನಡೆಸಿದ್ದಾರೆ. ಆದರೆ, ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಕೆಲಸ ಬಹಿಷ್ಕರಿಸಿರುವುದರಿಂದ ಕಂದಾಯ ಇಲಾಖೆಯ ನಿಯಮಿತ ಕೆಲಸ ಎಂದಿನಂತೆಯೇ ಮುಂದುವರಿಯುತ್ತದೆ ಎಂದೂ ಮುರುಗನ್ ಹೇಳಿದ್ದಾರೆ.

ಆಂಧ್ರ: ಜಂಟಿ ಕಾರ್ಯಾಚರಣೆಗೆ ಒಟ್ಟು 6 ನಕ್ಸಲರ ಸಾವು

ನಕ್ಸಲ್ ಕಮಾಂಡರ್ ಮದ್ವಿ ಹಿದ್ಮಾ ಹತ

ರಾಯಪುರ: ಕಳೆದೆರಡು ದಶಕದಲ್ಲಿ ಹಲವು ಮಾರಣಾಂತಿಕ ದಾಳಿಗಳನ್ನು ಸಂಘಟಿಸಿ ನೂರಾರು ಪೊಲೀಸರು ಹುತಾತ್ಮರಾಗುವಂತೆ ಮಾಡಿದ ನಕ್ಸಲ್ ನಾಯಕ, ದೊಡ್ಡ ದಾಳಿಗಳ ಸಂಚಿನ ಸೂತ್ರದಾರನಾಗಿದ್ದ ನಕ್ಸಲ್ ಕಮಾಂಡರ್ 'ಮದ್ವಿ ಹಿದ್ಮಾ' ಮಂಗಳವಾರ ಆಂಧ್ರಪ್ರದೇಶದಲ್ಲಿ ನಡೆದ ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ಹತನಾಗಿದ್ದಾನೆ ಎಂದು ಛತ್ತೀಸ್‌ಗಢ ಪೊಲೀಸರು ಮಂಗಳ ವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಆಂಧ್ರಪ್ರದೇಶದ ಮಾರೆಡು ಮಿಲ್ಲಿ ಅರಣ್ಯ ಪ್ರದೇಶದಲ್ಲಿ ಮಂಗಳವಾರ ಬೆಳಗ್ಗೆ 6.30ರ ವೇಳೆ ದೊಡ್ಡ ಮಟ್ಟದಲ್ಲಿ ನಕ್ಸಲ್ ದಮನ ಕಾರ್ಯಾಚರಣೆ ನಡೆಸಲಾಗಿದೆ. ಆ ಕಾರ್ಯಾಚರಣೆಯಲ್ಲಿ ಮದ್ವಿ ಹಿದ್ಮಾ ಸೇರಿದಂತೆ ಆರು ನಕ್ಸಲರು ಹತರಾದರು ಎಂದು ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಅಮಿತ್ ಬದಾರ್ ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಮದ್ವಿ ಹಿದ್ಮಾ, ಆತನ ಪತ್ನಿ ರಾಜೆ ಮತ್ತು ಇತರೆ ನಾಲ್ವರು ನಕ್ಸಲರು ಪೊಲೀಸ್ ಗುಂಡಿನಿಂದ ಹತರಾದರು ಎಂದು ಬಸ್ತಾರ್ ವಲಯದ ಹಿರಿಯ ಪೊಲೀಸ್ ಅಧಿಕಾರಿ ದೃಢಪಡಿಸಿದ್ದಾರೆ.

ಹಿದ್ಮಾ ಸಾವಿನಿಂದಾಗಿ ಛತ್ತೀಸಗಢ ರಾಜ್ಯದ ಬಸ್ತಾರ್ ವಲಯದಲ್ಲಿ ಈಗಾಗಲೇ ದುರ್ಬಲವಾಗಿರುವ ನಕ್ಸಲ್ ಹೋರಾಟ ಪೂರ್ಣ ಕೊನೆಗೊಂಡಾಗಿದೆ ಎಂದು ಛತ್ತೀಸ್‌ಗಢದ ಹಿರಿಯ ಪೊಲೀಸ್ ಅಧಿಕಾರಿ ಅಭಿಪ್ರಾಯಪಟ್ಟಿದ್ದಾರೆ.

'ಆಂಧ್ರ-ಛತ್ತೀಸಗಢ ಗಡಿ ಭಾಗದಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಮಾವೋವಾದಿ ನಾಯಕ ಹಿದ್ಮಾ ಸಾವಿಗೀಡಾಗಿರುವ ಮಾಹಿತಿ ಬಂದಿದೆ. ಇದು ಬಹಳ ಮುಖ್ಯ ಬೆಳವಣಿಗೆ' ಎಂದು ಛತ್ತೀಸಗಢ ಉಪ ಮುಖ್ಯಮಂತ್ರಿ ವಿಜಯ್ ಶರ್ಮಾ ರಾಯಪುರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಯಾರು ಈ ಮದ್ವಿ ಹಿದ್ಮಾ?: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯ ಪುವರ್ತಿ ಗ್ರಾಮದ ಹಿದ್ಮಾ ನೋಡಲು ಹೇಗಿದ್ದಾರೆ, ಅವರ ವಯಸ್ಸು ಎಷ್ಟಿರಬಹುದು ಎಂಬುದು ಈ ವರ್ಷದ ಆರಂಭದವರೆಗೂ ನಿಗೂಢವಾಗಿತ್ತು. ವರ್ಷಾರಂಭದಲ್ಲಿ ಇಲ್ಲಿ ಪ್ರಕಟಿತ ಛಾಯಾಚಿತ್ರ ಹೊರಪ್ರಪಂಚಕ್ಕೆ ದೊರೆಯಿತು. ಹಿದ್ಮಾ ದಂಡಕಾರಣ್ಯದಲ್ಲಿ ಮಾವೋವಾದಿ 'ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ'(ಪಿಎಲ್‌ಜಿಎ) ಬೆಟಾಲಿಯನ್ ನಂ.1 ರ ಮುಖ್ಯಸ್ಥ. ಈ ಬೆಟಾಲಿಯನ್ ಬಸ್ತಾರ್ ಹೊರತುಪಡಿಸಿ ಆಂಧ್ರಪ್ರದೇಶ, ಒಡಿಶಾ, ತೆಲಂಗಾಣ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿದೆ. ದಂಡಕಾರಣ್ಯದಲ್ಲಿನ ಮಾವೋವಾದಿಗಳ ಪ್ರಬಲ ಗುಂಪಾಗಿದೆ ಎಂದು ನಕ್ಸಲ್ ದಮನ ಕಾರ್ಯಾಚರಣೆ ಪಡೆ ಪೊಲೀಸ್ ಅಧಿಕಾರಿಗಳು ವಿವರಿಸಿದ್ದಾರೆ.

1990ರ ದಶಕದ ಉತ್ತರಾರ್ಧ ಹಿದ್ಮಾ ನಕ್ಸಲರ್ ಸಂಘಟನೆಗೆ ತಳಮಟ್ಟದ ಸಂಘಟಕರಾಗಿ ಸೇರಿದರು. ನಂತರ ಮತ್ತೊಬ್ಬ ಉನ್ನತ ಮಾವೋವಾದಿ ಕಮಾಂಡರ್ ಪಾಪ ರಾವ್‌ಗೆ ಪೊಲೀಸ್ ಮೇಲಿನ ದಾಳಿಗೆ ಹಿದ್ಮಾ ನೆರವಾದರು. ಅಂದಿನಿಂದ, ಬಸ್ತಾರ್‌ನಲ್ಲಿ ಭದ್ರತಾ ಪಡೆಗಳ ಮೇಲೆ ನಡೆದ ಪ್ರತಿ ಹೊಂಚುದಾಳಿಯಲ್ಲೂ ಹಿದ್ಮಾ ಹೆಸರು ಪದೇ ಪದೆ ಕೇಳಿಬರುತ್ತಿತ್ತು. 2010ರಲ್ಲಿ 76 ಭದ್ರತಾ ಸಿಬ್ಬಂದಿ ಸಾವಿಗೀಡಾದ ಟಾಡ್ಮೆಟ್ಲಾ ದಾಳಿಯ ನಂತರ ಅವರು ಭದ್ರತಾ ಪಡೆಗಳ ಗಮನಕ್ಕೆ ಬಂದರು. ಕಳೆದ ವರ್ಷ ಹಿದ್ಮಾಗೆ ಮಾವೋವಾದಿ ಕೇಂದ್ರ ಸಮಿತಿಗೆ ಬಡ್ತಿಯಾಗಿದೆ. ಗೆರಿಲ್ಲಾ ಯುದ್ಧದಲ್ಲಿ ಪರಿಣಿತನಾಗಿದ್ದ ಹಿದ್ಮಾ ಎಕೆ-47 ರೈಫಲ್ ಹೊಂದಿದ್ದ. ಕಾಡಿನೊಳಗೆ ಆತನ ಸುತ್ತ 4 ಪದರಗಳ ರಕ್ಷಣಾ ಜಾಲ ಇದ್ದುದರಿಂದ ದಶಕಗಳ ಕಾಲ ಆತನನ್ನು ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ ಎಂದಿದ್ದಾರೆ.

ಶಶಿತರೂರ್-ಕಾಂಗ್ರೆಸ್ ಸಂಬಂಧಕ್ಕೆ ಮತ್ತೊಂದು ಪೆಟ್ಟು

ಮತ್ತೊಮ್ಮೆ ಪ್ರಧಾನಿ ಮೋದಿ ಹೊಗಳಿದ ಕೈ ಸಂಸದ

ದೆಹಲಿ: ಬಹು ದಿನಗಳಿಂದ ಮಾನಸಿಕವಾಗಿ ಕಾಂಗ್ರೆಸ್‌ನಿಂದ ದೂರವಿರುವ ತಿರುವನಂಪುರ ಕ್ಷೇತ್ರದ ಲೋಕಸಭಾ ಸದಸ್ಯ ಶಶಿ ತರೂರ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಶಂಸೆ ಮಾಡುವ ಮೂಲಕ ಪಕ್ಷದ ವರಿಷ್ಠರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

'ಸೋಮವಾರ ರಾತ್ರಿ ಮಾಧ್ಯಮ ಸಂಸ್ಥೆ ಆಹ್ವಾನದ ಮೇರೆಗೆ ರಾಮನಾಥ ಗೋಯೆಂಕಾ ಉಪನ್ಯಾಸ ಕಾರ್ಯಕ್ರಮಕ್ಕೆ ತೆರಳಿದ್ದೆ. ಅಲ್ಲಿ ಪ್ರಧಾನಿ ಮೋದಿ ಅವರು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಕೆಲವರಿಂದ ವ್ಯಕ್ತವಾಗುವ ರಚನಾತ್ಮಕ ಅಸಹನೆ ಮತ್ತು ವಸಾಹತುಶಾಹಿ ನಂತರದ ಮನಸ್ಥಿತಿ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಭಾರತ ಇನ್ನು ಮುಂದೆ ಕೇವಲ ಮಾರುಕಟ್ಟೆಯಾಗಿ ಇರುವುದಿಲ್ಲ, ಬದಲಾಗಿ ಜಗತ್ತಿಗೆ ಉತ್ತಮ ಸ್ವಾವಲಂಬಿ ದೇಶವಾಗಿ ಮಾದರಿಯಾಗಲಿದೆ ಎಂದರು. ಅಲ್ಲದೇ, ಎಲ್ಲಾ ಸಂದರ್ಭದಲ್ಲೂ ಚುನಾವಣಾ ಮನಸ್ಥಿತಿಯಲ್ಲೇ ಇರುತ್ತಾರೆ ಎಂಬುದು ಸಾಮಾನ್ಯವಾಗಿ ನನ್ನ ವಿರುದ್ಧದ ಆರೋಪ ಎಂದೂ ಪ್ರಧಾನಿ ಹೇಳಿದ್ದಾಗಿ ಶಶಿ ತರೂರ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಆದರೆ ನನ್ನ ಅಭಿಪ್ರಾಯದಲ್ಲಿ ಪ್ರಧಾನಿ ಸದಾ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಭಾವನಾತ್ಮಕ ಮನಸ್ಥಿತಿಯಲ್ಲಿರುತ್ತಾರೆ. ದೇಶದ ಪ್ರಗತಿಯಾಗಿ ಜನತೆ ಹಗಲಿರುಳು ಶ್ರಮಿಸಬೇಕು ಎಂದು ಹೇಳಿದ ಪ್ರಧಾನಿಯವರ ಭಾಷಣ ಆರ್ಥಿಕ ದೃಷ್ಟಿಕೋನ ಮತ್ತು ಸಂಸ್ಕೃತಿ ರಕ್ಷಣೆಗೆ ನೀಡಿದ ಕರೆಯೂ ಆಗಿತ್ತು' ಎಂದು ತರೂರ್ ಪ್ರಶಂಸೆಯ ನುಡಿಗಳನ್ನಾಡಿದ್ದಾರೆ.

ಪ್ರಧಾನಿ ಕಾರ್ಯವೈಖರಿ ಬಗ್ಗೆ ಶಶಿತರೂರ್ ಮೆಚ್ಚುಗೆ ವ್ಯಕ್ತಪಡಿಸಿರುವುದು ಕಾಂಗ್ರೆಸ್ ವರಿಷ್ಠರ ಸಿಟ್ಟಿಗೆ ಕಾರಣವಾಗಿದೆ. ಪರಿಣಾಮವಾಗಿ ಕಾಂಗ್ರೆಸ್ ಜತೆಗಿನ ಅವರ ಸಂಬಂಧ ಮತ್ತಷ್ಟು ಹದಗೆಡುವಂತಾಗಿದೆ.

ಪಾಕ್ ಕಲಾವಿದನ ತಿರಂಗ ಅಭಿಮಾನ

ಕಠ್ಮಂಡು: ಪಾಕಿಸ್ತಾನದಲ್ಲಿಯೂ ಭಾರತವನ್ನು ಪ್ರೀತಿಸುವವರು, ಆರಾಧಿಸುವವರು ಇದ್ದಾರೆ. ಅದರಲ್ಲಿಯೂ ಅಲ್ಲಿನ ಮುಸ್ಲಿಂ ಕಲಾವಿದರಿಗೆ ಭಾರತದಲ್ಲಿನ ಕಲಾಭಿಮಾನಿಗಳ ಮೇಲೆ ಬಹಳ ಆದರ, ಅಭಿಮಾನ. ಪಾಕ್‌ನಿಂದ ಭಾರತಕ್ಕೆ ವಲಸೆ ಬಂದು ಪೌರತ್ವವನ್ನೂ ಪಡೆದುಕೊಂಡಿರುವ ಅದ್ನಾನ್ ಸಾಮಿ ಇದಕ್ಕೆ ಉತ್ತಮ ಉದಾಹರಣೆ. ಈ ಭಾರತ ಪ್ರೇಮಿ ಕಲಾವಿದರ ಸಾಲಿಗೆ ಹೊಸದಾಗಿ ಪಾಕ್‌ನ ರ್‍ಯಾಪರ್ ತಲ್ಹಾ ಅಂಜುಮ್ ಸೇರಿಕೊಂಡಿದ್ದಾರೆ. ಅವರು ನ.16ರಂದು ನೇಪಾಳದಲ್ಲಿ ಸಂಗೀತ ರಸಸಂಜೆ ಕಾರ್ಯಕ್ರಮ ನೀಡುತ್ತಿದ್ದಾಗ ವೇದಿಕೆಯಲ್ಲೇ ಭಾರತದ ಧ್ವಜವನ್ನು (ತಿರಂಗ) ಹಿಡಿದು ಹಾರಾಡಿಸಿದ್ದಾರೆ, ಬೆನ್ನಮೇಲೆ ಹೆಮ್ಮೆಯಿಂದ ಹೊದ್ದುಕೊಂಡೇ ಕಾರ್ಯಕ್ರಮ ನೀಡಿದ್ದಾರೆ. ಅವರ ಈ ನಡೆಗೆ ಕಾರ್ಯಕ್ರಮದಲ್ಲಿದ್ದವರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಅಲ್ಲದೇ, ಸಾಮಾಜಿಕ ಜಾಲತಾಣದಲ್ಲಿ ಭಾರತೀಯರಿಂದ ಭಾರೀ ಮೆಚ್ಚುಗೆ ವ್ಯಕ್ತವಾಗಿದ್ದರೆ, ಪಾಕ್ ನೆಟ್ಟಿಗರು ಕಿಡಿಕಾರಿದ್ದಾರೆ. ಆದರೆ, ಕಲಾವಿದ ಅಂಜುಮ್, ಪಾಕಿಗಳ ಸಿಟ್ಟಿಗೆ ತಲೆ ಕೆಡಿಸಿಕೊಂಡಿಲ್ಲ. 'ಕಲಾವಿದರಿಗೆ ದೇಶದ ಗಡಿ ಎಂಬುದು ಇರುವುದಿಲ್ಲ. ಮುಂದೆಯೂ ಇದೇ ರೀತಿ ಮಾಡುವೆ' ಎಂದು ಪಾಕ್ ನೆಟ್ಟಿಗರಿಗೆ ತಿರುಗೇಟು ನೀಡಿದ್ದಾರೆ.

ದೆಹಲಿ ಕಾರು ಬಾಂಬ್ ಸ್ಫೋಟ, 2900 ಕೆಜಿ ಸ್ಫೋಟಕ ಪತ್ತೆ ಹಿನ್ನೆಲೆ ತೀವ್ರ ಶೋಧ

ಅಲ್-ಫಲಾಹ್ ವಿವಿಯ 25 ಸ್ಥಳಗಳಿಗೆ ಇ.ಡಿ ದಾಳಿ

ದೆಹಲಿ: 'ವೈಟ್‌ಕಾಲರ್ ಟೆರರಿಸ್ಟ್' ಡಾ. ಉಮರ್ ಉನ್‌ನಬಿ ಹಾಗೂ ಇತರೆ ಹಲವು 'ಉಗ್ರ' ವೈದ್ಯರು ಸೇವೆ ಸಲ್ಲಿಸುತ್ತಿದ್ದ ಹರಿಯಾಣ ರಾಜ್ಯ ಫರೀದಾಬಾದ್ ಸಮೀಪದ ಧವೂಜ್ ಗ್ರಾಮದಲ್ಲಿನ 'ಅಲ್-ಫಲಾಹ್ ವಿಶ್ವವಿದ್ಯಾಲಯ' ದೆಹಲಿ ಕೆಂಪುಕೋಟೆ ಮೆಟ್ರೊ ನಿಲ್ದಾಣದ ಬಳಿ ನ.10ರಂದು ಹುಂಡೈ ಐ-20 ಕಾರು ಸ್ಫೋಟ ಮತ್ತು ಧವೂಜ್‌ನಲ್ಲಿ 2900 ಕಿಲೊ ಸ್ಫೋಟಕ ಪತ್ತೆಯಾದ ಪ್ರಕರಣಗಳ ಹಿನ್ನೆಲೆಯಲ್ಲಿ 'ಎನ್‌ಐಎ' ತನಿಖೆಯ ಕೇಂದ್ರ ಬಿಂದುವಾಗಿದೆ.

ವಿವಾದಿತ ವಿಶ್ವವಿದ್ಯಾಲಯಕ್ಕೆ ವಿವಿಧ ದೇಶಗಳಿಂದ ಆರ್ಥಿಕ ನೆರವು ಸಿಗುತ್ತಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಅಲ್ ಫಲಾಹ್ ವಿವಿಯ ಹಣಕಾಸು ವ್ಯವಹಾರ ಕುರಿತೂ ತನಿಖೆಯನ್ನು 'ಜಾರಿ ನಿರ್ದೇಶನಾಲಯ'(ಇ.ಡಿ) ಕೂಡಾ ತೀವ್ರಗೊಳಿಸಿದೆ. ಇದೇ ಕಾರಣವಾಗಿ ದೆಹಲಿಯಲ್ಲಿರುವ ವಿಶ್ವವಿದ್ಯಾಲಯದ ಪ್ರಧಾನ ಕಚೇರಿ ಸೇರಿದಂತೆ ವಿವಿಗೆ ಸಂಬಂಧಿಸಿದ 25 ಸ್ಥಳಗಳ ಮೇಲೆ ಮಂಗಳವಾರ ಮುಂಜಾನೆಯೇ ದಾಳಿ ನಡೆಸಿ, ಅಕ್ರಮ ಹಣದ ಮೂಲಗಳಿಗೆ ಸಂಬಂಧಿಸಿದ ದಾಖಲೆ ಪತ್ರಗಳಿಗಾಗಿ ತೀವ್ರ ಶೋಧ ನಡೆಸಿದೆ.

ಫರಿದಾಬಾದ್ ನಗರ ಸಮೀಪ, ದೆಹಲಿ-ಹರಿಯಾಣ ಗಡಿಯಿಂದ 27ಕಿಮೀ ದೂರದಲ್ಲಿರುವ ಧವೂಜ್ ಗ್ರಾಮದಲ್ಲಿ 76 ಎಕರೆಗಳಷ್ಟು ವಿಸ್ತಾರ ಪ್ರದೇಶದಲ್ಲಿ ಹಲವು ದಶಕಗಳಿಂದ ನೆಲೆಗೊಂಡಿರುವ ವಿವಾದಿತ ಅಲ್ ಫಲಾಹ್ ವಿಶ್ವವಿದ್ಯಾಲಯದ 'ಓಖ್ಲಾ ಕಚೇರಿ' ಮೇಲೆಯೂ ದಾಳಿ ನಡೆದಿದೆ. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ದೊಡ್ಡ ತಂಡವೇ ಎಲ್ಲೆಡೆ ತೀವ್ರ ಶೋಧ ನಡೆಸುತ್ತಿದೆ.

ನ.10ರಂದು ದೆಹಲಿ ಕೆಂಪುಕೋಟೆ ಸಮೀಪದ 'ಲಾಲ್ ಖಿಲಾ ಮೆಟ್ರೊ ನಿಲ್ದಾಣ' ಬಳಿಯ ಟ್ರಾಫಿಕ್ ಸಿಗ್ನಲ್‌ನಲ್ಲಿ ಹುಂಡೈ ಐ20 ಕಾರು ಸ್ಫೋಟಿಸಿ 15 ಜನರ ಸಾವಿಗೆ, 20 ಮಂದಿ ಗಾಯಗೊಳ್ಳಲು ಕಾರಣವಾದ ಡಾ.ಉಮರ್ ಉನ್‌ನಬಿಯ ಪಿತೂರಿಯು ಇದೇ ಅಲ್ ಫಲಾಹ್ ವಿವಿಯಲ್ಲಿ ರೂಪಗೊಂಡಿತ್ತು ಎಂಬುದು ತನಿಖೆ ವೇಳೆ ತಿಳಿದುಬಂದಿದೆ. ಅಲ್ಲದೇ, ಮಂಗಳವಾರ ಬಯಲಿಗೆ ಬಂದ 'ಡಾ.ಉಮರ್ ಉನ್‌ನಬಿ'ಯ 2 ತಿಂಗಳ ಹಿಂದಿನ ವಿಡಿಯೊ ಕೂಡಾ ಅದನ್ನು ದೃಢಪಡಿಸಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ, ಅಲ್ ಫಲಾಹ್ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗಳ ಹಣಕಾಸು ಕುರಿತು ತನಿಖೆಗೆ ಆದೇಶಿಸಿದೆ. ಜತೆಗೆ ಆರ್ಥಿಕ ಅಪರಾಧಗಳ ವಿಭಾಗಕ್ಕೆ ವಿವಿ ಕಾರ್ಯನಿರ್ವಹಣೆಯನ್ನೂ ಪರಿಶೀಲಿಸುವಂತೆ ಸೂಚನೆ ನೀಡಿದೆ.

ಭಯೋತ್ಪಾದಕ ಚಟುವಟಿಕೆಗಳ ಪ್ರಮುಖ ಕೇಂದ್ರ ಅಲ್‌ಫಲಾಹ್

ದೆಹಲಿಯಲ್ಲಿ ಸ್ಫೋಟ ನಡೆಸಿದ ಹುಂಡೈ ಐ20 ಕಾರಿನ ಚಾಲಕ ಡಾ.ಉಮರ್ ಉನ್‌ನಬಿ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿಯೇ ಸಹಾಯಕ ಪ್ರಾಧ್ಯಾಪಕ ಮತ್ತು ಹಿರಿಯ ವೈದ್ಯನಾಗಿದ್ದ. ಅಷ್ಟೇ ಅಲ್ಲದೇ, 2900 ಕಿಲೊ ಸ್ಫೋಟಕ ಮತ್ತು ಕಾರಿನಲ್ಲಿ ಎಕೆ-47 ಬಂದೂಕು ದೊರೆತ ಪ್ರಕರಣದಲ್ಲಿ ನ.10ರಂದೇ ಬಂಧನಕ್ಕೊಳಗಾದ ಡಾ. ಮುಜಮ್ಮಿಲ್ ಶಕೀಲ್ ಮತ್ತು ಡಾ. ಶಾಹೀನ್ ಸಯೀದ್, ಹಾಗೂ ಅದಕ್ಕೂ ಮುನ್ನ ವೇ(ನ.26) ಕಾಶ್ಮೀರದಲ್ಲಿ ಬಂಧಿತನಾದ ಡಾ. ಆದಿಲ್ ರಾಥೆರ್ ಎಲ್ಲರೂ ಇದೇ ವಿವಾದಿತ ವಿಶ್ವವಿದ್ಯಾಲಯದವರು ಎನ್ನುವುದೇ ತೀವ್ರ ತನಿಖೆಗೆ ಕಾರಣವಾಗಿದೆ.

ಅಲ್ಲದೇ, ಈ ಮೂವರೂ ಕಾಶ್ಮೀರ ಮತ್ತು ಲಖನೌ ಮೂಲದ ವೈದ್ಯರು ಕಚೇರಿ ಕೆಲಸ ಮುಗಿದ ಬಳಿಕ ಡಾ.ಉಮರ್‌ಗೆ ವಿವಿಯಲ್ಲಿ ನೀಡಲಾಗಿರುವ ಚೇಂಬರ್‌ನಲ್ಲಿ ಕುಳಿತೇ ಭಾರತದ ವಿವಿಧ 6 ನಗರಗಳಲ್ಲಿ ಡಿ.6ರಂದು ಆತ್ಮಾಹುತಿ ದಾಳಿ ನಡೆಸಬೇಕು ಎಂದು ಸಂಚು ರೂಪಿಸಲು ಚರ್ಚಿಸುತ್ತಿದ್ದರು. ಅದಲ್ಲದೇ, ಮಂಗಳವಾರ ಬಹಿರಂಗಗೊಂಡ ಡಾ.ಉಮರ್‌ನ ಸೆಲ್ಫಿ ವಿಡಿಯೊ ಕೂಡಾ 2 ತಿಂಗಳ ಹಿಂದೆ ಇದೇ ವಿಶ್ವವಿದ್ಯಾಲಯದಲ್ಲಿ ಆತನಿಗೆ ನೀಡಲಾಗಿದ್ದ ಚೇಂಬರ್‌ನಲ್ಲಿಯೇ ಚಿತ್ರಿತವಾಗಿದೆ ಎಂಬುದು ಅಲ್ ಫಲಾಹ್ ವಿಶ್ವವಿದ್ಯಾಲಯವು ಭಯೋತ್ಪಾದನೆ ಚಟುವಟಿಕೆಗಳ ಕೇಂದ್ರವಾಗಿದೆ ಎಂಬುದನ್ನು ಎತ್ತಿ ತೋರಿಸುತ್ತಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಅಧಿಕಾರಿಗಳು ಡಾ.ಮುಜಮ್ಮಿಲ್ ಶಕೀಲ್ ಕೊಠಡಿಯಿಂದ ಅಪರಾಧ ಸಾಬೀತು ಪಡಿಸುವ ವಸ್ತುಗಳನ್ನು ಪತ್ತೆ ಹಚ್ಚಿದ್ದಾರೆ. ಅದರಲ್ಲಿ ಡಾ.ಉಮರ್ ಮತ್ತು ಡಾ. ಮುಜಮ್ಮಿಲ್ ಡೈರಿಗಳಲ್ಲಿನ ಸಂಕೇತಾಕ್ಷರಗಳಲ್ಲಿ ಉಗ್ರ ಚಟುವಟಿಕೆ ಯೋಜನೆಗಳು, ಸಂದೇಶಗಳು ಪತ್ತೆಯಾಗಿವೆ. ಅದಲ್ಲದೇ, ಬಾಂಬ್ ತಯಾರಿಕೆಗೆ ವಿವಿಯ ಪ್ರಯೋಗಾಲಯದಿಂದಲೇ ಕೆಲವು ರಾಸಾಯನಿಕಗಳನ್ನೂ ಕಳ್ಳಸಾಗಣೆ ಮಾಡಿದ್ದರು ಎನ್ನಲಾಗಿದೆ.

ನ.10 ಪುಲ್ವಾಮಾ ಡಾ.ಉಮರ್ ನಬಿ ಐ20 ಕಾರು ಸ್ಫೋಟ

ದೆಹಲಿ ಐ20 ಕಾರು ಸ್ಫೋಟಕ್ಕೆ ಬಲಿಯಾದವರ ಸಂಖ್ಯೆ 15ಕ್ಕೆ

ದೆಹಲಿ: ದೆಹಲಿ ಕೆಂಪುಕೋಟೆ ಬಳಿಯ ಲಾಲ್ ಖಿಲಾ ಮೆಟ್ರೊ ರೈಲು ನಿಲ್ದಾಣದ ಗೇಟ್ 1ರ ಬಳಿಯ ಟ್ರಾಫಿಕ್ ಸಿಗ್ನಲ್‌ನಲ್ಲಿ ಹುಂಡೈ ಐ20 ಕಾರನ್ನು ನ.10ರ ಸಂಜೆ 6.58ರಲ್ಲಿ ಜೈಶ್ ಎ ಮೊಹಮ್ಮದ್ ಬೆಂಬಲಿತ 'ವೈಟ್ ಕಾಲರ್' ಭಯೋತ್ಪಾದಕ ಡಾ.ಉಮರ್ ಉನ್ ನಬಿ ಸ್ಫೋಟಗೊಳಿಸಿದ್ದರಿಂದ 13 ಮಂದಿ ಮೃತಪಟ್ಟು 20ಕ್ಕೂ ಅಧಿಕ ಜನರು ಗಾಯಗೊಂಡಿದ್ದರು. ಈ ಗಾಯಾಳುಗಳಲ್ಲಿ ಮತ್ತೆ ಇಬ್ಬರು ಚಿಕಿತ್ಸೆಗೆ ಸ್ಪಂದಿಸಲಾಗದೇ ಮಂಗಳವಾರ ಕೊನೆಯುಸಿರೆಳೆದರು. ಇದರೊಂದಿಗೆ ದೆಹಲಿ ಐ20 ಕಾರು ಸ್ಫೋಟದಲ್ಲಿ ಹತರಾದವರ ಸಂಖ್ಯೆ 15ಕ್ಕೆ ಏರಿಕೆ ಆಗಿದೆ.

- ಎಲ್‌ಎನ್‌ಜೆಪಿ ಆಸ್ಪತ್ರೆ ಸೇರಿದ್ದ 20 ಗಾಯಾಳುಗಳಲ್ಲಿ ಇಬ್ಬರ ಸಾವು
- ವಿನಯ್ ಪಾಠಕ್(50), ಮೊಹಮ್ಮದ್ ಲ್ಯೂಕ್‌ಮನ್(73) ಮೃತರು

ನ.10ರ ಸಂಜೆ ದೆಹಲಿ ಕೆಂಪುಕೋಟೆ ಮೆಟ್ರೊ ನಿಲ್ದಾಣ ಸಮೀಪದ ಚಾಂದ್‌ನಿ ಚೌಕ್ ಮಾರುಕಟ್ಟೆ ಪ್ರದೇಶದಲ್ಲಿ ಸಾಮಗ್ರಿಗಳನ್ನು ಖರೀದಿಸಲು ತೆರಳಿದ್ದ ವಿನಯ್ ಪಾಠಕ್(50) ಮತ್ತು ಟ್ರಿಂಕೆಟ್ಸ್ ಮಾರಾಟಗಾರ ಮೊಹಮ್ಮದ್ ಲ್ಯೂಕ್‌ಮನ್(73) ಕೂಡಾ ಐ20 ಕಾರು ಸ್ಫೋಟದಲ್ಲಿ ಗಾಯಗೊಂಡಿದ್ದರು. 8 ದಿನಗಳಿಂದ ಆಸ್ಪತ್ರೆಯಲ್ಲಿದ್ದ ಈ ಇಬ್ಬರೂ ಚಿಕಿತ್ಸೆ ಫಲಿಸದೇ ಅಸುನೀಗಿದರು. 'ದೆಹಲಿಯ ಅಯಾ ನಗರ್ ನಿವಾಸಿಯಾದ ವಿನಯ್ ತಮ್ಮ ಕಿರಿಯ ಪುತ್ರನಿಗಾಗಿ ಉಡುಗೊರೆ ಖರೀದಿಸಲು ಚಾಂದ್‌ನಿ ಚೌಕ್‌ಗೆ ತೆರಳಿದ್ದವರು ಕಾರು ಸ್ಫೋಟದಲ್ಲಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಹೋಗಿ ನೋಡಿದರೆ ತಂದೆ ಪ್ರಜ್ಞಾಹೀನರಾಗಿದ್ದರು. ಕೊನೆಗೂ ಅವರು ಜೀವಂತ ಮರಳಲೇ ಇಲ್ಲ' ಎಂದು ಬಿಕ್ಕಿಬಿಕ್ಕಿ ಅಳಲಾರಂಭಿಸಿದರು.



ಬಿಹಾರದ ಬೇಗುಸರಾಯ್ ಮೂಲದ ಮೊಹಮ್ಮದ್ ಲ್ಯೂಕ್‌ಮನ್ ಅವರ ಪುತ್ರ ಮೊಹಮ್ಮದ್ ಸಿಕಂದರ್(35) ಸುದ್ದಿಸಂಸ್ಥೆ ಜತೆ ಮಂಗಳವಾರ ಮಾತನಾಡಿ, 'ನ.7-9 ರಂದು ಟ್ರಿಂಕೆಟ್ಸ್ ಖರೀದಿಗೆ ಚಾಂದ್‌ನಿ ಚೌಕ್ ತೆರಳಿ ಬಳಿಕ ಟರ್ಕಮನ್ ಗೇಟ್ ಬಳಿಯ ಕಾರ್ಮಿಕರ ನಿವಾಸಕ್ಕೆ ಮರಳಿದ್ದರು. ಆದರೆ, ನ.10ರಂದು ಖರೀದಿಗೆ ಹೋದವರು ಕಾರು ಸ್ಫೋಟದಲ್ಲಿ ಗಾಯಗೊಂಡು ಆಸ್ಪತ್ರೆ ಸೇರಿ ಅಲ್ಲೇ ಕೊನೆಯುಸಿರೆಳೆದರು' ಎಂದು ಕಣ್ಣೀರಾದರು.

ಸಮಾಚಾರ ಸಣ್ಣದಲ್ಲ

ಶಬರಿಮಲೆ: ಓರ್ವ ಭಕ್ತೆಯ ಸಾವು

ಪತ್ತನಂತಿಟ್ಟ: ಮಂಡಲ-ಮಕರವಿಳಕ್ಕು ತೀರ್ಥ ಯಾತ್ರೆ ಪ್ರಯುಕ್ತ ಶಬರಿಮಲೆ ದೇವಸ್ಥಾನ ತೆರೆದ 48 ಗಂಟೆಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಭಕ್ತರು ಆಗಮಿಸಿದ್ದು, ಪರಿಸ್ಥಿತಿಯನ್ನು ನಿಭಾಯಿಸಲು ಟಿಡಿಬಿ ಸಿಬ್ಬಂದಿ ಹಾಗೂ ಪೊಲೀಸರು ಹರಸಾಹಸ ಪಟ್ಟರು. ಶಬರಿಮಲೆ ದೇವಸ್ಥಾನಕ್ಕೆ ಭೇಟಿ ನೀಡಿದ್ದ, ಕೋಯಿಕ್ಕೋಡ್ ಜಿಲ್ಲೆಯ ಕೊಯಿಲಾಂಡಿ ತಾಲ್ಲೂಕಿನ 58 ವರ್ಷದ ಮಹಿಳೆಯೊಬ್ಬರು ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಯಾತ್ರೆಯ ಮೂರನೇ ದಿನವಾದ ಮಂಗಳವಾರ ಅಪಾರ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದು, ದೇವರ ದರ್ಶನಕ್ಕಾಗಿ ಹತ್ತು ಗಂಟೆಗೂ ಹೆಚ್ಚು ಕಾಲ ಸರತಿ ಸಾಲಿನಲ್ಲಿ ನಿಂತಿದ್ದರು. ದೇವಾಲಯದ ಮುಖ್ಯ ದ್ವಾರಗಳನ್ನು ತಲುಪಲು ಹತ್ತಬೇಕಾದ 18 ಮೆಟ್ಟಿಲುಗಳ ಮುಂಭಾಗದಲ್ಲಿರುವ ಸಣ್ಣ ಪ್ರದೇಶದಲ್ಲಿ ಭಕ್ತರು ಕಿಕ್ಕಿರಿದು ತುಂಬಿದ್ದರು. ಆ ವೇಳೆ ನೂಕುನುಗ್ಗಲು ಉಂಟಾಗಿದ್ದು ಮಕ್ಕಳು, ವೃದ್ಧರು ಸೇರಿದಂತೆ ಅನೇಕರಿಗೆ ತೊಂದರೆ ಉಂಟಾಯಿತು. ಶಬರಿಮಲೆಯ ತಪ್ಪಲಿನಲ್ಲಿರುವ ಪಂಪಾ ನದಿಯಿಂದ ಸನ್ನಿಧಾನಕ್ಕೆ ಹೋಗುವ ತೀರ್ಥ ಯಾತ್ರೆಯ ಮಾರ್ಗದಲ್ಲಿ ಭಕ್ತರ ದೊಡ್ಡ ಗುಂಪು ತುಂಬಿದ್ದ ಕಾರಣ ಬೆಟ್ಟ ಹತ್ತಲು ಗಂಟೆಗಟ್ಟಲೆ ಕಾಯಬೇಕಾಯಿತು.

ಬಿಹಾರ: 43 ನಾಯಕರಿಗೆ ಕಾಂಗ್ರೆಸ್ ನೋಟಿಸ್

ಪಟನಾ: ಬಿಹಾರ ವಿಧಾನಸಭಾ ಚುನಾವಣೆಯ ವೇಳೆ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದ 43 ನಾಯಕರಿಗೆ ನೋಟಿಸ್ ನೀಡಲಾಗಿದೆ ಎಂದು ಕಾಂಗ್ರೆಸ್ ಪಕ್ಷವು ಮಂಗಳ ವಾರ ತಿಳಿಸಿದೆ. ಚುನಾವಣೆಯ ವೇಳೆ ಪಕ್ಷ ವಿರೋಧಿ ಹೇಳಿಕೆಗಳನ್ನು ನೀಡಿದ್ದ ನಾಯಕರಿಗೆ ಕಾಂಗ್ರೆಸ್ ಪಕ್ಷದ ಶಿಸ್ತು ಸಮಿತಿಯು ನೋಟಿಸ್ ನೀಡಿದೆ. ಮಾಜಿ ಸಚಿವೆ ವೀಣಾ ಶಾಹಿ, ಎಐಸಿಸಿ ಸದಸ್ಯ ಮಧುರೇಂದ್ರ ಕುಮಾರ್ ಸಿಂಗ್, ರಾಜ್ಯ ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ ಕೈಸರ್ ಖಾನ್, ಮಾಜಿ ಶಾಸಕ ಸುಧೀರ್ ಕುಮಾರ್ ಹಾಗೂ ಮಾಜಿ ಎಂಎಲ್‌ಸಿ ಅಜಯ್ ಕುಮಾರ್ ಸಿಂಗ್ ಸೇರಿದಂತೆ ಕೆಲವು ಮಾಜಿ ಸಚಿವರಿಗೂ ಕೂಡ ನೋಟಿಸ್ ನೀಡಲಾಗಿದೆ. ನವೆಂಬರ್ 21ರೊಳಗೆ ಲಿಖಿತ ಉತ್ತರವನ್ನು ನೀಡುವಂತೆ ಸೂಚಿಸಲಾಗಿದೆ ಎಂದು ರಾಜ್ಯ ಕಾಂಗ್ರೆಸ್ ಶಿಸ್ತು ಸಮಿತಿಯ ಅಧ್ಯಕ್ಷ ಕಪಿಲ್ ದೇವ್ ಪ್ರಸಾದ್ ಯಾದವ್ ಅವರು ಹೇಳಿ ದ್ದಾರೆ. ಒಂದು ವೇಳೆ ಸಮಯದ ಒಳಗಾಗಿ ಲಿಖಿತ ಉತ್ತರ ನೀಡದಿದ್ದರೆ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಹೊರಗಿಡಲಾಗುತ್ತದೆ ಎಂದೂ ತಿಳಿಸಲಾಗಿದೆ.

ನಿತೀಶ್ ಬಿಹಾರದ ಮುಂದಿನ ಸಿಎಂ: ಗಿರಿರಾಜ್ ಸಿಂಗ್

ದೆಹಲಿ: ಬಿಹಾರದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರೇ ಮುಂದುವರಿಯಲಿದ್ದಾರೆ ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು ಮಂಗಳವಾರ ಹೇಳಿದರು. 'ಗೊಂದಲಕ್ಕೆ ಕಾರಣ ಏನೆಂದು ನನಗೆ ಗೊತ್ತಾಗುತ್ತಿಲ್ಲ. ನಿತೀಶ್ ಕುಮಾರ್ ಅವರ ನಾಯಕತ್ವದಲ್ಲಿ ನಾವು ಚುನಾವಣೆ ಎದುರಿಸಿದ್ದೇವೆ, ಹಾಗಾಗಿ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ. ಎಲ್ಲ ಪಕ್ಷಗಳಿಗೂ ಅದ ರದ್ದೇ ಆದ ಪ್ರಕ್ರಿಯೆಗಳಿರುತ್ತದೆ, ಹಾಗಾಗಿ ಎನ್‌ಡಿಎ ಮೈತ್ರಿಕೂಟದ ಪಕ್ಷಗಳು ಸಭೆ ನಡೆಸುತ್ತಿವೆ' ಎಂದು ಹೇಳಿದರು. ಬಿಜೆಪಿ ಮತ್ತು ಜೆಡಿಯು ಶಾಸಕಾಂಗ ಪಕ್ಷದ ಸಭೆಯನ್ನು ಪ್ರತ್ಯೇಕವಾಗಿ ನಡೆಸಲಿದ್ದು, ಬಳಿಕ ಜಂಟಿಯಾಗಿ ಎನ್‌ಡಿಎ ಮೈತ್ರಿಕೂಟದ ಸಭೆ ನಡೆಯಲಿದೆ. ಆ ಸಭೆಯಲ್ಲಿ ನಾಯಕನ ಆಯ್ಕೆ ನಡೆಯುತ್ತದೆ, ನಿತೀಶ್ ಕುಮಾರ್ ಅವರೇ ಮುಖ್ಯ ಮಂತ್ರಿಯಾಗುತ್ತಾರೆ' ಎಂದೂ ತಿಳಿಸಿದರು.

ಬಿಷ್ಣೋಯ್ ಸಹೋದರ ಅನ್ಮೋಲ್ ಗಡೀಪಾರು

ದೆಹಲಿ: ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಸಹೋದರ ಗ್ಯಾಂಗ್‌ಸ್ಟರ್ ಅನ್ಮೋಲ್ ಬಿಷ್ಣೋಯ್‌ನನ್ನು ಗಡಿಪಾರು ಮಾಡಲು ಅಮೆರಿಕ ಸಿದ್ಧವಾಗಿದೆ. ಅನ್ಮೋಲ್ ಗಡೀಪಾರು ಅಂತಾರಾಷ್ಟ್ರೀಯ ಮಟ್ಟ ದಲ್ಲಿ ಗ್ಯಾಂಗ್‌ಸ್ಟರ್ ಜಾಲಗಳ ವಿರುದ್ಧದ ಪ್ರಮುಖ ಕ್ರಮವೆಂದು ಪರಿಗಣಿಸಲಾಗಿದೆ. ಸಿಧು ಮೂಸೆ ವಾಲಾ ಕೊಲೆ, ಬಾಬಾ ಸಿದ್ದಿಕಿ ಹತ್ಯೆ ಮತ್ತು ಸಲ್ಮಾನ್ ಖಾನ್ ಮನೆಯ ಹೊರಗೆ ಗುಂಡಿನ ದಾಳಿಯ ಹಿಂದಿನ ಮಾಸ್ಟರ್ ಮೈಂಡ್ ಅನ್ಮೋಲ್ ಬಿಷ್ಣೋಯ್ ಎನ್ನಲಾಗಿದೆ. ಆತನನ್ನು ನವೆಂಬರ್ 19ರೊಳಗೆ ಭಾರತಕ್ಕೆ ಗಡೀಪಾರು ಮಾಡುವ ನಿರೀಕ್ಷೆಯಿದೆ. ಅನ್ಮೋಲ್ ಬಿಷ್ಣೋಯ್‌ನನ್ನು 2024ರಲ್ಲಿ ಅಮೆರಿಕದಲ್ಲಿ ಬಂಧಿಸಲಾಗಿತು. ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಸದ್ಯ ಗುಜರಾತ್‌ನ ಸಬರಮತಿ ಜೈಲಿನಲ್ಲಿದ್ದಾನೆ.

{ ಮಲ್ಲಿಕಾರ್ಜುನ ಖರ್ಗೆ } ಎಐಸಿಸಿ ಅಧ್ಯಕ್ಷ

ಚುನಾವಣಾ ಆಯೋಗವು ಕೇಂದ್ರದ ಬಿಜೆಪಿ ಸರಕಾರದ ಅಡಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ಸಾಬೀತುಪಡಿಸಬೇಕು. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗದ ನಡವಳಿಕೆಯು ತೀವ್ರ ನಿರಾಶಾದಾಯಕ ಆಗಿದೆ.

ಕೈಗಾರಿಕೆಗಳು ರಾಜ್ಯದಲ್ಲಿ ಬೆಳೆಯಲು ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಪರಿಸರ ಅಗತ್ಯ: ಎಂ.ಬಿ.ಪಾಟೀಲ್

ಕ್ವಿನ್ ಸಿಟಿಯ 20 ಎಕರೆಯಲ್ಲಿ ಸೆಮಿಕಂಡಕ್ಟರ್ ಪಾರ್ಕ್

ಬೆಂಗಳೂರು: ಆಧುನಿಕ ಕೈಗಾರಿಕೋದ್ಯಮ ಗಳ ಮಹತ್ವವನ್ನು ಅರಿತಿರುವ ಸರಕಾರ ಕ್ವಿನ್ ಸಿಟಿಯ 200 ಎಕರೆ ಜಾಗದಲ್ಲಿ ಸೆಮಿ ಕಂಡಕ್ಟರ್ ಪಾರ್ಕ್ ಅಭಿವೃದ್ಧಿಪಡಿಸಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದರು.

ಬೆಂಗಳೂರು ಟೆಕ್ ಸಮಾವೇಶದಲ್ಲಿ ಮಾತನಾಡಿದ ಅವರು, 200 ಎಕರೆ ಜಾಗ ದಲ್ಲಿ ಕಂಪನಿಗಳಿಗೆ ಬೇಕಾಗುವ ಸಕಲ ಸೌಕರ್ಯಗಳನ್ನೂ ಕಲ್ಪಿಸಲಾಗುವುದು. ಇದು ದೇಶ ಮತ್ತು ರಾಜ್ಯ ಮಟ್ಟದಲ್ಲಿ ಸೆಮಿ ಕಂಡಕ್ಟರ್ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ರೀತಿಯ ನಾವೀನ್ಯತಾ ಕೇಂದ್ರವಾಗಿ ಕೆಲಸ ಮಾಡಲಿದೆ. ಮುಂಚೂಣಿ ತಂತ್ರಜ್ಞಾನ ಕಂಪನಿಗಳಿಗೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಆದ್ಯತೆ ನೀಡಿದೆ.

> **ರಾಜ್ಯದಲ್ಲಿ ಹಲವು ತಂತ್ರಜ್ಞಾನ ಕಂಪನಿಗಳು ಎಐ, ಮಷಿನ್ ಲರ್ನಿಗ್, ಕ್ವಾಂಟಂ, ರೋಬೋಟಿಕ್ಸ್, ಆಧುನಿಕ ತಯಾರಿಕೆ ಮತ್ತು ಸುಸ್ಥಿರ ನಾವೀನ್ಯತೆಯ ಕ್ಷೇತ್ರಗಳಲ್ಲಿ ಸಕ್ರಿಯವಾಗಿವೆ. ಇಂತಹ ಕಂಪನಿಗಳಿಗೆ ಬೆಂಬಲ ಕೊಡಲೆಂದೇ ಸರಕಾರವು 600 ಕೋಟಿ ರು. ಒದಗಿಸಿದೆ. ರಾಜ್ಯವು ಡೀಪ್ ಸೈನ್ಸ್ ಮತ್ತು ಮುಂಚೂಣಿ ತಂತ್ರಜ್ಞಾನ ಎರಡರಲ್ಲೂ ಅಗ್ರಸ್ಥಾನದಲ್ಲಿ ಇರಬೇಕೆನ್ನುವುದು ಸರಕಾರದ ಸಂಕಲ್ಪವಾಗಿದೆ.**
>
> **-ಎಂ ಬಿ ಪಾಟೀಲ,**
> ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ಇಂತಹ ಹೂಡಿಕೆಯು ಕೈಗಾರಿಕೋದ್ಯಮದ ವಿವಿಧ ವಲಯಗಳಿಗೆ ಹರಿದು ಬರಬೇಕು ಎನ್ನು ವುದು ಸರಕಾರದ ಗುರಿಯಾಗಿದೆ. ಇದರ ಜೊತೆಯಲ್ಲಿ

ಬೆಂಗಳೂರು ಟೆಕ್ ಸಮಾವೇಶದಲ್ಲಿ ಭಾಗವಹಿಸಿದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್.

ಇಂಡಸ್ಟ್ರಿ 5.0 ಮತ್ತು ಇನ್ನಿತರ ಅತ್ಯಾಧುನಿಕ ಕೈಗಾರಿಕಾ ವಿಧಾನಗಳನ್ನೂ ಗಂಭೀರವಾಗಿ ಪರಿಗಣಿಸಲಾಗುವುದು ಎಂದರು.

ಕೈಗಾರಿಕೆಗಳು ಬೆಳೆಯಬೇಕು ಮತ್ತು ಹೂಡಿಕೆದಾರರು ನಮ್ಮಲ್ಲಿಗೆ ಬರಬೇಕೆಂದರೆ, ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯ ಪರಿಸರ ಚೆನ್ನಾಗಿರಬೇಕು. ನಮ್ಮಲ್ಲಿ 800ಕ್ಕೂ ಹೆಚ್ಚು ಆರ್.ಡಿ ಕೇಂದ್ರಗಳು, 100ಕ್ಕೂ ಅಧಿಕ ಚಿಪ್ ವಿನ್ಯಾಸ ಕಂಪನಿಗಳು ಮತ್ತು 18,300 ನವೋದ್ಯಮಗಳು ಇವೆ. ನಮ್ಮಲ್ಲಿ ರುವ ಆರ್ ಮತ್ತು ಡಿ ಕೇಂದ್ರಗಳು ಕೃತಕ ಬುದ್ಧಿಮತ್ತೆ, ಡೀಪ್ ಟೆಕ್, ಕ್ವಾಂಟಂ ಕಂಪ್ಯೂಟಿಂಗ್, ಸ್ಪೇಸ್-ಟೆಕ್ ಮುಂತಾದ ಅತ್ಯಾಧುನಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿವೆ. ಉದ್ದೇಶಿತ ಕ್ವಿನ್ ಸಿಟಿಗೆ ಕೊಟ್ಟಿ ರುವ 5,000 ಎಕರೆ ಜಾಗದಲ್ಲಿ ಆರ್ ಮತ್ತು ಡಿ ಕೇಂದ್ರಗಳಿಗಾಗಿ ಅಗತ್ಯವಿರುವಷ್ಟು ಸ್ಥಳ ವನ್ನು ಮೀಸಲಿಟ್ಟು, ಅದಕ್ಕೆ ತಕ್ಕ ಕಾರ್ಯ ಪರಿಸರ ಅಭಿವೃದ್ಧಿ ಪಡಿಸಲಿದ್ದೇವೆ ಎಂದು ಹೇಳಿದರು.

ಜಾಗತಿಕ ಅಂತರಿಕ್ಷ ವಲಯ ಡ್ರೋಣ್ ಕೇಂದ್ರಿತ: ಜಾಗತಿಕ ಅಂತರಿಕ್ಷ ವಲಯವು ಕಳೆದ ಮೂರು ವರ್ಷಗಳಲ್ಲಿ ಭಾರಿ ಪರಿವರ್ತನೆ ಕಂಡಿದ್ದು, ಹೆಚ್ಚು ಡ್ರೋಣ್ ಕೇಂದ್ರಿತವಾಗಿದೆ ಎಂದು ಅನ್‌ಮ್ಯಾನ್ಡ್ ಸಂಸ್ಥೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಯಶವಂತ ರೆಡ್ಡಿ ಪ್ರತಿಪಾದಿಸಿದರು. ಬೆಂಗಳೂರು ತಂತ್ರಜ್ಞಾನ ಶೃಂಗಸಭೆ- 25ರಲ್ಲಿ 'ಅಂತರಿಕ್ಷ ತಂತ್ರಜ್ಞಾನದ ಮುಂದಿನ ಸೀಮೆ-ಹೊಸ ಎತ್ತರಗಳು' ಕುರಿತು ವಲಯದ ಪ್ರಮುಖ ನವೋದ್ಯಮಿಗಳು ನಡೆಸಿದ ಗೋಷ್ಠಿಯಲ್ಲಿ ಅವರು ಮಾತನಾಡಿದ ಅವರು, ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿನ ಆಧುನಿಕ ಸಂಘರ್ಷಗಳು ಡ್ರೋಣ್ ವಲಯದಲ್ಲಿ ಹೊಸ ಅವಕಾಶಗಳ ಜತೆಗೆ ತುರುಸಿನ ಸ್ಪರ್ಧೆಯನ್ನೂ ಮೂಡಿಸಿವೆ. ಇದು ಭಾರತದ ನವೋದ್ಯಮಿಗಳಿಗೆ ಸವಾಲಿನ ಜತೆಗೆ ಅವಕಾಶಗಳನ್ನೂ ಮುಕ್ತವಾಗಿಸಿದೆ ಎಂದು ವಿವರಿಸಿದರು. ಜೆಜೆಜಿ ಏರೋ ಸಂಸ್ಥೆಯ ಸಿಇಒ ಅನುಜ್ ಝುಂಝುನ್‌ವಾಲಾ, ಪ್ರಸ್ತುತ ಜಾಗತಿಕ ವೈಮಾನಿಕ ಬಿಡಿಭಾಗಗಳ ಪೂರೈಕೆ ಮಾರುಕಟ್ಟೆಯಲ್ಲಿ ಭಾರತದ ಪಾಲು ಕೇವಲ ಶೇಕಡ 1.5ರಷ್ಟು ಇದ್ದು, ಈ ವಲಯದಲ್ಲಿ ಇನ್ನೂ ಬಹಳಷ್ಟು ಅಭಿವೃದ್ಧಿಯಾಗಬೇಕಾದ ಅವಶ್ಯಕತೆ ಇದೆ ಎಂದರು.

ಏರ್‌ಬೌಂಡ್ ಸಂಸ್ಥೆಯ ಸಂಸ್ಥಾಪಕ ನಮನ್ ಪುಷ್ಪ, ಡ್ರೋಣ್ ಮತ್ತು ವೈಮಾನಿಕ ವಲಯದಲ್ಲಿ ಕಡಿಮೆ ತೂಕದ, ಆದರೆ ಗುಣಮಟ್ಟದ ಹಾಗೂ ದೀರ್ಘ ಕಾಲ ಬಾಳಿಕೆ ಬರುವ ಬಿಡಿಭಾಗಗಳನ್ನು ತಯಾರಿಸುವುದು ಸವಾಲಿನ ಕಾರ್ಯ, ಈ ನಿಟ್ಟಿನಲ್ಲಿ ಭಾರತೀಯ ನವೋದ್ಯಮಗಳು ಗಮನಹರಿಸಬೇಕು ಎಂದು ಹೇಳಿದರು.

ಎಐ ಹಾರ್ಡ್‌ವೇರ್ ತಯಾರಿಕೆಗೆ ಆದ್ಯತೆ ಅಗತ್ಯ

ಕಳೆದ 10 ವರ್ಷಗಳಲ್ಲಿ ದೇಶದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ವ್ಯಾಪಕ ಅಭಿವೃದ್ಧಿ ಕಂಡಿದ್ದು, ಭೂಮಿ, ಆಕಾಶ, ಸಾಗರ ವಲಯಗಳಲ್ಲಿ ವೈವಿಧ್ಯಮಯ ಅಪ್ಲಿಕೇಶನ್‌ಗಳು ತಯಾರಾಗಿವೆ. ಆದರೆ, ಈ ವಲಯ ಗಳಲ್ಲಿ ಭಾರತ ಬಹುತೇಕ ಸಾಫ್ಟ್‌ವೇರ್ ಪ್ರಾಬಲ್ಯ ಹೊಂದಿದ್ದು, ಭವಿಷ್ಯದಲ್ಲಿ ಹಾರ್ಡ್ ವೇರ್ ಹಾಗೂ ಬಿಡಿಭಾಗಗಳ ತಯಾರಿಕಾ ವಲಯಕ್ಕೂ ಹೆಚ್ಚಿನ ಆದ್ಯತೆ ನೀಡುವುದು ಅವಶ್ಯ ಎಂದು 'ಔಟ್ ಡು ಮೆಡಾಟೆಕ್' ಸಂಸ್ಥೆಯ ಸಿಇಒ ಶ್ರೀಧರ್ ಸುಬ್ರಹ್ಮಣ್ಯ ಅಭಿಪ್ರಾಯ ಪಟ್ಟರು.

'ಕೃತಕ ಬುದ್ಧಿಮತ್ತೆ: ಉದಯೋನ್ಮುಖ ತಂತ್ರಜ್ಞಾನ ಗಳು-ಕಾರ್ಯತಂತ್ರ ಬೆಳವಣಿಗೆ' ಕುರಿತು ವಲಯದ ಪ್ರಮುಖ ನವೋದ್ಯಮಿಗಳೊಂದಿಗೆ ಸಂವಾದದಲ್ಲಿ ಅವರು ಮಾತನಾಡಿದರು. ಎನ್‌ಎಕ್ಸ್‌ಪಿ ಸೆಮಿ ಕಂಡಕ್ಟರ್ ಸಂಸ್ಥೆಯ ಉಪಾಧ್ಯಕ್ಷ ಹಿತೇಶ್ ಗರ್ಗ, ಭವಿಷ್ಯದಲ್ಲಿ ಎಐ ತಂತ್ರಜ್ಞಾನ ವಿವಿಧ ಆಯಾಮಗಳಲ್ಲಿ ಅಭಿವೃದ್ಧಿಗೊಳ್ಳಲಿದ್ದು, ಒಂದು ಸಾಧನಗಳಲ್ಲಿ ಹಲವು ಬಗೆಯ ಕಾರ್ಯನಿರ್ವಹಿಸುವ ತಂತ್ರಜ್ಞಾನದತ್ತ ಉದ್ಯಮಿಗಳು ಗಮನ ಹರಿಸುವುದು ಅಗತ್ಯ ಎಂದರು. ಎಡ್ಜ್ ಕಂಪ್ಯೂಟಿಂಗ್ ಇಂಟೆಲ್ ಸಂಸ್ಥೆಯ ಮುಖ್ಯ ಎಂಜಿನಿಯರ್ ಕಣ್ಣನ್ ಬಾಬು ರಾಮಿಯಾ, ಕಳೆದ ಹಲವು ವರ್ಷ ಗಳಲ್ಲಿ ಸೆಮಿಕಂಡರ್ಕ್ಟ ವಲಯ ಸಾಕಷ್ಟು ಬದಲಾಗಿದ್ದು, ವಿಶ್ವಾಸಾರ್ಹತೆ ಹಾಗೂ ಗುಣಮಟ್ಟದಿಂದ ಸ್ಪರ್ಧಾತ್ಮಕತೆಯ ಸವಾಲು ಎದುರಿಸುವುದು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸೌದಿ ನೆಲದಲ್ಲೇ ಬಸ್ ದುರಂತದಲ್ಲಿ ಮೃತಪಟ್ಟ 45 ಭಾರತೀಯರ ದಫನ

ಮೆಕ್ಕಾದಲ್ಲೇ ಭಾರತೀಯ ಯಾತ್ರಿಕರ ಶವ ಸಂಸ್ಕಾರ

ರಿಯಾದ್: ಸೌದಿ ಅರೇಬಿಯಾದಲ್ಲಿ ಭಾರತೀಯ ಮೆಕ್ಕಾ ಮದೀನಾ ಉಮ್ರಾ ಯಾತ್ರಿಗಳಿದ್ದ ಬಸ್ ದುರಂತದಲ್ಲಿ ಮೃತಪಟ್ಟ 45 ಭಾರತೀಯರ ಶವಗಳನ್ನು ಭಾರತಕ್ಕೆ ತರಲು ಸಾಧ್ಯವಾಗದ ಕಾರಣ ಮೃತರ ಶವಗಳನ್ನು ಅಲ್ಲೇ ಅಂತ್ಯಸಂಸ್ಕಾರ ನಡೆಸಲಾಗುತ್ತದೆ ಎಂದು ವರದಿಯಾಗಿದೆ. ಸೋಮವಾರ ನಸುಕಿನ ಜಾವ 1.30ರ ಸುಮಾರಿಗೆ ಭಾರತೀಯ ಮೆಕ್ಕಾ ಯಾತ್ರಿಗಳನ್ನು ಕರೆದೊಯ್ಯುತ್ತಿದ್ದ ಬಸ್ ಡೀಸೆಲ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ಕಾರಣ ಹೊತ್ತಿ ಉರಿದ ಬೆಂಕಿಯಿಂದಾಗಿ ಪ್ರಯಾಣಿಕರು ಸಾವನ್ನಪ್ಪಿದ್ದರು.

ಸೌದಿ ಅರೇಬಿಯಾದಲ್ಲಿ ಧಾರ್ಮಿಕ ಪದ್ಧತಿಗಳ ಪ್ರಕಾರವೇ ಅಂತ್ಯಸಂಸ್ಕಾರ ನಡೆಯುವುದರಿಂದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಪ್ರತಿ ಕುಟುಂಬದಿಂದ ಇಬ್ಬರು ಸದಸ್ಯರನ್ನು ಸೌದಿ ಅರೇಬಿಯಾಕ್ಕೆ ಕಳುಹಿಸಲಾಗುವುದು ಎಂದು ತೆಲಂಗಾಣ ಸರಕಾರ ಹೇಳಿದೆ. ಶವಗಳ ಹಸ್ತಾಂತರದ ವಿಚಾರದಲ್ಲಿ ಸೌದಿ ಅರೇಬಿಯಾ ಕಠಿಣ ಕಾನೂನುಗಳನ್ನು ಹೊಂದಿರುವುದರಿಂದ ಶವಗಳನ್ನು ಹೊರ ತರುವುದು ಬಹಳ ಕಷ್ಟಕರವಾಗಿದೆ. ಎಲ್ಲ ಕಾನೂನು ಪ್ರಕ್ರಿಯೆಗಳನ್ನು ಮುಗಿಸುವುದಕ್ಕೆ ಹಲವು ತಿಂಗಳುಗಳೇ ಹಿಡಿಯಬಹುದೆಂಬ ಹಿನ್ನೆಲೆಯಲ್ಲಿ ಅಲ್ಲೇ ಶವಗಳಿಗೆ ಅಂತ್ಯಸಂಸ್ಕಾರ ಮಾಡುವುದಕ್ಕೆ ನಿರ್ಧರಿಸಲಾಗಿದೆ ಎಂದು ವರದಿಯಾಗಿದೆ.

ನಿರ್ಧಾರಕ್ಕೆ ಕಾರಣ: ಸೌದಿ ಅರೇಬಿಯಾದ ಹಜ್ ಮತ್ತು ಉಮ್ರಾ ಸಚಿವಾಲಯದ ಪ್ರಕಾರ, ಯಾತ್ರಿಕರು ಪ್ರಯಾಣ ಆರಂಭಿಸುವ ಮೊದಲೇ ಕೆಲವು ಘೋಷಣೆಗಳಿರುವ ಪೇಪರ್‌ಗಳಿಗೆ ಸಹಿ ಹಾಕುತ್ತಾರೆ. ಅದರ ಪ್ರಕಾರ ಸೌದಿ ಅರೇಬಿಯಾದ ನೆಲದಲ್ಲಿ (ಮೆಕ್ಕಾ, ಮದೀನಾ ಅಥವಾ ಬೇರೆಡೆ) ಯಾತ್ರಿಕರು ಸತ್ತರೆ, ಅವರ ದೇಹವನ್ನು ಅಲ್ಲಿಯೇ ಸಮಾಧಿ ಮಾಡಲಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಅಪಘಾತದಲ್ಲಿ ಒಬ್ಬ ವ್ಯಕ್ತಿ ಮಾತ್ರ ಬದುಕುಳಿದಿದ್ದಾರೆ. ಆತನನ್ನು ಚಾಲಕನ ಪಕ್ಕದಲ್ಲಿ ಕುಳಿತಿದ್ದ ಮೊಹಮ್ಮದ್ ಅಬ್ದುಲ್ ಶೋಯೆಬ್ (24) ಎಂದು ಗುರುತಿಸಲಾಗಿದೆ. ಶೋಯೆಬ್ ಗಾಯಗೊಂಡಿದ್ದು, ದುರಂತ ನಡೆದ ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸೌದಿಯ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದುರಂತದಲ್ಲಿ ಬಲಿಯಾದವರಲ್ಲಿ 18 ಜನ ಹೈದರಾಬಾದ್‌ನ ಒಂದೇ ಕುಟುಂಬಕ್ಕೆ ಸೇರಿದ್ದಾರೆ.

ತೆಲಂಗಾಣ ಸರಕಾರದಿಂದ ಪರಿಹಾರ

ಬಸ್ ದುರಂತಕ್ಕೆ ಸಂಬಂಧಿಸಿದಂತೆ ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿದೆ ಎಂದು ತೆಲಂಗಾಣ ಸರಕಾರ ತಿಳಿಸಿದೆ. ರಾಜ್ಯ ಸರಕಾರವು ಮೃತರ ಸಂಬಂಧಿಗಳಿಗೆ ತಲಾ 5 ಲಕ್ಷ ರು. ಪರಿಹಾರ ಘೋಷಿಸಿದೆ. ಸಂತ್ರಸ್ತರ ಗುರುತಿಸುವಿಕೆ ಮತ್ತು ಇತರ ಔಪಚಾರಿಕತೆಗಳಲ್ಲಿ ಸಹಾಯ ಮಾಡಲು ರಾಯಭಾರ ಕಚೇರಿಯೊಂದಿಗೆ ನಿಕಟವಾಗಿ ಸಮನ್ವಯ ಸಾಧಿಸು ವಂತೆ ಮುಖ್ಯಮಂತ್ರಿ ರೇವಂತ್ ರೆಡ್ಡಿ ದೆಹಲಿಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಸುರಕ್ಷಿತ ವಾಹನ ತೆಗೆದು ಹಾಕಲು ಕ್ರಮ ಸರಕಾರದಿಂದ 3 ವರ್ಗೀಕರಣದ ತಿದ್ದುಪಡಿ

ಫಿಟ್‌ನೆಸ್ ಪ್ರಮಾಣಪತ್ರ ದರ 10 ಪಟ್ಟು ಏರಿಕೆ

ದೆಹಲಿ: ಕೇಂದ್ರ ಸರಕಾರವು ಕೇಂದ್ರ ಮೋಟಾರು ವಾಹನ ನಿಯಮಗಳನ್ನು ತಿದ್ದುಪಡಿ ಮಾಡಿದ್ದು, ದೇಶಾದ್ಯಂತ ವಾಹನಗಳ ಫಿಟ್‌ನೆಸ್ ಪರೀಕ್ಷೆಯ ಪ್ರಮಾಣ ಪತ್ರ ಶುಲ್ಕವನ್ನು 10 ಪಟ್ಟು ಹೆಚ್ಚಿಸಿದೆ. ಹೊಸ ನಿಯಮಗಳ ಅಡಿಯಲ್ಲಿ, ಹೆಚ್ಚಿನ ಫಿಟ್‌ನೆಸ್ ಪರೀಕ್ಷಾ ಶುಲ್ಕದ ಅವಧಿಯನ್ನು 15 ವರ್ಷಗಳಿಂದ 10 ವರ್ಷಗಳಿಗೆ ಬದಲಾಯಿಸಲಾಗಿದೆ. ಸರಕಾರವು ಮೂರು ಸ್ಪಷ್ಟ ವರ್ಗೀಕರಣದ ತಿದ್ದುಪಡಿಗಳನ್ನು ಪರಿಚಯಿಸಿದೆ. ವಾಹನವು ಹಳೆಯದಾಗುತ್ತಿದ್ದಂತೆ ಪ್ರತಿಯೊಂದು ವರ್ಗವು ಈಗ ಹೆಚ್ಚಿನ ಶುಲ್ಕವನ್ನು ಹೊಂದಿರುತ್ತದೆ. ಹೊಸ ಶುಲ್ಕಗಳು ವಾಹನದ ಅವಧಿ ಮತ್ತು ಪ್ರಕಾರವನ್ನು ಆಧರಿಸಿವೆ. 15 ವರ್ಷಕ್ಕಿಂತ ಮೇಲ್ಪಟ್ಟ ಹೆಚ್ಚಿನ ವಾಹನಗಳಿಗೆ ಅನ್ವಯಿಸುವ ಹಿಂದಿನ ಶುಲ್ಕದಲ್ಲಿ ಬದಲಾವಣೆ ಆಗಿದೆ.

ಎಷ್ಟಾಗಲಿದೆ ದರ: ಭಾರೀ ವಾಣಿಜ್ಯ ವಾಹನಗಳಿಗೆ ಈ ಹೆಚ್ಚಳವು ಅತಿ ಹೆಚ್ಚಾಗಿದೆ. 20 ವರ್ಷಗಳಿಗಿಂತ ಹೆಚ್ಚು ಹಳೆಯದಾದ ಟ್ರಕ್ ಅಥವಾ ಬಸ್ ಈಗ ಫಿಟ್‌ನೆಸ್ ಪರೀಕ್ಷೆಗೆ ರು.25,000 ಪಾವತಿಸಬೇಕಾಗುತ್ತದೆ. ಇದಕ್ಕೂ ಮೊದಲು ಶುಲ್ಕ ರು. 2,500 ಇತ್ತು. ಅದೇ ಮಧ್ಯಮ ವಾಣಿಜ್ಯ ವಾಹನಗಳು ಈಗ 1,800ರ ಬದಲು 20,000 ಪಾವತಿಸಬೇಕಿವೆ. 20 ವರ್ಷಕ್ಕಿಂತ ಹಳೆಯದಾದ ಲಘು ಮೋಟಾರು ವಾಹನಗಳು ಈಗ 15,000 ಮತ್ತು ತ್ರಿಚಕ್ರ ವಾಹನಗಳು 7,000 ಪಾವತಿಸಬೇಕಾಗುತ್ತದೆ. ದ್ವಿಚಕ್ರ ವಾಹನಗಳಿಗೆ 20 ವರ್ಷಕ್ಕಿಂತ ಹಳೆಯದಾದ ವಾಹನಗಳಿಗೆ ಶುಲ್ಕ 600ರಿಂದ 2,000ಕ್ಕೆ ಏರಿದೆ. ಸರಕಾರವು 15 ವರ್ಷಕ್ಕಿಂತ ಕಡಿಮೆ ಅವಧಿಯ ವಾಹನಗಳಿಗೆ ಶುಲ್ಕವನ್ನು ಹೆಚ್ಚಿಸಿದೆ. ಪರಿಷ್ಕೃತ ನಿಯಮ 81ರ ಅಡಿಯಲ್ಲಿ, ಮೋಟಾರ್ ಸೈಕಲ್‌ಗಳು ಈಗ 400, ಎಲ್‌ಎಂವಿಗಳು 600 ಮತ್ತು ಮಧ್ಯಮ ಮತ್ತು ಭಾರೀ ವಾಣಿಜ್ಯ ವಾಹನಗಳು ಫಿಟ್‌ನೆಸ್ ಪರೀಕ್ಷೆಗಳಿಗೆ 1,000 ಪಾವತಿಸಬೇಕಾಗುತ್ತದೆ.

ಅಸುರಕ್ಷಿತ ವಾಹನ ತೆಗೆದು ಹಾಕುವ ಯೋಜನೆ

ರಸ್ತೆಗಳಿಂದ ಹಳೆಯ ಮತ್ತು ಅಸುರಕ್ಷಿತ ವಾಹನಗಳನ್ನು ತೆಗೆದುಹಾಕುವುದನ್ನು ಉತ್ತೇಜಿಸಲು ಮತ್ತು ವಾಹನ ಸ್ಕ್ರೇಪೇಜ್ ನೀತಿಯನ್ನು ಬೆಂಬಲಿಸಲು ಈ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಸರಕಾರ ಹೇಳುತ್ತಿದೆ. ಹೆಚ್ಚಿನ ಶುಲ್ಕಗಳು ತುಂಬಾ ಹಳೆಯ ವಾಹನಗಳನ್ನು ಬಳಕೆಯಲ್ಲಿ ಇರಿಸುವುದನ್ನು ದೂರ ಮಾಡುತ್ತದೆ, ಇದೀಗ ಬಂದಿರುವ ಹೊಸ ಫಿಟ್‌ನೆಸ್ ಪರೀಕ್ಷಾ ಶುಲ್ಕಗಳು ದೇಶಾದ್ಯಂತ ತಕ್ಷಣದಿಂದ ಜಾರಿಗೆ ಬರುತ್ತವೆ.

ಮೆಟ್ರೋ ರೈಲು ಮೂಲಕ 7 ನಿಮಿಷದಲ್ಲಿ ಹೃದಯ ರವಾನೆ

ಬೆಂಗಳೂರು: ನಮ್ಮ ಮೆಟ್ರೋದಲ್ಲಿ ಐದನೇ ಬಾರಿಗೆ ಮಾನವನ ಹೃದಯವನ್ನು ಕೇವಲ 7 ನಿಮಿಷಗಳಲ್ಲಿ ಆರು ಜನರ ವೈದ್ಯಕೀಯ ತಂಡವು ಸಾಗಿಸುವಲ್ಲಿ ಯಶಸ್ವಿಯಾಗಿದೆ. ನಗರದ ಸಂಚಾರ ದಟ್ಟಣೆಯ ನಡುವೆ ಆಸ್ಟರ್, ಆರ್.ವಿ ಆಸ್ಪತ್ರೆಯಿಂದ ನಾರಾಯಣ ಹೃದಯಾಲಯಕ್ಕೆ ಹಳದಿ ಮೆಟ್ರೋ ಬಳಸಿ ಜೀವ ಉಳಿಸುವ ಕಾರ್ಯ ಮಾಡಲಾಗಿದ್ದು, ಮೆಟ್ರೋ ಮೂಲಕ 7 ನಿಮಿಷಗಳಲ್ಲಿ ಮಾನವನ ಹೃದಯವನ್ನು ರವಾನೆ ಮಾಡುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿದ್ದು, ಸುರಕ್ಷಿತವಾಗಿ ಹಸ್ತಾಂತರಿಸಲಾಗಿದೆ. ಆಸ್ಟರ್ ಆರ್.ವಿ. ಆಸ್ಪತ್ರೆಯಲ್ಲಿ ಸಂಗ್ರಹಿಸಲ್ಪಟ್ಟ ಹೃದಯವನ್ನು, ನಾರಾಯಣ ಹೃದಯಾಲಯದ ರೋಗಿಗೆ ತುರ್ತು ಅವಶ್ಯಕತೆಯ ಹಿನ್ನೆಲೆಯಲ್ಲಿ, ನಿನ್ನೆ ಸಂಜೆ 7.26ಕ್ಕೆ ರಾಗಿ ಗುಡ್ಡ ಮೆಟ್ರೋ ನಿಲ್ದಾಣದಿಂದ ಬೊಮ್ಮಸಂದ್ರ ಮೆಟ್ರೋಗೆ ತರಲಾಯಿತು.

ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ

ಬೆಂಗಳೂರು: ಆರ್.ವಿ. ವಿಶ್ವವಿದ್ಯಾನಿಲಯದಲ್ಲಿ ನಡೆದ 2005ನೇ ಸಾಲಿನ, ನಾಲ್ಕನೇ ಆವೃತ್ತಿಯ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. 13-25 ವಯೋಮಾನದ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಗಿ ಮೂಡಿಬಂದ ಕಾರ್ಯಕ್ರಮವು, ಹೊಸತನದ ಪ್ರಯೋಗಗಳಿಗೆ ವೇದಿಕೆ ಸಾಕ್ಷಿಯಾಯಿತು. ಕಾರ್ಯಕ್ರಮದಲ್ಲಿ ಸಿನಿಮಾ ತಯಾರಿಕೆಯ ವಿವಿಧ ವಿಷಯ ಚರ್ಚಿಸಲಾಯಿತು. ಈ ವೇಳೆ ವಿದ್ಯಾರ್ಥಿಗಳು ಕಥೆ ನಿರೂಪಣೆ, ಪ್ರದರ್ಶನ, ಮಾಸ್ಟರ್ ಕ್ಲಾಸ್ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಆರಂಭದಲ್ಲಿ ಚಲನ ಚಿತ್ರೋತ್ಸವವು ಈಶಾನ್ಯ ಭಾರತದ ಚಲನಚಿತ್ರಗಳ ಪ್ರದರ್ಶನದೊಂದಿಗೆ ಆರಂಭವಾಯಿತು. ಆ ಬಳಿಕ ನಾನಾ ಭಾಗದ ಸಂಸ್ಕೃತಿ ಅನಾವರಣಕ್ಕೆ ಸಾಕ್ಷಿಯಾಯಿತು. ಆರ್.ವಿ. ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಫಿಲ್ಮ್, ಮೀಡಿಯಾ ಆ್ಯಂಡ್ ಕ್ರಿಯೇಟಿವ್ ಆರ್ಟ್ಸ್‌ನ ಡೀನ್ ಪ್ರೊ.ಪಿಯೂಷ್ ರಾಯ್ ಮಾತನಾಡಿ, ಟಿಐಎಫ್‌ಎ ರಾಷ್ಟ್ರೀಯ ಪ್ರತಿಭೆಗಳನ್ನು ಅನಾವರಣಗೊಳಿಸುವ ಕಾರ್ಯ ಮಾಡುತ್ತದೆ ಎಂದರು.

ಯುಗಾದಿ ವೇಳೆ ವಿಜಯಪುರ ವಿಮಾನ ನಿಲ್ದಾಣ

ಬೆಂಗಳೂರು: ಸಾರ್ವಜನಿಕ ಮಹತ್ವದ ಯೋಜನೆಗಳಿಗೆ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಗಳು ಪೂರ್ವಾನ್ವಯವಾಗುವಂತೆ ಅನುಮೋದನೆಗಳನ್ನು ನೀಡಬಾರದೆಂದು 2025ರ ಮೇ ತಿಂಗಳಲ್ಲಿ ತಾನು ನೀಡಿದ್ದ ಆದೇಶವನ್ನು ಸುಪ್ರೀಂಕೋರ್ಟ್ ಹಿಂಪಡೆದುಕೊಂಡಿರುವುದು ಸ್ವಾಗತಾರ್ಹವಾಗಿದೆ. ಇದರಿಂದಾಗಿ ವಿಜಯಪುರ ವಿಮಾನ ನಿಲ್ದಾಣ ಉದ್ಘಾಟನೆಗೆ ಇದ್ದ ಅಡೆತಡೆ ಬಹುಮಟ್ಟಿಗೆ ನಿವಾರಣೆಯಾಗಿದ್ದು, ನಿರೀಕ್ಷೆಯಂತೆ ಎಲ್ಲವೂ ಸುಗಮವಾಗಿ ನಡೆದರೆ ಯುಗಾದಿ ವೇಳೆಗೆ ವಿಜಯಪುರ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡುವ ವಿಶ್ವಾಸ ಇದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.

ಉದ್ದಿಮೆ ಪರವಾನಗಿ ಪಡೆಯದ ಪಿ.ಜಿಗಳ ವಿರುದ್ಧ ಕ್ರಮ: ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್ ರಮೇಶ್

ಮಾರ್ಗಸೂಚಿ ಪಾಲಿಸದ 14 ಪಿ.ಜಿ.ಗಳಿಗೆ ಬೀಗ

ಬೆಂಗಳೂರು: ವಸತಿ ಪ್ರದೇಶಗಳಲ್ಲಿ ನಿಯಮ ಬಾಹಿರವಾಗಿ ವಾಣಿಜ್ಯ/ವಸತಿಯೇತರ ಚಟುವಟಿಕೆಗಳನ್ನು ನಡೆಸುತ್ತಿರುವ ಮತ್ತು ಜಿಬಿಎ ಕಾಯಿದೆ 2024ರ ಅನ್ವಯ ವಿಧಿಸಿರುವ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸದೇ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ 14 ಪಿ.ಜಿಗಳಿಗೆ ಬೀಗ ಹಾಕಲಾಗಿದೆ.

ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಮಾತನಾಡಿ, ಸಾರ್ವಜನಿಕ ಆರೋಗ್ಯ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಉದ್ದಿಮೆ ಪರವಾನಗಿ ಪಡೆಯದೇ ಎಸ್‌ಒಪಿ ಮಾನದಂಡಗಳನ್ನು ಉಲ್ಲಂಘಿಸಿ, ಕಾನೂನುಬಾಹಿರವಾಗಿ ಕಾರ್ಯ ನಿರ್ವಹಿಸುತ್ತಿರುವ ಪಿಜಿಗಳ ವಿರುದ್ಧ ಕಾರ್ಯಾಚರಣೆ ಹಾಗೂ ಉದ್ದಿಮೆ ಪರವಾನಗಿ ವಿಶೇಷ ಅಭಿಯಾನ ನಡೆಸುವಂತೆ ಆರೋಗ್ಯ ವಿಭಾಗ ಅಧಿಕಾರಿಗಳಿಗೆ ಆದೇಶಿಸಿರುವುದಾಗಿ ತಿಳಿಸಿದರು.

ವಸತಿ ಪ್ರದೇಶಗಳಲ್ಲಿ ನಿಯಮಬಾಹಿರವಾಗಿ ವಾಣಿಜ್ಯ/ವಸತಿಯೇತರ ಚಟುವಟಿಕೆಗಳನ್ನು ನಡೆಸುತ್ತಿರುವ ಮತ್ತು ಜಿ.ಬಿ.ಎ. ಕಾಯ್ದೆ, 2024ರ ಅನ್ವಯ ವಿಧಿಸಿರುವ ಷರತ್ತು ಹಾಗೂ ನಿಬಂಧನೆ ಗಳನ್ನು ಪಾಲಿಸದೆ ಕಾರ್ಯನಿರ್ವಹಿಸುತ್ತಿರುವ 14 ಪಿ.ಜಿಗಳಿಗೆ ಅಪರ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಮಾರ್ಗದರ್ಶನ ದಲ್ಲಿ, ಆರೋಗ್ಯಾಧಿಕಾರಿ ಡಾ. ಸವಿತಾ ರವರ ನೇತೃತ್ವ ದಲ್ಲಿ ಆರೋಗ್ಯ ವೈದ್ಯಾಧಿಕಾರಿಗಳ ತಂಡವು ಪರಿಶೀಲನೆ ನಡೆಸಿ ವಸತಿಗೃಹಗಳ (ಪಿ.ಜಿ) ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗಿರುತ್ತದೆ ಎಂದು ತಿಳಿಸಿದರು.

ಉದ್ದಿಮೆ ಪರವಾನಗಿ ಅಭಿಯಾನ: ನಗರ ಪಾಲಿಕೆ ವ್ಯಾಪ್ತಿಯಲ್ಲಿ ನ.10ರಿಂದ ನ.15ರ ವರೆಗೆ ಉದ್ದಿಮೆ ಪರವಾನಗಿ ವಿಶೇಷ ಅಭಿಯಾನ ನಗರ ಪಾಲಿಕೆ ವ್ಯಾಪ್ತಿಯ 17 ವಾರ್ಡ್ ಕಚೇರಿಗಳಲ್ಲಿ ನಡೆಸಲಾಗಿರುತ್ತದೆ. ಈ ಅವಧಿಯಲ್ಲಿ ನಗರ ಪಾಲಿಕೆಯ 17 ವಾರ್ಡ್‌ಗಳ ವ್ಯಾಪ್ತಿಯಲ್ಲಿ 466 ಉದ್ದಿಮೆದಾರರು ಏಕ ಗವಾಕ್ಷಿಯಡಿಯಲ್ಲಿ ಒಟ್ಟು 25,52,800 ಶುಲ್ಕ ಪಾವತಿಸಿ, ಎಲ್ಲ ಅಗತ್ಯ ದಾಖಲೆಗಳನ್ನು ಮಧ್ಯವರ್ತಿಗಳ ಯಾವುದೇ ಹಸ್ತಕ್ಷೇಪವಿಲ್ಲದೇ ಅರ್ಜಿ ಸಲ್ಲಿಸಿದ ದಿನದಂದೇ ಉದ್ದಿಮೆ ಪರವಾನಗಿಯನ್ನು ಪಡೆದುಕೊಂಡರು ಎಂದು ಆಯುಕ್ತರು ತಿಳಿಸಿದರು.

ಬೀಗ ಹಾಕಲಾದ ವಸತಿ ಗೃಹಗಳ ವಿವರಗಳು

ಮಹದೇವಪುರ ವಿಧಾನಸಭಾಕ್ಷೇತ್ರ

- ಎಸ್.ವಿ.ಕೆ. ಪಿ.ಜಿ ಪಟ್ಟಂದೂರು ಅಗ್ರಹಾರ, ಐಟಿಪಿಎಲ್ ಬ್ಯಾಕ್ ಗೇಟ್
- ವಂಶಿ ಕೃಷ್ಣ ಪಿಜಿ, ಪಟ್ಟಂದೂರು ಅಗ್ರಹಾರ ಐಟಿಪಿಎಲ್ ಹಿಂದಿನ ಗೇಟ್
- ಡ್ವೆಲ್ ಕೋ-ಲಿವಿಂಗ್ ಪಿಜಿ ಲಕ್ಷ್ಮಿ ನಾರಾಯಣಪುರ, ನಾಗಪ್ಪ ರೆಡ್ಡಿ ಲೇಔಟ್
- ರಾಯಲ್ ಹೋಮ್ ಸ್ಟೇಸ್ ಪಿಜಿ ,ಮೈತ್ರಿ ಲೇಔಟ್, 3ನೇ ಅಡ್ಡರಸ್ತೆ, ಪ್ರಶಾಂತ್ ಲೇಔಟ್, ವೈಟ್‌ಫೀಲ್ಡ್
- ಡ್ರೀಮ್ ಲ್ಯಾಂಡ್ ಪಿಜಿ ವೆಂಟಕಾಮೃತ ನಿಲಯಂ, ಪ್ರಶಾಂತ್ ಲೇಔಟ್, ವೈಟ್ ಫೀಲ್ಡ್
- ಝೋಲೋ ಅಸ್ಮಿ ಜೆಂಟ್ಸ್ ಪಿಜಿ,1ನೇ ಅಡ್ಡರಸ್ತೆ, ಯಶೋಮತಿ ಆಸ್ಪತ್ರೆಯ ಹಿಂದೆ, ರಾಘವೇಂದ್ರ ಲೇಔಟ್, ಮಾರತ್ ಹಳ್ಳಿ
- ಕೆ.ಆರ್.ಜೆಂಟ್ಸ್ ಪಿ.ಜಿ., 5ನೇ ಕ್ರಾಸ್, ರಾಮಾಂಜನೇಯಲೇಔಟ್ ಮಾರತ್ ಹಳ್ಳಿ

ಕೆ.ಆರ್. ಪುರ ವಿಧಾನಸಭಾಕ್ಷೇತ್ರ

- ಶ್ರೀ ಎಸ್.ಜಿ. ಜೆಂಟ್ಸ್ ಅಂಡ್ ಲೇಡೀಸ್ ಪಿ.ಜಿ, ನಂ.39 40, 8ನೇ ಕ್ರಾಸ್, ಮುನಿಯಪ್ಪ ಲೇಔಟ್, ಹೊರಮಾವು
- ಸೆಂಟ್ ಮರಿಯಾ, ಲೇಡೀಸ್ ಪಿ.ಜಿ, ನಂ.109, ನಾಗಪ್ಪ ರೆಡ್ಡಿ ಲೇಔಟ್, ದೂರವಾಣಿನಗರ,
- ಎಸ್.ಎಲ್.ವಿ ಕಂಫರ್ಟ್ಸ್ ಜೆಂಟ್ಸ್ ಪಿ.ಜಿ., ಶರಾವತಿ ಲೇಔಟ್, ಕೆ.ಆರ್.ಪುರ
- ಶ್ರೀಗಣೇಶ ಜೆಂಟ್ಸ್ ಪಿ.ಜಿ., ಕೃಷ್ಣ ಥಿಯೇಟರ್ ರಸ್ತೆ, ಬಸವನಪುರ
- ಎಸ್.ಎಸ್.ವಿ ಟವರ್ ಪಿಜಿ ಲಕ್ಷ್ಮೀ ಸಾಗರ ಲೇಔಟ್ ಮಹದೇವಪುರ
- ಬ್ಲಿಸ್ ಕೋ-ಲಿವಿಂಗ್ ಪಿ.ಜಿ. 20, 2ನೇ ಕ್ರಾಸ್‌ಶ್ರೀ ಕೃಷ್ಣ ಗಾರ್ಡನ್ ಲೇಔಟ್ ಬಿ ನಾರಾಯಣಪುರ.
- ವಿ.ಡಿ.ಎಸ್ ಲಕ್ಸುರಿ ಪಿಜಿ ಫಾರ್ ಲೇಡೀಸ್ ,ಸತ್ಯ ಬಡಾವಣೆ


ನಿಬಂಧನೆಗಳನ್ನು ಪಾಲಿಸದೇ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ ಪಿ.ಜಿಗಳಿಗೆ ಪೂರ್ವ ನಗರ ಪಾಲಿಕೆ ಆಯುಕ್ತ ಬೀಗ ಜಡಿದರು.

ಅರ್ಜಿ ಸಲ್ಲಿಸಿದ ದಿನವೇ ಉದ್ದಿಮೆದಾರರಿಗೆ ಪರವಾನಗಿ

ಅಗತ್ಯ ದಾಖಲೆಗಳಾದ ವಾಣಿಜ್ಯ ಮಳಿಗೆ ಕರಾರು ಪತ್ರ, ಹಾಗೂ ವಿದ್ಯುತ್ ಬಿಲ್‌ಸಲ್ಲಿಸಿದ ದಿನವೇ ಉದ್ದಿಮೆದಾರರಿಗೆ ಉದ್ದಿಮೆ ಪರವಾನಗಿ ನೀಡಲು ಪೂರ್ವ ನಗರ ಪಾಲಿಕೆಯು ವ್ಯವಸ್ಥೆಯನ್ನು ಕಲ್ಪಿಸಿದ್ದು,17 ವಾರ್ಡ್‌ಗಳೊಂದಿಗೆ ವಾಣಿಜ್ಯ ಪ್ರದೇಶಗಳಲ್ಲೂ ವಿಶೇಷ ಶಿಬಿರ ಏರ್ಪಡಿಸುವ ಮೂಲಕ ಪಾರದರ್ಶಕವಾಗಿ, ವೇಗವಾಗಿ ಮತ್ತು ನಾಗರಿಕ-ಸ್ನೇಹಿ ಉದ್ದಿಮೆ ಪರವಾಗಿ ಸೇವೆಗಳನ್ನು ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಆಯುಕ್ತರು ತಿಳಿಸಿದರು.

ಭಾರತ ಮೆಟ್ರೋ ಜಾಲ ಅಮೆರಿಕವನ್ನು ಮೀರಿಸಲಿದೆ



ಹೈದರಾಬಾದ್: ಭಾರತದ ಮೆಟ್ರೊ ರೈಲು ಜಾಲವು ಇನ್ನೂ 2-3 ವರ್ಷಗಳಲ್ಲಿ ಅಮೆರಿಕವನ್ನು ಹಿಂದಿಕ್ಕಲಿದೆ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಅವರು ಮಂಗಳವಾರ ಹೇಳಿದ್ದಾರೆ.

ಹೈದರಾಬಾದ್‌ನಲ್ಲಿ ಜರುಗಿದ ನೈರುತ್ಯ ರಾಜ್ಯಗಳ ನಗರಾಭಿವೃದ್ಧಿ ಸಚಿವರ ಸಭೆಯಲ್ಲಿ ಅವರು ಭಾಗವಹಿಸಿದ್ದರು. ಅಮೆರಿಕ ಮತ್ತು ಚೀನಾ ದೇಶಗಳು ನಮಗಿಂತ ಮುಂಚೆಯೇ ಮೆಟ್ರೊ ಯೋಜನೆಗಳನ್ನು ಆರಂಭಿಸಿದ್ದವು.

ಅಮೆರಿಕದಲ್ಲಿ 1.400 ಕಿ.ಮೀ ಮೆಟ್ರೊ ರೈಲು ಜಾಲವಿದೆ. ಭಾರತದಲ್ಲಿ 1,100 ಕಿ.ಮೀ ಮೆಟ್ರೊ ಇದೆ. ನಾವು ವೇಗವಾಗಿ ಗುರಿ ತಲುಪುತ್ತಿದ್ದು, ಇನ್ನೂ 2-3 ವರ್ಷಗಳಲ್ಲಿ ಅಮೆರಿಕವನ್ನು ಹಿಂದಿಕ್ಕಲಿ ದ್ದೇವೆ ಎಂದು ಹೇಳಿದ್ದಾರೆ. ದೇಶದ ಮೆಟ್ರೊ ರೈಲು ಜಾಲವು ಕ್ಷಿಪ್ರಗತಿಯಲ್ಲಿ ಬೆಳವಣಿಗೆ ಸಾಧಿಸುತ್ತಿದೆ.

2004-05ರಲ್ಲಿ ದೇಶದ 5 ನಗರಗಳಲ್ಲಿ ಮಾತ್ರ ಮೆಟ್ರೊ ಸೌಲಭ್ಯವಿತ್ತು. ಇದೀಗ 24 ನಗರಗಳಲ್ಲಿ ಮೆಟ್ರೊ ಸಂಚಾರವಿದೆ ಎಂದು ತಿಳಿಸಿದ್ದಾರೆ. ಭಾರತದಲ್ಲಿ ನಗರೀ ಕರಣವು ವೇಗವಾಗಿ ಆಗುತ್ತಿದೆ. 2050ರ ವೇಳೆಗೆ ದೇಶದ ಜಿಡಿಪಿ ಅಲ್ಲಿ ನಗರಗಳ ಕೊಡುಗೆಯು ಶೇ 80ರಷ್ಟು ಇರುತ್ತದೆ. ಕೇಂದ್ರ ಸರಕಾರವು ನಗರಗಳ ಅಭಿವೃದ್ಧಿಗೆ ಸಹಾಯ ಮಾಡುತ್ತದೆ ಎಂದು ತಿಳಿಸಿದ್ದಾರೆ.

ದೂಳಿನ ಕಣಗಳಿಂದ ಮಧುಮೇಹ!

ಹೆಚ್ಚುತ್ತಿರುವ ಮಧುಮೇಹಿಗಳು!

ನಮ್ಮ ದೇಶವನ್ನು ಜಗತ್ತಿನ ಮಧುಮೇಹದ ರಾಜಧಾನಿ ಎಂದು ಹಲವು ತಜ್ಞರು ಮತ್ತು ಔಷಧ ಕಂಪೆನಿಗಳು ಹೇಳುತ್ತಾ ಬಂದು ಹಲವು ವರ್ಷಗಳೇ ಆಗಿವೆ. ಅದಕ್ಕೆ ಸರಿಯಾಗಿ, ಪ್ರತಿ ವರ್ಷ ನಮ್ಮ ದೇಶದಲ್ಲಿನ ಮಧುಮೇಹಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಹೋಗುತ್ತಿದೆ. ಅಂತಾರಾಷ್ಟ್ರೀಯ ಡಯಾಬಿಟಿಕ್ ಫೆಡರೇಶನ್ ಪ್ರಕಾರ, ನಮ್ಮ ದೇಶದಲ್ಲಿ ಸುಮಾರು 8.9 ಕೋಟಿ ಮಧುಮೇಹಿಗಳಿದ್ದಾರೆ (2024). ಇದು 2011ರಲ್ಲಿ ಸುಮಾರು 6.1 ಕೋಟಿಯಾಗಿತ್ತು. ಇದೇ ರೀತಿ ಮುಂದುವರಿದರೆ, 2045ರ ಹೊತ್ತಿಗೆ ಈ ಸಂಖ್ಯೆಯು 13.4 ಕೋಟಿ ಆಗಬಹುದು ಎಂದು ಅದೇ ಸಂಸ್ಥೆ ಅಂದಾಜು ಮಾಡಿದೆ.

ಶಶಿಭೂಷಣ

ಇದೊಂದು ವಿಚಾರವನ್ನು ಬಹು ಹಿಂದಿನಿಂದಲೇ ಆರೋಗ್ಯ ತಜ್ಞರು ಹೇಳುತ್ತಲೇ ಬಂದಿದ್ದಾರೆ: ಅದೀಗ ಬಹು ಮಟ್ಟಿಗೆ ಪುರಾವೆ ಸಹಿತ ಋಜುವಾತಾಗಿದೆ. ಅದೇನೆಂದರೆ, ವಾತಾವರಣದಲ್ಲಿರುವ ಕಲ್ಮಶ, ದೂಳು ಮನೆಯೊಳಗೆ ಇರುವ ಸೂಕ್ಷ್ಮವಾದ ದೂಳು (ಮೈಕ್ರೋ ಡಸ್ಟ್), ಡೀಸೆಲ್ ಹೊಗೆ, ಪೆಟ್ರೋಲ್ ಹೊಗೆ ಮೊದಲಾದವುಗಳು, ನಮ್ಮ ದೇಹದ ರಕ್ತದಲ್ಲಿನ ಗ್ಲೂಕೋಸ್ ಮಟ್ಟದ ಮೇಲೆ ನೇರ ಪರಿಣಾಮ ಬೀರುತ್ತವೆ! ಮೇಲ್ನೋಟಕ್ಕೆ ನಂಬಲು ತುಸು ಕಷ್ಟ ಎನಿಸಬಹುದು: ಆದರೆ, ನಾವು ಸೇವಿಸುವ ವಾಯುವಿನಲ್ಲಿ ದೂಳಿನ ಸೂಕ್ಷ್ಮ ಕಣಗಳಿದ್ದರೆ, ಅದು ನೇರವಾಗಿ ದೇಹದ ರಕ್ತದ ಗುಣಮಟ್ಟ, ಗ್ಲೂಕೋಸ್ ಗುಣಮಟ್ಟ, ಶ್ವಾಸಕೋಶ ಮೊದಲಾದವುಗಳನ್ನು ಹಾಳುಗೆಡಹುತ್ತವೆ!

ಅದರಲ್ಲೂ ಮುಖ್ಯವಾಗಿ, ಇತ್ತೀಚಿಗಿನ ಅಧ್ಯಯನಗಳು, ವಾತಾವರಣದ ಕಲ್ಮಶ ಮತ್ತು ಸಕ್ಕರೆ ಕಾಯಿಲೆಯ ಕುರಿತು ಹೊಸ ಮತ್ತು ಹೆಚ್ಚು ಖಚಿತ ಎನಿಸುವ ಮಾಹಿತಿಯನ್ನು ನೀಡಿವೆ. ಗಾಳಿಯಲ್ಲಿ ಹಲವು ರೀತಿಯ ಕಲ್ಮಶಗಳಿರುತ್ತವೆ; ದೊಡ್ಡ ಗಾತ್ರದ ದೂಳು ಮೇಲ್ನೋಟಕ್ಕೆ ಕಣ್ಣಿಗೆ ಕಾಣಿಸುತ್ತದೆ; ಆದರೆ, ಸೂಕ್ಷ್ಮವಾದ ದೂಳಿನ ಕಣಗಳು, ಗಾಳಿಯಲ್ಲಿ ತೇಲುತ್ತಿರುತ್ತವೆ ಮತ್ತು ಬಹುಬೇಗನೆ ದೃಗ್ಗೋಚರವಾಗದೇ ಇರಬಹುದು. ಅಂತಹ ಸೂಕ್ಷ್ಮ ದೂಳಿನ ಕಣಗಳು, ಮೂಗಿನ ಮೂಲಕ ಶ್ವಾಸಕೋಶಕ್ಕೆ ಹೋಗಿ, ಅಲ್ಲಿನ ರಕ್ತನಾಳಗಳನ್ನು ಪ್ರವೇಶಿಸಿ, ನಿಧಾನವಾಗಿ ಮತ್ತು ನೇರವಾಗಿ ರಕ್ತ ಪರಿಚಲನೆಯಲ್ಲಿ ಸೇರಿಕೊಳ್ಳುತ್ತವೆ! ಶ್ವಾಸಕೋಶದಿಂದ ಆಮ್ಲಜನಕವನ್ನು ಹೀರಿಕೊಳ್ಳುವ ಸಮಯದಲ್ಲಿ, ರಕ್ತನಾಳಗಳು (ಕ್ಯಾಪಿಲರಿ ರಕ್ತ ನಾಳಗಳು) ಇಂತಹ ಸೂಕ್ಷ್ಮ ದೂಳಿನ ಕಣಗಳನ್ನೂ ಹೀರಿಕೊಂಡು, ರಕ್ತಕ್ಕೆ ಸೇರಿಸಿಬಿಡುತ್ತವೆ.

ರಕ್ತದಲ್ಲಿ ಮೈಕ್ರೋ ಡಸ್ಟ್!

ರಕ್ತವನ್ನು ಸೇರಿಕೊಳ್ಳುವ ಇಂತಹ ದೂಳಿನ ಕಣಗಳು, ನಾನಾ ರೀತಿಯ ಸಮಸ್ಯೆಗಳನ್ನು ಉಂಟು ಮಾಡಬಲ್ಲವು. ಅವುಗಳಲ್ಲಿ ಒಂದು ಸಮಸ್ಯೆ ಎಂದರೆ, ರಕ್ತದ ಗ್ಲೂಕೋಸ್ ಮಟ್ಟದ ವ್ಯತ್ಯಯವಾಗುವುದು. ನಮ್ಮ ದೇಹದ ಸ್ನಾಯುಗಳಲ್ಲಿ ಇನ್ಸುಲಿನ್ ಮೂಲಕ ನಡೆಯುವ ಪ್ರಕ್ರಿಯೆಯು ಸಹಜವಾಗಿ ನಡೆಯುವ ಬದಲು, ಈ ಸೂಕ್ಷ್ಮ ದೂಳಿನ ಕಣಗಳಿಂದ, ಏರುಪೇರಾಗುತ್ತದೆ; ಇವು ಮೇದೋಜೀರಕ ಗ್ರಂಥಿಯ ಕಾರ್ಯಕ್ಷಮತೆಯ ಮೇಲೂ ಪರಿಣಾಮಬೀರಬಲ್ಲವು ಎಂದು ಇತ್ತೀಚಿನ ಅಧ್ಯಯನಗಳು ತೋರಿಸಿವೆ. ಅಗತ್ಯ ಪ್ರಮಾಣದ ಇನ್ಸುಲಿನ್ ಉತ್ಪತ್ತಿಯಾಗದೇ ಹೋದಾಗ, ನಿಧಾನವಾಗಿ ರಕ್ತದಲ್ಲಿನ ಗ್ಲೂಕೋಸ್ ಮಟ್ಟವು ಏರುತ್ತಾ ಸಾಗುತ್ತದೆ ಮತ್ತು ದೀರ್ಘ ಕಾಲದಲ್ಲಿ ಇದು ಸಕ್ಕರೆ ಕಾಯಿಲೆಗೆ ದಾರಿಮಾಡಿಕೊಡಬಲ್ಲದು.

ಈ ಮೂಲಕ ಸ್ಪಷ್ಟವಾಗುವುದೆಂದರೆ, ವಾತಾವರಣದಲ್ಲಿರುವ ಕಲ್ಮಶವು ಶ್ವಾಸಕೋಶದ ಮೇಲೆ ಪರಿಣಾಮ ಬೀರುವುದರ ಜತೆಯಲ್ಲೇ, ರಕ್ತದಲ್ಲಿನ ಗ್ಲೂಕೋಸ್ ಗುಣಮಟ್ಟದ ಮೇಲೂ ದುಷ್ಪರಿಣಾಮ ಬೀರಬಲ್ಲದು. ಮಧುಮೇಹಿಗಳನ್ನು ದೀರ್ಘ ಕಾಲದಿಂದ ಚಿಕಿತ್ಸೆಗೆ ಒಳಪಡಿಸಿರುವ ತಜ್ಞ ವೈದ್ಯರು ಗಮನಿಸಿರುವ ವಿಚಾರವೂ ಈ ಅಂಶವನ್ನು ದೃಢೀಕರಿಸುತ್ತದೆ. ಚಳಿಗಾಲದ ಆರಂಭದ ದಿನಗಳಲ್ಲಿ, ಅಂದರೆ ವಾತಾವರಣದಲ್ಲಿ ಹೆಚ್ಚು ದೂಳಿನ ಕಣಗಳು ಅದರಲ್ಲೂ ಮುಖ್ಯವಾಗಿ ಸೂಕ್ಷ್ಮ ದೂಳಿನ ಕಣಗಳು ತೇಲುತ್ತಿರುವ ದಿನಗಳಲ್ಲಿ, ಮಧುಮೇಹಿಗಳ ರಕ್ತದಲ್ಲಿನ ಸಕ್ಕರೆಯ ಅಂಶ ಅಧಿಕವಾಗುವುದನ್ನು ತಜ್ಞರು ಗುರುತಿಸಿದ್ದಾರೆ.

ಇಲ್ಲಿ ಇನ್ನೊಂದು ಆಯಾಮವೂ ಇದೆ. ವಾತಾವರಣದಲ್ಲಿ ಹೆಚ್ಚಿನ ಕಲ್ಮಶ ಇದ್ದಾಗ, ವಾಯುಮಾಲಿನ್ಯ ಅಧಿಕವಾಗಿದ್ದಾಗ, ಹಲವರು ಪ್ರತಿದಿನದ ನಡಿಗೆ ಮತ್ತು ಇತರ ಚಟುವಟಿಕೆಗಳನ್ನು ಕಡಿಮೆ ಮಾಡುವುದುಂಟು; ಇದರಿಂದ ಕಡಿಮೆ ವ್ಯಾಯಾಮ, ದೇಹದ ತೂಕದ ಹೆಚ್ಚಳ. ಇದೂ ಸಹ ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ಹೆಚ್ಚಿಸುವಂತೆ ಮಾಡಬಲ್ಲದು.

ಪರಿಹಾರವೇನು? ಬದಲಾಗುತ್ತಿರುವ ಜೀವನ ಶೈಲಿ ಮತ್ತು ನಗರೀಕರಣದ ಪರಿಣಾಮದಿಂದಾಗಿ, ನಮ್ಮ ದೇಶದ ಎಲ್ಲೆಡೆ ಮಧುಮೇಹಿಗಳ ಸಂಖ್ಯೆ ಅಧಿಕವಾಗುತ್ತಿರುವುದು ಅಧ್ಯಯನಗಳಿಂದ ಸ್ಪಷ್ಟವಾಗಿದೆ.

ಸಕ್ಕರೆ ಕಾಯಿಲೆಯು ಹಲವು ಕಾರಣಗಳಿಂದ ಬರಬಲ್ಲದಾದರೂ, ಮುಖ್ಯವಾಗಿ, ಆಲಸಿ (ಸೆಡೇಟರಿ) ದಿನಚರಿ, ಅಧಿಕ ಕಾಲ ಕುಳಿತೇ ಇರುವುದು ಮತ್ತು ವಾಯುಮಾಲಿನ್ಯವು ಪ್ರಮುಖ ಕಾರಣ ಎನಿಸಿದೆ. ಈ ನಿಟ್ಟಿನಲ್ಲಿ ಜನರು ಮತ್ತು ಸಮಾಜ (ಸರಕಾರ) ಕಾರ್ಯಪ್ರವೃತ್ತರಾದರೆ, ಮುಂದಿನ ವರ್ಷಗಳಲ್ಲಾದರೂ ಸಕ್ಕರೆ ಕಾಯಿಲೆಯ ನಿಯಂತ್ರಣ ಮಾಡಲು ಸಾಧ್ಯ.

- ಪ್ರತಿ ದಿನ ನಿಯಮಿತ ನಡಿಗೆ
- ದೇಹದ ಸಾಮರ್ಥ್ಯಕ್ಕೆ ಅನುಗುಣವಾಗಿ ಇತರ ವ್ಯಾಯಾಮ
- ಸಂಸ್ಕರಿಸಿದ ಆಹಾರ ಸೇವನೆಯನ್ನು ಮಿತಗೊಳಿಸುವುದು
- ಸಕ್ಕರೆ ಮತ್ತು ಬೆಲ್ಲದ ಸೇವನೆಯನ್ನು ಪೂರ್ತಿ ಕೈಬಿಡುವುದು
- ಮನೆಯೊಳಗಿನ ದೂಳನ್ನು ಕಡಿಮೆ ಮಾಡುವುದು
- ಪ್ರತಿ ದಿನ ನೆಲವನ್ನು ಚೊಕ್ಕಟಗೊಳಿಸುವುದು, ಸೂಕ್ಷ್ಮ ದೂಳನ್ನು ನಿವಾರಿಸಲು ಒದ್ದೆ ಬಟ್ಟೆಯಿಂದ ಒರೆಸುವುದು, ಸಾಧ್ಯವಾದಲ್ಲಿ ವ್ಯಾಕ್ಯೂಮ್ ಕ್ಲೀನರ್ ಬಳಸಿ ಸೂಕ್ಷ್ಮ ದೂಳನ್ನು ನಿವಾರಿಸುವುದು
- ಮನೆಯೊಳಗೆ ಅಧಿಕ ದೂಳು ಪ್ರವೇಶಿಸದಂತೆ ಎಚ್ಚರಿಕೆ ವಹಿಸುವುದು
- ಹೊರಾಂಗಣದಲ್ಲಿ, ರಸ್ತೆಗಳಲ್ಲಿ ಚಲಿಸುವಾಗ, ಮಾಸ್ಕ್ ಬಳಸುವುದು

ಮಧುಮೇಹ ಮತ್ತು ರಕ್ತದಲ್ಲಿನ ಅಧಿಕ ಸಕ್ಕರೆಯ ಪ್ರಮಾಣವು ನಾನಾ ರೀತಿಯ ಆರೋಗ್ಯ ಸಮಸ್ಯೆಗಳನ್ನು ತರಬಲ್ಲದು. ವಾಯುಮಾಲಿನ್ಯವೂ ಇದಕ್ಕೆ ಒಂದು ಕಾರಣ ಎಂಬುದನ್ನು ಇತ್ತೀಚಿನ ಅಧ್ಯಯನಗಳು ತೋರಿಸಿರುವುದರಿಂದ, ಮನೆ, ಕಚೇರಿ ಮತ್ತು ಕೆಲಸ ಮಾಡುವ ಸ್ಥಳಗಳಲ್ಲಿರುವ ಸೂಕ್ಷ್ಮ ದೂಳಿನ ಅಂಶವನ್ನು ಕಡಿಮೆ ಮಾಡುವುದರ ಮೂಲಕ, ಅಷ್ಟರ ಮಟ್ಟಿಗೆ ಈ ರಿಸ್ಕ್‌ನ್ನು ದೂರ ಮಾಡಬಹುದು.

ಹಳ್ಳಿಗಳಲ್ಲೂ ಮಧುಮೇಹ

ನಮ್ಮ ದೇಶದ ಮಧುಮೇಹಿಗಳ ಅಂಕಿಸಂಕಿಯಲ್ಲಿ ಒಂದು ವಿಚಾರ ಗಮನ ಸೆಳೆಯುತ್ತದೆ. ಕಳೆದ ಹಲವು ದಶಕಗಳ ತನಕ, ಗ್ರಾಮೀಣ ಪ್ರದೇಶಕ್ಕಿಂತ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿನ ಮಧುಮೇಹಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಅಧಿಕವಾಗಿತ್ತು. ಆದರೆ, ಈಚಿನ ಒಂದೆರಡು ದಶಕಗಳಲ್ಲಿ, ಗ್ರಾಮೀಣ ಮತ್ತು ಸಣ್ಣ ಪಟ್ಟಣಗಳಲ್ಲೂ ಮಧುಮೇಹಿಗಳ ಸಂಖ್ಯೆ ಸಮಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ. ಗ್ರಾಮೀಣರು ಸಹ ಸಕ್ಕರೆ ಕಾಯಿಲೆಗೆ ಒಳಗಾಗುತ್ತಿರುವುದು, ಬದಲಾಗುತ್ತಿರುವ ಜೀವನ ಶೈಲಿಯ ಒಂದು ಪರಿಣಾಮ. ಕೃಷಿ ಮತ್ತು ಇತರ ಕೆಲಸಗಳಿಗೆ ಯಂತ್ರಗಳ ಬಳಕೆ, ಅತ್ತಿತ್ತ ಓಡಾಡಲು ಮೋಟಾರ್ ಸೈಕಲ್ ಮತ್ತು ಕಾರುಗಳ ಬಳಕೆ, ರಾಗಿ, ಆರ್ಕ ಮೊದಲಾದ ಧಾನ್ಯಗಳಿಗಿಂತ ಪಾಲಿಶ್ ಮಾಡಿದ ಅಕ್ಕಿಯ ಸೇವನೆಯ ಪ್ರಮಾಣದ ಹೆಚ್ಚಳ, ಕಾಫಿ ಚಹಾ ಮೊದಲಾದ ಪಾನೀಯಗಳ ಅಧಿಕ ಸೇವನೆ ಮತ್ತು ವಾಯುಮಾಲಿನ್ಯವು ಇದಕ್ಕೆ ಕಾರಣ ಎಂದು ಜೀವನಶೈಲಿಯ ತಜ್ಞರು ಗುರುತಿಸಿದ್ದಾರೆ.

> **ನಮ್ಮ ದೇಹದಲ್ಲಿನ ಸಕ್ಕರೆಯ ಅಂಶವು ನಿಯಂತ್ರಣ ಮೀರಿ ಅಧಿಕಗೊಂಡಾಗ, ಮಧುಮೇಹದಂತಹ ಸಮಸ್ಯೆಗಳು ಬರುತ್ತವೆ. ಇಂತಹ ಸಮಸ್ಯೆ ಉದ್ಭವವಾಗಲು ಹಲವು ಕಾರಣಗಳಿವೆ. ರಸ್ತೆಯಲ್ಲಿನ ದೂಳಿನ ಜತೆಗೇ, ಮನೆಯೊಳಗಿನ ಸೂಕ್ಷ್ಮ ದೂಳು, ಕಚೇರಿ ಮತ್ತೆ ಕೆಲಸ ಮಾಡುವ ಸ್ಥಳದ ಸೂಕ್ಷ್ಮ ದೂಳು ಸಹ, ಶ್ವಾಸಕೋಶದ ಮೂಲಕ ರಕ್ತವನ್ನು ಸೇರಿ, ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ಏರುಪೇರು ಮಾಡಲ್ಲದು ಎಂದು ಇತ್ತೀಚಿನ ಅಧ್ಯಯನಗಳು ಖಚಿತಪಡಿಸಿವೆ.**

2028ಕ್ಕೆ ಚಂದ್ರಯಾನ-4 ಜಾರಿ

ದೆಹಲಿ: ಭಾರತದ ಪ್ರತಿಷ್ಠಿತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ಇಸ್ರೊ' ಚಂದ್ರಯಾನ-4 ಯೋಜನೆಯನ್ನು 2028ರಲ್ಲಿ ಚಾಲನೆಗೊಳಿಸಲಾಗುವುದು. ಜಪಾನ್ ದೇಶದ ಸಹಯೋಗದಲ್ಲಿ ಈ ಮಹತ್ವದ ಯೋಜನೆ ಜಾರಿಗೆ ಬರಲಿದೆ ಎಂದು ಹೇಳಿದೆ. ಚಂದ್ರಯಾನ್-3 ಯೋಜನೆಯಲ್ಲಿ ಬಹಳ ಕಡಿಮೆ ವೆಚ್ಚದಲ್ಲಿ ಲ್ಯಾಂಡರ್ ಮತ್ತು ರೋವರ್ ಯಾಂತ್ರಿಕ ಉಪಕರಣಗಳನ್ನು ಚಂದ್ರನ ದಕ್ಷಿಣ ಧ್ರುವದಲ್ಲಿ ಯಶಸ್ವಿಯಾಗಿ ಇಳಿಸುವ ಮೂಲಕ ಆ ಸಾಧನೆ ಮಾಡಿದ ಮೊದಲ ದೇಶ ಎಂಬ ಕೀರ್ತಿಯನ್ನು ಭಾರತದ ಸಂಪಾದಿಸಿದೆ. ಈಗ ಚಂದ್ರಯಾನ-4 ಯೋಜನೆಯಲ್ಲಿ ಚಂದ್ರನಿಂದ ಮಣ್ಣು, ಶಿಲೆಗಳನ್ನು ಹೆಕ್ಕಿ ತಂದು ಚಂದ್ರನ ಒಡಲಲ್ಲಿ ಎಂತಹ ಲೋಹದ ಅದಿರು, ಖನಿಜಗಳು ಇವೆ ಎಂದು ಕಂಡುಕೊಳ್ಳುವ ಪ್ರಯತ್ನ ನಡೆಸಲಾಗುತ್ತದೆ ಎಂದು ಇಸ್ರೊ ತಿಳಿಸಿದೆ.

ಇದಷ್ಟೇ ಅಲ್ಲದೇ, ಇಸ್ರೊ ಇನ್ನೂ 7 ಉಪಗ್ರಹಗಳನ್ನು ಉಡಾವಣೆ ಮಾಡಲಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಗೂಗಲ್ ಕಂಪನಿ ಮುಖ್ಯಸ್ಥ ಸುಂದರ್ ಪಿಚೈ ಕಿವಿಮಾತು

ಎಐ ಹೇಳುವುದನ್ನೆಲ್ಲಾ ಕಣ್ಮುಚ್ಚಿ ನಂಬದಿರಿ

ವಾಷಿಂಗ್ಟನ್: ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಹೇಳುವುದನ್ನೂ, ತೋರಿಸುವುದನ್ನೂ ಎಲ್ಲವನ್ನೂ ಕಣ್ಮುಚ್ಚಿ ನಂಬಲಾಗದು. ಯಾವುದನ್ನು ನಂಬಬೇಕು, ಯಾವುದನ್ನು ಅಲ್ಲಾ ಎಂಬುದನ್ನು 'ಎಐ' ಬಳಕೆದಾರರೇ ವಿವೇಚನೆ ಬಳಸಿ ತೀರ್ಮಾನಿಸಬೇಕು ಎಂದು ಗೂಗಲ್ ಕಂಪನಿ ಮುಖ್ಯಸ್ಥ, ಭಾರತ ಮೂಲದ ತಂತ್ರಜ್ಞ ಸುಂದರ್ ಪಿಚೈ ಕಿವಿಮಾತು ಹೇಳಿದ್ದಾರೆ.

'ಎಐ' ಕ್ಷೇತ್ರದಲ್ಲಿ ಹೂಡಿಕೆ ಮಾಡಿದ ಕಂಪನಿಗಳು ಬೇರೆ ಯಾರಿಗೂ ನಷ್ಟವಾಗದಂತೆ ನಿಗಾ ವಹಿಸಬೇಕು ಎಂದು ಅವರು ಗಮನ ಸೆಳೆದಿದ್ದಾರೆ. ಎಐ ಮಾದರಿಯಲ್ಲೂ ಕೆಲವು ದೋಷಗಳಿರುತ್ತವೆ. ಇತರ ಪರಿಕರಗಳ ಜತೆಗೆ 'ಎಐ' ತಂತ್ರಜ್ಞಾನ ಸಮತೋಲನಗೊಳ್ಳುವಂತೆ ನಿರ್ವಹಣೆ ಮಾಡಬೇಕಿದೆ ಎಂದೂ ಬಳಕೆದಾರರಿಗೆ ಸಲಹೆ ನೀಡಿದ್ದಾರೆ.

'ಎಐ' ತಂತ್ರಜ್ಞಾನವನ್ನಷ್ಟೇ ಅವಲಂಬಿಸುವ ಬದಲು ಉನ್ನತ ಮಾಹಿತಿ ಪರಿಸರ ವ್ಯವಸ್ಥೆಯನ್ನು ಹೊಂದುವುದು ಉತ್ತಮ. ಅಂತಹುದರ ಪ್ರಯತ್ನದ ಮಹತ್ವವನ್ನು ಎಐ ದೋಷಗಳು ಎತ್ತಿ ತೋರಿಸುತ್ತವೆ. ಅದಕ್ಕಾಗಿಯೇ ಜನರು ಗೂಗಲ್ ಹುಡುಕಾಟವನ್ನು ಸಹ ಬಳಸುತ್ತಾರೆ. ನಿಖರವಾದ ಮಾಹಿತಿ ಒದಗಿಸುವಲ್ಲಿ ಹೆಚ್ಚು ಆಧಾರಿತವಾದ ಇತರ ಉತ್ಪನ್ನಗಳು ನಮ್ಮಲ್ಲಿವೆ ಎಂದು ಪಿಚೈ ಮಾಧ್ಯಮ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಸೃಜನಾತ್ಮಕ ಬರವಣಿಗೆಗೆ 'ಎಐ' ಸಹಾಯಕವಾಗಿರಬಹುದು. ಆದರೆ, ಬರವಣಿಗೆ ಮಾಡುವವರು ಎಐ ಹೇಳುವುದೆಲ್ಲವನ್ನೂ ಕಣ್ಮುಚ್ಚಿ ಅನುಸರಿಸಬಾರದು. ಉತ್ತಮವಾದದ್ದಕ್ಕಾಗಿ ಈ ಪರಿಕರವನ್ನು ಹೇಗೆ ಬಳಸಬೇಕು ಎಂಬುದನ್ನು ಮೊದಲು ಕಲಿಯಬೇಕು ಎಂದು ಸಲಹೆ ನೀಡಿದ್ದಾರೆ.

ಗೂಗಲ್ ಎಐ ಮೋಡ್‌ಗೆ ಹೆಮ್ಮೆ

ಪ್ರಸ್ತುತ ಅತ್ಯಾಧುನಿಕ ಎಐ ತಂತ್ರಜ್ಞಾನದಲ್ಲಿ ಕೆಲವು ದೋಷಗಳಿರುತ್ತವೆ. 'ಜೆಮಿನಿ ಚಾಟ್‌ಬಾಟ್' ಆಪ್ ಬಳಸಿಕೊಂಡು ಗೂಗಲ್ ಕಂಪನಿಯು ಸರ್ಚ್‌ನಲ್ಲಿ ತನ್ನದೇ ಆದ ವಿಶಿಷ್ಟ 'ಎಐ' ಮೋಡ್ ಅನ್ನು ಪರಿಚಯಿಸಿದೆ. ಇದು ಆದಷ್ಟೂ ನಿಖರ ಮಾಹಿತಿ ನೀಡುತ್ತದೆ. ಈ ವಿಚಾರದಲ್ಲಿ ನಮಗೆ ಹೆಮ್ಮೆ ಇದೆ ಎಂದರು.

ಜೈಶ್‌ನ ವಾಟ್ಸ್‌ಆ್ಯಪ್ ಚಾನೆಲ್ ಸ್ಥಗಿತ

ದೆಹಲಿ: ಪಾಕಿಸ್ತಾನ ಮೂಲದ ಜೈಶ್ ಮೊಹಮ್ಮದ್ ನಿರ್ವಹಿಸುತ್ತಿದ್ದ ವಾಟ್ಸ್‌ಆ್ಯಪ್ ಚಾನೆಲ್ ಅನ್ನು ಭಾರತದಲ್ಲಿ ಸ್ಥಗಿತಗೊಳಿಸಲಾಗಿದೆ. ವೈಟ್ ಕಾಲರ್ ಭಯೋತ್ಪಾದನೆಗಾಗಿ ಯುವಕರನ್ನು ಬಳಸಿಕೊಳ್ಳಲು ಜೈಶ್‌ನ ಈ ಚಾನೆಲ್ ಅನ್ನು ನಿರ್ವಹಿಸುತ್ತಿತ್ತು ಎನ್ನಲಾಗಿದೆ. ಭಾರತೀಯ ವೈಟ್ ಕಾಲರ್ ಉದ್ಯೋಗಿಗಳನ್ನು ಗುರಿಯಾಗಿಸಿಕೊಂಡು ಈ ಚಾನೆಲ್ ಮೂಲಕ ಮೂಲಭೂತ ವಿಷಯಗಳನ್ನು ಸಂಘಟನೆಯು ಹರಡುತ್ತಿತ್ತು, ಚಾನೆಲ್ 13,000ಕ್ಕೂ ಹೆಚ್ಚು ಅನುಯಾಯಿಗಳನ್ನು ಹೊಂದಿತ್ತು ಎನ್ನಲಾಗಿದೆ.

ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 36 ಘಟಕಗಳಿಗೆ ನೋಟಿಸ್

ಪರಿಸರಕ್ಕೆ ಹಾನಿ: 36 ಜೀನ್ಸ್ ಘಟಕಗಳಿಗೆ ಬೀಗ

ಬಳ್ಳಾರಿ: ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ಬಳ್ಳಾರಿ ಜೀನ್ಸ್ ಉದ್ಯಮಕ್ಕೆ ಮರ್ಮಾಘಾತ ಎದುರಾಗಿದ್ದು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶದ ಮೇರೆಗೆ 36 ಘಟಕಗಳಿಗೆ ಬೀಗ ಹಾಕಲಾಗಿದೆ. ಜೀನ್ಸ್ ವಾಷಿಂಗ್ ಘಟಕಗಳಿಂದ ಪರಿಸರಕ್ಕೆ ಹಾನಿ ಆಗುತ್ತೆ ಅನ್ನೋ ವರದಿ ಹಿನ್ನೆಲೆ ಕ್ರಮ ಕೈಗೊಳ್ಳಲಾಗಿದೆ.

ಜೀನ್ಸ್ ಘಟಕದಿಂದ ನೀರು ಶುದ್ಧೀಕರಿಸದೇ ಕೆಮಿಕಲ್ ಮಿಶ್ರಿತ ನೀರನ್ನು ಯಥಾವತ್ತಾಗಿ ಹರಿ ಬಿಡಲಾಗ್ತಿತ್ತು. ಈ ಕುರಿತು ಹಲವು ಬಾರಿ ನೋಟೀಸ್ ಕೊಟ್ಟು ಎಚ್ಚರಿಸಲಾಗಿತ್ತು. ಕೆಮಿಕಲ್ ನೀರು ಸಂಸ್ಕರಿಸದೇ ಬಿಡುವ ಕಾರಣ 36 ಘಟಕಗಳಿಗೆ ನೋಟೀಸ್ ಕೊಟ್ಟು, ಜೆಸ್ಕಾಂನಿಂದಲೂ ವಿದ್ಯುತ್ ಸಪ್ಲೈ ಕಡಿತ ಮಾಡಿ, ಬಾಗಿಲು ಹಾಕಲಾಗಿದೆ.



ಹಲ್ಪ್‌ಲೈನ್ / Helpline : 080-25582559
ಈಮೇಲ್ / Email : contact@kspcb.gov.in
ವೆಬ್‌ಸೈಟ್ / Website : kspcb.karnataka.gov.in
080-25581383, 25589112
080-25589113, 25589114

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
Karnataka State Pollution Control Board
"Parisara Bhavan", 1st to 5th Floor, # 49, Church Street, Bangalore - 560 001, Karnataka State, India

PCB/1815/NEIA-08/2025-26/ 292 Date: 24 SEP 2025

CLOSURE DIRECTIONS UNDER SECTION 31(A) OF THE AIR (PREVENTION & CONTROL OF POLLUTION) ACT, 1981, READ WITH RULE 20(A) OF KARNATAKA AIR (PREVENTION & CONTROL OF POLLUTION) RULES, 1983.

Sub: Non-compliance with the provision of the Air (Prevention & Control of Pollution) Act, 1981 by M/s. Venkateshwara Industries, Plot No 31, 4th Stage, KIADB Mundargi Industrial Area, Apparel Park, Ballari - reg

Ref
1. Combined consent order issued to the unit vide no: AW-303960 Dtd: 21-10-2017.
2. Hon'ble Board Chairman, meeting held with Ballari Apparel Processing Association On 27-04-2022 at Apparel Park, Kiadb I.A., Mundargi, 4th Stage, Ballari District.
3. Meeting was conducted under the Chairmanship of Hon'ble Deputy Commissioner, Ballari on 23-05-2022.
4. Inspection of the unit by the officers of Regional Office, Ballari on 08-11-2022.
5. RO Ballari letter to RSEO, Vijayanagara Vide No: 1710 Dtd: 06-12-2022.
6. Notices of Proposed Directions issued by RSEO, Vijayanagara vide No: 290 Dtd: 27-03-2023.
7. R.O Ballari had collected treated water sample for laboratory analysis on 18-08-2023.
8. Hon'ble Supreme Court in W.P No.375 of 2012- Paryavaran Suraksha Samiti and another V/s Union of India & others.
9. National Green Tribunal Principal Bench Order dated: 08.05.2013 in application No: 37/2013, in case of Wasan Singh v/s State of Punjab and others.
10. Central Pollution Control Board directions No B29016/04/06IPC-I/10597-10636 dated 03.03.2017 issued under section 18(1) (b) of the Water (Prevention & Control of Pollution) Act, 1974 and the Air (Prevention and Control of Pollution) Act, 1981).
11. Visit of Hon'ble Upa-Lokayukta Bengaluru to Jeans Waashing units, Ballari on 17-01-2025.
12. Inspection of the unit by the AEO of this office on 28-02-2025.
13. RO Ballari letter to Board Office, Vide No: 1585 Dtd: 18-03-2025.
14. RSEO, Vijayanagr report to Board Office vide letters Dated: 04-02-2025 and 21-03-2025.
15. Board Office Personal Hearing Meeting notice vide no.:97 Da-ted:04-04-2025
16. Personal Hearing held by the Board with Jeans washing industry owners/representative on 17-04-2025 its proceedings Dated: 17-05-2025
17. SLEC meeting held on 09-06-2025 and its proceedings 11-06-2025

$*$*$

PREAMBLE:
M/s. Venkateshwara Industries, Plot No 31, KIADB Mundargi Industrial Apparel Park, Ballari is established and engaged in jeans washing activity. The previous combined Consent order issued for Jeans Washing and Processing unit of capacity 37500 No's/Month by the Board vide ref (1) has lapsed on 30-09-2021. The consent was issued with condition to treat the effluent generated

Our motto is to minimize waste generation through judicious use of natural resources

ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬಳ್ಳಾರಿ ಜೀನ್ಸ್ ಉದ್ಯಮವನ್ನೇ ನಂಬಿ 2 ಲಕ್ಷಕ್ಕೂ ಅಧಿಕ ಜನ ಕೆಲಸ ಮಾಡ್ತಿದ್ದಾರೆ.

ಇದೀಗ ಘಟಕಗಳು ಕ್ಲೋಸ್ ಆಗಿದ್ರಿಂದ ಜೀನ್ಸ್ ವಾಷಿಂಗ್ ಘಟಕಗಳು ಬೀಕೋ ಎನ್ನುತ್ತಿವೆ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಜೀನ್ಸ್ ಘಟಕಗಳು ಬಂದ್ ಆಗಿವೆ ಎನ್ನಲಾಗಿದ್ದು, ಇಷ್ಟೆಲ್ಲಾ ಬಹುದೊಡ್ಡ ಸಮಸ್ಯೆ ಆಗಿದ್ರೂ ಜಿಲ್ಲಾಡಳಿತ ಗಪ್ ಚುಪ್ ಆಗಿದೆ. ಇತ್ತ ಜೀನ್ಸ್ ಉದ್ಯಮಿಗಳೂ ಸುಮ್ಮನೆ ಆಗಿರೋದು ಹಲವು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಸಫಾರಿ ಸ್ಥಗಿತದಿಂದ 2 ಸಾವಿರ ಉದ್ಯೋಗಿಗಳಿಗೆ ಸಂಕಷ್ಟ

ಮೈಸೂರು: ನಾಗರಹೊಳೆ ಅಭಯಾರಣ್ಯದಲ್ಲಿ ಸಫಾರಿ ನಿಲ್ಲಿಸಿರುವುದರಿಂದ ಪ್ರವಾಸಿಗರು ರೆಸಾರ್ಟ್‌ಗಳಿಗೆ ಬಾರದ ಹಿನ್ನೆಲೆ ರೆಸಾರ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 2000 ಉದ್ಯೋಗಿಗಳಿಗೆ ಅತೀವ ತೊಂದರೆ ಉಂಟಾಗಿದೆ ಎಂದು ತಾಲೂಕಿನ ತೆರಾ ವೈಲ್ಡ್ ಲೈಫ್ ರೆಸಾರ್ಟ್‌ನ ಹೊಸಮಾಳ ಸ್ವಾಮಿ ಆರೋಪಿಸಿದ್ದಾರೆ.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ಸುಮಾರು 12 ರೆಸಾರ್ಟ್‌ಗಳ ಕಾರ್ಮಿಕರು ಜಮಾಯಿಸಿ ಸಫಾರಿ ಸ್ಥಗಿತವನ್ನು ವಿರೋಧಿಸಿ ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿ, ಎಚ್.ಡಿ.ಕೋಟೆ ತಾಲೂಕು ಪ್ರಾಣಿ, ವನ್ಯ ಮತ್ತು ಜಲ ಸಂಪತ್ತಿನಿಂದ ಕೂಡಿರುವುದರಿಂದ ಪ್ರವಾಸಿಗರ ಆಕರ್ಷಣೆಯಿಂದ ತಾಲೂಕಿನಲ್ಲಿ ಹಲವು ರೆಸಾರ್ಟ್‌ಗಳು ತಲೆ ಎತ್ತಿವೆ. ಸುಮಾರು 2000 ಮಂದಿ ತಾಲೂಕಿನ ನಿರುದ್ಯೋಗಿಗಳಿಗೆ ಉದ್ಯೋಗಗಳು ಸಹ ದೊರೆತಿವೆ. ತಾಲೂಕಿನಲ್ಲಿ ಯಾವುದೇ ಕಾರ್ಖಾನೆಗಳಿಲ್ಲದ್ದರಿಂದ ರೆಸಾರ್ಟ್‌ಗಳೇ ಇಲ್ಲಿನ ಜನರಿಗೆ ಉದ್ಯೋಗ ನೀಡಿವೆ. ಆದರೀಗ ಏಕಾಏಕಿ ಸಫಾರಿ ನಿಲ್ಲಿಸಿರುವುದರಿಂದ ನಮ್ಮ ಉದ್ಯೋಗಕ್ಕೆ ಕುತ್ತು ಬಂದೊದಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸುಮಾರು 12 ರೆಸಾರ್ಟ್‌ಗಳ ಕಾರ್ಮಿಕರು ಸಫಾರಿ ಸ್ಥಗಿತವನ್ನು ವಿರೋಧಿಸಿ ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸಂದೇಶ್ ವಾಟರ್ ಎಡ್ಜ್ ಸಿಬ್ಬಂದಿ ದೇವಯ್ಯ ಮಾತನಾಡಿ, ತಾಲೂಕಿನಲ್ಲಿರುವ ಅಧಿಕೃತ ರೆಸಾರ್ಟ್‌ಗಳು ತಾಲೂಕಿನಲ್ಲಿ ನಡೆಯುವ ಅನೇಕ ಜನಪರ ಕಾರ್ಯಕ್ರಮಗಳಿಗೆ ಸಹಕಾರವನ್ನು ನೀಡುತ್ತಾ ಸ್ಥಳೀಯರಿಗೆ ಆಸರೆಯಾಗಿವೆ. ಉದ್ಯೋಗ ನೀಡುವುದರ ಮೂಲಕ ಅನೇಕ ನಿರುದ್ಯೋಗಿಗಳು ಉದ್ಯೋಗಿಗಳಾಗಿದ್ದಾರೆ. 2000 ಸಾವಿರ ಕುಟುಂಬಸ್ಥರು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದರು. ಜತೆಗೆ ಇಲ್ಲಿನ ರೆಸಾರ್ಟ್‌ಗಳು ಸ್ಥಳೀಯರಿಗೆ ಉದ್ಯೋಗವನ್ನು ನೀಡಿ ತಾಲೂಕಿನ ಜನತೆಯ ಮನಗೆದ್ದಿದ್ದರು, ಈಗ ಸಫಾರಿ ನಿಂತಿರುವ ಕಾರಣ ಅದೇ ರೆಸಾರ್ಟ್‌ಗಳು ತಮ್ಮಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉದ್ಯೋಗಿಗಳನ್ನು ತೆಗೆಯುವ ನಿರ್ಧಾರಕ್ಕೆ ಬಂದಿವೆ. ಇದರಿಂದ ಅದೆಷ್ಟೋ ಕುಟುಂಬಗಳು ಬೀದಿಪಾಲಾಗಲಿವೆ, ಇದಕ್ಕೆ ಸರಕಾರವೇ ನೇರ ಕಾರಣ ಎಂದು ಬೇಸರಿಸಿದರು.

ಕಾರ್ಮಿಕ ಮಹಿಳೆ ಯಶೋಧ ಮಾತನಾಡಿ, ನಾವು ಜಮೀನಿನಲ್ಲಿ ಕೂಲಿ ಮಾಡಲು ಸಾಧ್ಯವಿಲ್ಲ, ಇದರಿಂದಾಗಿ ಸ್ಥಳೀಯವಾಗಿ ರೆಸಾರ್ಟ್‌ನಲ್ಲಿ ದಿನಗೂಲಿ ನೌಕರಳಾಗಿ ಸೇವೆ ಸಲ್ಲಿಸುತ್ತಿದ್ದೇವೆ, ಆದರೀಗ ನಮ್ಮ ಕೆಲಸಕ್ಕೆ ಕುತ್ತು ಬಂದೊದಗಿದೆ.

ಅಧಿಕಾರಿಗಳು ಯೋಚಿಸಿ ನಮಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಮನವಿ ಪತ್ರ ಸ್ವೀಕರಿಸಿದ ತಹಶೀಲ್ದಾರ್ ಶ್ರೀನಿವಾಸ್ ಮಾತನಾಡಿ, ಈ ಮನವಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸರಕಾರಕ್ಕೆ ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗುವುದು ಎಂದರು.

ಮನವಿ ಸಲ್ಲಿಸುವ ವೇಳೆ ಅಧಿಕೃತ ರೆಸಾರ್ಟ್‌ಗಳಾದ ವಾಟರ್ ವುಡ್ ಲಾಡ್ಜ್ ಅಂಡ್ ರೆಸಾರ್ಟ್ಸ್, ಸರಾಯ್ ರೆಸಾರ್ಟ್, ಸಂದೇಶ್ ವಾಟರ್ ಎಡ್ಜ್, ಕಾವ್ ರೆಸಾರ್ಟ್, ರೆಡ್ ಅರ್ಥ್, ಡಿಸ್ಕವರಿ ವಿಲೇಜ್, ವೈಲ್ಡ್ ಆರೆಂಜ್ ಕಬಿನಿ, ಕಬಿನಿ ಲೇಕ್ ವೀವ್, ಕಬಿನಿ ಸ್ಪ್ರಿಂಗ್ಸ್, ಫೈರ್ ಫ್ಲೈಸ್ ಸೇರಿದಂತೆ ವಿವಿಧ ರೆಸಾರ್ಟ್‌ನ ಸಿಬ್ಬಂದಿಗಳಾದ ಸಲೀಂ, ಷಣ್ಮುಗ, ಮಂಜು, ಶಿವಪ್ಪ, ಚಂದ್ರು, ಸ್ವಾಮಿ, ಮೂರ್ತಿ, ವಿನೋದ್, ಸ್ವಾಮಿ, ಪ್ರತಾಪ್ ಸಿಂಹ, ವಿಜಯಕುಮಾರ್, ದೇವೇಶ್, ಶಿವಪ್ಪ, ಯಶೋಧಮ್ಮ, ರವಿ, ರಾಕಿ, ಮಹೇಶ್, ಗುರುಸ್ವಾಮಿ, ಭೈರ, ನವೀನ್, ಸಿದ್ದು, ಕೃಷ್ಣ, ಚಿಕ್ಕಣ್ಣ, ಪ್ರತಾಪ್, ಅರುಣ್ ಇದ್ದರು.

ಟಿಪ್ಪು ಕಾಲದಿಂದ ಇಂದಿನವರೆಗೆ ರೇಷ್ಮೆ ಕೃಷಿ ಬೆಳವಣಿಗೆ ಕುರಿತು ಮಹತ್ವದ ಮಾಹಿತಿ

ಮೈಸೂರಲ್ಲಿ ತಲೆಎತ್ತಲಿದೆ ರೇಷ್ಮೆ ವಸ್ತುಸಂಗ್ರಹಾಲಯ

ಬೆಂಗಳೂರು: ವಿಶ್ವಪ್ರಸಿದ್ಧ ಮೈಸೂರು ರೇಷ್ಮೆಯ ಜನ್ಮಸ್ಥಳ ಮೈಸೂರಿನಲ್ಲಿ ದೇಶದ ಮೊದಲ ರೇಷ್ಮೆ ವಸ್ತುಸಂಗ್ರಹಾಲಯ ತಲೆ ಎತ್ತಲಿದೆ. ಈ ವಸ್ತುಸಂಗ್ರಹಾಲಯವು ಭಾರತದಲ್ಲಿ ರೇಷ್ಮೆಯ ಇತಿಹಾಸವನ್ನು ಪ್ರದರ್ಶಿಸಲಿದ್ದು, ಟಿಪ್ಪು ಸುಲ್ತಾನನ ಯುಗದಿಂದ ಇಂದಿನವರೆಗಿನ ಅದರ ಪ್ರಯಾಣವನ್ನು ಗುರುತಿಸುತ್ತದೆ ಮತ್ತು ರೇಷ್ಮೆ ಗೂಡುಗಳು ಮತ್ತು ಬಟ್ಟೆ ಉತ್ಪಾದನೆಯಲ್ಲಿ ಬಳಸುವ ಇತರ ವಸ್ತುಗಳನ್ನು ಒಳಗೊಂಡಿರುತ್ತದೆ.

ಕೇಂದ್ರ ರೇಷ್ಮೆ ಮಂಡಳಿ ಅಡಿಯಲ್ಲಿ ಬರುವ ರಾಷ್ಟ್ರೀಯ ರೇಷ್ಮೆ ಹುಳು ಬೀಜ ಸಂಸ್ಥೆ ನಿರ್ದೇಶಕಿ ಡಾ. ಎಸ್. ಮಂತ್ರಿರಾ ಮೂರ್ತಿ, ಪ್ರಸ್ತಾವಿತ ವಸ್ತುಸಂಗ್ರಹಾಲಯವನ್ನು 120 ಎಕರೆ ವಿಶಾಲವಾದ ಕ್ಯಾಂಪಸ್‌ನಲ್ಲಿ ಸಿಎಸ್‌ಬಿ ಆವರಣದಲ್ಲಿ ಸ್ಥಾಪಿಸಲಾಗುವುದು ಎಂದು ಹೇಳಿದರು. ಟೆಂಡರ್ ಪ್ರಕ್ರಿಯೆಯ ನಂತರ ಯೋಜನಾ ವೆಚ್ಚವನ್ನು ಅಂತಿಮಗೊಳಿಸಲಾಗುವುದು ಎಂದು ತಿಳಿಸಿದ್ದಾರೆ. ಮುಂದಿನ ಹಣಕಾಸು ವರ್ಷದಿಂದ (2026) ಎರಡು ವರ್ಷಗಳಲ್ಲಿ ವಸ್ತುಸಂಗ್ರಹಾಲಯವನ್ನು ಪೂರ್ಣಗೊಳಿಸುವ ಗುರಿಯೊಂದಿಗೆ, ಯೋಜನೆಯ ಮೇಲ್ವಿಚಾರಣೆಗೆ ಮೀಸಲಾದ ತಂಡವನ್ನು ನಿಯೋಜಿಸಲಾಗುತ್ತದೆ ಎಂದಿದ್ದಾರೆ.

ಇದು ವಿಶಿಷ್ಟ ಮತ್ತು ನವೀನ ವೈಶಿಷ್ಟ್ಯಗಳನ್ನು ಹೊಂದಿರುವ ಈ ರೀತಿಯ ಮೊದಲ ವಸ್ತುಸಂಗ್ರಹಾಲಯವಾಗಿದ್ದು, ರೇಷ್ಮೆ ಹುಳದಿಂದ ಕೋಕೂನ್‌ವರೆಗೆ, ನೂಲಿನಿಂದ ನೇಯ್ಗೆ ಮತ್ತು ಅಂತಿಮವಾಗಿ ಬಟ್ಟೆಯವರೆಗೆ ರೇಷ್ಮೆಯ ವಿಕಸನದ ವಿವರವಾದ ಪ್ರಸ್ತುತಿಯನ್ನು ನೀಡುತ್ತದೆ ಎಂದು ಡಾ.ಮೂರ್ತಿ ಹೇಳಿದರು.

ಅಸ್ಸಾಂನಲ್ಲಿ ಹೊಸ ರೇಷ್ಮೆ ಸರ್ಕ್ಯೂಟ್: ಕೇಂದ್ರ ಸರಕಾರವು ಜಮ್ಮು ಮತ್ತು ಕಾಶ್ಮೀರದಲ್ಲಿ ರೇಷ್ಮೆ ಪ್ರವಾಸೋದ್ಯಮವನ್ನು ಪ್ರಾರಂಭಿಸಿದೆ ಮತ್ತು ಅಸ್ಸಾಂನಲ್ಲಿ ಮತ್ತೊಂದು ಪ್ರವಾಸೋದ್ಯಮ ಸರ್ಕ್ಯೂಟ್ ಅನ್ನು ಯೋಜಿಸುತ್ತಿದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳು ರೇಷ್ಮೆ ಉತ್ಪಾದನಾ ಸರಪಳಿ ಮತ್ತು ಬಟ್ಟೆಯನ್ನು ಜನಪ್ರಿಯಗೊಳಿಸಲು ಕೆಲಸ ಮಾಡುತ್ತಿವೆ. ಮೈಸೂರಿನಲ್ಲಿ ಸಂಗ್ರಹಿಸಲಾದ ರೇಷ್ಮೆ ದಾರವನ್ನು ಮುಂಬರುವ ರೇಷ್ಮೆ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗುವುದು.



ಟಿಪ್ಪು ಕಾಲದಲ್ಲಿ ರೇಷ್ಮೆ ಕೃಷಿ ಪರಿಚಯ

ಸೆರಿ-ಸ್ಟೇಟ್ಸ್ ಆಫ್ ಇಂಡಿಯಾ 2024 ವರದಿಯ ಪ್ರಕಾರ, ಕರ್ನಾಟಕವು ದೇಶದ ರೇಷ್ಮೆ ಉತ್ಪಾದನೆಯಲ್ಲಿ ಶೇಕಡಾ 32 ರಷ್ಟು ಕೊಡುಗೆ ನೀಡುತ್ತದೆ. ರಾಜ್ಯದಲ್ಲಿ 11,526 ಗ್ರಾಮಗಳಲ್ಲಿ ರೇಷ್ಮೆ ಕೃಷಿಯಲ್ಲಿ ತೊಡಗಿದ್ದು, 1,48,704 ರೈತರು ಮತ್ತು 6,749 ರೀಲರ್‌ಗಳು ಇದರಲ್ಲಿ ಭಾಗಿಯಾಗಿದ್ದಾರೆ. ಟಿಪ್ಪು ಸುಲ್ತಾನನ ಆಳ್ವಿಕೆಯಲ್ಲಿ ಈ ಪ್ರದೇಶದಲ್ಲಿ ರೇಷ್ಮೆ ಕೃಷಿಯನ್ನು ಪರಿಚಯಿಸಲಾಯಿತು. ರೇಷ್ಮೆ ಗೂಡು ಉತ್ಪಾದನೆಯು ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರದಲ್ಲಿ ಪ್ರಾರಂಭವಾಯಿತು, ನಂತರ ಕ್ರಮೇಣ ಇತರ ಜಿಲ್ಲೆಗಳಿಗೆ ವಿಸ್ತರಿಸಿತು. 2023-24 ರಲ್ಲಿ, ಕರ್ನಾಟಕವು 12,463 ಟನ್ ರೇಷ್ಮೆಯನ್ನು ಉತ್ಪಾದಿಸಿತು, ಇದರಲ್ಲಿ 2,806 ಟನ್ ಬೈವೋಲ್ಟೈನ್ ರೇಷ್ಮೆ ಮತ್ತು 9,657 ಟನ್ ಮಲ್ಟಿವೋಲ್ಟೈನ್ (ಮಿಶ್ರ ತಳಿ) ರೇಷ್ಮೆ ಸೇರಿವೆ.

ಇಟಲಿ, ಚೀನಾದಲ್ಲಿ ಅಧ್ಯಯನ

ಯೋಜನೆಗೆ ಮುಂಚಿತವಾಗಿ, ಸಿಎಸ್‌ಬಿ ಅಧಿಕಾರಿಗಳು ಜಾಗತಿಕ ಅತ್ಯುತ್ತಮ ಅಭ್ಯಾಸಗಳನ್ನು ಅಧ್ಯಯನ ಮಾಡಲು ಚೀನಾ ಮತ್ತು ಇಟಲಿಯ ವಸ್ತುಸಂಗ್ರಹಾಲಯಗಳು ಮತ್ತು ಸೌಲಭ್ಯಗಳಿಗೆ ಭೇಟಿ ನೀಡಿದರು. ಚೀನಾದಲ್ಲಿ 2,000 ವರ್ಷಗಳಷ್ಟು ಹಳೆಯದಾದ ಪ್ರದರ್ಶನಗಳು ಸೇರಿದಂತೆ ಗಮನಾರ್ಹ ಸಂಗ್ರಹಗಳನ್ನು ಅವರು ಪರಿಶೀಲಿಸಿದರು. ಈ ನಡುವೆ, ರೇಷ್ಮೆ ಉತ್ಪಾದಿಸುವ ರಾಜ್ಯಗಳು ಮತ್ತು ರೈತರಿಂದ ಸಾಂಪ್ರದಾಯಿಕ ಮತ್ತು ಪರಂಪರೆಯ ಮೌಲ್ಯವನ್ನು ಹೊಂದಿರುವ ಕಲಾಕೃತಿಗಳನ್ನು ಸಂಗ್ರಹಿಸುವ ಪ್ರಕ್ರಿಯೆಯು ನಡೆಯುತ್ತಿದೆ. ಪ್ರದರ್ಶನಗಳ ಹೊರತಾಗಿ, ವಸ್ತುಸಂಗ್ರಹಾಲಯವು ನಿಜವಾದ ಮತ್ತು ನಕಲಿ ರೇಷ್ಮೆಯ ನಡುವಿನ ವ್ಯತ್ಯಾಸವನ್ನು ಸಂದರ್ಶಕರಿಗೆ ತಿಳಿಸುತ್ತದೆ. ಮೀಸಲಾದ ವಿಭಾಗವು ರೇಷ್ಮೆ ಉಪ-ಉತ್ಪನ್ನಗಳನ್ನು ಪ್ರದರ್ಶಿಸುತ್ತದೆ. ಜಾಗತಿಕವಾಗಿ, ರೇಷ್ಮೆಯಿಂದ ತಯಾರಿಸಿದ ಪ್ರೋಟೀನ್, ಸೌಂದರ್ಯವರ್ಧಕ ಮತ್ತು ಔಷಧೀಯ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆಯಿದೆ

ಹಸೀನಾಗೆ ಗಲ್ಲುಶಿಕ್ಷೆ: ಅವಾಮಿ ಕಾರ್ಯಕರ್ತರ ಆಕ್ರೋಶ

ಬಾಂಗ್ಲಾದಲ್ಲಿ ಭುಗಿಲೆದ್ದ ಪ್ರತಿಭಟನೆ

ಢಾಕಾ: ಬಾಂಗ್ಲಾ ಅಂತಾರಾಷ್ಟ್ರೀಯ ನ್ಯಾಯಾಧಿಕರಣ ಮಾಜಿ ಪ್ರಧಾನಿ ಶೇಖ್ ಹಸೀನಾಗೆ ಮರಣದಂಡನೆ ಘೋಷಿಸಿದ ನಂತರ ಬಾಂಗ್ಲಾದಲ್ಲಿ ಆಂತರಿಕ ಕಲಹ ತೀವ್ರವಾಗಿದೆ. ನಿಷೇಧಿತ ಹಸೀನಾ ಪಕ್ಷ ಅವಾಮಿ ಲೀಗ್ ಕಾರ್ಯಕರ್ತರು ಮತ್ತು ಬಾಂಗ್ಲಾದೇಶ ನ್ಯಾಷನಲ್ ಪಾರ್ಟಿ ಕಾರ್ಯಕರ್ತರ ನಡುವೆ ಮಾರಾಮಾರಿಯಾಗಿದೆ. ಹೆದ್ದಾರಿಗಳನ್ನು ಬಂದ್ ಮಾಡಲಾಗಿದೆ.

ಅಲ್ಲಿನ ವಿದ್ಯಾರ್ಥಿಗಳ ಹಿತರಕ್ಷಣೆಗೆಂದು ಶುರುವಾಗಿರುವ ಜತಿಯಾ ಛಾತ್ರ ಶಕ್ತಿ ಸಂಘಟನೆ ಕಾರ್ಯಕರ್ತರಿಗೂ ಅವಾಮಿ ಕಾರ್ಯಕರ್ತರಿಗೂ ನಡುವೆ ಹೊಡೆದಾಟವಾಗಿದೆ.

ಢಾಕಾದಲ್ಲಿ ಹಲವಾರು ಹೆದ್ದಾರಿಗಳಲ್ಲಿ ಸಂಚಾರಕ್ಕೆ ತಡೆಯೊಡ್ಡಿ ಪ್ರತಿಭಟನಾಕಾರರು ಗಲಾಟೆ ನಡೆಸಿದರು.

ಇವರ ಮೆರವಣಿಗೆ ವೇಳೆ ಪೊಲೀಸರೊಂದಿಗೆ ಸಂಘರ್ಷವಾಗಿ ವಿಷಮಸ್ಥಿತಿ ನಿರ್ಮಾಣವಾಗಿತ್ತು.

ಪ್ರತಿಭಟನಾ ಕಾರರನ್ನು ಚದುರಿಸಲು ಪೊಲೀಸರು ಲಾಠಿಚಾರ್ಜ್ ಮಾಡಿದರು. ಅಶ್ರುವಾಯು ಸಿಡಿಸಿ, ಭಾರಿ ಶಬ್ದ ಮಾಡುವ ಸ್ಫೋಟಕಗಳನ್ನು ಸಿಡಿಸಿದರು. ಪೊಲೀಸರು ಪ್ರತಿಭಟನಾ ಕಾರರನ್ನು ಅಟ್ಟಿಸಿಕೊಂಡು ಹೋಗುತ್ತಿರುವ ಕಾಣುತ್ತಿತ್ತು. ಧನ್ಮಂಡಿ 32 ಪ್ರದೇಶದಲ್ಲಿರುವ ಹಸೀನಾ ತಂದೆ, ಬಾಂಗ್ಲಾ ನಿರ್ಮಾತೃ ಶೇಖ್ ಮುಜಿಬುರ್ ರೆಹಮಾನ್ ವಾಸಿಸುತ್ತಿದ್ದ ಮನೆ ಆಸುಪಾಸು ಪರಿಸ್ಥಿತಿ ಬಿಗುವಿನಿಂದ ಕೂಡಿದೆ. ಅಲ್ಲಿಗೆ ಪ್ರತಿಭಟನಾಕಾರರು ಧಾವಿಸಿ, ವಸ್ತುಗಳನ್ನು ಧ್ವಂಸ ಮಾಡಲು ಯತ್ನಿಸಿದ್ದಾರೆ. ಸೋಮವಾರ ತೀರ್ಪು ಬರುವ ಮೊದಲೇ ನಿಷೇಧಿತ ಅವಾಮಿ ಲೀಗ್ 2 ದಿನಗಳ ಬಾಂಗ್ಲಾ ಬಂದ್‌ಗೆ ಕರೆ ನೀಡಿತ್ತು.

ಮರಣದಂಡನೆಗೆ ವಿಶ್ವಸಂಸ್ಥೆ ವಿರೋಧ

ಮಾಜಿ ಪ್ರಧಾನಿ ಶೇಖ್ ಹಸೀನಾಗೆ ಮರಣದಂಡನೆ ವಿಧಿಸಿರುವುದಕ್ಕೆ ವಿಶ್ವಸಂಸ್ಥೆ ವಿಷಾದ ವ್ಯಕ್ತಪಡಿಸಿದೆ. ಹಸೀನಾ ಮತ್ತು ಬಾಂಗ್ಲಾ ಮಾಜಿ ಗೃಹ ಸಚಿವ ಅಸಾದುಜ್ಜಮಾನ್ ಖಾನ್‌ಗೆ ಶಿಕ್ಷೆ ವಿಧಿಸಿರುವುದರ ಕುರಿತು ಪ್ರತಿಕ್ರಿಯಿಸಿದ ವಿಶ್ವಸಂಸ್ಥೆ, ಕಳೆದ ವರ್ಷದ ಬಾಂಗ್ಲಾ ಹಿಂಸಾಚಾರವನ್ನು ಹತ್ತಿಕ್ಕುವ ಸಂದರ್ಭದಲ್ಲಿ ಮೃತಪಟ್ಟ ವ್ಯಕ್ತಿಗಳಿಗೆ ನ್ಯಾಯ ನೀಡುವ ನಿಟ್ಟಿನಲ್ಲಿ ಇದು ಮಹತ್ವದ ತೀರ್ಪು. ಆದರೆ ಮರಣದಂಡನೆ ವಿಧಿಸುವುದನ್ನು ವಿಶ್ವಸಂಸ್ಥೆ ವಿರೋಧಿಸುತ್ತದೆ ಎಂದು ಅದು ಹೇಳಿದೆ.

ಭಾರತೀಯ ಬಿಲ್ಲಾಗರರಿಗೆ ಕಿರುಕುಳ?

ಶನಿವಾರ ರಾತ್ರಿ ಢಾಕಾದಿಂದ ಭಾರತಕ್ಕೆ ಹೊರಡಬೇಕಿದ್ದ ಭಾರತ ಬಿಲ್ಲಾಗರರ ತಂಡಕ್ಕೆ ಬಾಂಗ್ಲಾ ಅಧಿಕಾರಿಗಳು ಸರಿಯಾಗಿ ಸ್ಪಂದಿಸದೇ ವಿಷಮಯ ಪರಿಸ್ಥಿತಿ ಎದುರಿಸಿದ್ದಾರೆ. ತಂಡದ ವಿಮಾನ ರದ್ದಾಗಿದ್ದು ಶನಿವಾರ ತಡರಾತ್ರಿ 2ಕ್ಕೆ ಗೊತ್ತಾಗಿದೆ.

ವಿಶ್ವವಾಣಿ
ಆರಾಮ
@vishwavaninews
19-11-2025
ಬುಧವಾರ

ಸಿಡಿಮದ್ದು ಸ್ಫೋಟಕ್ಕೆ ಕಬ್ಬಿಣದ ಸರಳು ಮಿದುಳನ್ನು ಹೊಕ್ಕಿತು!

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ಒಬ್ಬ ಮನುಷ್ಯನು ಮನಸ್ಸು ಮಾಡಿದರೆ ಇತಿಹಾಸವನ್ನು ಬದಲಾಯಿಸಬಹುದು. ಲ್ಯೂವೆನ್‌ಹಾಕ್ ತನ್ನ ಸೂಕ್ಷ್ಮದರ್ಶಕದಿಂದ ಸೂಕ್ಷ್ಮಜೀವಿಗಳ ಲೋಕವನ್ನು ಅನಾವರಣ ಮಾಡಿದ. ಫ್ಲೆಮಿಂಗ್ ತನ್ನ ಸೂಕ್ಷ್ಮ ಅವಲೋಕನ ಸಾಮರ್ಥ್ಯದಿಂದ ಪ್ರತಿಜೈವಿಕಗಳನ್ನು ಸೃಜಿಸಿದ. ಜೆನರ್, ತನ್ನ ಸಿದ್ಧಾಂತವನ್ನು ಕಾರ್ಯರೂಪಕ್ಕೆ ತಂದು ಲಸಿಕೆಯೆಂಬ ಬ್ರಹ್ಮಾಸ್ತ್ರವನ್ನು ಮನುಕುಲಕ್ಕೆ ನೀಡಿದ. ಹೀಗೆ ನಮ್ಮ ಇತಿಹಾಸ, ವಿಜ್ಞಾನ, ಸಾಹಿತ್ಯ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಜ್ಞಾನಕ್ಕೆ ಮಹಾತಿರುವುಗಳನ್ನು ನೀಡಿದ ಅನೇಕ ಮಹಾನುಭಾವರಿದ್ದಾರೆ. ಅಂಥವರಲ್ಲಿ ಒಬ್ಬ ಫೀನಿಯಸ್ ಪಿ. ಗೇಜ್ (1823-1869) ಎಂಬ ಕಾರ್ಮಿಕ. ಇವನು ಮನುಷ್ಯನ ಮಿದುಳಿನ ರಚನೆ ಮತ್ತು ಕಾರ್ಯವನ್ನು ತಿಳಿಯಲು ನೆರವಾಗುವುದರ ಜತೆಯಲ್ಲಿ ಮಿದುಳಿನ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಲು ಕಾರಣನಾದ.

ಸಿಡಿಮದ್ದು

ಸೆಪ್ಟೆಂಬರ್ 13, 1848. ಅಮೆರಿಕದ ನ್ಯೂಇಂಗ್ಲಂಡ್ ಜಿಲ್ಲೆಯ ವೆರ್ಮೌಂಟ್ ನಗರದ ಹೊರ ಅಂಚಿನದಲ್ಲಿದ್ದ ಗ್ರಾಮಾಂತರ ಪ್ರದೇಶ. ರೈಲು ರಸ್ತೆಯನ್ನು ನಿರ್ಮಿಸುತ್ತಿದ್ದರು. ಫೀನಿಯಸ್ ಗೇಜ್ ಎಂಬ ಇಪ್ಪತ್ತರ ವಯಸ್ಸಿನ ತರುಣ ಒಬ್ಬ ಸಮರ್ಥ ಮುಖ್ಯ ಕೆಲಸಗಾರನಾಗಿದ್ದ (ಫೋರ್‌ಮನ್), ಜನಪ್ರೀತಿಯನ್ನು ಗಳಿಸಿದ್ದ. ರೈಲು ಮಾರ್ಗವನ್ನು ನಿರ್ಮಿಸಲು ಅಡ್ಡ ಬರುತ್ತಿದ್ದ ಎಲ್ಲ ಬಂಡೆಗಳನ್ನು ಸಿಡಿಸಬೇಕಿತ್ತು. ಈ ಕೆಲಸವನ್ನು ಮಾಡುವುದರಲ್ಲಿ ಗೇಜ್ ಪರಿಣತನಾಗಿದ್ದ. ಮೊದಲು ಭೈರಿಗೆಯ ನೆರವಿನಿಂದ ಬಂಡೆಯಲ್ಲಿ ಒಂದು ಕುಣಿಯನ್ನು ಕೊರೆಯಬೇಕಿತ್ತು. ಆ ಕುಣಿಯೊಳಗೆ ಸಿಡಿಮದ್ದು (ಗನ್ ಪೌಡರ್) ತುಂಬಬೇಕಿತ್ತು. ಒಂದು ಫ್ಯೂಸ್ ಇಡಬೇಕಿತ್ತು. ಆನಂತರ ಆ ಫ್ಯೂಸ್, ಸಿಡಿಮದ್ದು ಮತ್ತು ಗುಣಿಯ ಮೇಲೆ ಮರಳು ಅಥವಾ ಜೇಡಿಮಣ್ಣನ್ನು ಸುರಿದು ಒಟ್ಟಾಗಿ ಜಡಿಯಬೇಕಿತ್ತು. ಹಾಗೆ ಜಡಿಯಲು 3'7'' ಉದ್ದದ ಕಬ್ಬಿಣದ ಸರಳನ್ನು ಬಳಸುತ್ತಿದ್ದ. ಇದರ ವ್ಯಾಸ 1.25''. ತೂಕ ಸುಮಾರು 6 ಕೆಜಿ. ಆನಂತರ ಫ್ಯೂಸಿಗೆ ಬೆಂಕಿಯನ್ನು ಹೊತ್ತಿಸಿ ದೂರ ಹೋಗುತ್ತಿದ್ದ. ಫ್ಯೂಸ್ ಉರಿದು ಸಿಡಿಮದ್ದನ್ನು ಸ್ಫೋಟಿಸುತ್ತಿತ್ತು.

ಸೆಪ್ಟೆಂಬರ್ 13ರಂದು ಗೇಜ್ ಹೀಗೆ ಒಂದು ಕುಣಿಯಲ್ಲಿ ಸಿಡಿಮದ್ದನ್ನು ತುಂಬಿದ. ಫ್ಯೂಸನ್ನು ಇಟ್ಟ. ಅದರ ಮೇಲೆ ಮರಳು ಅಥವಾ ಜೇಡಿಮಣ್ಣನ್ನು ಮೆತ್ತಿ, ಆನಂತರ ತನ್ನ ಕಬ್ಬಿಣದ ಸರಳಿನಿಂದ ಜೇಡಿಮಣ್ಣನ್ನು ಒತ್ತಾಗಿ ಕುಟ್ಟಬೇಕಿತ್ತು. ಬಹುಶಃ ಅವನು ಜೇಡಿಮಣ್ಣನ್ನು ಮೆತ್ತದೆ, ಕಬ್ಬಿಣದ ಸರಳಿನಿಂದ ಹಾಗೆಯೇ ಒತ್ತಾಗಿ ಕುಟ್ಟಲು ಪ್ರಯತ್ನಿಸಿದನೆಂದು ಕಾಣುತ್ತದೆ. ಕಬ್ಬಿಣದ ಸರಳು ಅಕಸ್ಮಾತ್ ಬಂಡೆಗೆ ತಾಗಿ ಒಂದು ಕಿಡಿ ಎದ್ದಿತು. ಆ ಕಿಡಿಯು ಸಿಡಿಮದ್ದನ್ನು ಸ್ಫೋಟಿಸಿತು. ಕೂಡಲೇ ಅವನ ಕೈಯಲ್ಲಿದ್ದ ಕಬ್ಬಿಣದ ಸರಳು ಒಂದು ಕ್ಷಿಪಣಿಯಂತೆ ಹಾರಿತು. ಗೇಜ್‌ನ ಎಡೆಗೆನ್ನೆಯೊಳಗೆ ನುಗ್ಗಿ, ಬಾಯನ್ನು ಪ್ರವೇಶಿಸಿ, ತಾಲನ್ನು ಭೇದಿಸಿ, ಎಡಕಣ್ಣಿನ ಹಿಂಭಾಗದ ಮೂಲಕ ಮಿದುಳಿನ ಲಲಾಟ ಹಾಲೆಯಲ್ಲಿ (ಫ್ರಾಂಟಲ್ ಲೋಬ್) ತೂರಿ, ಕಪಾಲದ ಮೂಲಕ, ತನ್ನ ಅಕ್ಷದ ಮೇಲೆ ಸುತ್ತುತ್ತಾ, ಹೊರಬಂದಿತು. ಹಲವು ಮೀಟರ್ ಮೇಲಕ್ಕೆ ಹೋಯಿತು. ಆನಂತರ ಮೀಟರುಗಳ ದೂರದಲ್ಲಿ ನೆಲಕ್ಕೆ ಬಿತ್ತು! ಆ ಸರಳು ರಕ್ತಸಿಕ್ತವಾಗಿತ್ತು ಹಾಗೂ ಅದಕ್ಕೆ ಮಿದುಳಿನ ತುಣುಕುಗಳು ಮೆತ್ತಿಕೊಂಡಿದ್ದವು.

ಸಿಡಿಮದ್ದು ಸ್ಫೋಟಿಸಿದಾಗ, ಆತನ ಕಣ್ಣಿನ ಮುಂದೆ ಪ್ರಕಾಶಮಾನವಾದ ಬೆಳಕು ಕಂಡಿತು. ಹಠಾತ್ತನೆ ಹಿಂದಕ್ಕೆ ಯಾರೋ ದೂಡಿದಂತೆ ಆದಾಗ, ಸಂಪೂರ್ಣ ಗೊಂದಲವುಂಟಾಯಿತು. ಶಾಖ ಹಾಗೂ ಶಬ್ದಗಳ ಜತೆಯಲ್ಲಿ ಧಡ್ ಎಂದು ನೆಲಕ್ಕೆ ಬಿದ್ದ. ಪ್ರಜ್ಞೆಯೇನೂ ಹೋಗಲಿಲ್ಲ. ನೋವೂ ಆಗಲಿಲ್ಲ. ಆದರೆ ಸ್ವಲ್ಪ ಹೊತ್ತಿನಲ್ಲಿ ವಿಪರೀತ ನೋವು ಕಾಣಿಸಿಕೊಂಡಿತು. ಏಕೆಂದರೆ ಮಿದುಳಿಗೆ ನೋವು ಗ್ರಾಹಕಗಳು (ಪೇಯ್ನ್ ರೆಸೆಪ್ಟಾರ್) ಇರುವುದಿಲ್ಲ. ಹಾಗಾಗಿ ಮಿದುಳಿಗೆ ಪೆಟ್ಟಾದರೆ ನೋವಾಗುವುದಿಲ್ಲ. ಆದರೆ ಚರ್ಮ, ಸ್ನಾಯು, ಮೂಳೆಗಳಲ್ಲಿ ನೋವು ಗ್ರಾಹಕಗಳು ಇರುವ ಕಾರಣ ನೋವು ತಿಳಿಯುತ್ತದೆ. ವಾಂತಿಯಾಗುವಂಥ ಅನುಭವವಾಯಿತು.

ಅವೈಜ್ಞಾನಿಕ ಚಿಕಿತ್ಸೆ

1848. ಅರಿವಳಿಕೆಯ ಆವಿಷ್ಕಾರವಾಗಿರಲಿಲ್ಲ. ನಂಜುರೋಧಕ ದ್ರಾವಣಗಳಿರಲಿಲ್ಲ. ಕೈಗವಸುಗಳನ್ನು ಯಾರೂ ಕಂಡುಹಿಡಿದಿರಲಿಲ್ಲ. ಪ್ರತಿಜೈವಿಕ ಔಷಧಗಳನ್ನು 1928ರಲ್ಲಿ ಫ್ಲೆಮಿಂಗ್ ಕಂಡುಹಿಡಿದ. ಒಂದು ಕುದುರೆ ಗಾಡಿ ಬಂದಿತು. ಗಾಡಿಯಿಂದ ಆ ಗ್ರಾಮಾಂತರ ಪ್ರದೇಶದಲ್ಲಿದ್ದ ಡಾ. ಜಾನ್ ಮಾರ್ಟಿನ್ ಹಾರ್ಲೋ (1819-1907) ಎಂಬ ವೈದ್ಯನು ಬಂದ. ''ಓಹ್ ಡಾಕ್ಟ್ರೆ ಬನ್ನಿ!... ಇಲ್ಲಿ ನಿಮಗೊಂದಿಷ್ಟು ಕೆಲಸವಿದೆ'' ಎಂದು ಗೇಜ್ ಸ್ವಾಗತಿಸಿದ. ಆ ಗಾಡಿಯಲ್ಲಿಯೇ ನೆಟ್ಟಗೆ ಕುಳಿತುಕೊಂಡ. ವೈದ್ಯರು ಅವನನ್ನು ತಮ್ಮ ಚಿಕಿತ್ಸಾಲಯಕ್ಕೆ ಕರೆದೊಯ್ದರು. ಅಲ್ಲಿ

ಗಾಯವನ್ನು ಕೂಲಂಕಷವಾಗಿ ಪರಿಶೀಲಿಸಿದರು. ಆಳವಾದ ಗಾಯ. ಚರ್ಮ, ಮಾಂಸ ಮತ್ತು ಕೂದಲು ಸುಟ್ಟ ವಾಸನೆ. ಗಾಯದ ತುಂಬಾ ಮೂಳೆಯ ತುಣುಕುಗಳು. ಇಕ್ಕಳದ ನೆರವಿನಿಂದ ಒಂದೊಂದೇ ಮೂಳೆಯನ್ನು ಹೆಕ್ಕತೊಡಗಿದರು. ಮೇಲೆ ಕಾಣುತ್ತಿದ್ದ ಚೂರುಗಳನ್ನು ತೆಗೆದ ಮೇಲೆ, ಗಾಯದ ಒಳಗೂ ಮೂಳೆಗಳು ಇರಬಹುದು ಎನಿಸಿತು. ತಮ್ಮ ಬರೀ ಬೆರಳನ್ನು (ಕೈಗವಸನ್ನು ಕಂಡುಹಿಡಿದಿರಲಿಲ್ಲ) ಗಾಯದ ಒಳಗೆ ತೂರಿಸಿ, ಸಾಧ್ಯವಾದಷ್ಟು ಚೂರುಗಳನ್ನು ಹೊರತೆಗೆದರು. ಆಗ ಗೇಜ್ ನೋವಿನಿಂದ ಚಡಪಡಿಸುತ್ತಿದ್ದ. ಒಂದು ಸಾಲ ವಾಂತಿಯನ್ನು ಮಾಡಿಕೊಂಡ. ಕುಳಿತಲ್ಲಿಯೇ ಭ್ರಮಾಧೀನನಾಗಿ ಕನವರಿಸಲಾರಂಭಿಸಿದ. ಆದರೆ ಅವನ ಪ್ರಜ್ಞೆಯು ಮಾತ್ರ ಪೂರ್ತಿ ಹೋಗಲಿಲ್ಲ. ವೈದ್ಯರು ಗಾಯವನ್ನು ಸ್ವಚ್ಛಗೊಳಿಸಿ, ಪಟ್ಟಿಯನ್ನು ಕಟ್ಟಿದರು.

ಚೇತರಿಕೆ

ಗೇಜ್ ಆಶ್ಚರ್ಯಕರ ರೀತಿಯಲ್ಲಿ ಚೇತರಿಸಿಕೊಂಡ. ಗಾಯದಲ್ಲಿ ಸೋಂಕು ತಲೆದೋರಿತ್ತು. ಹಾಗಾಗಿ ಗಾಯವು ಗುಣವಾಗಲು ಹೆಚ್ಚು ಸಮಯವನ್ನು ತೆಗೆದುಕೊಂಡಿತ್ತು. ಅದನ್ನು ಬಿಟ್ಟರೆ ಮತ್ತೇನೂ ತೊಂದರೆಯಿರಲಿಲ್ಲ. ಸೋಂಕು ಹತೋಟಿಗೆ ಬಂದ ತಿಂಗಳ ಹೊತ್ತಿಗೆ ಅವನು ಎದ್ದು ನಿಲ್ಲುತ್ತಿದ್ದ. ನಡೆಯುತ್ತಿದ್ದ. ಮಾತನಾಡುತ್ತಿದ್ದ. ಅವನ ನೆನಪು ಚೆನ್ನಾಗಿತ್ತು. ಮಾತು ಸರಾಗವಾಗಿತ್ತು. ಕೈಕಾಲುಗಳ ಚಲನೆ ಹಾಗೂ ಸಾಮಾನ್ಯ ಜ್ಞಾನವು ಸಮಗ್ರವಾಗಿತ್ತು. ಆದರೆ, ಅವನು ಆಸ್ಪತ್ರೆಯನ್ನು ಬಿಟ್ಟು ಮನೆಗೆ ಬಂದ ಮೇಲೆ, ಮನೆಯವರು 'ಇವನು ನಮ್ಮ ಗೇಜ್ ಅಲ್ಲ' ಎಂದು ದೂರಿದರು.

ಹಾರ್ಲೋ, ಮೊದಲ ಬಾರಿಗೆ ಗೇಜ್ ಮಾತನಾಡಿದ ಕ್ಷಣದಿಂದ ಹಿಡಿದು, ಅವನ ಚಿಕಿತ್ಸೆಯು ಮುಗಿಯುವವರಿಗೂ ಅವನ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ವರ್ತನೆಗಳನ್ನು ಬಹಳ ನಿಕಟವಾಗಿ ಅಧ್ಯಯನ ಮಾಡಿದ್ದರು. ಎಲ್ಲವನ್ನೂ ಕ್ರಮಬದ್ಧವಾಗಿ ದಾಖಲಿಸಿದ್ದರು. ಗೇಜ್, ಮೂಲತಃ ಸಭ್ಯ, ಪರಿಣತ ಹಾಗೂ ವಿಶ್ವಾಸಾರ್ಹ ಮುಖ್ಯ ಕೆಲಸಗಾರನಾಗಿದ್ದ. ಅಂಥವನಲ್ಲಿ ಅನೇಕ ಹೊಸ ಲಕ್ಷಣಗಳು ಕಂಡುಬರಲಾರಂಭಿಸಿದವು. ಅವೆಂದರೆ:

- ವ್ಯಕ್ತಿಗೆ ಅಸಹ್ಯವೆನಿಸುವ ಅಶ್ಲೀಲ, ಅಸಂಬದ್ಧ ಹಾಗೂ ಅಸಭ್ಯ ಭಾಷೆಯನ್ನು ಬಳಸುತ್ತಿದ್ದ.
- ತಾಳ್ಮೆಯನ್ನು ಕಳೆದುಕೊಂಡಿದ್ದ. ಸಣ್ಣ ಪುಟ್ಟ ವಿಚಾರಕ್ಕೆ ಕೂಗಾಡುತ್ತಿದ್ದ. ಕಿರಿಕಿರಿಯ ಮನುಷ್ಯನಾಗಿ ಬದಲಾಗಿದ್ದ.
- ಅಸಹನೆಯು ಅವನಲ್ಲಿ ಮನೆಮಾಡಿತ್ತು. ತರ್ಕಸಾಮರ್ಥ್ಯವನ್ನು ಕಳೆದುಕೊಂಡವಂತೆ ಅವನು ತೀರಾ ಹಠಮಾರಿಯಾಗಿ ಬದಲಾಗಿದ್ದ.
- ಅವನ ಸಾಮಾಜಿಕ ವರ್ತನೆ ಹಾಗೂ ನೈತಿಕ ಬದ್ಧತೆಗಳು ಮರೆಯಾಗಿದ್ದವು.
- ಯೋಜನಾ ಹಾಗೂ ಯೋಚನಾ ಸಾಮರ್ಥ್ಯವನ್ನು ಕಳೆದುಕೊಂಡಿದ್ದ. ಹಾಗಾಗಿ ನಿಗದಿತ ಕೆಲಸವನ್ನು ಸಕಾಲದಲ್ಲಿ ಮುಗಿಸಬಲ್ಲ ಎಂಬ ನಂಬಿಕೆ ಮತ್ತು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದ್ದ.

ಹೊಸಬದುಕು

'ಇವನು ನಮ್ಮ ಗೇಜ್ ಅಲ್ಲ' ಎಂದು ಮನೆಮಂದಿಯು ಒಕ್ಕೊರಲಿನಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವಂತೆಯೇ ವಿಜ್ಞಾನಿಗಳ ವಲಯದಲ್ಲಿ ಅತೀವ ಕುತೂಹಲವು ಕೆರಳಿತು. ನಂತರದ ದಾಖಲೆಗಳಲ್ಲಿ ಸಾಕಷ್ಟು ಗೊಂದಲಗಳಿವೆ. ಜನಪ್ರಿಯ ಸಾಹಿತ್ಯವಂತೂ 'ಗೇಜ್ ಓರ್ವ ಮಹಾಕುಡುಕ, ಸಂಪೂರ್ಣ ಮನೋರೋಗಿ, ಅಲೆಮಾರಿ, ಕುಡಿದಾಗ ಬಾಯಿಗೆ ಬಂದ ಹಾಗೆ ಮಾತನಾಡುವ ಬೇಜವಾಬ್ದಾರಿ ಮನುಷ್ಯ' ಎಂದೇ ವರ್ಣಿಸಿದವು. ಆದರೆ ಇತ್ತೀಚಿನ ದಿನಗಳಲ್ಲಿ ವಿಜ್ಞಾನಿಗಳು ಗೇಜ್‌ನಿಗೆ ಸಂಬಂಧಿಸಿದ ದಾಖಲೆಗಳನ್ನು ಮರುಪರಿಶೀಲಿಸಿದರು. ಆಗ ಬಹಳ ಭಿನ್ನವಾದ ಚಿತ್ರವು ದೊರೆಯಿತು. ಗೇಜ್, ಅಮೆರಿಕವನ್ನು ಬಿಟ್ಟು ಚಿಲಿಯ ವಾಲ್ಪರೈಸೋ ಎಂಬಲ್ಲಿಗೆ ಹೋದ. ಅಲ್ಲಿ ಸುದೀರ್ಘ ಪ್ರಯಾಣದ ಕುದುರೆಗಾಡಿಗಳ ಚಾಲಕನಾದ. ಗಾಡಿಗೆ 4-6 ಕುದುರೆಗಳನ್ನು ಕಟ್ಟಿರುತ್ತಿದ್ದರು. ದಿನಕ್ಕೆ ನೂರಾರು ಮೈಲಿ ಸಂಚಾರವನ್ನು ಮಾಡಬೇಕಾಗಿತ್ತು. ಹಲವು ದಿನಗಳ ಸಂಚಾರದ ನಂತರ ಗಮ್ಯಸ್ಥಳವನ್ನು ತಲುಪುತ್ತಿದ್ದರು. ಬೆಟ್ಟ, ಗುಡ್ಡ, ಕಣಿವೆ, ಕಾಡುಪ್ರಾಣಿಗಳ ಮಾರ್ಗದಲ್ಲಿ ಸಂಚರಿಸುವುದು ಹೇಳಿದಷ್ಟು ಸುಲಭದ ಕೆಲಸವಾಗಿರಲಿಲ್ಲ. ಇಂಥ ಕೆಲಸವನ್ನು ಸುಮಾರು 6 ವರ್ಷಗಳ ಕಾಲ ನಡೆಸಿದ ಎಂದರೆ, ಆತನ ಮಿದುಳು-ಮನಸ್ಸು-ವರ್ತನೆಯು ಸಹಜವಾಗಿತ್ತು ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅಪಘಾತವಾದ ನಂತರ ಕಂಡುಬಂದ ವರ್ತನೆಗಳು, 'ಇವನು ನಮ್ಮ ಗೇಜ್ ಅಲ್ಲ' ಎಂದು ಮನೆಯವರು ದೂರಬಹುದಾದ ವರ್ತನೆಗಳು ಹೇಗೆ ಬದಲಾದವು ಎನ್ನುವ ಪ್ರಶ್ನೆಯು ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಇದಕ್ಕೆ ವಿಜ್ಞಾನವು ಈಗ ಉತ್ತರವನ್ನು ನೀಡಿದೆ. ಅದುವೇ ನರಸುರೂಪಿಕೆ ಅಥವ ನ್ಯೂರೋಪ್ಲಾಸ್ಟಿಸಿಟಿ.

ನ್ಯೂರೋಪ್ಲಾಸ್ಟಿಸಿಟಿ

ಇದು ಮಿದುಳಿನ ಒಂದು ವಿಶೇಷ ಗುಣ. ನಮಗೆ ಒಂದು ಪುಟ್ಟ ಗಾಯವಾದರೆ, ಅದು ವಾರದಲ್ಲಿ ಗುಣವಾಗುತ್ತದೆ. ಹೆಪ್ಪಳಿಕೆಯು (ಸ್ಕ್ಯಾಬ್) ಹತ್ತು ದಿನದಲ್ಲಿ ಬಿದ್ದುಹೋಗುತ್ತದೆ. ತಿಂಗಳಾದ ಮೇಲೆ, ಗಾಯವಾದ ಗುರುತು ಲವಲೇಶವೂ ಉಳಿದಿರುವುದಿಲ್ಲ. ಈ ಲಕ್ಷಣವು ಮಿದುಳಿನ ನರಕೋಶಗಳಿಗೂ ಇವೆ. ಒಂದು ಸಲ ಲಕ್ವ ಹೊಡೆದು ಮಿದುಳಿನ ನರಕೋಶಗಳಿಗೆ ಘಾತವಾಗಿ ಅಸುನೀಗಿದಾಗ, ಅಕ್ಕಪಕ್ಕದ ನರಕೋಶಗಳು ತಮ್ಮ



ಸ್ವರೂಪವನ್ನೇ ಬದಲಿಸಿ, ನಷ್ಟಕೋಶಗಳ ಕಾರ್ಯಸಾಮರ್ಥ್ಯವನ್ನು ಸರಿದೂಗಿಸಬಲ್ಲವು. ಅಕ್ಕಪಕ್ಕದ ನರಕೋಶಗಳು 'ರಿ-ವೈರಿಂಗ್' ಮೂಲಕ ನಷ್ಟಕೋಶಗಳ ಕೆಲಸವನ್ನು ನಿಭಾಯಿಸಬಲ್ಲವು. ಹಾಗಾಗಿ ಲಕ್ವ ಹೊಡೆದವರು ಆತ್ಮ ವಿಶ್ವಾಸದಿಂದ, ವೈದ್ಯರು ಸೂಚಿಸಿದ ಚಿಕಿತ್ಸೆ ಹಾಗೂ ವ್ಯಾಯಾಮವನ್ನು ಪರಿಪಾಲಿಸುತ್ತಿದ್ದರೆ, ನಷ್ಟವಾದ ಸಾಮರ್ಥ್ಯವನ್ನು ಮರಳಿ ಪಡೆಯುವ ಸಾಧ್ಯತೆಯು ಹೆಚ್ಚಿರುತ್ತದೆ. ಗೇಜ್ ವಿಷಯದಲ್ಲಿ ಬಹುಶಃ ಇದೇ ಆಗಿರಬೇಕು ಎಂಬುದು ವಿಜ್ಞಾನಿಗಳ ಅಭಿಮತ.

1859ರಲ್ಲಿ ಗೇಜ್ ಅಮೆರಿಕಕ್ಕೆ ಹಿಂದಿರುಗಿದ. ಅವನು ಸದಾ ಆ ಕಬ್ಬಿಣದ ಸರಳನ್ನು ತನ್ನ ಜತೆಯಲ್ಲಿ ಇಟ್ಟುಕೊಳ್ಳುತ್ತಿದ್ದ. ತಾನು ಎಲ್ಲಿಗೆ ಹೋದರೂ ಅದನ್ನು ಕೊಂಡೊಯ್ಯುತ್ತಿದ್ದ. ಅದರ ಜತೆಯಲ್ಲಿ ಅಸಂಖ್ಯ ಫೋಟೋಗಳನ್ನು ತೆಗೆಸಿಕೊಂಡ. ಕೆಲವು ಸಲ ಆ ಸರಳನ್ನು ಊರುಗೋಲಿನಂತೆ ಬಳಸುತ್ತಿದ್ದ. ಮಲಗುವಾಗ ಹಾಸಿಗೆಯಲ್ಲಿ ಅದನ್ನೂ ಮಲಗಿಸಿಕೊಳ್ಳುತ್ತಿದ್ದ. 1860ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿದ್ದ. ಒಂದು ದಿನ ಇದ್ದಕ್ಕಿದ್ದ ಸೆಳವು (ಸೀಜ಼ರ್ಸ್) ಬಂದಿತು. ಸೆಳವಿಗೆ ಬಹುಶಃ ಹಿಂದೆ ಆಗಿದ್ದ ಗಾಯವೇ ಕಾರಣವಿದ್ದಿರಬಹುದು. ಸೆಳವಿನಲ್ಲಿ ಮೃತನಾದ. ಅವನ ಮನೆಯವರು ಗೇಜ್‌ನ ತಲೆಬುರುಡೆ ಹಾಗೂ ಆ ಕಬ್ಬಿಣದ ಸರಳನ್ನು ಹಾರ್ವರ್ಡ್ ವೈದ್ಯಕೀಯ ವಿದ್ಯಾಲಯಕ್ಕೆ ಕೊಡುಗೆಯಾಗಿ ನೀಡಿದರು.

ಮಿದುಳು

ಈಜಿಪ್ಷಿಯನ್ನರು ಮಿದುಳೊಂದು 'ಕೆಲಸವಿಲ್ಲದ' ಅಂಗ ಎಂದು ಬಗೆದರು. ಶವಸಂಸ್ಕಾರವನ್ನು ಮಾಡುವಾಗ, ಲೋಹದ ಕೊಕ್ಕೆಯನ್ನು ಮೂಗಿನ ಮೂಲಕ ತೂರಿಸಿ, ಮಿದುಳನ್ನು ಹೆರೆದು ಹೆರೆದು ಹೊರಗೆಸೆಯುತ್ತಿದ್ದರು. ಹಾಗಾಗಿ ಈಜಿಪ್ಟಿನ ಯಾವ ಮಮ್ಮಿಯ ತಲೆಯಲ್ಲೂ ಮಿದುಳಿಲ್ಲ. ಗ್ರೀಕರು ಮಿದುಳೊಂದು 'ಹವಾನಿಯಂತ್ರಿತ' ಅಂಗ. ದೇಹದ ಉಷ್ಣತೆಯನ್ನು ತಂಪಾಗಿಡುತ್ತದೆ ಎಂದರು. ಉಳಿದವರು ಇದೊಂದು 'ಮಾಂಸದ ಮುದ್ದೆ' ಎಂದು ಹಳಿದರು. ಗೇಜ್ ಪ್ರಕರಣವು ಬೆಳಕಿಗೆ ಬರುತ್ತಿದ್ದ ಹಾಗೆ, ಮಿದುಳಿನ ರಚನೆ ಹಾಗೂ ಕಾರ್ಯದ ಬಗ್ಗೆ ಹೊಸ ಚಿಂತನೆಗಳು ಆರಂಭವಾದವು. ಅಂದಿನ ವಿಜ್ಞಾನಿಗಳಲ್ಲಿ ಎರಡು ಅಭಿಮತಗಳಿದ್ದವು. ಸಾಂಪ್ರದಾಯಿಕ ವಿಜ್ಞಾನಿಗಳು ಇಡೀ ಮಿದುಳು ಒಂದು ಮುದ್ದೆ, ಮನಸ್ಸು ಇಡೀ ಮಿದುಳಲ್ಲಿ ವ್ಯಾಪಿಸಿರುತ್ತದೆ ಎಂದು ಭಾವಿಸಿದರು. ಆಧುನಿಕ ವಿಜ್ಞಾನಿಗಳು, ಮಿದುಳು ಏಕರೂಪದ ರಚನೆಯಲ್ಲ; ಇದರಲ್ಲಿ ವಿವಿಧ ಭಾಗಗಳಿವೆ; ಒಂದೊಂದು ಭಾಗವು ಒಂದೊಂದು ರೀತಿಯ ಕೆಲಸವನ್ನು ಮಾಡುತ್ತದೆ ಎಂದರು.

ಮಿದುಳಿನ ಮುಂಭಾಗದಲ್ಲಿರುವ ಲಲಾಟಹಾಲೆಯನ್ನು 'ಸೈಲೆಂಟ್ ಏರಿಯ' ಎಂದು ಕರೆಯುತ್ತಿದ್ದರು. ಏಕೆಂದರೆ ಆ ಭಾಗವು ಏನು ಕೆಲಸವನ್ನು ಮಾಡುತ್ತದೆ ಎಂದು ಯಾರಿಗೂ ತಿಳಿದಿರಲಿಲ್ಲ. ಗೇಜ್ ಪ್ರಕರಣದಿಂದ ಲಲಾಟಹಾಲೆಯು ವ್ಯಕ್ತಿಯ ವ್ಯಕ್ತಿತ್ವ, ಸಕಾಲದಲ್ಲಿ ಸೂಕ್ತ ತೀರ್ಮಾನಗಳಲ್ಲಿ ತೆಗೆದುಕೊಳ್ಳುವ ಸಾಮರ್ಥ್ಯ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತದೆ ಎನ್ನುವುದು ತಿಳಿದುಬಂದಿತು. ಗೇಜ್‌ನ ಬುದ್ಧಿವಂತಿಕೆಯು ಮೊದಲಿನ ಹಾಗೆಯೇ ಇತ್ತು. ಆದರೆ ಅವನ ವರ್ತನೆಯಲ್ಲಿ ಮಾತ್ರ ವಿಪರೀತ ವ್ಯತ್ಯಾಸಗಳು ಕಂಡುಬಂದಿದ್ದವು. ಎಂ.ಅಲ್ಲನ್ ಸ್ಟಾರ್ (1854-1932) ಮತ್ತು ವಿಲಿಯಂ ಮ್ಯಾಕ್‌ಈವನ್ (1848-1924) ಆರಂಭಿಕ ಮಿದುಳಿನ ಶಸ್ತ್ರಚಿಕಿತ್ಸೆಗಳನ್ನು ನಡೆಸಲು ಗೇಜ್ ಪ್ರಕರಣವು ಪ್ರೇರಣೆಯನ್ನು ನೀಡಿತು. ಮಿದುಳಿನ ಯಾವ ಹಾಲೆಯು ಯಾವ ಕೆಲಸವನ್ನು ಮಾಡುತ್ತದೆ, ಮಿದುಳಿನಲ್ಲಿರುವ ಗಂತಿಯನ್ನು ಇಲ್ಲವೇ ಕೀವುಗುಳ್ಳೆಯನ್ನು ಛೇದಿಸಬೇಕಾದರೆ ಯಾವ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಎಂಬ ತಿಳಿವು ವೈದ್ಯರಿಗೆ ದೊರೆಯಿತು. ಈಗ ಮಿದುಳಿನ ಸ್ಕ್ಯಾನಿಂಗ್ ಯಂತ್ರಗಳಿರುವ ಕಾರಣ, ಶಸ್ತ್ರಚಿಕಿತ್ಸೆಯು ಸುಲಭವಾಗಿ ನಡೆಯುತ್ತಿದೆ. ಆದರೆ ನಮ್ಮೆಲ್ಲರ ಕುತೂಹಲವನ್ನು ಕೆರಳಿಸಿರುವುದು ಮಿದುಳ ಸುರೂಪಿಕೆ ಅಥವ ನ್ಯೂರೋಪ್ಲಾಸ್ಟಿಸಿಟಿ. ಅದರ ಬಗ್ಗೆ ಇಂದಿಗೂ ಅಧ್ಯಯನಗಳು ನಡೆಯುತ್ತಿವೆ.

ವಿಷವನ್ನು ಕಳೆಯೋಣ

● ವಿದ್ಯಾಶಂಕರ ಶರ್ಮ, ಬೆಂಗಳೂರು

ಹಾವಿನ ವಿಷವು ಅಪಾಯಕಾರಿ ಎಂಬುದು ನಮಗೆಲ್ಲ ಗೊತ್ತಿರುವ ಸಂಗತಿಯೇ ಆಗಿದೆ. ಹಾವುಗಳನ್ನು ಕಂಡಾಗ ನಾವು ದೂರವಿರಲು ಪ್ರಯತ್ನಿಸುತ್ತೇವೆ. ಹಾವಿನ ವಿಷವು ಏರಿದರೆ ಅದು ನಮ್ಮ ಪ್ರಾಣಕ್ಕೆ ಕುತ್ತು ತರುತ್ತದೆ. ಕಾರ್ಕೋಟಕ ಹಾವಿನ ವಿಷವು ಎಲ್ಲಕ್ಕಿಂತ ಹೆಚ್ಚು ಭಯವನ್ನು ತರುತ್ತದೆ. ಪುರಾಣದಲ್ಲಿ ಬರುವ ಕಾರ್ಕೋಟಕದ ಕತೆಯು ಬಲು ರೋಚಕವಾಗಿದೆ. ಕಾರ್ಕೋಟಕನೆಂಬ ಸರ್ಪವು ಒಮ್ಮೆ ನಾರದರಿಗೆ ವಂಚಿಸಿತಂತೆ. ಆಗ ನಾರದರು ಅದಕ್ಕೆ ಚಲನಾರಹಿತನಾಗಿ ಬಿದ್ದಿರು, ಯಾವಾಗ ನಳ ಮಹಾರಾಜನು ಬಂದು ನಿನ್ನನ್ನು ಆಚೆ ಹಾಕುವನೋ ಆಗ ನಿನಗೆ ಶಾಪ ವಿಮೋಚನೆಯಾಗುವುದು ಎಂದು ಶಾಪವಿತ್ತರಂತೆ. ಮುಂದೆ ಕಾರ್ಕೋಟಕನು ಕಾಡ್ಗಿಚ್ಚಿಗೆ ಸಿಕ್ಕಿದಾಗ, ನಳ ಮಹಾರಾಜನ ಸಹಾಯವನ್ನು ಯಾಚಿಸಿದನು. ನಳ ಮಹಾರಾಜನು ತನ್ನ ಸಮೀಪ ಬಂದಾಗ ಕಾರ್ಕೋಟಕನು ಅಂಗುಷ್ಠ ಮಾತ್ರದ ಆಕಾರವನ್ನು ತಳೆದನು. ನಳ ಮಹಾರಾಜನು ತನ್ನನ್ನು ತೆಗೆದುಕೊಂಡು ಹೋಗುವಾಗ, ಅವನಿಗೆ ಹೆಜ್ಜೆಯನ್ನು ಎಣಿಸುತ್ತ ಹೋಗಲು ಹೇಳಿದನು. ನಳ ಮಹಾರಾಜನು, ಏಕಂ, ದ್ವಿ ಎಂದು ಎಣಿಸಿ ದಶ ಎಂದು ಹತ್ತನೆಯ ಹಜ್ಜೆ ಇಡುವಾಗ, ಕಾರ್ಕೋಟಕನು ಅವನನ್ನು ಕಚ್ಚಿದನು. ಇದರಿಂದ ನಳನ ದೇಹವು ವಿಕಾರವಾಯಿತು. ಆಗ ಕಾರ್ಕೋಟಕನು ನಳನಿಗೆ, ''ನನ್ನ ವಿಷವು ನಿನ್ನ ಒಳಗಿರುವ ಕಲಿಗೆ ನೋವು ಕೊಡುವುದು ಮತ್ತು ನೀನು ನಳ ಮಹಾರಾಜ ಎಂದು ಯಾರಿಗೂ ಗೊತ್ತಾಗದಿರಲಿ ಎಂದು ಹೀಗೆ ಮಾಡಿದೆನು'' ಎಂದನು. ಕಾರ್ಕೋಟಕನು ನಳನಿಗೆ ಎರಡು ಉಡುಗೆಗಳನ್ನು ಕೊಟ್ಟು, ''ಇವುಗಳನ್ನು ಧರಿಸಿದಾಗ ನಿನಗೆ ಮೊದಲ ರೂಪವೇ ಬರುವುದು'' ಎಂದನು. ಈ ರೀತಿಯಲ್ಲಿ ಕಾರ್ಕೋಟಕನು ತನ್ನ ಶಾಪವನ್ನು ವಿಮೋಚನೆ ಮಾಡಿಕೊಂಡನು. ಇದೇ ಕಾರ್ಕೋಟಕನೆ ಕದ್ರು ಮತ್ತು ವಿನುತೆಯರ ಸ್ಪರ್ಧೆಯಲ್ಲಿ ಉಚ್ಚೈಶ್ರವಸ್ಸು ಎಂಬ ಕುದುರೆಯ ಬಾಲವು ಕಪ್ಪಾಗಿ ಕಾಣುವಂತೆ ಮಾಡಿದವನು. ಈ ಕಾರಣಕ್ಕಾಗಿಯೇ, ಕಾರ್ಕೋಟಕ ಎಂಬ ಶಬ್ದವು ನಮ್ಮೊಳಗೆ ಒಂದು ರೀತಿಯ ಅಸಮಾಧಾನದ ಭಾವವನ್ನು ಹುಟ್ಟಿಸುವುದು.

ಹಾವಿನ ವಿಷ ಏರಿದಾಗ, ಸಕಾಲಿಕ ಚಿಕಿತ್ಸೆಯಿಂದ, ಎಚ್ಚರಿಕೆಯ ನಡೆಯಿಂದ ನಮ್ಮನ್ನು ಪಾರುಮಾಡಿಕೊಳ್ಳಬಲ್ಲೆವು. ಆದರೆ ಮನದ ಮಡುವಿನಲ್ಲಿ ಹುದುಗಿರುವ ಕಾರ್ಕೋಟಕದ ವಿಷದಿಂದ ಹೊರಬರುವುದು ಬಲು ಸವಾಲಿನ ಬಾಬತ್ತಾಗಿದೆ. ನಕಾರಾತ್ಮಕ ಚಿಂತನೆಗಳು, ರಾಗ, ದ್ವೇಷ, ಮೋಹ,ಅಹಂಕಾರಗಳು ನಮ್ಮೊಳಗೆ ಅಡಗಿರುವ ವಿಷಸರ್ಪಗಳು. ಅವುಗಳನ್ನು ಪ್ರಯತ್ನಪೂರ್ವಕವಾಗಿ ಪಳಗಿಸದಿದ್ದರೆ ಪತನ ನಿಶ್ಚಿತ. ಹಾವಿನ ವಿಷವು ನಮ್ಮನ್ನು ಮಾತ್ರ ಅಪಾಯಕ್ಕೆ ಸಿಕ್ಕಿಸಬಹುದು, ಆದರೆ ಮನದ ವಿಷವು ಸಮಾಜವನ್ನೇ ಆವರಿಸಬಹುದು. ಸಮಾಜವು ವಿಷಪೂರಿತವಾದರೆ, ಅದು ಒಂದು ರಾಜ್ಯದ, ಒಂದು ದೇಶದ ಮಾನಸಿಕ ಸ್ವಾಸ್ಥ್ಯವನ್ನೇ ಹದಗೆಡಿಸಬಹುದು.

ನಮ್ಮ ಮನಸ್ಸನ್ನು ಶುದ್ಧೀಕರಿಸುವ ಕಾಯಕವು ನಿರಂತರವಾಗಿ ಆಗಬೇಕು. ಆರೋಗ್ಯಕರ ಚಿಂತನೆಗಳು, ಹವ್ಯಾಸಗಳು, ಸಜ್ಜನರ ಸಂಗ, ದೇವರಲ್ಲಿ ಶರಣಾಗತಿ ಮುಂತಾದವುಗಳಿಂದ ನಮ್ಮ ಯೋಚನೆಗಳು ಸಾತ್ವಿಕ ಪ್ರಖರತೆಯನ್ನು ಪಡೆಯುತ್ತವೆ. ಗೀತೆಯಲ್ಲಿ ಭಗವಂತನು ಹೇಳುವ ಮಾತುಗಳು ಬಲು ಪ್ರಸ್ತುತವಾಗುತ್ತವೆ- 'ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ'. ಮನಸ್ಸಿನ ಹೊಯ್ದಾಟದ ನಿಯಂತ್ರಣಕ್ಕೆ ನಮ್ಮ ಆಹಾರ, ವಿಹಾರ, ಕೆಲಸಗಳು, ದಿನಚರಿ ಎಲ್ಲವೂ ಯೋಗ್ಯವಾದ ಪ್ರಮಾಣದಲ್ಲಿ ಇರಬೇಕು ಎಂಬುದು ಭಗವಂತನ ಅಭಿಮತ. ಇತಿಮಿತಿಯಲ್ಲಿ ನಮ್ಮ ಎಲ್ಲ ವರ್ತನೆಗಳೂ ಇದ್ದರೆ, ಕುಣಿಯುವ ಮನಸ್ಸು ಸ್ಥಿಮಿತಕ್ಕೆ ಬರುವುದು. ಬಾಹ್ಯ ಇಂದ್ರಿಯಗಳಿಂದಲೇ ನಾವು ವ್ಯವಹರಿಸುವುದರಿಂದ, ಅವುಗಳ ನಿಯಂತ್ರಣ ಮನದ ಲಗಾಮಿಗೆ ಪೂರಕವಾಗುತ್ತದೆ. ನಮ್ಮ ಆಲೋಚನೆಗಳು ವಿಷಮುಕ್ತವಾಗಿದ್ದರೆ ಅದು ನಮಗೂ ಮತ್ತು ಪರರಿಗೂ ಹಿತಕಾರಿಯಾಗಬಲ್ಲವು. ಸದಾಕಾಲ ಸಂತಸದ ಬೆನ್ನುಹತ್ತುವ ಮನುಷ್ಯ, ಅದರ ಸಾಧನೆಗಾಗಿ ಏನೂ ಮಾಡಬಲ್ಲ. ಅಂಥ ಧಾವಂತದಲ್ಲಿ ಎಡವುವುದು ಸಹಜವಾಗಿದೆ. ಎಡವಿದ ನಂತರ ಎಚ್ಚರಗೊಂಡರೆ, ಬಯಕೆಯೆಂಬ ಕಾರ್ಕೋಟಕದ ಬಿಗಿಹಿಡಿತದಿಂದ ತಪ್ಪಿಸಿಕೊಳ್ಳಬಲ್ಲ. ನಮ್ಮ ನಡೆಗಳನ್ನು ನಿರಂತರವಾಗಿ ಅವಲೋಕನ ಮಾಡಿಕೊಂಡರೆ ನಮ್ಮ ದಾರಿ ಸುಗಮವಾಗುವುದರಲ್ಲಿ ಸಂಶಯವಿಲ್ಲ.

ಬದುಕು ನಾವಂದುಕೊಂಡಂತಿಲ್ಲ

● ಶಂಕರಾನಂದ ಹೆಬ್ಬಾಳ

ಹುಟ್ಟು ಉಚಿತ, ಸಾವು ಖಚಿತ' ಎಂಬ ಗಾದೆಮಾತಿನಂತೆ ಈ ಹುಟ್ಟು-ಸಾವುಗಳ ಮಧ್ಯದಲ್ಲಿ ಜೀವನದ ಅರ್ಥ ಅಡಗಿಕೊಂಡಿದೆ. ಸೃಷ್ಟಿಯ ಕೋಟಿ ಜೀವರಾಶಿಗಳಲ್ಲಿ ಮಾನವನ ಜೀವನವು ಬಲು ವಿಶೇಷವಾಗಿದೆ. ಹುಟ್ಟಿ ಬಂದ ಮೇಲೆ ನಾವು ಏನೇನೋ ಆಗಬೇಕೆಂದುಕೊಂಡು ಇನ್ನೇನೋ ಆಗಿಬಿಡುತ್ತೇವೆ. ಅಷ್ಟಕ್ಕೂ ಇದೆಲ್ಲ ನಾವಂದುಕೊಂಡಂತೆ ನಡೆದಿದ್ದರೆ ನಾವೇ ಎರಡನೇ ಬ್ರಹ್ಮನಾಗಿ ಇರುವುದರಲ್ಲಿ ಎರಡು ಮಾತಿಲ್ಲ.

ಎಲ್ಲೆಲ್ಲೋ ಇದ್ದು ಜಗತ್ತಿಗೆ ಮಾದರಿಯಾದವರ ಕಥೆಗಳನ್ನು ಕೇಳಿದ್ದೇವೆ, ಓದಿದ್ದೇವೆ. ಗುಡಿಸಲಿನಲ್ಲಿ ಹುಟ್ಟಿದ ಪ್ರತಿಭೆಗಳು ಜಗತ್ತನ್ನೇ ಆಳಿದ ನಿದರ್ಶನಗಳು ಸಾಕಷ್ಟಿವೆ. ಎಲ್ಲರ ಬದುಕೂ ಹೀಗೆಯೇ ಎಂದು ಊಹೆ ಮಾಡಲು ಅಸಾಧ್ಯ. ಈ ಜಗತ್ತಿನಲ್ಲಿ ಬದುಕಲು ಬೇಕಾದದ್ದು ತಾಳ್ಮೆ. ವಿಜ್ಞಾನಿ ಥಾಮಸ್ ಅಲ್ವಾ ಎಡಿಸನ್ ಶಾಲೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸದೆ ತಬ್ಬಿಬ್ಬಾದ ಶಿಕ್ಷಕರು, 'ಈ ಮಗುವಿಗೆ ತಲೆಕೆಟ್ಟಿದೆ' ಎಂದು ಹೇಳಿ ಶಾಲೆಯಿಂದಲೇ ಹೊರದಬ್ಬಿದರು. ಆದರೆ ತಾಯಿಯ ಮಾರ್ಗದರ್ಶನದಿಂದ ಮುಂದೆ ಆತ ಮನೆಪಾಠದಿಂದ ಶ್ರೇಷ್ಠ ವಿಜ್ಞಾನಿಯಾಗಿ ಬಲ್ಬ ಕಂಡುಹಿಡಿದನು. ಆತನು ತನ್ನ ಬದುಕು ಇಷ್ಟೇ ಎಂದುಕೊಂಡಿದ್ದರೆ ಇವತ್ತು ನಾವೆಲ್ಲ ಕತ್ತಲೆಯಲ್ಲಿ ಇರಬೇಕಾಗಿತ್ತು. ಹೀಗೆ ಬದುಕು ಅವರಂದುಕೊಂಡಂತೆ ಇರುವುದಿಲ್ಲ.

ಇನ್ನು, ಒಬ್ಬೊಬ್ಬರ ಬದುಕು ಒಂದೊಂದು ರೀತಿ. ಒಬ್ಬರಿಗೆ ಕೈತುಂಬಾ ಹಣವಿದ್ದರೆ ಇನ್ನೊಬ್ಬರಿಗೆ ಪುಡಿಗಾಸಿಗಾಗಿ ಬೆವರು ಸುರಿಸುವ ಪ್ರಮೇಯವಿದೆ. ಕೆಲವರಿಗೆ ಕಾರು ಬಂಗ್ಲೆ ಐಷಾರಾಮಿ ಜೀವನ ಇದ್ದರೆ, ಕೆಲವರಿಗೆ ಕಾಲಿಗೆ ಹಾಕಲು ಚಪ್ಪಲಿಯಿಲ್ಲದೆ ನಡೆಯುವುದನ್ನು ಬದುಕು ಕಲಿಸಿದೆ. 'ಜೀವನವೇ ಒಂದು ಪಾಠಶಾಲೆ, ನಾವೆಲ್ಲಾ ವಿದ್ಯಾರ್ಥಿಗಳು' ಎಂಬ ಹಿರಿಯರ ಹಿತನುಡಿ ಸುಳ್ಳಾಗದು.

ನಾವು ಹಾಗೆ ಹೀಗೆ ಎಂದೆಲ್ಲ ಅಂದುಕೊಂಡು ಬಡಾಯಿ ಕೊಚ್ಚಿಕೊಂಡರೆ ನಡೆಯದು. ಬ್ರಹ್ಮ ಬರೆದ ಹಣೆಬರಹ ಹೀಗೇ ಇರಬಹುದೆಂದು ಗೊತ್ತಾಗುವುದೇ ಇಲ್ಲ. ಇದು ಕೇವಲ ಮೂರು ದಿನವಷ್ಟೇ- ಹುಟ್ಟಿಗೆ ಒಂದು ದಿನ, ಸಾವಿಗೆ ಒಂದು ದಿನ, ಮಧ್ಯದಲ್ಲಿ ಬದುಕಿಗೆ ಒಂದು ದಿನ- ಇವುಗಳಲ್ಲಿ ನಮ್ಮ ಸ್ವ ಪ್ರತಿಷ್ಠೆ, ಸ್ವಾರ್ಥ, ಅಹಂ, ಅಸೂಯೆ ಇವೆಲ್ಲವುಗಳಿಂದ ದೂರವಾಗಿ ಜೀವನದ ಅರ್ಥ ತಿಳಿಯುವ ಮುನ್ನವೇ ನಾವು ಈ ಲೋಕವನ್ನು ತೊರೆದಿರುತ್ತೇವೆ. 'ತಿರುಗಿ ನೋಡದೆ ಹೋಗೋ ದಿನ, ನಿನಗೆ ಉಳಿಯೊದು ಮೂರು ದಿನ, ಈ ಸತ್ಯ ನಿನಗೆ ತಿಳಿಯೋ ದಿನ, ಕಟ್ಟುವೆ ಗಂಟು ಮೂಟೇನ' ಎಂಬ 'ರಕ್ತಕಣ್ಣೀರು' ಚಿತ್ರದ ಅರ್ಥಪೂರ್ಣ ಗೀತೆಯು ವಾಸ್ತವಕ್ಕೆ ಕನ್ನಡಿ ಹಿಡಿಯುತ್ತದೆ...

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಅಂತ್ಯ ಅಥವಾ ಕೊನೆ ಎನ್ನುವುದನ್ನು ಹೀಗೆ ಹೇಳಬಹುದು (5)
4. ಕಪ್ಪು ಹಲಗೆಯ ಮೇಲೆ ಇದರಿಂದ ಬರೆಯಿರಿ (3)
6. ಸಣ್ಣದಾದ ಓಣಿ ಅಥವಾ ಕೇರಿ (2)
7. ಹೂವಿನ ಎಸಳು (3)
8. ಮರದ ಕೆಲಸ ಮಾಡುವವನು (3)
9. ಮೀನು ಹಿಡಿಯುವ ಕೊಕ್ಕೆ (2)
10. ಧಾನ್ಯ ಹಸನುಮಾಡಲು ಬಳಸುವ ಸಾಧನ (3)
11. ಯಾವುದೇ ಕೆಲಸ ಮಾಡುವಾಗ ಇರಬೇಕಾದ ಲಕ್ಷ್ಯ (2)
13. ರೇಖೆ ಅಥವಾ ಗೀಟು (2)
16. ಪುಸ್ತಕ, ಪತ್ರಿಕೆ ಓದುವವನು (3)
17. ಮತ್ತೊಂದು ಬಣ್ಣ (2)
18. ಕೋಟೆಯ ಮೇಲಿನ ಕೊತ್ತಲ (3)
19. ಧಾವಿಸುವಾಗಿನ ಆತುರದಲ್ಲಿ ಅಂತ್ಯಾಕ್ಷರ ದೀರ್ಘವಾಗಿದೆ (3)
21. ತಲೆಗೇರಬಾರದು ಸೊಕ್ಕು (2)
24. ತಿರುಗಿ ಬಂದಿರುವ ಮರದ ತುಂಡು (3)
25. ಸಾವಕಾಶವಾಗಿ ಸ್ವಪ್ನಗಳನ್ನು ಕಾಣುವವನು (5)

ಮೇಲಿಂದ ಕೆಳಕ್ಕೆ

1. ಹಾದಿ, ದಾರಿ (2)
2. ವಿವಿಧ ವಸ್ತುಗಳನ್ನು ಮಾರುವ ವ್ಯಾಪಾರಿ (3)
3. ನಗುನಗುತ್ತಾ ತಂದ ಒಡವೆ (2)
5. ಹತೋಟಿಗೆ ತರು ಎಂದರ್ಥ (4)
7. ವಿಷಯವೊಂದರಲ್ಲಿ ಪರಿಣತಿ ಹೊಂದು (3)
8. ಸಾಮಾನ್ಯವಾಗಿ ಇದು ಮರದ ದೊಣ್ಣೆ (3)
10. ಜುಳುಜುಳು ಹರಿಯುವ ನೀರಿನಲ್ಲಿ ಮಾಡಿದ ಸ್ನಾನ (3)
12. ರೀತಿಯೊಂದಿಗೆ ಬಂದಿರುವ ಜೋಡಿಪದ (3)
14. ಕಮಲದ ಹೂವು ತಲೆಕೆಳಗಾಗಿ ಬಂದಿದೆ (3)
15. ಬಾಣಗಳನ್ನಿಡುವ ಚೀಲ (4)
20. ಮಂದಿಗೆ ನಮಸ್ಕರಿಸು (3)
22. ಕರಾವಳಿಯ ಜಿಲ್ಲೆಯೊಂದರ ಹ್ರಸ್ವರೂಪ (2)
23. ಒಳಗೆ, ಹೊರಗೆ ಹೋಗಲು ಇರುವ ಬಾಗಿಲು (2)

ಸರಿಯುತ್ತರಗಳು

ಗುರುಕೃಪೆ ಇದ್ದಾಗ ಎಂಥ ನಕಾರಾತ್ಮಕ ಶಕ್ತಿಯೂ ಗೆಲ್ಲಲಾಗುವುದಿಲ್ಲ

ಒಂದೊಳ್ಳೆ ಮಾತು
ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಶ್ರೀಧರ ಸ್ವಾಮಿಗಳು ಆಗ ಸಜ್ಜನಗಢದಲ್ಲಿದ್ದು, ಸಮರ್ಥ ರಾಮದಾಸರ ಸಮಾಧಿಗೆ ಅತ್ಯಂತ ನಿಷ್ಠೆಯಿಂದ ಸೇವೆ ಮಾಡುತ್ತಿದ್ದರು. ಅದೇ ಆಶ್ರಮದಲ್ಲಿದ್ದ ಒಬ್ಬ ವಾಮಾಚಾರಿಗೆ ಶ್ರೀಧರ ಸ್ವಾಮಿಗಳನ್ನು ಕಂಡರೆ ಆಗುತ್ತಿರಲಿಲ್ಲ. ಏಕೆಂದರೆ ಇಷ್ಟು ಚಿಕ್ಕ ಯುವಕನಿಗೆ ಬಂದವರೆಲ್ಲ ಪಾದ ಮುಟ್ಟಿ ನಮಸ್ಕಾರ ಮಾಡುತ್ತಾರೆ, ಗೌರವ ಕೊಡುತ್ತಾರೆ; ತನ್ನನ್ನು ಯಾರೂ ನೋಡುವುದಿಲ್ಲ ಎಂಬ ಕೋಪ ಅವನನ್ನು ಆವರಿಸಿತ್ತು. ಆದರೆ ಶ್ರೀಧರರು ಆಶ್ರಮದ ಹಲವು ಕೆಲಸಗಳ ಜತೆಗೆ ಆ ವಾಮಾಚಾರಿಯು ಹೇಳುವ ಕೆಲಸಗಳನ್ನೂ ಶ್ರದ್ಧೆಯಿಂದ ಮಾಡುತ್ತಿದ್ದರು.

ಶ್ರೀಧರ ಸ್ವಾಮಿಗಳೇ ಹಾಗೆ, ಒಂದು ಕ್ಷಣವೂ ಯಾರ ಮೇಲೂ ಕೋಪಿಸಿಕೊಂಡವರಲ್ಲ. ಅವರ ಈ ಸಾಧನೆಯನ್ನು ನೋಡಿದವರೆಲ್ಲಾ, 'ಈ ಹದಿಹರೆಯದ ಯುವಕ ಕೇವಲ ಲಂಗೋಟಿಯಲ್ಲಿ (ಕೌಪಿನ) ಇರುತ್ತಾನೆ, ಅದೆಷ್ಟು ಬದ್ಧನಾಗಿ ಬ್ರಹ್ಮಚರ್ಯ ಪಾಲನೆ ಮಾಡುತ್ತಾನೆ, ರಾತ್ರಿ ಹಾಸಿ-ಹೊದೆಯದೆ ಬರೀ ನೆಲದ ಮೇಲೆ ಮಲಗುತ್ತಾನೆ, ಒಂದು ದಿನವೂ ತಪ್ಪದೇ ಸಮರ್ಥ ರಾಮದಾಸರ ಸಮಾಧಿಗೆ ಸೇವೆ ಮಾಡುತ್ತಾನೆ' ಎನ್ನುತ್ತಿದ್ದರು. ಆಶ್ರಮದಲ್ಲಿರುವ ಎಲ್ಲರೂ ಹೀಗೆ ಶ್ರೀಧರರೆಡೆಗೆ ತೋರುತ್ತಿದ್ದ ಇಂಥ ಮಮತೆ, ಪ್ರೀತಿಯನ್ನು ಕಂಡು ಆ ವಾಮಾಚಾರಿಯು ಶ್ರೀಧರರ ಮೇಲೆ ಅಸೂಯೆ ಪಡುತ್ತಿದ್ದ, ವಿನಾಕಾರಣ ಕೋಪ ತೋರುತ್ತಿದ್ದ. ಏನಾದರೂ ಮಾಡಿ ಇವರು ಮಾಡುವ ಎಲ್ಲಾ ಸಾಧನೆಯನ್ನು ನಿಲ್ಲಿಸಿಬಿಡಬೇಕು ಎಂದು ಸಂಚುಹೂಡಿ, ಒಂದು ದಿನ ಶ್ರೀಧರರ ಮೇಲೆ ವಾಮಾಚಾರ ಪ್ರಯೋಗ ಮಾಡಿದ. ಅಂದು ಶ್ರೀಧರ ಸ್ವಾಮಿಗಳು ಎಂದಿನಂತೆ ರಾತ್ರಿ ನೆಲದ ಮೇಲೆ ಮಲಗಿದ್ದಾಗ, ಒಂದು ಕಪ್ಪನೆ ಆಕೃತಿಯು ಅವರ ಮುಂದೆ ಬಂದು ನಿಂತಿತು, ಶ್ರೀಧರರನ್ನು ನುಂಗುವಂತೆ ಹಾತೊರೆಯಿತು. ಅದನ್ನು ನೋಡಿದ ಶ್ರೀಧರರು ಆತಂಕ ಪಡದೆ 'ಶ್ರೀರಾಮ ಜಯರಾಮ ಶ್ರೀ ರಾಮ ಜಯರಾಮ' ಎಂದು ರಾಮನಾಮ ಸ್ಮರಣೆಯನ್ನು ಮಾಡಿದರು. ಅವರ ಉಸಿರು ಉಸಿರಿನಲ್ಲೂ ರಾಮನಾಮ ಸ್ಮರಣೆ ತುಂಬಿತ್ತು. ಆ ಕಪ್ಪು ಆಕೃತಿಯ ಭೂತ ಮತ್ತೆ ಕಾಣಲಿಲ್ಲ.

ಮರುದಿನ ಎಂದಿನಂತೆ ಶ್ರೀಧರರು ಮುಂಜಾನೆ ಎದ್ದು ತಮ್ಮ ನಿತ್ಯಕರ್ಮದಲ್ಲಿ ತೊಡಗಿರುವಾಗ ವಾಮಾಚಾರಿಯು ಶ್ರೀಧರರ ಬಳಿ ಬಂದು ಅವರ ಕಾಲಿಗೆ ನಮಸ್ಕರಿಸಿ, ''ನನ್ನನ್ನು ಕ್ಷಮಿಸಿಬಿಡು'' ಎಂದು ಕೈ ಮುಗಿದು ಬೇಡಿದ. ಶ್ರೀಧರರಿಗೆ ಆಶ್ಚರ್ಯವಾಯಿತು. ಇಲ್ಲಿಯ ತನಕ ಈ ಮನುಷ್ಯ ನನ್ನ ಮೇಲೆ ದಬ್ಬಾಳಿಕೆ ಮಾಡಿ ಹೆದರಿಸಿ ತನ್ನ ವೈಯುಕ್ತಿಕ ಕೆಲಸ ಮಾಡಿಸಿಕೊಳ್ಳುತ್ತಿದ್ದ, ಈ ದಿನ ಏಕೆ ಈ ರೀತಿ ಕ್ಷಮೆ ಬೇಡುತ್ತಿದ್ದಾನೆ ಎಂದೆನಿಸಿತು ಅವರಿಗೆ. ಆಗ ಶಾಂತಮೂರ್ತಿ ಶ್ರೀಧರರು, ''ಯಾಕಪ್ಪ ಏನಾಯ್ತು?'' ಎಂದು ಕೇಳಿದರು. ಆತ ಹೇಳಿದ- ''ನಾನು ಏನು ಹೇಳಲಿ, ನಾನು ಮಾಡಿದ ಮಣ್ಣು ತಿನ್ನುವ ಕೆಲಸಕ್ಕೆ, ನನ್ನ ಕನಸಿನಲ್ಲಿ ಸಮರ್ಥ ರಾಮದಾಸರು ಬಂದು ಚಾವಟಿಯಿಂದ ಹೊಡೆದು, 'ನನ್ನ ಪ್ರೀತಿಯ ಶಿಷ್ಯ ಶ್ರೀಧರನ ಸಾಧನೆಗೆ ತೊಂದರೆ ಮಾಡಲು ವಾಮಾಚಾರ ಮಾಡಿದ್ದೀಯಾ?' ಎಂದು ಹೇಳುತ್ತಾ ಮೈ ಮೇಲೆ ಬಾಸುಂಡೆ ಬರುವಂತೆ ಹೊಡೆದಿದ್ದಾರೆ ನೋಡು'' ಎಂದು ತೋರಿಸಿದ. ವಾಮಾಚಾರಿಯ ಮೈಮೇಲೆಲ್ಲಾ ಕೆಂಪಗೆ ಬಾಸುಂಡೆ ಬಂದಿತ್ತು, ಆತ ಉರಿ ತಡೆಯಲಾಗದೆ ಒದ್ದಾಡುತ್ತಾ, ''ದಯವಿಟ್ಟು ನನ್ನನ್ನು ಕ್ಷಮಿಸು. ನೀನು ಕ್ಷಮಿಸಿದರೆ ನಿನ್ನ ಗುರುಗಳು ನನ್ನನ್ನು ಹೊಡೆಯುವುದಿಲ್ಲ. ಇನ್ನೆಂದೂ ನಿನ್ನ ತಂಟೆಗೆ ಬರುವುದಿಲ್ಲ, ಇದೊಂದು ಸಲ ಕ್ಷಮಿಸಿಬಿಡು'' ಎಂದು ಹೇಳಿದಾಗ, ಶ್ರೀಧರರಿಗೆ ಆಶ್ಚರ್ಯವಾಯಿತು. ಮನಸ್ಸಿನಲ್ಲೇ ಸಮರ್ಥ ರಾಮದಾಸರನ್ನು ಪ್ರಾರ್ಥಿಸಿ ಕೈ ಮುಗಿದು, ''ಗುರುಗಳೇ ನನ್ನ ಕಷ್ಟಕ್ಕೆ ನೀವು ತೊಂದರೆ ತೆಗೆದುಕೊಂಡು ಕನಸಿನಲ್ಲಿ ಬಂದು ಆತನಿಗೆ ಶಿಕ್ಷೆ ಕೊಟ್ಟಿದ್ದೀರಿ. ಅವನನ್ನು ಕ್ಷಮಿಸಿಬಿಡಿ'' ಎಂದು ಬೇಡಿದರು. ಜೀವನದಲ್ಲಿ ಭಗವಂತನ, ತಂದೆ-ತಾಯಿಗಳ, ಗುರು-ಹಿರಿಯರ ಕಾಲು ಮುಗಿದು ನಮಸ್ಕರಿಸಿ ಸದಾ ಅವರ ಆಶೀರ್ವಾದವನ್ನು ಪಡೆಯುವುದು ಇದೇ ಕಾರಣಕ್ಕೆ. ಇಂಥವರ ಆಶೀರ್ವಾದ ನಮ್ಮ ಮೇಲಿದ್ದಾಗ ಎಂಥ ಕೆಟ್ಟ ದೃಷ್ಟಿಯಿಂದಲೂ ಅದು ನಮ್ಮನ್ನು ಕಾಪಾಡುತ್ತದೆ. ನಮ್ಮ ಏಳಿಗೆಯನ್ನು ನೋಡಿ ನಿಷ್ಕಲ್ಮಶ ಮನಸ್ಸಿನಿಂದ ಸಂತೋಷಪಟ್ಟು ನಮ್ಮನ್ನು ಆಶೀರ್ವದಿಸುವ ಜೀವಗಳು ಸದಾ ನಮ್ಮನ್ನು ಕೆಟ್ಟ ದೃಷ್ಟಿಯಿಂದ ಕಾಪಾಡುವ ಶಕ್ತಿಯನ್ನು ಕೂಡ ಹೊಂದಿರುತ್ತಾರೆ. ಇಂಥವರ ಆಶೀರ್ವಾದ ಸದಾ ನಮ್ಮನ್ನು ಕಾಯಲಿ....

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಹೈದರಾಬಾದ್‌ಗೆ ಮತ್ತೆ ಪ್ಯಾಟ್ ಕಮಿನ್ಸ್ ನಾಯಕ

ಹೈದರಾಬಾದ್: ಮುಂದಿನ ವರ್ಷದ ಐಪಿಎಲ್ ಮಿನಿ ಹರಾಜು ಪ್ರಕ್ರಿಯೆಗೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿವೆ. ಇದಕ್ಕೂ ಮುನ್ನ ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ಸತತ ಮೂರನೇ ಬಾರಿಗೆ ತಂಡವನ್ನು ಆಸ್ಟ್ರೇಲಿಯಾ ವೇಗಿ ಪ್ಯಾಟ್ ಕಮಿನ್ಸ್‌ಅವರೇ ಮುನ್ನಡೆಸಲಿದ್ದಾರೆ ಎಂದು ಫ್ರಾಂಚೈಸಿ ಮಂಗಳವಾರ ದೃಢಪಡಿಸಿದೆ. ಈ ಕುರಿತು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ತಂಡವು, ಕಮಿನ್ಸ್ ಅವರ ಚಿತ್ರಗಳನ್ನು ಹಂಚಿಕೊಂಡು, ಮತ್ತೊಮ್ಮೆ ನಾಯಕ ಎಂದು ಬರೆದುಕೊಂಡಿದೆ. ಆಸ್ಟ್ರೇಲಿಯಾಗೆ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಮತ್ತು 2023ರ ಏಕದಿನ ವಿಶ್ವಕಪ್ ಗೆಲ್ಲಿಸಿಕೊಟ್ಟ ಕಮಿನ್ಸ್ ಅವರನ್ನು 2024ರ ಐಪಿಎಲ್ ಹರಾಜಿನಲ್ಲಿ ಹೈದರಾಬಾದ್ ಫ್ರಾಂಚೈಸಿ ಬರೋಬ್ಬರಿ 20.50 ಕೋಟಿ ನೀಡಿ ಖರೀದಿಸಿ ಅವರಿಗೆ ನಾಯಕತ್ವ ಜವಾಬ್ದಾರಿ ನೀಡಿತ್ತು. ತಂಡವು ಸ್ಫೋಟಕ ಆರಂಭಿಕ ಜೋಡಿ ಅಭಿಷೇಕ್ ಶರ್ಮಾ ಮತ್ತು ಟ್ರಾವಿಸ್ ಹೆಡ್ ಅವರನ್ನು ಮುಂಬರುವ ಋತುವಿನಲ್ಲಿ ಉಳಿಸಿಕೊಂಡಿದೆ. ಆರಂಭಿಕ ಆಟಗಾರರ ಜೊತೆಗೆ ಹೆನ್ರಿಚ್ ಕ್ಲಾಸೆನ್, ಇಶಾನ್ ಕಿಶನ್, ನಿತೀಶ್ ಕುಮಾರ್ ರೆಡ್ಡಿ ಮತ್ತು ಇತರರನ್ನು ಸಹ ಉಳಿಸಿಕೊಂಡಿದೆ. ಕಳೆದ ಋತುವಿನಲ್ಲಿ ಹೈದರಾಬಾದ್ ತಂಡ ಆರು ಗೆಲುವು, ಏಳು ಸೋಲುಗಳೊಂದಿಗೆ ಆರನೇ ಸ್ಥಾನ ಗಳಿಸಿತ್ತು.

ಪಾಕಿಸ್ತಾನದ ಬಾಬರ್ ಆಜಮ್‌ಗೆ ದಂಡ

ದುಬೈ: ಶ್ರೀಲಂಕಾ ವಿರುದ್ಧ ರಾವಲ್ಪಿಂಡಿಯಲ್ಲಿ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ಔಟ್ ಆದ ವೇಳೆ ಹತಾಶೆಯಿಂದ ಬ್ಯಾಟ್‌ನಿಂದ ಸ್ಟಂಪ್‌ಗೆ ಹೊಡೆದ ಕಾರಣ ಪಾಕಿಸ್ತಾನದ ಬ್ಯಾಟಿಂಗ್ ಆಟಗಾರ ಬಾಬರ್ ಅಜಂ ಅವರಿಗೆ ಪಂದ್ಯ ಸಂಭಾವನೆಯ ಶೇ.10ರಷ್ಟು ದಂಡ ವಿಧಿಸಲಾಗಿದೆ. ಹಾಗೆಯೇ ಅವರ ಶಿಸ್ತಿನ ದಾಖಲೆಗೆ ಒಂದು ಡಿಮೆರಿಟ್ ಪಾಯಿಂಟ್ ಸೇರಿಸಲಾಗಿದೆ. ಭಾನುವಾರ ನಡೆದ ಅಂತಿಮ ಏಕದಿನ ಪಂದ್ಯದ 21ನೇ ಓವರಿನಲ್ಲಿ ವಿಕೆಟ್ ಕಳೆದುಕೊಂಡ ಬಳಿಕ ಅವರು ಮಾಡಿದ್ದರು. ಆನ್‌ಫೀಲ್ಡ್ ಅಂಪೈರ್‌ಗಳಾದ ಅಲೆಕ್ ವಾರ್ಫ್ ಮತ್ತು ರಶೀದ್ ರಿಯಾಝ್, ಮೂರನೇ ಅಂಪೈರ್ ಮತ್ತು ನಾಲ್ಕನೇ ಅಂಪೈರ್ ಅವರು ರೆಫ್ರಿಗೆ ವರದಿ ನೀಡಿದ್ದರು. ಪಾಕಿಸ್ತಾನವು ಸರಣಿಯನ್ನು 3-0 ಯಿಂದ ಗೆದ್ದುಕೊಂಡಿತ್ತು. ಬಾಬರ್ ಸರಣಿಯಲ್ಲಿ ಅತ್ಯಧಿಕ 165 ರನ್ ಗಳಿಸಿದ್ದರು, ಅದರಲ್ಲಿ ಅವರ 20ನೇ ಏಕದಿನ ಶತಕ ಸಹ ಒಳಗೊಂಡಿತ್ತು.

ರಣಜಿ: 2ನೇ ಇನ್ನಿಂಗ್ಸ್‌ನಲ್ಲೂ ಚಂಡೀಗಢದ ಬ್ಯಾಟಿಂಗ್ ವೈಫಲ್ಯ
ಮಯಾಂಕ್ ಪಡೆಗೆ ಇನ್ನಿಂಗ್ಸ್, 185 ರನ್ ಗೆಲುವು
ಜಯದೊಂದಿಗೆ ಅಗ್ರಸ್ಥಾನಕ್ಕೇರಿದ ಕರ್ನಾಟಕ

ಹುಬ್ಬಳ್ಳಿ: ಇಲ್ಲಿ ನಡೆದ ರಣಜಿ ಟ್ರೋಫಿಯ ಲೀಗ್ ಹಂತದ ಪಂದ್ಯದಲ್ಲಿ ಮಂಗಳವಾರದಂದು ಕರ್ನಾಟಕವು ತನ್ನ ಸಂಘಟಿತ ಪ್ರದರ್ಶನದ ನೆರವಿನಿಂದ ಚಂಡೀಗಢ ವಿರುದ್ಧದ ಎಲೈಟ್ ಬಿ ಗುಂಪಿನ ಪಂದ್ಯದಲ್ಲಿ ಇನ್ನಿಂಗ್ಸ್ ಹಾಗೂ 185 ರನ್ ಜಯ ದಾಖಲಿಸಿದೆ.

4 ವಿಕೆಟ್‌ಗೆ 72 ರನ್‌ಗಳಿಂದ ಮೊದಲ ಇನ್ನಿಂಗ್ಸ್ ಆರಂಭಿದ ಚಂಡೀಗಢವು ಮೂರನೇ ದಿನವೂ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ನಾಯಕ ಮನನ್ ವೋಹ್ರಾ ಅವರನ್ನು ಹೊರತುಪಡಿಸಿದರೆ, ಚಂಡೀಗಢ ತಂಡದ ಪರ ಯಾವೊಬ್ಬ ಬ್ಯಾಟರ್ ಕೂಡಾ ಸ್ಥಿರ ಪ್ರದರ್ಶನ ನೀಡಲಿಲ್ಲ. ಗೌರವ್ ಪುರಿ (32) ಮೊದಲ ಇನ್ನಿಂಗ್ಸ್‌ನಲ್ಲಿ ಕೊಂಚ ಮಟ್ಟಿಗೆ ಕರ್ನಾಟಕದ ಬೌಲರ್‌ಗಳನ್ನು ಕಾಡಿದರು. ಆದರೆ ಅವರ ಆಟದಿಂದಾಗಿ ತಂಡವನ್ನು ಫಾಲೋ ಆನ್‌ನಿಂದ ತಪ್ಪಿಸಲು ಚಂಡೀ ಗಢ ತಂಡಕ್ಕೆ ಸಾಧ್ಯವಾಗಲಿಲ್ಲ. ಕರ್ನಾಟಕದ ಸ್ಪಿನ್ ಬೌಲರ್ ಶ್ರೇಯಸ್ ಗೋಪಾಲ್ ಅವರ ಮೊನಚಾದ ದಾಳಿಯನ್ನು ಎದುರಿಸುವಲ್ಲಿ ಚಂಡೀಗಢ ತಂಡವು ಕಂಗಾಲಾಯಿತು.

ಚಂಡೀಗಢದ ಮೊದಲ ಇನ್ನಿಂಗ್ಸ್‌ನಲ್ಲಿ ಮಧ್ಯಮ ಕ್ರಮಾಂಕದ ಮನನ್ ವೋಹ್ರಾ 161 ಎಸೆತಗಳಲ್ಲಿ 12 ಬೌಂಡರಿ, 1 ಸಿಕ್ಸರ್ ಸಹಾಯದಿಂದ ಅಜೇಯ 106 ರನ್ ಬಾರಿಸಿ ಮಿಂಚಿದರು. ಆದರೆ ಇನ್ನೊಂದು ಬದಿಯಲ್ಲಿ ಪಟಪಟನೇ ವಿಕೆಟ್‌ಗಳು ಬೀಳುತ್ತಲೇ ಇದ್ದವು. ಕರ್ನಾಟಕ ಪರ ಶ್ರೇಯಸ್ 7 ವಿಕೆಟ್ ಪಡೆದು ಚಂಡೀಗಢ ತಂಡದ ಎಡೆಮುರಿ ಕಟ್ಟುವಲ್ಲಿ ಯಶಸ್ವಿಯಾದರು. ಶಿಖರ್ ಶೆಟ್ಟಿ 2 ವಿಕೆಟ್ ಕಬಳಿಸಿದರು.

ಕರ್ನಾಟಕದ ಸ್ಪಿನ್ ಬಲೆಗೆ ಬಿದ್ದು ಒದ್ದಾಡಿದ ಚಂಡೀಗಢ ತಂಡವು 325 ರನ್ ಹಿನ್ನಡೆಯನ್ನು ಅನುಭವಿಸಿದ ಕಾರಣ ಕರ್ನಾಟಕ ಫಾಲೋ ಆನ್ ಹೇರಿತು. ಎರಡನೇ ಇನ್ನಿಂಗ್ಸ್ ಆರಂಭಿಸಿದ ಚಂಡೀಗಢದ ಬ್ಯಾಟಿಂಗ್ ಉತ್ತಮವಾಗಿರಲಿಲ್ಲ. ಆರಂಭಿಕ ಬ್ಯಾಟರ್ ಶಿವಂ ಭಾಂಬ್ರಿ ಕೊಂಚ ಮಟ್ಟಿಗೆ ಕರ್ನಾಟಕದ ಬೌಲರ್‌ಗಳನ್ನು ಕಾಡಿದರು. ಮಧ್ಯಮ ಕ್ರಮಾಂಕದಲ್ಲಿ ನಿಖಿಲ್ ಠಾಕೂರ್ (19), ರಾಜ್ ಬಾವಾ (27), ಗೌರವ್ ಪುರಿ (13) ಮಾತ್ರ ಎರಡನೇ ಇನ್ನಿಂಗ್ಸ್‌ನಲ್ಲಿ ವೈಯಕ್ತಿಕ ಎರಡಂಕಿ ಮೊತ್ತ ತಲುಪಿದರು, ಉಳಿದ ಬ್ಯಾಟರ್‌ಗಳು ಒಂದಂಕಿಯಲ್ಲಿ ಆಟ ಮುಗಿಸಿದರು. ಎರಡನೇ ಇನ್ನಿಂಗ್ಸ್‌ನಲ್ಲೂ ಕರ್ನಾಟಕದ ಸ್ಪಿನ್ ಬೌಲರ್‌ಗಳು ಅಮೋಘ ಬೌಲಿಂಗ್ ದಾಳಿ ನಡೆಸಿದರು. ಶಿಖರ್ ಶೆಟ್ಟಿ 12.5 ಓವರ್ ಬೌಲಿಂಗ್ ಮಾಡಿ 61 ರನ್ ನೀಡಿ 5 ವಿಕೆಟ್ ಪಡೆದರೆ, ಶ್ರೇಯಸ್ ಗೋಪಾಲ್ 45 ರನ್‌ಗೆ 3 ವಿಕೆಟ್ ಗಳಿಸಿದರು.

2ನೇ ಇನ್ನಿಂಗ್ಸ್‌ನಲ್ಲಿ 5 ವಿಕೆಟ್ ಪಡೆದ ಶಿಖರ್ ಶೆಟ್ಟಿ, ಬೌಲಿಂಗ್‌ನಲ್ಲಿ ಮಿಂಚಿದ ಶ್ರೇಯಸ್ ಗೋಪಾಲ್.

ರಣಜಿಯಲ್ಲಿ ಕರ್ನಾಟಕಕ್ಕೆ ಒಟ್ಟು 21 ಅಂಕ

ಮಂಗಳವಾರ ಚಂಡೀಗಢ ವಿರುದ್ಧದ ಗೆಲುವಿನಿಂದಾಗಿ ಕರ್ನಾಟಕ್ಕೆ 7 ಅಂಕ ದೊರೆಯಿತು. ಇದೀಗ ರಾಜ್ಯ ಒಟ್ಟು 21 ಅಂಕಗಳನ್ನು ಅಂಕಗಳನ್ನು ಪಡೆದು ಬಿ-ಗ್ರೂಪ್‌ನಲ್ಲಿ ಅಗ್ರಸ್ಥಾನಕ್ಕೇರಿದೆ. 18 ಅಂಕಗಳನ್ನು ಸಂಪಾದಿಸಿರುವ ಮಹಾರಾಷ್ಟ್ರವು ಈ ರಣಜಿ ಋತುವಿನಲ್ಲಿ 18 ಅಂಕಗಳನ್ನು ಪಡೆದು ಬಿ-ಗ್ರೂಪ್‌ನಲ್ಲಿ ಎರಡನೇ ಸ್ಥಾನದಲ್ಲಿದೆ.

ಪರದಾಡಿದ ಭಾರತದ ಆರ್ಚರಿ ಆಟಗಾರರು

ಢಾಕಾ: ಬಾಂಗ್ಲಾದೇಶದಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಬಿಲ್ಲುಗಾರರು ಚಿನ್ನದ ಪದಕ ಗೆದ್ದು ಚಾಂಪಿಯನ್ ಆದರೂ ಅಲ್ಲಿನ ಹಿಂಸಾಚಾರದಿಂದಾಗಿ ಅವರು ತಾಯ್ನಾಡಿಗೆ ಬರಬೇಕಿದ್ದ ವಿಮಾನವು ರದ್ದಾದ ಕಾರಣಕ್ಕೆ ಪರದಾಡಬೇಕಾಯಿತು. ತಂಡವು ಢಾಕಾ ವಿಮಾನ ನಿಲ್ದಾಣದಲ್ಲಿ ಒಂದು ರಾತ್ರಿ ಪೂರ್ತಿ ಕಳೆಯಬೇಕಾಯಿತು. ಕಳಪೆ ವಸತಿ, ಊಟದ ವ್ಯವಸ್ಥೆ ಮತ್ತು ಭದ್ರತೆಯ ಕೊರತೆಯಿಂದಾಗಿ ಆಟಗಾರರು ತೊಂದರೆ ಅನುಭವಿಸಿದರು. ವಿಮಾನಯಾನ ಸಂಸ್ಥೆಯಿಂದ ಯಾವುದೇ ಸಹಾಯ ಅಥವಾ ಸ್ಪಷ್ಟತೆ ಸಿಗದೆ ಇಬ್ಬರು ಅಪ್ರಾಪ್ತ ಆಟಗಾರರೂ ಸೇರಿದಂತೆ ತಂಡದ ಸದಸ್ಯರು ತೊಂದರೆಗೊಳಗಾದರು.

ಶನಿವಾರ ರಾತ್ರಿ 9.30ಕ್ಕೆ ದೆಹಲಿಗೆ ಹೊರಡಬೇಕಿದ್ದ ವಿಮಾನದಲ್ಲಿ 11 ಮಂದಿ ಭಾರತೀಯ ಬಿಲ್ಲುಗಾರರ ತಂಡವಿತ್ತು. ಹಿರಿಯ ಆಟಗಾರರಾದ ಅಭಿಷೇಕ್ ವರ್ಮಾ, ಜ್ಯೋತಿ ಸುರೇಖಾ ಮತ್ತು ಒಲಿಂಪಿಯನ್ ಧೀರಜ್ ಬೊಮ್ಮದೇವರ ಕೂಡ ತಂಡದಲ್ಲಿದ್ದರು. ವಿಮಾನ ಹತ್ತಿದ ತಕ್ಷಣ, ವಿಮಾನದಲ್ಲಿ ತಾಂತ್ರಿಕ ದೋಷ ಉಂಟಾಗಿದೆ ಎಂದು ಅವರಿಗೆ ತಿಳಿಸಲಾಯಿತು, ಅದೇ ಸಮಯಕ್ಕೆ ಢಾಕಾದಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿತ್ತು.

ಚಾಂಪಿಯನ್ ಆದ ಭಾರತದ ಆರ್ಚರಿ ತಂಡ.

ಶನಿವಾರದಿಂದ ದ. ಆಫ್ರಿಕಾ ವಿರುದ್ಧ 2ನೇ ಟೆಸ್ಟ್
ಗಿಲ್ ಬದಲಿಗೆ ನಿತೀಶ್ ಸಾಧ್ಯತೆ

ಗುವಾಹಟಿ: ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಟೆಸ್ಟ್ ಪಂದ್ಯಕ್ಕೆ ಮುನ್ನ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರನ್ನು ಭಾರತ ತನ್ನ ತಂಡಕ್ಕೆ ಸೇರಿಸಿಕೊಂಡಿದೆ. ಗಾಯಗೊಂಡಿರುವ ನಾಯಕ ಶುಭಮನ್ ಗಿಲ್ ಬದಲಿಗೆ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ಇದೇ ಶನಿವಾರದಂದು ಗುವಾಹಟಿಯ ಬರ್ಸಪಾರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ 2ನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಲಿದೆ.

ಕೋಲ್ಕತ್ತಾದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುವಾಗ ಶುಭ್‌ಮನ್ ಗಿಲ್ ಸ್ವೀಪ್ ಮಾಡುವ ಯತ್ನದಲ್ಲಿ ಕುತ್ತಿಗೆಗೆ ಗಾಯ ಮಾಡಿಕೊಂಡಿದ್ದರು. ನಿತೀಶ್ ಕುಮಾರ್ ರೆಡ್ಡಿಯನ್ನು ಈ ಸರಣಿಗೆ ಆಯ್ಕೆ ಮಾಡಲಾಗಿತ್ತಾದರೂ ಮೊದಲ ಪಂದ್ಯಕ್ಕೆ ಎರಡು ದಿನ ಮುನ್ನ ತಂಡದಿಂದ ಕೈಬಿಡಲಾಗಿತ್ತು ಮತ್ತು ದಕ್ಷಿಣ ಆಫ್ರಿಕಾ ಎ ತಂಡದ ಎದುರಿನ ಸರಣಿಗೆ ಸೇರಿಸಿಕೊಳ್ಳಲಾಗಿತ್ತು. ಇದೀಗ ಮತ್ತೆ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಶುಭ್‌ಮನ್ ಗಿಲ್ ಕೋಲ್ಕತ್ತಾದಿಂದ ಬೆಂಗಳೂರಿನಲ್ಲಿರುವ ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್ ಅಕಾಡಮಿಗೆ ವಿಮಾನದಲ್ಲಿ ಹೋಗಲಿದ್ದಾರೆ. ಅಲ್ಲಿ ಕೆಲವು ದಿನ ಕಾರ್ಯಕ್ಷಮತಾ ಶಿಬಿರದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಆ ಬಳಿಕ ದ. ಆಫ್ರಿಕಾ ವಿರುದ್ಧದ ಏಕದಿನ ಮತ್ತು ಟಿ20 ಸರಣಿಗಳಲ್ಲಿ ಗಿಲ್ ಭಾಗವಹಿಸುವ ನಿರೀಕ್ಷೆ ಇದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಟೆಂಬಾ ಬವುಮಾ: ದಾಖಲೆಗೆ ಸಜ್ಜು



ಶನಿವಾರ ಆರಂಭವಾಗಲಿರುವ ಭಾರತ ವಿರುದ್ಧದ 2ನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡದ ನಾಯಕ ಟೆಂಬಾ ಬವುಮಾ ವಿಶ್ವ ದಾಖಲೆ ನಿರ್ಮಿಸುವ ಸನಿಹದಲ್ಲಿದ್ದಾರೆ. ಈ ಪಂದ್ಯ ಗೆದ್ದರೆ ಅವರು ಅಜೇಯವಾಗಿ ಅತ್ಯಧಿಕ ಟೆಸ್ಟ್ ಪಂದ್ಯಗಳನ್ನು ಗೆದ್ದ ವಿಶ್ವದ ಮೊದಲ ನಾಯಕ ಎನಿಸಿಕೊಳ್ಳಲಿದ್ದಾರೆ. ಸದ್ಯ ಬವುಮಾ ನಾಯಕರಾಗಿ 11 ಪಂದ್ಯಗಳ ಪೈಕಿ 10 ಪಂದ್ಯಗಳನ್ನು ಜಯಿಸಿದ್ದು, ಒಂದು ಪಂದ್ಯ ಡ್ರಾಗೊಂಡಿದೆ. ಇಂಗ್ಲೆಂಡ್ ಮಾಜಿ ನಾಯಕ ಮೈಕ್ ಬ್ರೆರ್ಲಿ ಕೂಡ 10 ಅಜೇಯ ಗೆಲುವು ಸಾಧಿಸಿದ್ದರು.

ಬಾಂಗ್ಲಾ ತಂಡದ ಪ್ರವಾಸ ಮುಂದೂಡಿಕೆ

ದೆಹಲಿ: ಡಿಸೆಂಬರ್‌ನಲ್ಲಿ ನಡೆಯಬೇಕಿದ್ದ ಬಾಂಗ್ಲಾದೇಶ ಮಹಿಳಾ ತಂಡದ ಸೀಮಿತ ಓವರ್‌ಗಳ ಭಾರತ ಪ್ರವಾಸವನ್ನು ಮುಂದೂಡಲಾಗಿದೆ ಎಂದು ವರದಿಯಾಗಿದೆ. ಮಾಧ್ಯಮ ವರದಿಯ ಪ್ರಕಾರ, ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ), ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಯಿಂದ (ಬಿಸಿಸಿಐ) ಸರಣಿ ಮುಂದೂಡಿಕೆಯ ಪತ್ರವನ್ನು ಸ್ವೀಕರಿಸಿದೆ ಎನ್ನಲಾಗಿದೆ.

ವಿಶ್ವ ಚಾಂಪಿಯನ್ ಆಗಿರುವ ಭಾರತ ಮಹಿಳಾ ತಂಡವು ಬಾಂಗ್ಲಾದೇಶ ವಿರುದ್ಧ ಮೂರು ಏಕದಿನ ಮತ್ತು ಮೂರು ಟಿ20 ಪಂದ್ಯಗಳಲ್ಲಿ ಸೆಣಸಬೇಕಿತ್ತು. ಈ ಏಕದಿನ ಸರಣಿಯು ಎರಡೂ ತಂಡಗಳಿಗೆ ಐಸಿಸಿ ಮಹಿಳಾ ಏಕದಿನ ಚಾಂಪಿಯನ್‌ಶಿಪ್‌ನ ಆರಂಭಿಕ ಪಂದ್ಯವಾಗಿತ್ತು. ಅಕ್ಟೋಬರ್‌ನಲ್ಲಿ ನವಿ ಮುಂಬೈನಲ್ಲಿ ನಡೆದ ಮಹಿಳಾ ವಿಶ್ವಕಪ್‌ನ ಲೀಗ್ ಹಂತದಲ್ಲಿ ಎರಡೂ ತಂಡಗಳು ಕೊನೆಯ ಬಾರಿಗೆ ಮುಖಾಮುಖಿಯಾಗಿದ್ದವು. ಆದರೆ ಪಂದ್ಯ ಮಳೆಯಿಂದಾಗಿ ಅರ್ಧಕ್ಕೆ ರದ್ದುಗೊಂಡಿತ್ತು.

ಎರಡೂ ದೇಶಗಳ ನಡುವೆ ನಡೆಯುತ್ತಿರುವ ರಾಜಕೀಯ ಉದ್ವಿಗ್ನತೆಗಳು ಸರಣಿ ನಿಗದಿಯಂತೆ ಮುಂದುವರಿಯದಿರಲು ಪ್ರಮುಖ ಅಂಶವಾಗಿರಬಹುದು ಎಂದು ತಿಳಿದುಬಂದಿದೆ. ಪಂದ್ಯಗಳು ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಮತ್ತು ಕಟಕ್‌ನ ಬಾರಾಬತಿ ಕ್ರೀಡಾಂಗಣದಲ್ಲಿ ನಡೆಯಬೇಕಿತ್ತು.

ಭಾರತ ಮತ್ತು ಬಾಂಗ್ಲಾದೇಶ ಸರಣಿ ಮುಂದೂಡಲ್ಪಟ್ಟಿದ್ದು ಇದೇ ಮೊದಲಲ್ಲ, ಆಗಸ್ಟ್ ಆರಂಭದಲ್ಲಿ ಭಾರತದ ಪುರುಷರ ತಂಡದ ಏಕದಿನ ಸರಣಿಯ ಬಾಂಗ್ಲಾದೇಶ ಪ್ರವಾಸವನ್ನು ಮುಂದೂಡಲಾಗಿತ್ತು.

ವಿಟಾಕೀಸ್

ಸೋಶಿಯಲ್ ಮೀಡಿಯಾದ ಶ್ರೀನಿವಾಸ

ಶೀರ್ಷಿಕೆಯಲ್ಲಿಯೇ ಗಮನಸೆಳೆಯುತ್ತಿರುವ ಇವನೇ ಶ್ರೀನಿವಾಸ ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಪ್ರತಾಪ್, ಇವನೇ ಶ್ರೀನಿವಾಸನಾಗಿ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ. ಎಸ್.ಕುಮಾರ್ ಸಿನಿಮಾಗೆ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಸದ್ಯ ಈ ಚಿತ್ರದ ಟೀಸರ್ ರಿಲೀಸ್ ಆಗಿದೆ. ಹ್ಯಾಟ್ರಿಕ್ ಹೀರೊ ಶಿವಣ್ಣ ಚಿತ್ರದ ಟೀಸರನ್ನು ಲಾಂಚ್ ಮಾಡಿ ಶುಭಹಾರೈಸಿದರು. ಸೋಶಿಯಲ್ ಮೀಡಿಯಾದಿಂದ ಏನೇನೆಲ್ಲ ತೊಂದರೆ ಆಗುತ್ತಿದೆ ಎನ್ನುವುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ನಾಯಕಿಯಾಗಿ ಪ್ರಿಯಾ ಆರಾಧ್ಯ ನಟಿಸಿದ್ದು ಉಳಿದಂತೆ ಮೋಹನ್ ಜುನೇಜಾ, ಚಿಲ್ಲರ್ ಮಂಜು, ಸುಶ್ಮಿತಾ ಮುಂತಾದವರು ತಾರಾಬಳಗದಲ್ಲಿದ್ದಾರೆ.

ನಮ್ಮ ವೈಯಕ್ತಿಕ ವಿಚಾರಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಅಪ್‌ಲೋಡ್ ಮಾಡಬಾರದು, ಇದರಿಂದ ನಮ್ಮ ಮಾಹಿತಿ ತಿಳಿದುಕೊಳ್ಳುವ ವಂಚಕರು ಹೇಗೆ ಕಿರುಕುಳ, ತೊಂದರೆ ನೀಡುತ್ತಾರೆ. ವೈಯಕ್ತಿಕ ವಿಚಾರ ನಮ್ಮಲ್ಲೇ ಇರಬೇಕು, ಅದನ್ನು ಜಾಲತಾಣದಲ್ಲಿ ಹಂಚಿಕೊಳ್ಳಬಾರದು ಎಂಬುದನ್ನು ಚಿತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದೇವೆ. ಚಿತ್ರದಲ್ಲಿ ಮೂರು ಸಾಹಸ ದೃಶ್ಯಗಳು ಹಾಗೂ ಮೂರು ಹಾಡುಗಳಿದ್ದು ಹರ್ಷ, ಶ್ರೀಹರಿ, ಸುಭಾಶ್ ಹಾಡಿಗೆ ಸಂಗೀತ ಸಂಯೋಜಿಸಿದ್ದಾರೆ ಎಂದು ನಿರ್ದೇಶಕರು ತಿಳಿಸಿದರು.

ಪ್ರತಿದಿನ ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುತ್ತಿರುವ ಕ್ರೈಂ, ವಂಚನೆಯ ಬಗ್ಗೆ ಇವನೇ ಶ್ರೀನಿವಾಸ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ಸಿನಿಮಾ ನೋಡಿದ ಮೇಲೆ ಸೋಷಿಯಲ್ ಮೀಡಿಯಾದ ಬಳಕೆಗೂ ಮಿತಿ ಬೇಕು ಎಂದು ಅನ್ನಿಸುತ್ತದೆ.
-ಎಸ್.ಕುಮಾರ್ ನಿರ್ದೇಶಕ

ಈ ಹಿಂದೆ ಹಲವು ನಾಟಕಗಳಲ್ಲಿ ನಟಿಸಿದ್ದೆ. ಈಗ ಈ ಚಿತ್ರದ ಮೂಲಕ ನಾಯಕನಾಗಿ ನಟಿಸುತ್ತಿದ್ದೇನೆ. ಈ ಸಿನಿಮಾ ಮೂಲಕ ಚಿತ್ರರಂಗಕ್ಕೆ ಎಂಟ್ರಿಕೊಡುತ್ತಿದ್ದೇನೆ. ಇಲ್ಲಿ ಶ್ರೀನಿವಾಸ ಯಾರು, ಎನ್ನುವುದೇ ಈ ಚಿತ್ರದ ಕಾನ್ಸೆಪ್ಟ್. ನಮ್ಮ ಸಿನಿಮಾದ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಬೇಕು ಎನ್ನುವುದೇ ನಮ್ಮ ಉದ್ದೇಶ ಎಂದು ಪ್ರತಾಪ್ ಹೇಳಿದರು.

ಲಕ್ಷ್ಮಿ ನರಸಿಂಹಸ್ವಾಮಿ ಮೂವಿ ಮೇಕರ್ಸ್ ಹಾಗೂ ಎಲ್.ಎನ್.ಡಿ. ಕ್ರಿಯೇಶನ್ಸ್ ಮೂಲಕ ಪ್ರತಾಪ್ ಹಾಗೂ ನವೀನ್ ಕುಮಾರ್ ಒಟ್ಟಾಗಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಅರವಿಂದ ರಾಜ್ ಅವರ ಸಂಕಲನ, ಹರ್ಷ ಕೋಗೂಡ್, ಶ್ರೀಹರಿ, ಸುಭಾಶ್ ಅವರ ಸಂಗೀತ ನಿರ್ದೇಶನ, ರಮೇಶ್ ರಂಜಿತ್ ಸಾಹಸ ನಿರ್ದೇಶನ, ಮುಂಜಾನೆ ಮಂಜು ಛಾಯಾಗ್ರಹಣ ಈ ಚಿತ್ರಕ್ಕಿದೆ. ಬೆಂಗಳೂರು, ಮೈಸೂರು, ಕೋಲಾರ, ತುಮಕೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.



ಸಾಗಿಬಂದ ಹಾದಿ ನೆನೆದ ಜಗ್ಗೇಶ್

ಕನ್ನಡ ಚಿತ್ರರಂಗದಲ್ಲಿ ಖಳನಟನಾಗಿ, ಹಾಸ್ಯ ನಟನಾಗಿ ಗುರುತಿಸಿಕೊಂಡು ನಟನಾಗಿ ಪ್ರಸಿದ್ಧಿ ಪಡೆದಿರುವ ನಟ ಜಗ್ಗೇಶ್, ನವರಸ ನಾಯಕ ಎಂತಲೇ ಪ್ರಸಿದ್ಧ ಪಡೆದಿದ್ದಾರೆ. ಬಹುತೇಕ ಸಿನಿಮಾಗಳಲ್ಲಿ ಹಾಸ್ಯ ಪಾತ್ರಗಳ ಮೂಲಕವೇ ಮನಗೆದ್ದ ಜಗ್ಗಣ್ಣ, ಎಮೋಷನಲ್ ಪಾತ್ರಗಳಲ್ಲಿಯೂ ಗಮನಸೆಳೆದಿದ್ದಾರೆ. ತಮ್ಮ ಸಿನಿ ಜರ್ನಿಯ ನಲವತ್ತೈದು ವಸಂತಗಳನ್ನು ಪೂರೈಸಿರುವ ಜಗ್ಗೇಶ್ ತಮ್ಮ ಸಿನಿಮಾರಂಗದಲ್ಲಿನ ನೆನಪಿನ ಬುತ್ತಿಯನ್ನು ತೆರೆದಿಟ್ಟಿದ್ದಾರೆ. ಈ ಕುರಿತಂತೆ ಸೋಷಿಯಲ್ ಮೀಡಿಯಾದಲ್ಲಿ ಸಂತಸ ಹಂಚಿಕೊಂಡಿದ್ದಾರೆ.

1980 ನವೆಂಬರ್ 17ನೆ ತಾರೀಖು ಆಗ ನನಗೆ ಹದಿನೆಂಟು ವರ್ಷ ವಯಸ್ಸು ನಾನು ಬಣ್ಣಹಚ್ಚಿ ನಟಿಸಿದ ಚಿತ್ರ ಕನ್ನಡತಿ ಮಾನವತಿ. ಸ್ಥಳ ಗುಬ್ಬಿ ಚನ್ನಬಸವೇಶ್ವರ ಆಲಯ. ಬಣ್ಣ ಹಚ್ಚಿದವರು ಅಂಬರೀಶ್ ಅವರ ಮೇಕಪ್ ಮಾಡುತ್ತಿದ್ದ ರಾಮಕೃಷ್ಣ ಹಾಗೂ ಅವರ ಶಿಷ್ಯ ಕೃಷ್ಣ. ಪಾತ್ರ ಕೊಡಿಸಿದವ ನನ್ನ ಮಿತ್ರ ಶಂಭು. ನನಗೆ ಮೀಸೆ ಬರೆದವರು ಹಾಸ್ಯನಟ ರನ್ನಾಕರ್. ಚಿತ್ರದ ನಾಯಕ ರಾಮಕೃಷ್ಣ, ನಾಯಕಿ ಪ್ರಮೀಳಾ ಜೋಯ್ಸ್, ನನ್ನ ಜತೆ ನಟಿಸಿದ ನಟಿ ಸಿಹಿಕಹಿ ಗೀತಾ ಅಕ್ಕ, ಆ ಚಿತ್ರ ಬಿಡುಗಡೆ ಆಗಲಿಲ್ಲಾ!

ನನ್ನ ಅದೃಷ್ಟ ನಿರ್ದೇಶಕ ಸಿದ್ದಲಿಂಗಯ್ಯ ಅವರ ಮಗ ಮುರಳಿ ಅವರ ಚಿತ್ರ ಬಿಳಿ ಗುಲಾಬಿ ಸಿಗಲು ಕಾರಣವಾದರು ಪುಟ್ಟಣ್ಣ ಕಣಗಾಲ್ ಅವರ ಸಹಾಯಕ ನಿರ್ದೇಶಕ ದಿ.ಅರಕಲಗೂಡು ನಂಜುಂಡ, ನಂತರ ಕೆ.ವಿ. ಜಯರಾಂ ಅವರ ಕೃಪೆಯಿಂದ ಅವರ ಇಬ್ಬನಿ ಕರಗಿತು ಚಿತ್ರದಲ್ಲಿ ಮುಂದುವರಿದು, 1984ರಲ್ಲಿ ಶ್ವೇತ ಗುಲಾಬಿ ಚಿತ್ರದಲ್ಲಿ ಅವಕಾಶ ಸಿಕ್ಕಿತು, ನಂತರ ಪರಿಮಳ ನಾನು ಮದುವೆಯಾಗಿ ಸ್ಟೇಷನ್, ಸುಪ್ರೀಂ ಕೋರ್ಟ್ ಅವಾಂತರ ಮುಗಿಸಿ ನಂತರ ಹಿಂದೆ ನೋಡದೆ ರಾಯರ ಕೃಪೆಯಿಂದ ಅಂದಿನ ಕನ್ನಡ ಪ್ರೇಕ್ಷಕರ ಪ್ರೀತಿ ಚಪ್ಪಾಳೆಯಿಂದ ವಿವಿಧ ಪಾತ್ರ ಮಾಡುತ್ತ ಬೆಳೆದುನಿಂತೆ. ಇಂದಿಗೆ ನನ್ನ ಸಿನಿಮಾ ಪ್ರಯಾಣಕ್ಕೆ ನಲವತ್ತೈದು ವರ್ಷ ಆಯುಷ್ಯ, ನಡೆದು ಬಂದ ದಾರಿ ನೆನಪಿನ ಬುತ್ತಿ ಮುಂದೆಯು ನಿಮ್ಮ ಪ್ರೀತಿ ನನ್ನ ಮೇಲಿರಲಿ ಹಾಗೂ ನನ್ನಂತೆ ಮುಂದೆ ಚಿತ್ರರಂಗಕ್ಕೆ ಬರುವ ಹೊಸ ಕಲಾವಿದರ ಹರಸಿ ಬೆಳೆಸಿ ಎಂದು ಜಗ್ಗೇಶ್ ಸಿನಿಮಾ ರಂಗದಲ್ಲಿ ತಾವು ಸಾಗಿಬಂದ ಹಾದಿಯನ್ನು ಮೆಲುಕು ಹಾಕಿದ್ದಾರೆ. ತೋತಾಪುರಿಯಲ್ಲಿ ರಂಜಿಸಿದ ಜಗ್ಗಣ್ಣ, ರಂಗನಾಯಕನಾಗಿ ಮಿಂಚಿದರು. ಮುಂದೆ ಹೊಸ ಅವತಾರದಲ್ಲಿ ಸಿನಿಪ್ರಿಯರಿಗೆ ದರ್ಶನ ಕೊಡಲಿದ್ದಾರೆ. ಸಿನಿಮಾಗಳ ಜತೆಗೆ ಕಿರುತೆರೆಯ ರಿಯಾಲಿಟಿ ಶೋಗಳಲ್ಲಿಯೂ ಜಡ್ಜ್ ಆಗಿ ಪಾಲ್ಗೊಳ್ಳುತ್ತಿದ್ದಾರೆ.

ತಲೈವಾ ಚಿತ್ರಕ್ಕೆ ಧನುಷ್ ಸಾರಥ್ಯ

ತಮಿಳು ನಟ ಧನುಷ್, ಕಾಲಿವುಡ್ ಜತೆಗೆ ಬಾಲಿವುಡ್, ಹಾಲಿವುಡ್ ಸಿನಿಮಾಗಳಲ್ಲಿಯೂ ನಟಿಸಿದ್ದಾರೆ. ನಟ ಮಾತ್ರವಲ್ಲ ನಿರ್ದೇಶಕ, ನಿರ್ಮಾಪಕನಾಗಿಯೂ ಗುರುತಿಸಿಕೊಂಡಿದ್ದಾರೆ. ಪಾ.ಪಾಂಡಿ, ರಾಯನ್‌ನಂತಹ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿ ತೆರೆಗೆ ತಂದಿದ್ದ ಧನುಷ್ ಇತ್ತೀಚೆಗೆ ತೆರೆಗೆ ಬಂದ ಇಡ್ಲಿ ಕಡಾಯ್ ಸಿನಿಮಾವನ್ನು ನಿರ್ದೇಶನ ಮಾಡಿ ಸೈ ಎನಿಸಿಕೊಂಡಿದ್ದಾರೆ. ಬಹುಬೇಡಿಯ ನಟರಾಗಿರುವ ಧನುಷ್, ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದು, ಈಗ ನಿರ್ದೇಶನದತ್ತಲೂ ಗಮನಹರಿಸಿದ್ದಾರೆ. ಈ ಬಾರಿ ಅಂತಿತ್ತ ಸಿನಿಮಾ ನಿರ್ದೇಶನ ಮಾಡುತ್ತಿಲ್ಲ. ಸೂಪರ್ ಸ್ಟಾರ್ ರಜನಿಕಾಂತ್ ಅಭಿನಯದ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಲು ಸಿದ್ಧತೆ ನಡೆಸುತ್ತಿದ್ದಾರೆ ಎನ್ನಲಾಗುತ್ತಿದೆ.



ರಜನಿಕಾಂತ್ ಅಭಿನಯದ 173ನೇ ಸಿನಿಮಾ ಇತ್ತೀಚೆಗೆ ಘೋಷಣೆಯಾಗಿತ್ತು. ಇದು ಅದ್ದೂರಿ ವೆಚ್ಚದ ಚಿತ್ರವಾಗಿದ್ದು, ಸ್ಟಾರ್ ನಟ ಕಮಲ್ ಹಾಸನ್ ನಿರ್ಮಾಣ ಮಾಡಲಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಸಿ.ಸುಂದರ್ ಈ ಸಿನಿಮಾವನ್ನು ನಿರ್ದೇಶನ ಮಾಡಬೇಕಿತ್ತು. ಆದರೆ ಅನಿವಾರ್ಯ ಕಾರಣಗಳಿಂದ ನಿರ್ದೇಶಕ ಸುಂದರ್ ಚಿತ್ರದಿಂದ ಹೊರ ನಡೆದಿದ್ದಾರೆ. ಹಾಗಾಗಿ ರಜನಿಕಾಂತ್ ಅಭಿನಯದ ಸಿನಿಮಾವನ್ನು ಯಾರು ನಿರ್ದೇಶನ ಮಾಡಲಿದ್ದಾರೆ ಎಂಬ ಕುತೂಹಲ ಎಲ್ಲರಲ್ಲಿಯೂ ಇತ್ತು. ಇದಕ್ಕೆ ಪೂರಕ ಎನ್ನುವಂತೆ ಅನಿರೀಕ್ಷಿತವಾದದ್ದನ್ನು ನಿರೀಕ್ಷಿಸಿ ಎಂದು ಕಮಲ್ ಹಾಸನ್ ಹೇಳಿದ್ದರು. ಅನಿರೀಕ್ಷಿತ ಎಂಬಂತೆ ಈ ಚಿತ್ರವನ್ನು ಧನುಷ್ ನಿರ್ಮಾಣ ಮಾಡುವುದು ಖಚಿತ ಎನ್ನಲಾಗುತ್ತಿದೆ. ಸದ್ಯ ತಲೈವಾ 173 ಚಿತ್ರದ ಸ್ಕ್ರಿಪ್ಟ್ ಕೆಲಸಗಳು ನಡೆಯುತ್ತಿದ್ದು, ಇದರಲ್ಲಿ ಭರ್ಜರಿ ಆ್ಯಕ್ಷನ್ ಜತೆಗೆ ಸೆಂಟಿಮೆಂಟ್ ಕೂಡ ಬೆರೆತಿದೆ ಎಂಬುದು ಸ್ಪಷ್ಟವಾಗಿದೆ. ಹೊಸ ವರ್ಷಕ್ಕೆ ಈ ಚಿತ್ರ ಸೆಟ್ಟೇರುವ ನಿರೀಕ್ಷೆ ಇದೆ.

ಚಂದನವನದಲ್ಲಿ ಚೆನ್ನಭೈರಾ ದೇವಿ

ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ರಕ್ತ ಕಾಶ್ಮೀರ ಚಿತ್ರವನ್ನು ನಿರ್ದೇಶಿಸಿದ್ದು ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಕಾಶ್ಮೀರ ಕಣಿವೆಯಲ್ಲಿ ನಡೆಯುತ್ತಿರುವ ಭಯೋತ್ಪಾದನೆಯ ಕುರಿತ ಕಥೆ ಚಿತ್ರದಲ್ಲಿದೆ. ಬಿಡುಗಡೆಯ ಹೊಸ್ತಿಲಲ್ಲಿರುವ ರಕ್ತ ಕಾಶ್ಮೀರ ಹೊಸ ದಾಖಲೆ ಬರೆಯಲು ರೆಡಿಯಾಗಿದೆ. ಚಿತ್ರದಲ್ಲಿ ಉಪೇಂದ್ರ ನಾಯಕನಾಗಿ ನಟಿಸಿದ್ದು, ರಮ್ಯಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಕನ್ನಡದ ದಿಗ್ಗಜ ನಟರು ಈ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಈ ಸಿನಿಮಾದ ಬಿಡುಗಡೆಯ ಸಿದ್ಧತೆಯಲ್ಲಿರುವ ರಾಜೇಂದ್ರ ಸಿಂಗ್ ಬಾಬು, ಕರಾವಳಿಯ ಸಾಂಪ್ರದಾಯಿಕ ಕ್ರೀಡೆ ಕಂಬಳ ಕುರಿತ ಕಥೆಯನ್ನು ಹೆಣೆದು ಸಿನಿಮಾ ನಿರ್ದೇಶನ ಮಾಡಿದ್ದಾರೆ. ವೀರ ಕಂಬಳ ಶೀರ್ಷಿಕೆಯಲ್ಲಿಯೇ ಚಿತ್ರ ಮೂಡಿಬರುತ್ತಿದೆ. ಶೂಟಿಂಗ್ ಮುಗಿಸಿರುವ ವೀರ ಕಂಬಳ ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಈ ನಡುವೆಯೇ ರಾಜೇಂದ್ರ ಸಿಂಗ್ ಬಾಬು ಮತ್ತೊಂದು ಚಿತ್ರವನ್ನು ನಿರ್ದೇಶನ ಮಾಡಲು ತಯಾರಿ ನಡೆಸಿದ್ದಾರೆ. ವಿಶೇಷ ಎಂದರೆ ಈ ಬಾರಿ ಐತಿಹಾಸಿಕ ಕಥೆಯನ್ನು ಆಯ್ದುಕೊಂಡಿದ್ದಾರೆ. ಹೌದು, ಹದಿನಾರನೇ ಶತಮಾನದಲ್ಲಿ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಆಳ್ವಿಕೆ ನಡೆಸುತ್ತಿದ್ದ ಚೆನ್ನಭೈರಾ ದೇವಿಯ ಜೀವನ ಚರಿತೆಯನ್ನು ಬೆಳ್ಳಿತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಕರಿಮೆಣಸಿನ ರಾಣಿ ಎಂದೇ ಪ್ರಸಿದ್ಧಿ ಪಡೆದಿದ್ದ, ಕರುನಾಡಿನ ವೀರವನಿತೆಯ ಕಥೆ ಬೆಳ್ಳಿತೆರೆಗೆ ಬರಲಿದೆ. ಇನ್ನೇನು ಸಿನಿಮಾದ ಸ್ಕ್ರಿಪ್ಟ್ ಕೆಲಸಗಳು ಆರಂಭವಾಗಲಿವೆ.

ತೆಲುಗಿನಲ್ಲಿ ಬಾಹುಬಲಿಯಂತಹ ಸಿನಿಮಾಗಳು ತೆರೆಗೆ ಬಂದು ಯಶಸ್ವಿಯಾಗಿವೆ. ಅಂತೆಯೇ ಈಗ ಕನ್ನಡದಲ್ಲಿ ಚೆನ್ನಭೈರಾ ದೇವಿಯ ಜೀವನ ಚರಿತೆಯನ್ನು ತೆರೆಗೆ ತರಬೇಕು ಎಂದುಕೊಂಡಿದ್ದೇವೆ. ವಿಶೇಷ ಎಂದರೆ ಇಲ್ಲಿ ಮಹಿಳಾ ಪ್ರಧಾನ ಕಥೆ ಇರಲಿದೆ. ಚೆನ್ನಭೈರಾದೇವಿ ಜನಪ್ರಿಯ ಕಾದಂಬರಿಯಾಗಿದ್ದು ಅದನ್ನೇ ಆಧರಿಸಿ ಸಿನಿಮಾ ಮೂಡಿಬರಲಿದೆ ಎಂದು ರಾಜೇಂದ್ರ ಸಿಂಗ್ ಬಾಬು ಹೇಳುತ್ತಾರೆ.

ಭೈರಾದೇವಿಯಾಗಿ ಪದ್ಮಾವತಿ

ಮೋಹಕತಾರೆ ರಮ್ಯಾ, ರಕ್ತ ಕಾಶ್ಮೀರ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದ್ದು, ಬಹು ವರ್ಷಗಳ ಬಳಿಕ ತೆರೆಯಲ್ಲಿ ಕಂಗೊಳಿಸಲಿದ್ದಾರೆ. ಹಾಗಾಗಿ ಮುಂದೆ ಚೆನ್ನಭೈರಾದೇವಿ ಸಿನಿಮಾದಲ್ಲಿಯೂ ನಾಯಕಿಯಾಗಿ ಅಭಿನಯಿಸಲಿದ್ದಾರೆ ಎನ್ನಲಾಗುತ್ತಿದೆ. ಮುಂದೆ ಒಳ್ಳೆಯ ಕಥೆಗಳು ಸಿಕ್ಕಿದರೆ ಖಂಡಿತಾವಾಗಿಯೂ ಅಭಿನಯಿಸುವುದಾಗಿ ರಮ್ಯಾ ಈ ಹಿಂದೆ ತಿಳಿಸಿದ್ದರು. ಈಗ ಚೆನ್ನಭೈರಾದೇವಿ ಐತಿಹಾಸಿಕ ಕಥೆಯಾಗಿದ್ದು, ಅದ್ಭುತವಾಗಿದೆ. ಅದರಲ್ಲಿಯೂ ಇದು ಮಹಿಳಾ ಪ್ರಧಾನ ಕಥೆಯಾಗಿದ್ದು, ಪದ್ಮಾವತಿ ಖಂಡಿತಾ ಈ ಸಿನಿಮಾದಲ್ಲಿ ನಟಿಸಲಿದ್ದಾರೆ ಎನ್ನಲಾಗುತ್ತಿದೆ.